ಶನಿವಾರ, ಏಪ್ರಿಲ್ 29, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಾಪು ಬಲ

ನವದೆಹಲಿಯಲ್ಲಿ ನಡೆಯುತ್ತಿರುವ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆಯಲ್ಲಿ ಶುಕ್ರವಾರ ಪುಟ್ಟ ಮಗುವೊಂದು ಗಾಂಧೀಜಿ ಫೋಟೊ ಹಿಡಿದು ಗಮನ ಸೆಳೆಯಿತು

RERA No.: PRM/KA/RERA/1251/310/PR/120423/005862
For more details visit www.rera.karnataka.gov.in

IT TAKES TWO TO TANGO!

1 WELL CONNECTED LOCATION

(Kanakapura Main Road)

@ ₹5,199/sft

Kanakapura Road - 2 mins ₹6,500/sft

Banashankari - 6 mins ₹10,000/sft

JP Nagar - 8 mins ₹12,000/sft

Bannerghatta Road - 10 mins ₹7,000/sft

RR Nagar - 10 mins ₹6,000/sft

2 SUPERIOR PROJECT

Spacious 2 & 3 BHK apartments with 65+ lifestyle amenities

1.25 acres of central landscape podium

Floor to ceiling windows for maximum light and ventilation

Vehicle-free community for kids and senior citizens

Only project in the vicinity with high-end specifications

LAUNCHING CASAGRAND ZAIDEN
Kanakapura Main Road, 2 Mins From Silk Institute

2 & 3 BHK apartments from ₹74 L

Kanakapura Main Road Market Price ~~₹6,500~~ Per sft

Casagrand Launch Price ~~₹5,499~~ Per sft

Early Bird Price ₹5,199 Per sft (*For the first 20 bookings only)

SALIENT FEATURES

- Uniquely crafted 286 spacious apartments spread across 3.69 acres
- B+G+9 floors structure
- Lavish clubhouse of 15,000 Sft
- 100% Vaastu compliant with zero dead space
- Close to prominent IT/ITES companies, schools, colleges & hospitals

INCREDIBLY PRICED

Type	Size (sft)	Launch Price (₹)	Early Bird Price (₹)
2 BHK	1230-1271	~~77L - 88L~~	74L - 84L
3 BHK	1496-1886	~~92L - 1.24 Cr~~	88L - 1.19 Cr

Total 286 Units | Sold 61 Units | Available 225 Units

COMPLETION IN 24 MONTHS

*T&C apply.

CREDAI
Exclusive site visit available | Visit model house at site

77956 54058 | www.casagrand.co.in

CASAGRAND building aspirations

RERA No.: PRM/KA/RERA/1251/310/PR/120423/005862
For more details visit www.rera.karnataka.gov.in

LAUNCHING
CASAGRAND ZAIDEN
Kanakapura Main Road,
2 Mins From Silk Institute

2 & 3 BHK Apts. with 65+ Lifestyle amenities From ₹74 L

Location Map & Highlights



Podium View

Entrance Night View

Elevation View

INDOOR AMENITIES
1. Reception lounge
2. Multipurpose party hall
3. AV Room
4. Business center
5. Convenience store
6. Outdoor cafeteria
7. Gym
8. Cross fit corner
9. Boxing corner
10. Kids play area
11. Indoor games room
12. Board games corner
13. Video games corner
14. Adventure wall
15. Kids ball pool
16. Association room
17. Laundry / Ironing shop
18. Drivers / Maid dormitory
19. Drivers / Maid Toilet

OUTDOOR AMENITIES
20. Drop-off Plaza
21. Amphitheatre
22. Swimming pool
23. Kids pool
24. Waterfall feature
25. Water play jets
26. Pool side lounges
27. Half - Basketball court
28. Cricket practice net
29. Futsal lawn
30. Outdoor gym
31. Outdoor kids play area
32. Kids rock climbing
33. Bicycle racks with bicycles
34. Cycling track
35. Jogging track
36. Skating rink
37. Senior citizen court
38. Meditation lawn
39. Party deck
40. Barbeque corner
41. Hobby court
42. Interactive floor games
43. Play mounds
44. Inground Trampoline
45. Sandpit
46. Pets park
47. Aroma garden
48. Spillover party lawn
49. Shaded patio seating
50. Interactive water fountain
51. Plumeria court
52. Hammock garden
53. Leisure seating court
54. Reflexology walkway
55. Tot lot
56. Jungle gym
57. Golf putting
58. Seating pavilion
59. Zen garden
60. Community farming
61. Sculpture court
62. Informal seating area
63. Outdoor board games nook
64. Electric car charging bay
65. Car wash bay
66. Air filling station

Scan this QR code to experience a virtual walk-through

Amphitheatre

Clubhouse

Indoor Kids Play Area

All sites & offices have been sanitised | Social distancing is maintained in all our sites & offices | Scheduled site visit available | All our employees are vaccinated

* T&C apply.

CREDAI
Exclusive site visit available | Visit model house at site
77956 54058 | www.casagrand.co.in

CASAGRAND
building aspirations

ಶನಿವಾರ, ಏಪ್ರಿಲ್ 29, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 118 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಬಿರುಬಿಸಿಲಿನಲ್ಲಿ ಆರೋಗ್ಯ ಕಾಳಜಿ ಮಾಡುವ ಕುರಿತು ಗರ್ಭಿಣಿ, ಬಾಣಂತಿಯರಿಗೆ ಕಿವಿಮಾತು

ತಮಿಳು ನಾಡಗೀತೆಯ ಗಾಯನಕ್ಕೆ ತಡೆ: ಪಕ್ಷಗಳ ತೀವ್ರ ಅಪಸ್ವರ 10

ಆಪರೇಷನ್ ಕಾವೇರಿ: ಒಟ್ಟು 1,360 ಭಾರತೀಯರು ವಾಪಸು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,112 ▲	18,065 ▲	₹62,050 (ಬೆಂಗಳೂರು) ▼	₹76,300 (ಬೆಂಗಳೂರು)	81.82 ▼

ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂಕೋರ್ಟ್ ನಿರ್ದೇಶನ

ದ್ವೇಷ ಭಾಷಣ: ದೂರು ಇಲ್ಲದಿದ್ದರೂ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ದ್ವೇಷ ಭಾಷಣ ಮಾಡುವವರ ವಿರುದ್ಧ ಯಾವುದೇ ದೂರು ಸಲ್ಲಿಕೆಯಾಗದಿದ್ದರೂ ಪ್ರಕರಣ ದಾಖಲಿಸಬೇಕು ಎಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

'ದ್ವೇಷ ಭಾಷಣಗಳನ್ನು ಮಾಡುವುದು ಗಂಭೀರ ಸ್ವರೂಪದ ಅಪರಾಧವಾಗಿದ್ದು, ಅಂತಹ ಭಾಷಣಗಳು ದೇಶದ ಜಾತ್ಯತೀತ ರಚನೆಗೆ ಧಕ್ಕೆ ತರುವ ಸಾಮರ್ಥ್ಯವನ್ನು ಹೊಂದಿವೆ' ಎಂದು ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ವ್ಯಾಖ್ಯಾನಿಸಿದೆ.

'ದ್ವೇಷ ಭಾಷಣಗಳಿಗೆ ಸಂಬಂಧಿಸಿ ಕಳೆದ ವರ್ಷ ಅಕ್ಟೋಬರ್ 21ರಂದು ನೀಡಿದ್ದ ಆದೇಶವು ಎಲ್ಲ ಧರ್ಮದವರಿಗೂ ಅನ್ವಯಿಸಬೇಕು. ಈ ವಿಷಯಕ್ಕೆ ಸಂಬಂಧಿಸಿ ಪ್ರಕರಣ ದಾಖಲಿಸಲು ವಿಳಂಬ ಮಾಡುವುದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದ ನ್ಯಾಯಪೀಠ, ವಿಚಾರಣೆಯನ್ನು ಮೇ 12ಕ್ಕೆ ಮುಂದೂಡಿತು.

'ದ್ವೇಷ ಭಾಷಣ ಮಾಡಿರುವುದು ಕಂಡುಬಂದಾಗ, ಯಾವುದೇ ದೂರು ಇಲ್ಲದಿದ್ದರೂ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿ ತಪ್ಪಿತಸ್ಥರ ವಿರುದ್ಧ ತ್ವರಿತವಾಗಿ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಖಾತರಿಪಡಿಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

'ಈ ಸಂಬಂಧ, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಐಜಿಪಿಗಳು ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಆದೇಶಿಸಿದೆ.

'ದ್ವೇಷ ಭಾಷಣಗಳ ವಿರುದ್ಧ ದೇಶದ ವಿವಿಧ ಭಾಗಗಳಲ್ಲಿ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಜನರ ಹಿತರಕ್ಷಣೆ ಹಾಗೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದನ್ನು ಖಾತರಿಪಡಿಸುವ ಉದ್ದೇಶದಿಂದ ಈ ಎಲ್ಲ ಅರ್ಜಿಗಳನ್ನು ನ್ಯಾಯಾಲಯ ಪರಿಗಣಿಸುತ್ತಲೇ ಇದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

10ನೇ ಪುಟ ನೋಡಿ

'ಸುಪ್ರೀಂ' ಮಾತು

- ಈಶಾನ್ಯ ರಾಜ್ಯಗಳಲ್ಲಿ ದ್ವೇಷ ಭಾಷಣ ಘಟನೆಗಳು ಕಡಿಮೆ
- ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಜಾತ್ಯತೀತತೆ ಸಂರಕ್ಷಣೆ ಅಗತ್ಯ

ನ್ಯಾಯಮೂರ್ತಿಗಳು ರಾಜಕೀಯದಿಂದ ದೂರವೇ ಇರುತ್ತಾರೆ. 'ಎ' ಪಕ್ಷ ಅಥವಾ 'ಬಿ' ಪಕ್ಷ ಅವರಿಗೆ ಸಂಬಂಧಪಟ್ಟದ್ದಲ್ಲ. ಅವರ ಮನಸಿನಲ್ಲಿರುವುದು ಭಾರತದ ಸಂವಿಧಾನ ಮಾತ್ರ ಎಂಬುದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇವೆ
ಸುಪ್ರೀಂ ಕೋರ್ಟ್ ನ್ಯಾಯಪೀಠ

ಭಾರತೀಯ ದಂಡ ಸಂಹಿತೆಯ 153ಎ (ಧರ್ಮ, ಜಾತಿ, ಜನಾಂಗ, ಹುಟ್ಟಿದ ಸ್ಥಳ, ಭಾಷೆ ಇತ್ಯಾದಿ ಆಧಾರದಲ್ಲಿ ಭಿನ್ನ ಸಮುದಾಯಗಳ ನಡುವೆ ದ್ವೇಷ ಮೂಡಿಸುವ ಯತ್ನ) , 153ಬಿ (ರಾಷ್ಟ್ರೀಯ ಸಮಗ್ರತೆಗೆ ಧಕ್ಕೆ ತರುವಂತಹ ಹೇಳಿಕೆ, ಬರಹ ಇತ್ಯಾದಿ), 295ಎ (ಧಾರ್ಮಿಕ ನಂಬಿಕೆ, ಭಾವನೆಗೆ ಉದ್ದೇಶಪೂರ್ವಕವಾಗಿ ಧಕ್ಕೆ ತರುವುದು) ಮತ್ತು 505ನೇ (ಒಂದು ಸಮುದಾಯದ ವಿರುದ್ಧ ಮತ್ತೊಂದು ಸಮುದಾಯವನ್ನು ಪ್ರಚೋದಿಸುವುದು) ಸೆಕ್ಷನ್‌ಗಳಲ್ಲಿ ವಿವರಿಸಲಾದಂತಹ ಕೃತ್ಯಗಳಿಗೆ ಸಮನಾದ ಭಾಷಣ, ಕೃತ್ಯಗಳು ನಡೆದಾಗ ತಕ್ಷಣವೇ ಪ್ರಕರಣ ದಾಖಲಿಸಬೇಕು

ಬ್ರಿಜ್‌ಭೂಷಣ್ ವಿರುದ್ಧ ಎರಡು ಎಫ್‌ಐಆರ್

ನವದೆಹಲಿ (ಪಿಟಿಐ/ಎಎಫ್‌ಪಿ): ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದೆಹಲಿ ಪೊಲೀಸರು ಶುಕ್ರವಾರ ಎರಡು ಎಫ್‌ಐಆರ್ ದಾಖಲಿಸಿದ್ದಾರೆ.

ಬ್ರಿಜ್‌ಭೂಷಣ್ ಮೇಲೆ ಪೋಕ್ಸೊ ಕಾಯ್ದೆಯಲ್ಲಿ ಒಂದು ಹಾಗೂ ಮಹಿಳೆಯರ ಘನತೆಗೆ ಧಕ್ಕೆ ಮಾಡಿರುವ ಆರೋಪದಲ್ಲಿ ಎರಡನೇ ಎಫ್‌ಐಆರ್ ದಾಖಲು ಮಾಡಲಾಗಿದೆ.

'ಬ್ರಿಜ್‌ಭೂಷಣ್ ವಿರುದ್ಧ ಶುಕ್ರವಾರ ಎಫ್‌ಐಆರ್ ದಾಖಲಿಸಲಾಗುವುದು' ಎಂದು ದೆಹಲಿ ಪೊಲೀಸರು ಸುಪ್ರೀಂ ಕೋರ್ಟ್ ಪೀಠಕ್ಕೆ ತಿಳಿಸಿದ್ದರು.

ವಿವರ 13

'ಪಿ.ವಿ ಸಿನಿ ಸಮ್ಮಾನ' ಟ್ರೋಫಿ ಅನಾವರಣ

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಎನ್. ವಿದ್ಯಾಶಂಕರ್, ಗಿರೀಶ ಕಾಸರವಳ್ಳಿ, ಹಂಸಲೇಖ ಹಾಗೂ ಸುಮನಾ ಕಿತ್ತೂರು ಅವರು 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಟ್ರೋಫಿ ಅನಾವರಣ ಮಾಡಿದರು
– ಪ್ರಜಾವಾಣಿ ಚಿತ್ರ

ವಿವರ 5

ಇಂದಿನಿಂದ 'ಮನೆ ಮತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರು ಮನೆಯಿಂದಲೇ ಮತ ಚಲಾಯಿಸುವ ಪ್ರಕ್ರಿಯೆ ಶನಿವಾರದಿಂದ ಆರಂಭವಾಗಲಿದ್ದು, ಮೇ 6ರವರೆಗೆ ನಡೆಯಲಿದೆ.

80,250 ಹಿರಿಯ ನಾಗರಿಕರು ಮತ್ತು 19,279 ಅಂಗವಿಕಲರು ನೋಂದಾಯಿಸಿಕೊಂಡಿದ್ದಾರೆ. ಅವರೆಲ್ಲರಿಗೂ ಮನೆಯಿಂದಲೇ ಗೋಪ್ಯ ಮತದಾನಕ್ಕೆ ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡಲಾಗಿದೆ.

ಪ್ರಜಾ ಮತ
ಜನತಂತ್ರದ ಹಬ್ಬ

ಪುಟಿದೇಳಲು ಕಾಂಗ್ರೆಸ್ ಕಸರತ್ತು 7
'ದೊಂಬಿ ನಡೆಸಿ ಗೆಲ್ಲಲು ಶಾ ಸಂಚು' 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅತ್ಯಂತ ಶುದ್ಧ ನೈಸರ್ಗಿಕವನ್ನು ಅನುಭವಿಸಿ

ORGANIC™ HARVEST

100% ಅಮೇರಿಕದ ಪ್ರಮಾಣೀಕೃತ ಸಾವಯವವಾಗಿದೆ*

ನಮ್ಮ ಬೆಸ್ಟ್ ಸೆಲ್ಲರ್‌ಗಳನ್ನು ಪ್ರಯತ್ನಿಸಿ

- ತೆಂಗಿನ ಎಣ್ಣೆ
- ಸನ್‌ಸ್ಕ್ರೀನ್ SPF 60
- ಅತ್ಯಂತ ಪ್ರಕಾಶಮಾನ ಶ್ರೇಣಿ

ನಿಮ್ಮ ನೈಸರ್ಗಿಕ ಎಷ್ಟು ನೈಸರ್ಗಿಕವಾಗಿದೆ?

ನೀವು ನೈಸರ್ಗಿಕವಾಗಿದೆ ಎಂದು ಯೋಚಿಸುವುದು, ಅದು ನೈಸರ್ಗಿಕವಲ್ಲ ಎಂದು ನಿಮಗೆ ತಿಳಿದಿದೆಯೇ?

"ನೈಸರ್ಗಿಕ ಉತ್ಪನ್ನಗಳಿಗೆ" ಯಾವುದೇ ಪ್ರಮಾಣಿತ ಮಾರ್ಗಸೂಚಿಗಳು ಅಥವಾ ಆದೇಶಗಳ ಅನುಪಸ್ಥಿತಿಯಲ್ಲಿ, ಅವು ವಾಸ್ತವವಾಗಿ ನೈಸರ್ಗಿಕ ವಸ್ತುಗಳ ಸಣ್ಣ ಭಾಗಗಳನ್ನು ಹೊಂದಿರಬಹುದು, ಆದರೆ ಫಾರ್ಮುಲಾದ ಉಳಿದ ಭಾಗವು ನೀವು ಚಿಂತೆ ಮಾಡುವ ರಾಸಾಯನಿಕಗಳನ್ನು ಇನ್ನೂ ಸಹ ಹೊಂದಿರಬಹುದು.

ಆರ್ಗ್ಯಾನಿಕ್ ಹಾರ್ವೆಸ್ಟ್ ನಲ್ಲಿ ನಮ್ಮ ಉತ್ಪನ್ನಗಳು ಯುಎಸ್ಡಿಎ ಯಿಂದ 100% ಸಾವಯವ ಪ್ರಮಾಣೀಕೃತವಾಗಿವೆ, ಅಂದರೆ ನಮ್ಮ ಪದಾರ್ಥಗಳು ನೈಸರ್ಗಿಕ ಅಥವಾ ಸಾವಯವ ಮೂಲಗಳಿಂದ ಬಂದಿವೆ ಎಂದರ್ಥ.

*ಯುಎಸ್ಡಿಎ ಯಿಂದ ಪ್ರಮಾಣೀಕರಿಸಲಾಗಿದೆ #ಆರ್ಗ್ಯಾನಿಕ ಹಾರ್ವೆಸ್ಟ್ ನಿಂದ ^ನಿಯಮಗಳು ಮತ್ತು ಷರತ್ತು ಅನ್ವಯಿಸುತ್ತದೆ

ನಿಮ್ಮ ಉಚಿತ ಪ್ರಯೋಗದ ಕಿಟ್ ಅನ್ನು ಪಡೆಯಲು ನಮ್ಮ ಆ್ಯಪ್ ಅಥವಾ ವೆಬ್‌ಸೈಟ್‌ನಲ್ಲಿ OHFCFREE ಕೋಡ್ ಅನ್ನು ಬಳಸಿ*

Organic Harvest App ಅನ್ನು ಡೌನ್ಲೋಡ್ ಮಾಡಿಕೊಳ್ಳಿ

ಇಲ್ಲೂ ಸಹ ಲಭ್ಯವಿದೆ

amazon | NYKAA.com | Flipkart | Myntra | ನಿಮ್ಮ ಹತ್ತಿರವಿರುವ ಎಲ್ಲಾ ಪ್ರಮುಖ ಸ್ಟೋರ್‌ಗಳಲ್ಲಿ

ಶನಿವಾರ, ಏಪ್ರಿಲ್ 29, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾಗೃತಿ
ಕೋಲ್ಕತ್ತದಲ್ಲಿ ಶುಕ್ರವಾರ ಡೆಂಗಿ ಕುರಿತ ಜಾಗೃತಿ ರ್‍ಯಾಲಿಯಲ್ಲಿ ಪುರುಲಿಯಾದ ಚೌ ನೃತ್ಯಪಟು ಗಮನಸೆಳೆದ ಬಗೆ ಇದು –ಪಿಟಿಐ ಚಿತ್ರ

ಪ್ರಾಯೋಗಿಕ 'ತಾಪಮಾನ ಸೂಚ್ಯಂಕ' 10
ಬೋರಿಸ್‌ಗೆ ಸಾಲ ಕೊಡಿಸಲು ನೆರವು: ಆರೋಪ
ಅಂಕಪಟ್ಟಿ ಮಾರಾಟ: 'ಕೆಐಒಎಸ್' ಮೇಲೆ ದಾಳಿ 9
ಬಿಬಿಸಿ ಅಧ್ಯಕ್ಷ ರಿಚರ್ಡ್ ರಾಜೀನಾಮೆ 12

ಎಗ್ಗಿಲ್ಲದ ಮಾತು, ದೂರು–ಪ್ರತಿದೂರು

ಖರ್ಗೆ ವಿರುದ್ಧ ಕ್ರಿಮಿನಲ್ ಪ್ರಕರಣ: ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪ್ರಧಾನಿ ನರೇಂದ್ರ ಮೋದಿ ವಿಷದ ಹಾವಿದ್ದಂತೆ' ಎಂದು ಹೇಳಿಕೆ ನೀಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಹಾಗೂ ಅವರನ್ನು ಚುನಾವಣಾ ಪ್ರಚಾರದಿಂದ ನಿರ್ಬಂಧಿಸಬೇಕು ಎಂದು ಒತ್ತಾಯಿಸಿ ಬಿಜೆಪಿಯ ನಿಯೋಗವು ಕೇಂದ್ರ ಚುನಾವಣಾ ಆಯೋಗಕ್ಕೆ ಶುಕ್ರವಾರ ದೂರು ನೀಡಿದೆ.

ನಿಯೋಗದ ನೇತೃತ್ವ ವಹಿಸಿದ್ದ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್, 'ಖರ್ಗೆ ಅವರ ಈ ಹೇಳಿಕೆಯು ಕೇವಲ ಬಾಯ್ತಪ್ಪಿನಿಂದ ಆಡಿದ ಮಾತಲ್ಲ. ಅದು ಕಾಂಗ್ರೆಸ್‌ನ ದ್ವೇಷ ರಾಜಕಾರಣದ ಭಾಗ. ಮೋದಿ ಅವರ ವಿರುದ್ಧ ಕಾಂಗ್ರೆಸ್ ನಿರಂತರವಾಗಿ ವೈಯಕ್ತಿಕ ದಾಳಿ ನಡೆಸಿದೆ' ಎಂದು ದೂರಿದರು.

ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿ ಐಪಿಸಿ ಸೆಕ್ಷನ್ 499 ಹಾಗೂ 500 ಮತ್ತು ಉದ್ದೇಶಪೂರ್ವಕ ಅವಮಾನ ಹಾಗೂ ಪ್ರಚೋದನೆಯ ಅಪರಾಧದ ಬಗ್ಗೆ ವ್ಯವಹರಿಸುವ ಸೆಕ್ಷನ್ 504ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು ಎಂದು ನಿಯೋಗ ಆಗ್ರಹಿಸಿತು.

ಪಕ್ಷದ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಮುಖ್ಯ ವಕ್ತಾರ ಅನಿಲ್ ಬಲೂನಿ ಹಾಗೂ ಮುಖಂಡ ಓಂ ಪಾಠಕ್ ನಿಯೋಗದಲ್ಲಿ ಇದ್ದರು.

ಶಾ, ಯೋಗಿ ಅವರ ಪ್ರಚಾರಕ್ಕೆ ನಿರ್ಬಂಧ: ಕಾಂಗ್ರೆಸ್ ಪಟ್ಟು

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಪ್ರಚಾರ ಮಾಡದಂತೆ ನಿರ್ಬಂಧಿಸಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ನಿಯೋಗವು ಕೇಂದ್ರ ಚುನಾವಣಾ ಆಯೋಗಕ್ಕೆ ಶುಕ್ರವಾರ ದೂರು ನೀಡಿದೆ.

ಕಾಂಗ್ರೆಸ್ ಮುಖಂಡರಾದ ಅಭಿಷೇಕ್ ಸಿಂಗ್ವಿ, ಪವನ್ ಕುಮಾರ್ ಬನ್ಸಾಲ್, ಮುಕುಲ್ ವಾಸ್ನಿಕ್ ಅವರನ್ನು ಒಳಗೊಂಡ ನಿಯೋಗವು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿತು.

ಈ ಇಬ್ಬರೂ ನಾಯಕರು ಪ್ರಚಾರದ ವೇಳೆಯಲ್ಲಿ ಸುಳ್ಳು, ಪಕ್ಷಪಾತದ ಹಾಗೂ ಕೋಮುವಾದದ ಹೇಳಿಕೆಗಳನ್ನು ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಪ್ರಚಾರಕ್ಕೆ ಅವಕಾಶ ನೀಡಬಾರದು. ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಈ ಸಂಬಂಧ ಆಯೋಗ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿತು.

'ಜೆಡಿಎಸ್ ಅಭ್ಯರ್ಥಿಗೆ ಕಣದಿಂದ ಹಿಂದೆ ಸರಿಯಲು ಆಮಿಷ ಒಡ್ಡಿದ ವಿ.ಸೋಮಣ್ಣ ಅವರ ಚಾಮರಾಜನಗರ ಕ್ಷೇತ್ರದ ಉಮೇದುವಾರಿಕೆಯನ್ನು ರದ್ದುಗೊಳಿಸಬೇಕು' ಎಂದೂ ನಿಯೋಗ ಆಗ್ರಹಿಸಿತು.

'ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕೀಳುಮಟ್ಟದ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡುವುದು ಸೇರಿದಂತೆ ಎಲ್ಲ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತೇವೆ' ಎಂದು ಅಭಿಷೇಕ್ ಸಿಂಗ್ವಿ ಸುದ್ದಿಗಾರರಿಗೆ ತಿಳಿಸಿದರು.

ಸೋನಿಯಾ ಗಾಂಧಿ ನಾಗಕನ್ನಿಕೆಯೇ?

ಪ್ರಧಾನಿ ನರೇಂದ್ರ ಮೋದಿ ವಿಷದ ಹಾವಿದ್ದಂತೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಹಾಗಾದರೆ ಸೋನಿಯಾ ಗಾಂಧಿಯವರೇನು ನಾಗಕನ್ನಿಕೆಯೇ? ಮೋದಿ ಜಗತ್ತಿನ ನಾಯಕ ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಅಂಥ ನಾಯಕನನ್ನು ನಾಗರಹಾವಿಗೆ ಹೋಲಿಸುವುದು ಸರಿಯೇ? ಚಹಾ ಮಾರುವ ವ್ಯಕ್ತಿ ಪ್ರಧಾನಿಯಾಗಿದ್ದಾರೆ ಎಂಬ ಕಾರಣಕ್ಕೆ ಅವರನ್ನು ಅವಮಾನ ಮಾಡುತ್ತೀರಾ? ಕಾಂಗ್ರೆಸ್ ನಾಯಕರು ಸೋನಿಯಾ ಮಾತಿಗೆ ಕುಣಿದು ಈ ಹೇಳಿಕೆ ಕೊಡುತ್ತಿದ್ದಾರೆ. ಹಾಗಾದರೆ ಅವರೇನು ವಿಷಕನ್ಯೆಯೇ?

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ
(ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ನಡೆದ ಸಭೆಯಲ್ಲಿ)

ಬಸನಗೌಡ ಪಾಟೀಲ ಯತ್ನಾಳರ ಹೇಳಿಕೆಯಿಂದ ದೇಶದ ಎಲ್ಲ ಮಹಿಳೆಯರಿಗೆ ಅವಮಾನವಾಗಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಷಮೆ ಯಾಚಿಸಬೇಕು. ಯತ್ನಾಳರನ್ನು ಬಿಜೆಪಿಯಿಂದ ಉಚ್ಚಾಟಿಸಬೇಕು.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ವಿಷ ಕಾರುವುದು ಬಿಜೆಪಿಯವರ ಹುಟ್ಟು ಗುಣ. ಕೆ.ಎಸ್. ಈಶ್ವರಪ್ಪ, ಬಸನಗೌಡ ಪಾಟೀಲ ಯತ್ನಾಳ, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಬಹುತೇಕ ನಾಯಕರು ಚುನಾವಣಾ ಪ್ರಚಾರದಲ್ಲಿ ವಿಷ ಕಾರುತ್ತಾರೆ. ಅದನ್ನೇ ಖರ್ಗೆಯವರು ಹಳ್ಳಿ ಭಾಷೆಯಲ್ಲಿ ಹೇಳಿದ್ದಾರಷ್ಟೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಅಕ್ಕಿರಾಂಪುರ ಆರೋಗ್ಯ ಕೇಂದ್ರದಲ್ಲಿ ಡಾ.ಜಿ.ಪರಮೇಶ್ವರ ಅವರಿಗೆ ಚಿಕಿತ್ಸೆ ನೀಡಲಾಯಿತು

ಪರಮೇಶ್ವರ ತಲೆಗೆ ಕಲ್ಲೇಟು

ಪ್ರಜಾವಾಣಿ ವಾರ್ತೆ

ಕೊರಟಗೆರೆ: ತಾಲ್ಲೂಕಿನ ಬೈರೇನಹಳ್ಳಿಯಲ್ಲಿ ಶುಕ್ರವಾರ ಪ್ರಚಾರದ ವೇಳೆ ಕಲ್ಲೇಟು ಬಿದ್ದು ಕಾಂಗ್ರೆಸ್ ಅಭ್ಯರ್ಥಿ ಡಾ.ಜಿ.ಪರಮೇಶ್ವರ ತಲೆಗೆ ಪೆಟ್ಟಾಗಿದೆ.

ಪ್ರಚಾರಕ್ಕೆ ಬಂದಿದ್ದ ವೇಳೆ ಅವರನ್ನು ಅಭಿಮಾನಿಗಳು ಎತ್ತಿಕೊಂಡು ಹೆಜ್ಜೆ ಹಾಕಿದ್ದಾರೆ. ಸ್ವಾಗತಿಸುವ ಸಲುವಾಗಿ ಜೆಸಿಬಿ ವಾಹನದ ಮೂಲಕ ಪುಷ್ಪವೃಷ್ಟಿ ಮಾಡಲಾಗಿದ್ದು, ಇದೇ ಸಮಯದಲ್ಲಿ ಕಲ್ಲು ತಲೆ ಮೇಲೆ ಬಿದ್ದಿದೆ. ಕಿಡಿಗೇಡಿಗಳು ಕಲ್ಲು ತೂರಿದ್ದಾರೋ ಅಥವಾ ಹೂವಿನ ಜತೆಯಲ್ಲಿದ್ದ ಕಲ್ಲು ತಲೆ ಮೇಲೆ ಬಿದ್ದಿದೆಯೋ ಎಂಬುದು ಖಚಿತವಾಗಿಲ್ಲ.

ತಕ್ಷಣ ಸಮೀಪದ ಅಕ್ಕಿರಾಂಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದು ಚಿಕಿತ್ಸೆ ಕೊಡಿಸಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆಗೆ ಕರೆತರಲಾಯಿತು.

'ತಲೆ ಮಧ್ಯ ಭಾಗದಲ್ಲಿ ಗಾಯವಾಗಿದ್ದು, ಹೊಲಿಗೆ ಹಾಕಿದ ಚಿಕಿತ್ಸೆ ನೀಡಲಾಗಿದೆ. ಅಪಾಯದಿಂದ ಪಾರಾಗಿದ್ದಾರೆ' ಎಂದು ಚಿಕಿತ್ಸೆ ನೀಡಿದ ಡಾ.ತಸ್ಲೀಮ್ ಅಹಮದ್ 'ಪ್ರಜಾವಾಣಿ'ಗೆ ತಿಳಿಸಿದರು.

ಆಗ್ರಹ: ಹೂವು ಸುರಿಯುವ ವೇಳೆ ಕಲ್ಲು ಬಿದ್ದಿದ್ದರೆ ಇಷ್ಟು ದೊಡ್ಡ ಮಟ್ಟದ ಗಾಯ ಆಗುತ್ತಿರಲಿಲ್ಲ. ಕಿಡಿಗೇಡಿಗಳು ದುರುದ್ದೇಶದಿಂದಲೇ ಹೂವು ಸುರಿಯುವ ವೇಳೆಗೆ ಸರಿಯಾಗಿ ಕಲ್ಲು ತೂರಿರಬಹುದು. ಪೊಲೀಸರು ತನಿಖೆ ನಡೆಸಬೇಕು ಎಂದು ಸ್ಥಳದಲ್ಲಿದ್ದ ಕಾರ್ಯಕರ್ತರು ಒತ್ತಾಯಿಸಿದರು.

'ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ವಿಡಿಯೊ ಪರಿಶೀಲನೆ ಮಾಡಲಾಗುತ್ತಿದೆ. ತನಿಖೆ ನಂತರ ಸತ್ಯಾಂಶ ಗೊತ್ತಾಗಲಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪರಮೇಶ್ವರ ಅವರು ನಾಮಪತ್ರ ಸಲ್ಲಿಸುವ ಸಮಯದಲ್ಲೂ ವ್ಯಕ್ತಿಯೊಬ್ಬ ಕಲ್ಲು ತೂರಿದ್ದು, ಪೊಲೀಸರು ಗಾಯಗೊಂಡಿದ್ದರು. ಇದು ಎರಡನೇ ಘಟನೆಯಾಗಿದೆ.

'ಶೆಟ್ಟರ್ ಕಾಂಗ್ರೆಸ್‌ನಲ್ಲೇ ಇದ್ದು ಸಾಯಲಿ'

ಶಿವಮೊಗ್ಗ: 'ಜಗದೀಶ ಶೆಟ್ಟರ್ ಅವರನ್ನು ಬಿಜೆಪಿಗೆ ವಾಪಸ್ ಬರುವಂತೆ ಕರೆದೆ. ಆದರೆ ನನ್ನ ಮಾತು ಕೇಳಲಿಲ್ಲ. ಅವರು ಅಲ್ಲಿಯೇ ಇದ್ದು ಸಾಯಲಿ' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಜರಿದರು.

'ಬಿಜೆಪಿ ಶೆಟ್ಟರ್ ಅನ್ನು ಟಾರ್ಗೆಟ್ ಮಾಡಿಲ್ಲ. ನಾವೆಲ್ಲರೂ ವಿವಿಧೆಡೆ ಪ್ರಚಾರಕ್ಕೆ ಹೋಗುವಂತೆ ಹುಬ್ಬಳ್ಳಿಯಲ್ಲೂ ಪ್ರಚಾರ ಮಾಡುತ್ತಿದ್ದೇವೆ. ನಾವು ಯಾರೂ ಬರಬಾರದು ಅನ್ನೋದಕ್ಕೆ ಹುಬ್ಬಳ್ಳಿ ಏನು ಪಾಕಿಸ್ತಾನವಾ?' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಜಗದೀಶ ಶೆಟ್ಟರ್ ಅನುಮತಿ ಪಡೆದುಕೊಂಡೇ ನಾವೆಲ್ಲಾ ಹುಬ್ಬಳ್ಳಿಗೆ ಹೋಗಬೇಕಾ' ಎಂದು ಪ್ರಶ್ನಿಸಿದ ಈಶ್ವರಪ್ಪ, 'ಶೆಟ್ಟರ್ ತಾಯಿಗೆ ದ್ರೋಹ ಮಾಡಿದವನು. ಬೆಳೆಸಿದ ತಾಯಿಯನ್ನೇ ಸಾಯಿಸಲು ಹೊರಟವನು' ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

'ಶೆಟ್ಟರ್‌ಗೆ ಸೊಕ್ಕು ಬಂದಿದೆ. ಅಲ್ಲಿನ ಮಹಾನಗರ ಪಾಲಿಕೆಯ 16 ಜನ ಬಿಜೆಪಿ ಸದಸ್ಯರ ಪೈಕಿ ಒಬ್ಬರೂ ಅವರ ಜೊತೆ ಹೋಗಿಲ್ಲ. ಅವರದ್ದು ಹಿಂದುತ್ವದ ರಕ್ತ. ಅವರು ಹೀಗೆ ಮಾಡುತ್ತಿದ್ದಾರಲ್ಲಾ ಎಂಬ ಕಾರಣಕ್ಕೆ ಈ ಆಕ್ರೋಶ ಅಷ್ಟೇ' ಎಂದರು.

ಪಿಸ್ತೂಲ್ ಪ್ರದರ್ಶಿಸಿದ ಬಿಜೆಪಿ ಅಭ್ಯರ್ಥಿ ಮಣಿಕಂಠ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಚಿತ್ತಾಪುರ ಮೀಸಲು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿರುವ ಮಣಿಕಂಠ ರಾಠೋಡ ಅವರು ಕೈಯಲ್ಲಿ ಪಿಸ್ತೂಲ್ ಪ್ರದರ್ಶಿಸುತ್ತಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಶುಕ್ರವಾರ ಹರಿದಾಡಿದೆ.

ಕುರ್ಚಿಯಲ್ಲಿ ಕುಳಿತಿರುವ ಮಣಿಕಂಠ ತಮ್ಮ ಬಲಗೈ ತೋರುಬೆರಳಿನಿಂದ ಪಿಸ್ತೂಲ್ ತಿರುಗಿಸುತ್ತಿದ್ದಾರೆ ಎನ್ನಲಾದ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ. ಇದು ಹಳೆಯ ವಿಡಿಯೊ ಎನ್ನಲಾಗಿದ್ದು, ಇದೀಗ ಮುನ್ನೆಲೆಗೆ ಬಂದಿದೆ.

ಬಿಜೆಪಿ ಅಭ್ಯರ್ಥಿ ಮಣಿಕಂಠ ವಿರುದ್ಧ ರಾಜ್ಯ ಮತ್ತು ಹೊರ ರಾಜ್ಯಗಳ ವಿವಿಧ ಪೊಲೀಸ್ ಠಾಣೆಗಳಲ್ಲಿ 40 ಪ್ರಕರಣಗಳು ದಾಖಲಾಗಿವೆ. ಪ್ರಕರಣವೊಂದರಲ್ಲಿ ಒಂದು ವರ್ಷ ಶಿಕ್ಷೆಯೂ ಆಗಿದ್ದು ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿದ್ದಾರೆ.

ಚುನಾವಣಾ ಪ್ರಚಾರಕ್ಕೆಂದು ಚಿತ್ತಾಪುರಕ್ಕೆ ಶುಕ್ರವಾರ ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 'ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಮತ್ತು ರಾಜ್ಯ ನಾಯಕರ ಮೇಲೂ ಪ್ರಕರಣಗಳಿದ್ದು ಜಾಮೀನಿನ ಮೇಲಿದ್ದಾರೆ. ಮಣಿಕಂಠ ಸಹ ಜಾಮೀನು ಪಡೆದಿದ್ದಾರೆ' ಎಂದಿದ್ದಾರೆ.

ಬಿಜೆಪಿ ಅಭ್ಯರ್ಥಿಯಾಗಿ ಮಣಿಕಂಠ ಅವರನ್ನು ಸಮರ್ಥಿಸಿಕೊಂಡ ದಿನವೇ ವಿಡಿಯೊ ವೈರಲ್ ಆಗಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ನಾಂದಿಯಾಗಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು 'ಪ್ರಜಾವಾಣಿ' ಕರೆ ಮಾಡಿದಾಗ ಮಣಿಕಂಠ ಕರೆ ಸ್ವೀಕರಿಸಲಿಲ್ಲ. ಅವರ ಆಪ್ತರೊಬ್ಬರನ್ನು ಸಂಪರ್ಕಿಸಿದಾಗ ಇದು ಮಣಿಕಂಠ ಅವರ ವಿಡಿಯೊ ಅಲ್ಲ ಎಂದರು.

ಆದರೆ, ಇದು ಮಣಿಕಂಠ ಅವರದ್ದೇ ವಿಡಿಯೊ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

'ಪೂಜೆ ಮುಗಿಸಿ ತಡವಾಗಿ ಬನ್ನಿ'

ಪುದುಚೇರಿ (ಪಿಟಿಐ): ಮನೆಯಲ್ಲಿ ಪೂಜೆ ಮುಗಿಸಿ, ಎರಡು ತಾಸು ತಡವಾಗಿ ಕಚೇರಿಗೆ ಬರುವ ವಿಶೇಷ ಅನುಕೂಲವನ್ನು ಲೆಫ್ಟಿನೆಂಟ್ ಗವರ್ನರ್ ಡಾ. ತಮಿಳಿಸಾಯಿ ಸೌಂದರರಾಜನ್ ಅವರು ಸರ್ಕಾರಿ ಮಹಿಳಾ ಸಿಬ್ಬಂದಿಗೆ ಮಾಡಿಕೊಟ್ಟಿದ್ದಾರೆ. ಈಗ ಮಹಿಳೆಯರು ಬೆಳಿಗ್ಗೆ 8.45ರ ಬದಲಿಗೆ 10.45ಕ್ಕೆ ಕಚೇರಿಗೆ ಬರಬಹುದಾಗಿದೆ.

ತಿಂಗಳ ಮೂರು ಶುಕ್ರವಾರಗಳಲ್ಲಿ ಮಾತ್ರವೇ ಈ ಅನುಕೂಲ ಮಾಡಿಕೊಡಲಾಗಿದೆ.

2B ಪುಟ ನೋಡಿ

ಕೇದಾರ ದರ್ಶನ ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯ ಪ್ರಸಿದ್ಧ ಕೇದಾರನಾಥ ದೇವಸ್ಥಾನದಲ್ಲಿ ಯಾತ್ರಾರ್ಥಿಗಳು ಶುಕ್ರವಾರ ದೇವರ ದರ್ಶನ ಪಡೆದರು –ಪಿಟಿಐ ಚಿತ್ರ

ಕಾರ್ಯಸಾಧ್ಯತಾ ಅಧ್ಯಯನ ಪೂರ್ಣ, ಡಿಪಿಆರ್ ಸಿದ್ಧಪಡಿಸಲು ಒಪ್ಪಂದ

ಕೊಡಚಾದ್ರಿ, ಅಂಜನಾದ್ರಿಯಲ್ಲಿ ರೋಪ್‌ವೇ

• ಮಂಜುನಾಥ ಹೆಬ್ಬಾರ್

ನವದೆಹಲಿ: ಜೋಗ ಜಲಪಾತ ಹಾಗೂ ನಂದಿ ಬೆಟ್ಟದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಈಗಾಗಲೇ ಒಪ್ಪಂದ ಮಾಡಿಕೊಂಡಿರುವ ಕರ್ನಾಟಕ ಸರ್ಕಾರ, ಮುಂದಿನ ಹಂತದಲ್ಲಿ ಉಡುಪಿಯ ಕೊಡಚಾದ್ರಿ ಬೆಟ್ಟ ಹಾಗೂ ಕೊಪ್ಪಳದ ಅಂಜನಾದ್ರಿ ಬೆಟ್ಟದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲು ತೀರ್ಮಾನಿಸಿದೆ.

ಈ ಸಂಬಂಧ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯಕ್ಕೆ ಇತ್ತೀಚೆಗೆ ಪತ್ರ ಬರೆದಿರುವ ರಾಜ್ಯ ಪ್ರವಾಸೋದ್ಯಮ ಇಲಾಖೆ, 'ಕೊಡಚಾದ್ರಿಯಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಕಾರ್ಯಸಾಧ್ಯತಾ ಅಧ್ಯಯನ ಪೂರ್ಣಗೊಳಿಸಲಾಗಿದೆ. ವಿಸ್ತೃತ ಯೋಜನಾ ವರದಿ ಸಿದ್ಧತೆ ನಡೆಸಲಾಗಿದೆ. ಅದೇ ರೀತಿ, ಅಂಜನಾದ್ರಿ ಬೆಟ್ಟದಲ್ಲಿ ಯೋಜನೆ ಅನುಷ್ಠಾನಕ್ಕೆ ಪೂರ್ವ ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗಿದೆ' ಎಂದು ತಿಳಿಸಿದೆ.

ಪರ್ವತಮಾಲಾ ಯೋಜನೆಯಡಿ ರಾಜ್ಯದ 15 ಕಡೆಗಳಲ್ಲಿ ರೋಪ್‌ವೇಗಳ ನಿರ್ಮಾಣಕ್ಕೆ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು. ಚಾಮುಂಡಿಬೆಟ್ಟದ ಪ್ರಸ್ತಾವ ಕೈಬಿಟ್ಟಿರುವ ಸರ್ಕಾರ, ಉಳಿದ ನಾಲ್ಕು ಕಡೆಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಈಗ ಹೆಜ್ಜೆ ಇಟ್ಟಿದೆ.

ಕಳೆದ ವರ್ಷದ ಕೇಂದ್ರ ಬಜೆಟ್‌ನಲ್ಲಿ ಪರ್ವತಮಾಲಾ ಯೋಜನೆಯನ್ನು ಪ್ರಕಟಿಸಲಾಗಿತ್ತು. ಈ ಯೋಜನೆಯ ಆರಂಭವಾದರೆ ಗುಡ್ಡಗಾಡು ಪ್ರದೇಶಗಳಿಗೆ ಜನರ ಸುಲಲಿತ ಪ್ರಯಾಣಕ್ಕೆ ಅನುಕೂಲವಾಗಲಿದೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ ಎಂದು ಪ್ರತಿಪಾದಿಸಲಾಗಿತ್ತು. ಹೆದ್ದಾರಿ ಸಚಿವಾಲಯ, ರೋಪ್‌ವೇ ಯೋಜನೆಗಳಿಗಾಗಿ ಸಾಮಾನ್ಯ ಕಾರ್ಯಾಚರಣೆಯ ವಿಧಾನ ಅಭಿವೃದ್ಧಿಪಡಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿತ್ತು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸಚಿವಾಲಯದ ಕಾರ್ಯದರ್ಶಿ ಗಿರಿಧರ್ ಅರಮನೆ 2022ರ ಫೆಬ್ರುವರಿಯಲ್ಲಿ ಪತ್ರ ಬರೆದು ಈ ಯೋಜನೆಯ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದ್ದರು. ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಅಧಿಕಾರಿಗಳ ನೇಮಿಸುವಂತೆಯೂ ಹೇಳಿದ್ದರು.

ರಾಜ್ಯದ 15 ಕಡೆಗಳಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗುತ್ತದೆ ಎಂದು ಕರ್ನಾಟಕದ ಮೂಲಸೌಕರ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಹೆದ್ದಾರಿ ಸಚಿವಾಲಯಕ್ಕೆ 2022ರ ಮಾರ್ಚ್‌ನಲ್ಲಿ ಪತ್ರ ಬರೆದಿದ್ದರು.

9ನೇ ಪುಟ ನೋಡಿ

ನಂದಿ ಬೆಟ್ಟ, ಜೋಗಕ್ಕೆ ಒಪ್ಪಂದ

ನಂದಿ ಬೆಟ್ಟದಲ್ಲಿ ರೋಪ್‌ವೇ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯು ಡೈನಾಮಿಕ್ ರೋಪ್‌ವೇ ಲಿಮಿಟೆಡ್ ಜತೆಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ. ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ 2.93 ಕಿ.ಮೀ. ಉದ್ದದ ಈ ರೋಪ್‌ವೇಗೆ ₹93 ಕೋಟಿ ವೆಚ್ಚ ಆಗಬಹುದು ಎಂದು ಅಂದಾಜಿಸಲಾಗಿದೆ.

ಜೋಗ ಜಲಪಾತದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದ ಸಚಿವ ಸಂಪುಟ 2021ರಲ್ಲೇ ಒಪ್ಪಿಗೆ ನೀಡಿತ್ತು. ಇಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಒಪ್ಪಂದ ಸಹ ಆಗಿದೆ.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ರೋಪ್‌ವೇ ನಿರ್ಮಿಸಲು ಸರ್ಕಾರ ಮುಂದಾಗಿತ್ತು. ಇದಕ್ಕೆ ಸ್ಥಳೀಯರಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿತ್ತು. ಈ ಯೋಜನೆಯನ್ನು ಕೈ ಬಿಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದ್ದರು. ಸ್ಥಳೀಯರ ವಿರೋಧ ಹಾಗೂ ಧಾರ್ಮಿಕ ನಂಬಿಕೆ ಕಾರಣಕ್ಕೆ ಈ ಯೋಜನೆಯನ್ನು ಕೈಬಿಡಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯಕ್ಕೆ ತಿಳಿಸಿದೆ.

ಯೋಜನೆಗೆ ವಿರೋಧ

ಕೊಡಚಾದ್ರಿ, ಜೋಗದಂತಹ ಸೂಕ್ಷ್ಮ ಪರಿಸರದಲ್ಲಿ ರೋಪ್‌ವೇ ನಿರ್ಮಾಣ ಮಾಡುವುದು ಒಳ್ಳೆಯ ಬೆಳವಣಿಗೆ ಅಲ್ಲ. ಇಂತಹ ಯೋಜನೆಗಳಿಂದ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚಿ ಪರಿಸರದ ಮೇಲೆ ಗಂಭೀರ ಪರಿಣಾಮ ಆಗುವ ಸಾಧ್ಯತೆ ಇರುತ್ತದೆ ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಹೇಳಿದರು.

'ಪೂಜೆ ಮುಗಿಸಿ ತಡವಾಗಿ ಬನ್ನಿ'

ಒಂದನೇ ಪುಟದಿಂದ...

ಜೊತೆಗೆ, ಪೊಲೀಸ್ ಇಲಾಖೆ, ಶಿಕ್ಷಣ ಸಂಸ್ಥೆ, ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಈ ಅನುಕೂಲ ಇಲ್ಲ. ಈ ಬಗ್ಗೆ ಲೆಫ್ಟಿನೆಂಟ್ ಗವರ್ನರ್ ಕಚೇರಿಯು ಶುಕ್ರವಾರ ಹೇಳಿಕೆ ಬಿಡುಗಡೆ ಮಾಡಿದೆ. ಕೇವಲ ಮಹಿಳೆಯರು ಕಾರ್ಯನಿರ್ವಹಿಸುವ ಕಚೇರಿಗಳಲ್ಲಿ ಪಾಳಿ ಪ್ರಕಾರವಾಗಿ ಈ ಅನುಕೂಲ ಮಾಡಿಕೊಡಲಾಗುವುದು ಎಂದು ತಿಳಿಸಲಾಗಿದೆ.

'ಮನೆಯಲ್ಲಿ ಪೂಜೆ ಮುಗಿಸಿ, ಕಚೇರಿಗೆ ಸಮಯಕ್ಕೆ ಸರಿಯಾಗಿ ಬರಲು ಮಹಿಳೆಯರು ಹರಸಾಹಸ ಪಡುತ್ತಿದ್ದಾರೆ. ಇದನ್ನು ತಪ್ಪಿಸಿ, ಭಕ್ತಿಯಿಂದ ಪೂಜೆ ಮುಗಿಸಿ, ಕಚೇರಿಗೆ ಎರಡು ತಾಸು ತಡವಾಗಿ ಬರುವಂತೆ ಅನುಕೂಲ ಮಾಡಿಕೊಡಲಾಗುವುದು' ಎಂದು ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರು ಗುರುವಾರ ಹೇಳಿದ್ದರು.

'ಮಹಿಳೆಯರು ಪೂಜೆ ಮುಗಿಸಿ ಕಚೇರಿಗೆ ತಡವಾಗಿ ಬರಲು ಅನುಮತಿ ನೀಡಬೇಕು ಎಂದು ಕೋರಿ ಸಿಬ್ಬಂದಿ ಮತ್ತು ಆಡಳಿತಾತ್ಮಕ ವ್ಯವಹಾರಗಳ ಸಚಿವಾಲಯವು ಲೆಫ್ಟಿನೆಂಟ್ ಗವರ್ನರ್ ಕಚೇರಿಗೆ ಪತ್ರ ಕಳುಹಿಸಿತ್ತು. ಇದಕ್ಕೆ ಲೆಫ್ಟಿನೆಂಟ್ ಗವರ್ನರ್ ಅವರು ಶುಕ್ರವಾರ ಹಸಿರು ನಿಶಾನೆ ತೋರಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬಾಳೆ, ದಾಳಿಂಬೆ ಬೆಳೆಗೆ ಹಾನಿ ● ಉರುಳಿದ ವಿದ್ಯುತ್ ಕಂಬ ● ನಾಲ್ಕು ಜಾನುವಾರು ಸಾವು

ಬಿರುಗಾಳಿ ಮಳೆ: ಸಿಡಿಲು ಬಡಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬಿರುಗಾಳಿ ಮಳೆಗೆ ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಗಾಳಿ ಶಿವಾನಂದ ಅವರ ಬಾಳೆ ಗಿಡಗಳು ಮುರಿದು ನೆಲಕ್ಕೊರಗಿವೆ

ರಾಯಚೂರು ಜಿಲ್ಲೆಯ ಸಿರವಾರದಲ್ಲಿ ಮಳೆಯಿಂದ ಕಟಾವು ಮಾಡಿದ ಭತ್ತವು ನೀರು ಪಾಲಾಯಿತು

ಹುಬ್ಬಳ್ಳಿ: ಹೊಸಪೇಟೆ, ಹುನಗುಂದ, ವಿಜಯಪುರ ಜಿಲ್ಲೆಯ ಚಡಚಣ, ಇಂಡಿ, ಸಿಂದಗಿ, ವಿಜಯಪುರದಲ್ಲಿ ಶುಕ್ರವಾರ ಬಿರುಸಿನ ಗಾಳಿಯೊಂದಿಗೆ ಮಳೆಯಾಗಿದೆ. ಸಿಡಿಲು ಬಡಿದು ಚಡಚಣದ ಬಳಿ ಶೇಖಪ್ಪ ಬಿರಾದಾರ (56) ಸಾವಿಗೀಡಾಗಿದ್ದಾರೆ. ಸಿಂದಗಿಯಲ್ಲಿ ಎತ್ತು ಸಿಡಿಲಿನಿಂದ ಮೃತಪಟ್ಟಿವೆ.

ಹೊಸಪೇಟೆ ತಾಲ್ಲೂಕಿನ ಕಮಲಾಪುರ, ಹಂಪಿ ಸುತ್ತಮುತ್ತ ನೂರು ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆದು ನಿಂತಿದ್ದ ಬಾಳೆ ಸಂಪೂರ್ಣ ನೆಲಕ್ಕೊರಗಿದೆ. ಬಾಗಲಕೋಟೆ ಜಿಲ್ಲೆಯ ಹುನಗುಂದ ಪಟ್ಟಣದಲ್ಲಿ ಗುಡುಗು–ಸಿಡಿಲಿನ ಆರ್ಭಟದೊಂದಿಗೆ ಒಂದು ತಾಸು ಬಿರುಸಿನ ಮಳೆ ಸುರಿಯಿತು.

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕನ್ನೊಳ್ಳಿ ಗ್ರಾಮದಲ್ಲಿ ಗುರುವಾರ ತಡರಾತ್ರಿ ಸುರಿದ ಬಿರುಗಾಳಿ ಸಮೇತ ಆಲಿಕಲ್ಲು ಮಳೆಗೆ ಲಕ್ಷಾಂತರ ರೂಪಾಯಿ ಮೌಲ್ಯದ ದಾಳಿಂಬೆ ಬೆಳೆ ನೆಲಕಚ್ಚಿದೆ. ಕೊಕಟನೂರ ಗ್ರಾಮದ ತೋಟದ ವಸ್ತಿಯಲ್ಲಿನ ಮನೆ ಪತ್ರಾಸಗಳೆಲ್ಲ ಹಾರಿ ಹೋಗಿವೆ. ವಿದ್ಯುತ್ ಟ್ರಾನ್ಸ್‌ಫಾರ್ಮರ್, ಕಂಬಗಳು ಉರುಳಿವೆ.

ಕಲಬುರಗಿ ವರದಿ: ಕಲಬುರಗಿ, ಯಾದಗಿರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಕಕ್ಕೇರಾ ಸಮೀಪದ ಮಂಜಲಾಪುರದಲ್ಲಿ ಸಿಡಿಲು ಬಡಿದು ಆಕಳು ಮತ್ತು ಹುಮನಾಬಾದ್ ತಾಲ್ಲೂಕಿನಲ್ಲಿ ಸಿಡಿಲು ಬಡಿದು ಎರಡು ಎಮ್ಮೆಗಳು ಮೃತಪಟ್ಟಿವೆ.

ನಾಲ್ಕೂ ಜಿಲ್ಲೆಗಳಲ್ಲೂ ಮರಗಳು, ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. ಕೆಲವು ಕಡೆ ವಿದ್ಯುತ್ ಪೂರೈಕೆ ಕಡಿತವಾಯಿತು.

ಕಲಬುರಗಿ ಜಿಲ್ಲೆಯ ಚಿಂಚೋಳಿ, ಜೇವರ್ಗಿ, ಆಳಂದ ಮುಂತಾದ ಕಡೆ ಮಳೆಯಾಯಿತು. ಯಾದಗಿರಿ ನಗರ ಸೇರಿ ಜಿಲ್ಲೆಯ ಶಹಾಪುರ, ಸುರಪುರ ಮತ್ತು ಗುರುಮಠಕಲ್‌ನಲ್ಲಿ ಮಳೆಯಾಯಿತು. ಬೀದರ್ ಸೇರಿ ಜಿಲ್ಲೆಯ ಭಾಲ್ಕಿ, ಹುಮನಾಬಾದ್, ಚಿಟಗುಪ್ಪ, ಕಮಲನಗರ, ಔರಾದ್, ಹುಲಸೂರಿನಲ್ಲಿ ಮಳೆ ಸುರಿಯಿತು.

ರಾಯಚೂರು ಸೇರಿದಂತೆ ಜಿಲ್ಲೆಯ ವಿವಿಧೆಡೆ ಸುರಿದ ಮಳೆಯಿಂದ ಹಾನಿ ಸಂಭವಿಸಿ, ಜನರು ಸಂಕಷ್ಟಕ್ಕೆ ಒಳಗಾದರು. ಜಿಲ್ಲಾ ಕ್ರೀಡಾಂಗಣದಲ್ಲಿನ ಏಮ್ಸ್ ಹೋರಾಟಗಾರರ ವೇದಿಕೆಯು ಸಂಪೂರ್ಣ ಕುಸಿದು ಬಿತ್ತು.

ನಗರದ ಡ್ಯಾಡಿ ಕಾಲೊನಿ, ಆಶಾಪುರ ರಸ್ತೆ, ವಾಸವಿ ನಗರದಲ್ಲಿ ಮರಗಳು ಉರುಳಿ ಬಿದ್ದವು. ರಾಯಚೂರು ಮತ್ತು ಸಿರವಾರದಲ್ಲಿ ಮಳೆ ನೀರು ನುಗ್ಗಿ, ಭತ್ತದ ಬೆಳೆಗೆ ಹಾನಿಯಾಯಿತು.

ಇಂದು 6 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಆರು ಜಿಲ್ಲೆಗಳಿಗೆ ಶನಿವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಯಾದಗಿರಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಉತ್ತರ ಒಳನಾಡಿನ ಬೀದರ್, ಕಲಬುರಗಿಯ ಒಂದೆರಡು ಕಡೆ ಆಲಿಕಲ್ಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಬಹುದು. ಮಂಗಳವಾರದವರೆಗೂ ರಾಜ್ಯದ ವಿವಿಧೆಡೆ ಭಾರಿ ಮಳೆಯಾಗಲಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಬೀದರ್ ಜಿಲ್ಲೆಯ ನಿಟ್ಟೂರಿನಲ್ಲಿ ಗರಿಷ್ಠ (10 ಸೆಂ.ಮೀ.) ಮಳೆಯಾಗಿದೆ. ಬೀದರ್‌ನಲ್ಲಿ 9 ಸೆಂ.ಮೀ., ಭಾಲ್ಕಿಯಲ್ಲಿ 8 ಸೆಂ.ಮೀ., ಹುಲಸೂರು ಹಾಗೂ ಕಲಬುರಗಿಯಲ್ಲಿ ತಲಾ 7 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 7 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (37.1 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಸುದ್ದಿ 2 ನಿಮಿಷ

ಆಮಿಷ: ಸೋಮಣ್ಣ ಸೇರಿ ಮೂವರ ವಿರುದ್ಧ ಎಫ್‌ಐಆರ್

ಚಾಮರಾಜನಗರ: ನಾಮಪತ್ರ ವಾಪಸ್ ಪಡೆಯಲು ಜೆಡಿಎಸ್ ಅಭ್ಯರ್ಥಿ ಮಲ್ಲಿಕಾರ್ಜುನ ಸ್ವಾಮಿ (ಆಲೂರು ಮಲ್ಲು) ಅವರಿಗೆ ಆಮಿಷ ಒಡ್ಡಿರುವ ಆಡಿಯೊ ತುಣುಕಿಗೆ ಸಂಬಂಧಿಸಿದಂತೆ ಸೋಮಣ್ಣ ಸೇರಿದಂತೆ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್‌ನಲ್ಲಿ ಸೋಮಣ್ಣ ಅವರಿಗೆ ಸಂಬಂಧಿಸಿದಂತೆ ವಿವರಗಳಿಲ್ಲ. ಅವರನ್ನು ಅಪರಿಚಿತ ಎಂದು ಉಲ್ಲೇಖಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವ ಆಡಿಯೊದಲ್ಲಿ ಕೇಳಿ ಬಂದಿರುವ ಇನ್ನೆರಡು ಹೆಸರುಗಳಾದ ಸುದೀಪ್ ಮತ್ತು ನಟರಾಜು ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ.

ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್‌ನ ಮ್ಯಾಜಿಸ್ಟ್ರೇಟ್ ಡಾ.ಬಿ.ಆರ್.ಜಯಣ್ಣ ನೀಡಿರುವ ದೂರಿನ ಆಧಾರದಲ್ಲಿ ಚಾಮರಾಜನಗರ ಠಾಣೆಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸೋಮಣ್ಣ ಅವರನ್ನು ಮೊದಲ ಆರೋಪಿ ಎಂದು ಉಲ್ಲೇಖಿಸಲಾಗಿದ್ದು, ನಟರಾಜು ಅವರು ಎರಡನೇ ಮತ್ತು ಸುದೀಪ್ ಮೂರನೇ ಆರೋಪಿಯಾಗಿದ್ದಾರೆ.

ಬಿಜೆಪಿ ಅಭ್ಯರ್ಥಿ ಸೋಮಣ್ಣ ಅವರು ಜೆಡಿಎಸ್‌ನ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಕರೆ ಮಾಡಿ ನಾಮಪತ್ರ ವಾಪಸ್ ತೆಗೆದುಕೊಳ್ಳುವಂತೆ ಸೂಚಿಸಿದ್ದರು.

ಶ್ರೀಲಂಕಾ: ಈಗ ಪ್ರವಾಸಿಗರಿಗೆ ಮುಕ್ತ

ಬೆಂಗಳೂರು: 'ಶ್ರೀಲಂಕಾದಲ್ಲಿ ಈಗ ಶಾಂತಿ ನೆಲೆಸಿದ್ದು, ಪ್ರವಾಸಿಗರಿಗೆ ಮುಕ್ತವಾಗಿದೆ. ನೈಸರ್ಗಿಕ ತಾಣಗಳು, ಧಾರ್ಮಿಕ ಸ್ಥಳಗಳು ಸೇರಿದಂತೆ ಪ್ರತಿಯೊಬ್ಬರು ಬಯಸಿದ ತಾಣಗಳಿವೆ' ಎಂದು ಶ್ರೀಲಂಕಾದ ಪ್ರವಾಸೋದ್ಯಮ ಸಚಿವ ಹರಿನ್ ಫರ್ನಾಂಡೋ ತಿಳಿಸಿದರು.

ಭಾರತದೊಂದಿಗೆ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ದ್ವಿಪಕ್ಷೀಯ ಸಂಬಂಧಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಭಾರತದ ಪ್ರಮುಖ ನಗರಗಳಲ್ಲಿ ಶ್ರೀಲಂಕಾ ರೋಡ್‌ಶೋಗಳನ್ನು ನಡೆಸುತ್ತಿದೆ. ಇದರ ಭಾಗವಾಗಿ ಬೆಂಗಳೂರಿನಲ್ಲಿ ಶುಕ್ರವಾರ ರೋಡ್‌ಶೋ ನಡೆಯಿತು.

ಈ ಸಂದರ್ಭದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವ ಹರಿನ್ ಫರ್ನಾಂಡೋ, 'ಶ್ರೀಲಂಕಾಕ್ಕೆ ಕಳೆದ ವರ್ಷ ಒಂದು ಲಕ್ಷಕ್ಕೂ ಹೆಚ್ಚು ಭಾರತೀಯ ಪ್ರವಾಸಿಗರು ಭೇಟಿ ನೀಡಿದ್ದಾರೆ. ಈ ವರ್ಷ ಇದು ದ್ವಿಗುಣಗೊಳ್ಳುವ ನಿರೀಕ್ಷೆ ಇದೆ. ಜನವರಿಯಿಂದ ಮಾರ್ಚ್ ನಡುವೆ 46 ಸಾವಿರ ಭಾರತೀಯ ಪ್ರವಾಸಿಗರು ಶ್ರೀಲಂಕಾಕ್ಕೆ ಬಂದಿದ್ದರು. ಈ ಮೂರು ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 8000 ಪ್ರವಾಸಿಗರು ಶ್ರೀಲಂಕಾಕ್ಕೆ ಆಗಮಿಸುತ್ತಿದ್ದು, 2018ರಿಂದೀಚೆಗೆ ಇದು ಅತ್ಯಧಿಕ ಪ್ರಮಾಣ ಎನಿಸಿದೆ' ಎಂದರು.

'ಪ್ರವಾಸೋದ್ಯಮದಿಂದ ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಶ್ರೀಲಂಕಾ 530 ಮಿಲಿಯನ್ ಡಾಲರ್ (₹4332.92 ಕೋಟಿ) ಆದಾಯ ಗಳಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು 482 ಮಿಲಿಯನ್ ಡಾಲರ್ (₹3940.26 ಕೋಟಿ) ಆದಾಯ ಗಳಿಸಿತ್ತು' ಎಂದು ವಿವರಿಸಿದರು.

ಬಿ.ವಿ. ಶ್ರೀನಿವಾಸ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನ ಯುವ ಕಾಂಗ್ರೆಸ್‌ನ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಅಂಕಿತಾ ದತ್ತಾ ಅವರಿಗೆ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತೀಯ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಭದ್ರಾವತಿಯ ಬಿ.ವಿ. ಶ್ರೀನಿವಾಸ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನಗರದ ಸೆಷನ್ಸ್ ಕೋರ್ಟ್ ತಿರಸ್ಕರಿಸಿದೆ.

'ನನಗೆ ತಾತ್ಕಾಲಿಕ ನಿರೀಕ್ಷಣಾ ಜಾಮೀನು ಅಥವಾ ಟ್ರಾನ್ಸಿಟ್ (ಅಪರಾಧ ದಾಖಲಾಗಿರುವ ಸ್ಥಳಕ್ಕೆ ಹೋಗಿ ಅಲ್ಲಿನ ಪೊಲೀಸ್ ಠಾಣೆ ವ್ಯಾಪ್ತಿಯ ಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಪಡೆಯುವ ತನಕ ಮಾರ್ಗಮಧ್ಯೆ ಎಲ್ಲಿಯೂ ಪೊಲೀಸರು ಬಂಧಿಸಬಾರದು ಎಂಬ ಕಾರಣಕ್ಕೆ ನೀಡಲಾಗುವ ರಹದಾರಿ ಜಾಮೀನು) ನಿರೀಕ್ಷಣಾ ಜಾಮೀನು ನೀಡಬೇಕು' ಎಂದು ಕೋರಿ ಶ್ರೀನಿವಾಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ; ಕಾಯ್ದಿರಿಸಿದ್ದ ಆದೇಶವನ್ನು ನಗರದ 71ನೇ ಹೆಚ್ಚುವರಿ, ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಕೆ.ಎಸ್. ಜ್ಯೋತಿಶ್ರೀ ಶುಕ್ರವಾರ ಪ್ರಕಟಿಸಿದ್ದಾರೆ.

ವಿಚಾರಣೆ ನಡೆದ ವೇಳೆ ಶ್ರೀನಿವಾಸ್ ಪರ ಹಾಜರಾಗಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಶಶಿಕಿರಣ್ ಶೆಟ್ಟಿ, 'ಸಂತ್ರಸ್ತೆಯ ಆರೋಪಗಳು ದುರುದ್ದೇಶದಿಂದ ಕೂಡಿವೆ. ಅರ್ಜಿದಾರರ ವಿರುದ್ಧ ರಾಜಕೀಯ ಪಿತೂರಿ ನಡೆದಿದೆ. ಆರೋಪಿಸಲಾಗಿರುವ ಕೃತ್ಯಗಳು ಘಟಿಸಿದ ಸಾಕಷ್ಟು ದಿನಗಳ ನಂತರ ಈ ದೂರು ದಾಖಲಿಸಲಾಗಿದೆ. ಅರ್ಜಿದಾರರನ್ನು ಬಂಧಿಸಲು ಅಸ್ಸಾಂನ ಪೊಲೀಸರು ರಾಜ್ಯದಲ್ಲಿ ಬೀಡುಬಿಟ್ಟಿದ್ದಾರೆ. ಆದ್ದರಿಂದ, ಅವರು ಗುವಾಹಟಿ ತಲುಪಿ ಅಲ್ಲಿನ ನ್ಯಾಯಾಲಯದಲ್ಲಿ ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ಮುಂದಾಗುವ ತನಕ ನಿರೀಕ್ಷಣಾ ಜಾಮೀನು ಅಥವಾ ಟ್ರಾನ್ಸಿಟ್ ಜಾಮೀನು ನೀಡಬೇಕು' ಎಂದು ಕೋರಿದ್ದರು.

ಆದರೆ, ಈ ವಾದವನ್ನು ಬಲವಾಗಿ ಅಲ್ಲಗಳೆದಿದ್ದ ಸಂತ್ರಸ್ತೆಯ ಪರ ಹೈಕೋರ್ಟ್‌ನ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಆರೋಪಿಯು ತಮ್ಮ ವಿರುದ್ಧ ಯಾವುದೇ ದುರುದ್ದೇಶಪೂರಿತ ಕ್ರಮ ಕೈಗೊಳ್ಳದಂತೆ ಅಸ್ಸಾಂ ಪೊಲೀಸರಿಗೆ ನಿರ್ದೇಶಿಸಬೇಕು ಎಂದು ಕೋರಿ ಈಗಾಗಲೇ ಗುವಾಹಟಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅವರೊಬ್ಬ ಪ್ರಭಾವಿ ವ್ಯಕ್ತಿಯಾಗಿದ್ದು, ಒಂದು ವೇಳೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದರೆ ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ. ಆದ್ದರಿಂದ, ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸುವ ಅವಶ್ಯಕತೆ ಇದ್ದು ಅವರ ಈ ಅರ್ಜಿ ವಜಾ ಮಾಡಬೇಕು' ಎಂದು ಕೋರಿದ್ದರು.

ಪ್ರಕರಣವೇನು?: 'ಕಳೆದ ಆರು ತಿಂಗಳಿಂದ ಶ್ರೀನಿವಾಸ್ ನನಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದಾರೆ. 2023ರ ಫೆಬ್ರುವರಿ 25ರಂದು ಛತ್ತೀಸಗಢದ ರಾಯಪುರದಲ್ಲಿರುವ ಮೇ ಫೇರ್ ಹೋಟೆಲ್‌ನಲ್ಲಿ ಹಲ್ಲೆ ನಡೆಸಿ, ನನ್ನ ವಿರುದ್ಧ ಕೆಟ್ಟ ಭಾಷೆಯ ಪ್ರಯೋಗ ಮಾಡಿದ್ದಾರೆ. ಈ ವಿಷಯವನ್ನು ಕಾಂಗ್ರೆಸ್ ಪದಾಧಿಕಾರಿಗಳಿಗೆ ತಿಳಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಅಂಕಿತಾ ದತ್ತಾ 2023ರ ಏಪ್ರಿಲ್ 19ರಂದು ಅಸ್ಸಾಂನ ಕಾಮರೂಪ್ ಜಿಲ್ಲೆಯ ದಿಸ್ಪುರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಈ ಹಿನ್ನೆಲೆಯಲ್ಲಿ ಪೊಲೀಸರು ಶ್ರೀನಿವಾಸ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 294, 341, 352, 354, 354ಎ (4), 506 ಮತ್ತು 509 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂ 67ರ ಅಡಿ ಪ್ರಕರಣ ದಾಖಲಿಸಿದ್ದಾರೆ. ಸಂತ್ರಸ್ತೆಯ ಪರ ಬೆಂಗಳೂರಿನಲ್ಲಿ ವಕೀಲ ಸ್ವರೂಪ್ ಶ್ರೀನಿವಾಸ್ ವಕಾಲತ್ತು ವಹಿಸಿದ್ದಾರೆ.

'ಜನ ಪ್ರಣಾಳಿಕೆ 10 ವರ್ಷಗಳ ಮುನ್ನೋಟ'

ಬೆಂಗಳೂರು: 'ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ ಎಂಬುದು ಬಹುದೊಡ್ಡ ಬೋಗಸ್' ಎಂದು ಚಿಂತಕ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಕ್ರಿಯಾ ಮಾಧ್ಯಮ ಪ್ರಕಟಿಸಿರುವ 'ಜನ ಪ್ರಣಾಳಿಕೆ 2023' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ವ್ಯಾಸ ಭಾರತವೇ ಒಂದು ಮಹಾಭಾರತವಾಗಿ ಉಳಿಯಲಿಲ್ಲ. ಬಹುತ್ವವು ನಮ್ಮ ಸಂಸ್ಕೃತಿಯ ಭಾಗ ಎಂಬುದನ್ನು ಚರಿತ್ರೆ ಕೂಡ ತಿಳಿಸಿಕೊಟ್ಟಿದೆ' ಎಂದರು.

'ದೇಶವನ್ನು ದರೋಡೆ ಮಾಡಲು ಒಂದು ದೇಶ, ಒಂದು ಸಂಸ್ಕೃತಿ ಎಂಬ ಪರಿಕಲ್ಪನೆ ಹುಟ್ಟುಹಾಕಲಾಗಿದೆ. ಒಬ್ಬ ನಾಯಕನ ಮೂಲಕ ಇಡೀ ದೇಶವನ್ನು ಒಪ್ಪಿಸಿಕೊಳ್ಳುವ ಪ್ರಯತ್ನ ಇದಾಗಿದೆ. ಅದಾನಿ ಪ್ರಕರಣವೇ ಇದಕ್ಕೆ ಸಾಕ್ಷಿ' ಎಂದರು.

ರಾಜ್ಯದಲ್ಲಿ ಚುನಾವಣೆ ನಡೆಯುತ್ತಿದ್ದು, ಈ ಹೊತ್ತಿನಲ್ಲಿ ಜನರಿಗೆ ಅಗತ್ಯವಾಗಿ ಬೇಕಾಗಿರುವುದೇನು ಎಂಬುದನ್ನು ಈ ಪುಸ್ತಕದಲ್ಲಿ 15 ಲೇಖಕರು ಮಂಡಿಸಿದ್ದಾರೆ. ಕರ್ನಾಟಕ ಮತ್ತು ಕನ್ನಡ ಭಾಷೆಯನ್ನು ಉಳಿಸಲು ಈ ಪುಸ್ತಕವು 10 ವರ್ಷಗಳ ಮುನ್ನೋಟವಾಗಿ ಕೆಲಸ ಮಾಡಲಿದೆ ಎಂದು ಹೇಳಿದರು.

'ಈ ಪುಸ್ತಕವನ್ನು ಯುವ ಜನರಿಗೆ ತಲುಪಿಸಿ ಓದಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ' ಎಂದರು.

ಲೇಖಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ರಾಜಕೀಯ ಪಕ್ಷಗಳು ಜನಹಿತಕ್ಕೆ ಬೇಕಾದ ಪ್ರಣಾಳಿಕೆಯನ್ನು ಮುಂದಿಡುವ ಬದಲು ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟು ಜನರನ್ನು ಸೆಳೆಯುವ ಪ್ರಯತ್ನ ಮಾಡುತ್ತಿವೆ. ಈ ವಿಷಯವನ್ನು ಬಿಜೆಪಿ ಪರಾಕಾಷ್ಠೆಗೆ ತೆಗೆದುಕೊಂಡು ಹೋಗಿದೆ' ಎಂದರು.

'ರಾಜಕೀಯ ಪಕ್ಷಗಳ ದೃಷ್ಟಿಕೋನದ ದಿವಾಳಿತನ ಇದಕ್ಕೆ ಕಾರಣ. ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಜಕಾರಣವನ್ನು ಮತ್ತೆ ಸರಿದಾರಿಗೆ ಕೊಂಡೊಯ್ಯಲು ಈ ಪುಸ್ತಕ ಕೈಪಿಡಿಯಾಗಿದೆ' ಎಂದರು.

ಚಿಂತಕಿ ಎಚ್.ಜಿ. ಜಯಲಕ್ಷ್ಮಿ ಮಾತನಾಡಿ, 'ಶೇ 52ರಷ್ಟು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಶೇ 66ರಷ್ಟು ಮಕ್ಕಳು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಆರೋಗ್ಯ ಕ್ಷೇತ್ರ ಸಂಪೂರ್ಣವಾಗಿ ಖಾಸಗಿ ಕೈಗೆ ಸೇರಿರುವುದೇ ಇದಕ್ಕೆ ಕಾರಣ' ಎಂದರು.

ಚಿಕ್ಕಮಗಳೂರಿನಲ್ಲಿ ಶುಕ್ರವಾರ ಕರುಮಾರಿಯಮ್ಮ ದೇವಿ ಕರಗ ಮಹೋತ್ಸವ ಅಂಗವಾಗಿ ಭಕ್ತರು ಬೆನ್ನಿಗೆ ಕಬ್ಬಿಣದ ಬಳೆ ಸಿಕ್ಕಿಸಿ ಅದಕ್ಕೆ ಹಗ್ಗದ ಮೂಲಕ ದೇವಿಯನ್ನು ಪ್ರತಿಷ್ಠಾಪಿಸಿದ್ದ ವಾಹನವನ್ನು ಕಟ್ಟಿ ಎಳೆದೊಯ್ದರು.

ಬೆನ್ನಿಗೆ ಕಬ್ಬಿಣದ ಬಳೆ ಸಿಕ್ಕಿಸಿ ವಾಹನ ಎಳೆದ ಭಕ್ತರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದಲ್ಲಿ ಶುಕ್ರವಾರ ಜರುಗಿದ ಕರುಮಾರಿಯಮ್ಮ ದೇವಿ ಕರಗ ಮಹೋತ್ಸವ, ಸಿಡಿ ಉತ್ಸವದಲ್ಲಿ ಕೆಲ ಭಕ್ತರು ಬೆನ್ನಿಗೆ ಕಬ್ಬಿಣದ ಬಳೆ ಸಿಕ್ಕಿಸಿ, ಹಗ್ಗ ಕಟ್ಟಿಕೊಂಡು ದೇವಿ ಪ್ರತಿಷ್ಠಾಪಿಸಿದ್ದ ವಾಹನವನ್ನು ಎಳೆದೊಯ್ದರು.

ಮಹೋತ್ಸವದ ಅಂಗವಾಗಿ ದೇವಿ ಮೆರವಣಿಗೆ ಜರುಗಿತು. ಐವರು ಭಕ್ತರು ಬೆನ್ನಿಗೆ ಸಿಕ್ಕಿಸಿಕೊಂಡಿದ್ದ ಕಬ್ಬಿಣದ ಬಳೆಗಳಿಗೆ ಹಗ್ಗಗಳನ್ನು ಕಟ್ಟಿಕೊಂಡು ಟ್ರ್ಯಾಕ್ಟರ್ ಎಳೆದು ಸಾಗಿದರು.

ಲಾರಿಯೊಂದರ ಮುಂಭಾಗಕ್ಕೆ ಸಿಕ್ಕಿಸಿದ್ದ ಕಟ್ಟಿಗೆಗೆ ಹಗ್ಗ ಕಟ್ಟಿಕೊಂಡು ಭಕ್ತರೊಬ್ಬರು ಅಡ್ಡಡ್ಡ ನೇತಾಡಿಕೊಂಡು ಸಾಗಿದರು. ನೂರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

'ವಾಹನ ಎಳೆದು, ದೇವಿಗೆ ಪೂಜೆ ಸಲ್ಲಿಸಿ ಹರಕೆ ತೀರಿಸುತ್ತಾರೆ. ಬೇಡ ಎಂದು ಹೇಳಿದರೆ ಕೇಳಲ್ಲ' ಎಂದು ದೇಗುಲ ಸಮಿತಿ ಅಧ್ಯಕ್ಷ ರಘು ತಿಳಿಸಿದರು.

'ಬೆನ್ನಿಗೆ ಕಬ್ಬಿಣದ ಬಳೆ ಸಿಕ್ಕಿಸಿಕೊಂಡು ಹಗ್ಗ ಕಟ್ಟಿಕೊಂಡು ವಾಹನ ಎಳೆದಿರುವುದು ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪರಿಶೀಲನೆ ಮಾಡಲಾಗುವುದು' ಎಂದು ತಹಶೀಲ್ದಾರ್ ವಿನಾಯಕ ಸಾಗರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

9 ಕಲಾವಿದರಿಗೆ 'ಜಾನಪದ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ನಾಗಮ್ಮ



ಆರ್.ಕೆ. ಸ್ವಾಮಿ

ಕೈಲಾಸಮೂರ್ತಿ

ಮಂಜುಳಾ ಆಲದಳ್ಳಿ

ಲಕ್ಷ್ಮಿ

ಕುಮಾರ

ನರಸಮ್ಮ

ಮಂಟೆ ಲಿಂಗಯ್ಯ

ಶಾಂತಮ್ಮ ಪಿ.ಆರ್.

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮೂರು ವರ್ಷಗಳ 'ತಾಯಮ್ಮ ಎಸ್.ಸಿ. ಮಲ್ಲಯ್ಯ ಜಾನಪದ ದತ್ತಿ' ಪ್ರಶಸ್ತಿ ಘೋಷಿಸಿದ್ದು, ಒಂಬತ್ತು ಜಾನಪದ ಕಲಾವಿದರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶಜೋಶಿ ನೇತೃತ್ವದ ಆಯ್ಕೆ ಸಮಿತಿ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ. 2020ನೇ ಸಾಲಿಗೆ ಮಂಡ್ಯದ ಲಾವಣಿ ಪದ ಕಲಾವಿದ ಆರ್.ಕೆ.ಸ್ವಾಮಿ, ಚನ್ನಪಟ್ಟಣದ ಡೊಳ್ಳುಕುಣಿತ ಕಲಾವಿದೆ ಲಕ್ಷ್ಮಿ ಶ್ರೀನಿವಾಸ್ ಹಾಗೂ ಶ್ರೀರಂಗಪಟ್ಟಣದ ನೀಲಗಾರ ಕಲಾವಿದ ಮಂಟೆ ಲಿಂಗಯ್ಯ ಆಯ್ಕೆಯಾಗಿದ್ದಾರೆ.

2021ನೇ ಸಾಲಿಗೆ ಮಳವಳ್ಳಿಯ ತಮಟೆ ಕಲಾವಿದ ಕುಂತೂರು ಕುಮಾರ, ಕೆ.ಆರ್. ಪೇಟೆಯ ಜಾನಪದ ಗಾಯಕಿ ಶಾಂತಮ್ಮ ಪಿ.ಆರ್. ಹಾಗೂ ಗುಬ್ಬಿ ತಾಲ್ಲೂಕಿನ ಚೇಳೂರು ಗ್ರಾಮದ ತಮಟೆ ಕಲಾವಿದೆ ತಮಟೆ ನರಸಮ್ಮ ಭಾಜನರಾಗಿದ್ದಾರೆ.

2022ನೇ ಸಾಲಿಗೆ ಪಾಂಡವಪುರದ ಸೋಬಾನೆ ಪದ ಕಲಾವಿದೆ ಸೋಬಾನೆ ನಾಗಮ್ಮ, ಮಂಡ್ಯದ ಗಾಯಕಿ ಮಂಜುಳಾ ಆಲದಳ್ಳಿ ಹಾಗೂ ಕೊಳ್ಳೇಗಾಲದ ಕಂಸಾಳೆ ಕಲಾವಿದ ಎಂ.ಕೈಲಾಸಮೂರ್ತಿ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 4 ಸಾವಿರ ನಗದು ಬಹುಮಾನ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಮಕ್ಕಳ ಹೂವಾಟ...

ಹುಬ್ಬಳ್ಳಿಯಲ್ಲಿ ನಟ ಸುದೀಪ್ ಶುಕ್ರವಾರ ರೋಡ್ ಶೋ ನಡೆಸುವಾಗ ಅವರೆಡೆಗೆ ಸಾರ್ವಜನಿಕರು ಎರಚಿದ ಹೂವುಗಳನ್ನು ಮಕ್ಕಳು ಎತ್ತಿಕೊಂಡು ಆಟವಾಡಿದರು

ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ನಿಧನ ವಾರ್ತೆ

ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿ

ವಿ.ಪಿ. ಕುಲಕರ್ಣಿ

ರಾಮದುರ್ಗ: ತಾಲ್ಲೂಕಿನ ಮುದೇನಕೊಪ್ಪ ಗ್ರಾಮದ ನಿವಾಸಿ, ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿ (70) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

1984ರಲ್ಲಿ ರಾಮದುರ್ಗದಲ್ಲಿ ಕಮ್ಯುನಿಸ್ಟ್ ಪಕ್ಷ ಹುಟ್ಟು ಹಾಕಿದ್ದ ಅವರು, 1987ರಲ್ಲಿ ಪೌರ ಕಾರ್ಮಿಕರ ಸಂಘ, 1988ರಲ್ಲಿ ಅರಣ್ಯಭೂಮಿ ಸಾಗುವಳಿ ಮಾಡುವವರ ಸಂಘ, 1992ರಲ್ಲಿ ಬೀಡಿ ಕಾರ್ಮಿಕರ ಸಂಘ, 1995ರಲ್ಲಿ ಗ್ರಾಮ ಪಂಚಾಯಿತಿ ನೌಕರರ ಸಂಘ, 1996ರಲ್ಲಿ ಅಂಗನವಾಡಿ ನೌಕರರ ಸಂಘ, 2002ರಲ್ಲಿ ಬಿಸಿಯೂಟ ನೌಕರರ ಸಂಘ, ಪಂಪ್‌ಸೆಟ್ ಬಳಕೆದಾರರ ಸಂಘ ಸ್ಥಾಪಿಸಿದರು. ಅಸಂಘಟಿತ ನೌಕರರ ಸಲುವಾಗಿ ಹಲವಾರು ಹೋರಾಟಗಳನ್ನು ಕೈಗೊಂಡು ಸರ್ಕಾರದ ಗಮನ ಸೆಳೆದಿದ್ದರು.

ರಾಮದುರ್ಗದ ಕಮ್ಯುನಿಸ್ಟ್ ಪಕ್ಷದ ಕಚೇರಿ ಬಳಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಮಾಜಿ ಶಾಸಕ ಅಶೋಕ ಪಟ್ಟಣ, ವಿವಿಧ ಸಂಘಗಳ ಕಾರ್ಯಕರ್ತರು, ಕಾರ್ಮಿಕರು ಅಂತಿಮ ದರ್ಶನ ಪಡೆದರು. ಸಂಜೆ ಮುದೇನಕೊಪ್ಪದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಇಂಟರ್‌ನೆಟ್ ರಹಿತ ತಂತ್ರಜ್ಞಾನ 'ಸಿಬಿಎಸ್‌ಇ' ಒಲವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 600ಕ್ಕೂ ಹೆಚ್ಚು ಶಾಲೆಗಳ ಪ್ರತಿನಿಧಿಗಳು ಭಾಗಿ
- ಕೋವಿಡ್ ಬಳಿಕ ಡಿಜಿಟಲ್ ಬೋಧನೆಗೆ ಹೆಚ್ಚಿನ ಒತ್ತು
- ಡಿಜಿಟಲ್ ಸಾಕ್ಷರತೆ, ಕೌಶಲ ಅಭಿವೃದ್ಧಿಗೆ ಆದ್ಯತೆ

ಬೆಂಗಳೂರು: ಶಿಕ್ಷಣದ ಬೋಧನೆ, ಕಲಿಕೆಯಲ್ಲಿ ಇಂಟರ್‌ನೆಟ್ ಅವಲಂಬನೆ ಹೊರತಾದ ಡಿಜಿಟಲ್ ತಂತ್ರಜ್ಞಾನದ ಬಳಕೆಗೆ ಉತ್ತೇಜನ ನೀಡಲು, ಹೆಚ್ಚು ಫಲಗಳನ್ನು ಕೊಡುವ ಕೌಶಲ ವಿಷಯಗಳನ್ನು (ಹೈಬ್ರಿಡ್ ಶಿಕ್ಷಣ) ಸಿಬಿಎಸ್‌ಇ ಪಠ್ಯದಲ್ಲಿ ಅಳವಡಿಸಿಕೊಳ್ಳಲು ಶುಕ್ರವಾರ ನಗರದಲ್ಲಿ ನಡೆದ 'ಜಿ–20 ಜೆನ್ ಫೋರಂ' ಶಿಕ್ಷಣ ಶೃಂಗ ನಿರ್ಣಯಿಸಿತು.

'ಟೆಕ್ ಅವಂತ್-ಗಾರ್ಡ್' ಸಂಸ್ಥೆ ಆಯೋಜಿಸಿದ್ದ ಶಿಕ್ಷಣ ಶೃಂಗದಲ್ಲಿ ಶಿಕ್ಷಣ ತಜ್ಞರು, ದೇಶದ 600ಕ್ಕೂ ಹೆಚ್ಚು ಸಿಬಿಎಸ್‌ಸಿ ಪಠ್ಯ ಬೋಧಿಸುವ ಶಾಲೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಕೋವಿಡ್ ಆರಂಭವಾದ ನಂತರ ಕಲಿಕಾ ಪದ್ಧತಿಯ ಸ್ವರೂಪ ಬದಲಾಗಿದೆ. ಡಿಜಿಟಲ್ ಬೋಧನೆಗೆ ಒತ್ತು ಸಿಕ್ಕಿದೆ. ಆದರೆ, ಗ್ರಾಮೀಣ, ಗುಡ್ಡಗಾಡು ಸೇರಿದಂತೆ ಬಹುತೇಕ ಪ್ರದೇಶಗಳಲ್ಲಿ ಇಂಟರ್‌ನೆಟ್ ಸಮಸ್ಯೆಯಿಂದಾಗಿ ಮಕ್ಕಳ ಕಲಿಕೆಗೆ ತೊಡಕಾಗಿತ್ತು. ಇಂತಹ ಸಮಯದಲ್ಲಿ ಇಂಟರ್‌ನೆಟ್ ಅವಲಂಬನೆ ಹೊರತಾದ ಡಿಜಿಟಲ್ ಕಲಿಕಾ ತಂತ್ರಜ್ಞಾನದ ಬಳಕೆ ಅಗತ್ಯವಾಗಿದೆ ಎಂದು ಹಲವು ತಜ್ಞರು ಪ್ರತಿಪಾದಿಸಿದರು.

'ಟೆಕ್ ಅವಂತ್-ಗಾರ್ಡ್' ಸಂಸ್ಥೆ ಮೈಕ್ರೋಸಾಫ್ಟ್ ಸಹಯೋಗದಲ್ಲಿ 'ಕಾರ್ಟೆ ಬ್ಲಾಂಚೆ ಪ್ರೋಗ್ರಾಂ' ರೂಪಿಸಿದ್ದು, ಸರ್ಕಾರದ ಸಾಮಾಜಿಕ ಶಾಲಾ ಯೋಜನೆಯಡಿ ಕಾರ್ಯಗತಗೊಳಿಸಲು ಮುಂದಾಗಿದೆ. ಅದಕ್ಕೆ ಪೂರಕವಾಗಿ ಸಿಬಿಎಸ್‌ಇ ನಿರ್ದೇಶಕ ಡಾ.ಬಿಸ್ವಜಿತ್ ಸಹಾ, ಎಐಸಿಟಿಇ ಅಧ್ಯಕ್ಷ ಡಾ.ಟಿ.ಜಿ.ಸೀತಾರಾಮ್, ಶ್ರೀ-ವಿಶ್ವಕರ್ಮ ಕೌಶಲ ವಿಶ್ವವಿದ್ಯಾಲಯದ ಕುಲಪತಿ ಡಾ.ರಾಜ್ ನೆಹರು, ಹಿರಿಯ ಸಲಹೆಗಾರ ಡಾ.ಮಧು ಅಹ್ಲುವಾಲಿಯಾ ಮತ್ತಿತರರು ಹೈಬ್ರಿಡ್ ಕಲಿಕೆ, ಡಿಜಿಟಲ್ ಸಾಕ್ಷರತೆ, ಕೌಶಲ ಅಭಿವೃದ್ಧಿಯ ಒಳನೋಟಗಳನ್ನು ಪ್ರಸ್ತುತಪಡಿಸಿದರು.

ಸಿಬಿಎಸ್‌ಸಿ ಜಂಟಿ ಕಾರ್ಯದರ್ಶಿ ಆರ್.ಪಿ.ಸಿಂಗ್, ಸಮೀಕ್ಷೆಗಳ ಪ್ರಕಾರ ಶೇ 85ರಷ್ಟು ಶಿಕ್ಷಕರು ಸಾಂಪ್ರದಾಯಿಕ ಬೋಧನೆ ಜತೆಗೆ ತಂತ್ರಜ್ಞಾನ ಆಧಾರಿತ ಶಿಕ್ಷಣದತ್ತ ಒಲವು ತೋರಿದ್ದಾರೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ಕಲಿತ ವಿದ್ಯಾರ್ಥಿಗಳ ಜ್ಞಾಪನಾ ಸಾಮರ್ಥ್ಯಕ್ಕಿಂತ ತಂತ್ರಜ್ಞಾನ ಆಧಾರದಲ್ಲಿ ಕಲಿತವರ ಸಾಮರ್ಥ್ಯ ಹೆಚ್ಚಿರುತ್ತದೆ ಎನ್ನುವುದು ಸಾಬೀತಾಗಿದೆ ಎಂದು ವಿವರಿಸಿದರು.

ಡಾ.ಬಿಸ್ವಜಿತ್ ಸಹಾ ಹಾಗೂ 'ಟೆಕ್ ಅವಂತ್-ಗಾರ್ಡ್' ಸಿಇಒ ಅಲಿ ಸೇಠ್ ಮಾತನಾಡಿದರು.

'ಅಭಿವೃದ್ಧಿ ಕಾಣದ ಕಾಂಗ್ರೆಸ್ ಆಡಳಿತದ ರಾಜ್ಯಗಳು'

ಬೆಂಗಳೂರು: ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನ, ಛತ್ತೀಸಗಢ ರಾಜ್ಯಗಳು ಅಭಿವೃದ್ಧಿಯಾಗಿಲ್ಲ. ಕರ್ನಾಟಕದಲ್ಲಿ ಡಬಲ್ ಎಂಜಿನ್ ಸರ್ಕಾರ ಇರುವುದರಿಂದ ಅಭಿವೃದ್ಧಿ ಸಾಧ್ಯವಾಗಿದೆ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದ್ದವು. ಕಳೆದ ಮೂರೂವರೆ ವರ್ಷಗಳಲ್ಲಿ ರಾಜ್ಯ ಸಾಕಷ್ಟು ಅಭಿವೃದ್ಧಿ ಕಂಡಿದೆ. ಜನಕೇಂದ್ರಿತ- ಜನಪರ ನೀತಿಗಳನ್ನು ಜಾರಿಗೊಳಿಸಲಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ಜನವಿರೋಧಿ ಆಲೋಚನೆಗಳನ್ನು ಹೊಂದಿದೆ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಕೋವಿಡ್ ಸಂಕಷ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಆರೋಗ್ಯ ಮತ್ತು ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಿದ್ದರು. ಅವರ ಇಚ್ಛಾಶಕ್ತಿಯ ಫಲವಾಗಿ ಭಾರತ ಇಂದು ವಿಶ್ವದಲ್ಲೇ ಐದನೇ ಪ್ರಬಲ ಆರ್ಥಿಕ ರಾಷ್ಟ್ರವೆನಿಸಿದೆ. ದೇಶದಲ್ಲಿ ಹಣದುಬ್ಬರ ದರ ಕಡಿಮೆಯಾಗಿದೆ. ವಿದೇಶಿ ನೇರ ಬಂಡವಾಳ ಹರಿದು ಬರುತ್ತಿದೆ ಎಂದರು.

ಹಳೆ ಹುಬ್ಬಳ್ಳಿ ಪೊಲೀಸ್ ಠಾಣೆ ಮೇಲೆ ದಾಳಿ ಪ್ರಕರಣ

40 ಆರೋಪಿಗಳ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಸೀದಿಯ ಗುಮ್ಮಟದ ಮೇಲೆ ಭಗವಾಧ್ವಜ ಹಾರಾಡುತ್ತಿರುವಂತಹ ಚಿತ್ರವೊಂದನ್ನು ತಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡ ವ್ಯಕ್ತಿಯೊಬ್ಬರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಪೊಲೀಸ್ ಠಾಣೆಯ ಮುಂದೆ ಜಮಾಯಿಸಿದ ವೇಳೆ ನಡೆದ ಗಲಭೆ ಪ್ರಕರಣದಲ್ಲಿನ 40 ಜನ ಆರೋಪಿಗಳಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಹಳೆ ಹುಬ್ಬಳ್ಳಿ ಪೊಲೀಸ್ ಠಾಣೆ ಮೇಲೆ 2022ರ ಏಪ್ರಿಲ್ ಮಧ್ಯಭಾಗದಲ್ಲಿ ನಡೆದಿದ್ದ ದಾಳಿಗೆ ಸಂಬಂಧಿಸಿದಂತೆ ಹಳೆ ಹುಬ್ಬಳ್ಳಿ ನಿವಾಸಿ ಶೋಯೆಬ್ ಅಲಿ ಅಲಿಯಾಸ್ ಶಾಜಿದ್ ಅಲಿ ಎಂಬುವರೂ ಸೇರಿದಂತೆ ಒಟ್ಟು 40 ಜನ ಆರೋಪಿಗಳು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಾಸಿಕ್ಯೂಷನ್ ವಾದವನ್ನು ಮನ್ನಿಸಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು, ಸಾರ್ವಜನಿಕ ಆಸ್ತಿ ಹಾನಿಗೆ ತಡೆ ಕಾಯ್ದೆ–1984 ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ–1967ರ ವಿವಿಧ ಕಲಂಗಳಡಿ 140 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದರಲ್ಲಿ 40 ಆರೋಪಿಗಳು ಕೋರಿದ್ದ ನಿಯಮಿತ ಜಾಮೀನು ಅರ್ಜಿಯನ್ನು ಬೆಂಗಳೂರಿನ ಎನ್‌ಐಎ (ರಾಷ್ಟ್ರೀಯ ತನಿಖಾ ದಳದ) ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಹೈಕೋರ್ಟ್‌ನಲ್ಲಿನ ವಿಚಾರಣೆ ವೇಳೆ ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ವಿಜಯಕುಮಾರ ಎಂ. ಶೀಲವಂತ ಅವರು ವಾದ ಮಂಡಿಸಿ, 'ಘಟನೆ ನಡೆಯುವ ಮುನ್ನ ಪೊಲೀಸರು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರೂ ಆರೋಪಿಗಳು ಅದನ್ನು ಲೆಕ್ಕಿಸದೆ, ಸಾವಿರಾರು ಸಂಖ್ಯೆಯಲ್ಲಿ ಠಾಣೆಯ ಮುಂದೆ ಜಮಾಯಿಸಿ ಏಕಾಏಕಿ ಪೊಲೀಸರ ಮೇಲೆ ಚಪ್ಪಲಿ ಹಾಗೂ ಕಲ್ಲುಗಳನ್ನು ಎಸೆದಿದ್ದಾರೆ. ಸರ್ಕಾರಿ ವಾಹನಗಳಿಗೆ ಜಖಂ ಮಾಡಿದ್ದಾರೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಗುರುತರ ಅಪರಾಧ ಎಸಗಿದ್ದಾರೆ. ಆದಕಾರಣ, ಜಾಮೀನು ಮಂಜೂರು ಮಾಡಬಾರದು' ಎಂದು ಅವರು ಪ್ರತಿಪಾದಿಸಿದ್ದರು. ಈ ವಾದಾಂಶವನ್ನು ಪುರಸ್ಕರಿಸಿರುವ ನ್ಯಾಯಪೀಠ ಎಲ್ಲ ಅರ್ಜಿದಾರರ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಎನ್‌ಐಎ ಕೋರ್ಟ್ ಸ್ಥಾಪನೆಗೆ ಶಿಫಾರಸು

ಇದೇ ವೇಳೆ ನ್ಯಾಯಪೀಠವು, 'ಬೆಂಗಳೂರಿನಲ್ಲಿರುವ ವಿಶೇಷ ನ್ಯಾಯಾಲಯವು ಎನ್‌ಐಎ ಪ್ರಕರಣಗಳ ಜೊತೆಗೆ ಇತರೆ ಪ್ರಕರಣಗಳನ್ನೂ ವಿಚಾರಣೆ ನಡೆಸುತ್ತಿದ್ದು, ಇದರಿಂದ ಎನ್‌ಐಎ ಪ್ರಕರಣಗಳ ವಿಚಾರಣೆಯ ವಿಳಂಬಕ್ಕೆ ಕಾರಣವಾಗುತ್ತಿದೆ. ಹೀಗಾಗಿ, ಎನ್‌ಐಎ ದಾಖಲಿಸುವ ಪ್ರಕರಣಗಳ ಶೀಘ್ರ ವಿಚಾರಣೆಗಾಗಿ ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗಗಳಲ್ಲಿ ಎನ್‌ಐಎ ವಿಶೇಷ ನ್ಯಾಯಾಲಯಗಳನ್ನು ಮುಂದಿನ ಆರು ತಿಂಗಳಲ್ಲಿ ರಚಿಸಿ' ಎಂದು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

'ವಿಶೇಷ ನ್ಯಾಯಾಲಯಗಳ ರಚನೆ ಮಾಡದೇ ಹೋದಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯದ ಮೇಲಿರುವ ಹೊರೆ ಹೆಚ್ಚಾಗಲಿದೆ. ಇದು ಸಂವಿಧಾನದ 14 ಮತ್ತು 21ನೇ ವಿಧಿಗಳಲ್ಲಿ ಕೊಡ ಮಾಡಲಾಗಿರುವ ಸಮಾನತೆ ಮತ್ತು ತ್ವರಿತ ವಿಚಾರಣೆಯ ಹಕ್ಕುಗಳಿಗೆ ವಿರುದ್ಧವಾಗಲಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

SMART BAZAAR
SMART SUPERSTORE
Reliance Growth is Life
SMART
ಪಬ್ಲಿಕ್ ಹಾಲಿಡೇ ಸೇಲ್
29th April - 3rd May
Powered by Jio TRUE 5G
ನೆಪ ಹೇಳೊಲ್ಲ ,
ಈಗ ಎಲ್ಲರೂ ಬರ್ತಾರೆ ಶಾಪಿಂಗ್ ಮಾಡಲು.
SMART BAZAAR
ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ನೆಕ್ಸಸ್ ಮಾಲ್ ಪಕ್ಕದಲ್ಲಿ, ಸಲಾರ್ಪುರಿಯಾ ಟವರ್ , ಹೊಸೂರು ಮುಖ್ಯ ರಸ್ತೆ, ಕೋರಮಂಗಲ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ . • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು • ಕೆಳಮಹಡಿ, ಫೀನಿಕ್ಸ್ ಮಾರ್ಕೆಟ್ ಸಿಟಿ, ಮಹದೇವಪುರ ಮುಖ್ಯ ರಸ್ತೆ • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3ನೇ ಹಂತ • ಬೆಳಗಾವಿ : ಅಂಗೋಲ್ ಕ್ರಾಸ್, ತಿಳಕವಾಡಿ. • ಬೀದರ್: ಸಪ್ನಾ ಮಾಲ್ • ಗುದಗೆ ಆಸ್ಪತ್ರೆ ಹತ್ತಿರ, ನಂದಿ ಕಾಲೋನಿ • ದಾವಣಗೆರೆ : ಎನ್ಎಸ್‌ಕೆ ಕಾಂಪ್ಲೆಕ್ಸ್ ಪಿಬಿ ರಸ್ತೆ ದಾವಣಗೆರೆ • ಗುಲ್ಬರ್ಗ : ಶ್ರದ್ಧಾ ಮಾಲ್, ದರ್ಗಾ ರಸ್ತೆ ಗುಲ್ಬರ್ಗ • ಗೋಣಿಕೊಪ್ಪಲು : ಇಂಡಿಯನ್ ಆಯಿಲ್ ಇಂಧನ ಕೇಂದ್ರದ ಪಕ್ಕ, ಮೈಸೂರು ರಸ್ತೆ, ಗೋಣಿಕೊಪ್ಪಲು • ಶಿವಮೊಗ್ಗ : ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ. • ಹೊಸಪೇಟೆ : ಮೆಟ್ರೋ ಫೋರ್ಡ್ ಹತ್ತಿರ, ಯಶೋದಾ ಎಲ್ಲೈಟ್, ಎಂಪಿ ಪ್ರಕಾಶನಗರ. • ಹಾಸನ : ಬಿ.ಎಂ.ರಸ್ತೆ, ಎದುರು. ಬಿಎಸ್ಎನ್ಎಲ್ ಭವನ • ಮಂಡ್ಯ : ಮಂಡ್ಯ ಮೆಡಿಕಲ್ ಕಾಲೇಜು ಎದುರು ಮೈಸೂರು : ಬಿಎಂ ಹ್ಯಾಬಿಟಾಟ್ ಮಾಲ್, ಗೋಕುಲಂ ರಸ್ತೆ • ಹಾರ್ಡ್‌ವಿಕೆ ಸ್ಕೂಲ್‌ನ ಎದುರು, ಜೆಎಲ್‌ಬಿ ರೋಡ್. • ಮಂಗಳೂರು : ಬಿಜೈ, ಭಾರತ ಮಾಲ್, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಎದುರಿಗೆ. • ಶಂಕರ ವಿಠ್ಠಲ ಹೆಡ್ ಕ್ವಾರ್ಟರ್ಸ್, ಕೆಎಮ್‌ಸಿ ಹತ್ತಿರ, ನಂದಿಗುಡ್ಡ ರಸ್ತೆ, ಅತ್ತಾವರ. • ಉಡುಪಿ : ಜನಾರ್ದನ್ ಟವರ್, ಟಿ.ಎಂ.ಎ. ಪೈ ಆಸ್ಪತ್ರೆ ಎದುರು
Jio
ಗೆಲ್ಲಿರಿ ಚಿನ್ನದ ನಾಣ್ಯಗಳನ್ನು
ಜಿಯೋಪ್ಲಸ್‌ನೊಂದಿಗೆ
₹99 ರಲ್ಲಿ ಒಂದು ಸಿಮ್ ಬುಕ್ ಮಾಡಿರಿ ಮತ್ತು
1 ಗ್ರಾಂ ಚಿನ್ನದ ನಾಣ್ಯವನ್ನು ಗೆಲ್ಲುವ ಅವಕಾಶ ಪಡೆಯಿರಿ
T&C Apply
ಕೋಕ ಕೋಲಾ / ಸ್ಪ್ರೈಟ್ / ಥಮ್ಸ್ ಅಪ್ 750 ml ರಿಂದ (ಆಯ್ದ ಪ್ರಕಾರಗಳು)
BUY ANY3 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹40 ರಿಂದ
ಮಾಜಾ 1.5 ℓ
ಉಳಿಸಿರಿ ₹21
ಎಮ್‌ಆರ್‌ಪಿ ₹90 ರಿಂದ
ನಮ್ಮ ಬೆಲೆ ₹69 ರಿಂದ
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹65
ಎಮ್‌ಆರ್‌ಪಿ ₹290 ರಿಂದ
ನಮ್ಮ ಬೆಲೆ ₹225 ರಿಂದ
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹140 ರಿಂದ
ಯಿಪ್ಪೀ ಮ್ಯಾಜಿಕ್ ಮಸಾಲಾ / ಟಾಪ್ ರಮೆನ್ ಮಸಾಲಾ / ಚಿಂಗ್ಸ್ ಸೀಕ್ರೆಟ್ ನೂಡಲ್ಸ್ / ಸ್ನ್ಯಾಕ್ ಟ್ಯಾಕ್ ಮಸಾಲಾ ನೂಡಲ್ಸ್ 240 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 33% ಕಡಿತ
ಎಮ್‌ಆರ್‌ಪಿ ₹65 ರಿಂದ
ಕ್ಯಾಡ್ಬರಿಸ್ ಡೈರಿ ಮಿಲ್ಕ್ 126 g / ಫೈವ್ ಸ್ಟಾರ್ 200 g / ಲೊಟ್ಟೆ ಚಾಕೋ ಪೈ / ಓರಿಯನ್ ಚೋಕೊ ಪೈ ಒರಿಜಿನಲ್ 12 ಪ್ಯಾಕ್ 336 g
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹149 ರಿಂದ
ಡವ್ / ಪೀಯರ್ಸ್ / ಫಿಯಾಮಾ 125 g x 4 + 1 / ಲಕ್ಸ್ 150 g x 3 / ಸಿಂಥಾಲ್ ಸೋಪ್ 150 g x 5 / ಗೋದ್ರೇಜ್ ನಂ.1 150 g x 4 (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹189 ರಿಂದ
ಡವ್ / ಹೆಡ್ - ಶೋಲ್ಡರ್ಸ್ / ಲೊರಿಯಾಲ್ / ಕ್ಲಿನಿಕ್ ಪ್ಲಸ್ / ಟ್ರೆಸೆಮ್ಮೆ / ಇಂದುಲೇಖಾ ಶ್ಯಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
BUY ANY1 GET ANY1 FREE
ಎಮ್‌ಆರ್‌ಪಿ ₹645 ರಿಂದ
ಕೋಲ್ಗೇಟ್ ಡೆಂಟಲ್ ಕ್ರೀಮ್ / ಕ್ಲೋಸ್ ಅಪ್ ರೆಡ್ / ಡಾಬರ್ ಮೆಸ್ವಾಕ್ ಟೂತ್ ಪೇಸ್ಟ್ 300 g ರಿಂದ (ಆಯ್ದ ಪ್ರಕಾರಗಳು)
BUY ANY2 GET ANY1 FREE
ಪ್ರತಿಯೊಂದು ಎಮ್‌ಆರ್‌ಪಿ ₹156 ರಿಂದ
ಪುರುಷರ ಮತ್ತು / ಸ್ತ್ರೀಯರ ಡಿಯೊ 135 ml ರಿಂದ (ಆಯ್ದ ಪ್ರಕಾರಗಳು)
BUY ANY1 GET ANY1 FREE
ಎಮ್‌ಆರ್‌ಪಿ ₹259 ರಿಂದ
ವಿಸ್ಪರ್ ಅಲ್ಟ್ರಾ XL 44s / ಸ್ಟೇಫ್ರೀ ಅಲ್ಟ್ರಾ ಡ್ರೈ ಮ್ಯಾಕ್ಸ್ 42s (ಆಯ್ದ ಪ್ರಕಾರಗಳು)
ಉಳಿಸಿರಿ ₹225 ರಿಂದ
ಎಮ್‌ಆರ್‌ಪಿ ₹500 ರಿಂದ
ನಮ್ಮ ಬೆಲೆ ₹275 ರಿಂದ
ಸರ್ಫ್ ಎಕ್ಸೆಲ್ ಈಸಿ ವಾಶ್ 5 kg / ಮ್ಯಾಟಿಕ್ 6 kg / ಲಿಕ್ವಿಡ್ 2 ℓ / ಟೈಡ್ ಪ್ಲಸ್ 5 kg / ಏರಿಯಲ್ ಲಿಕ್ವಿಡ್ ಮ್ಯಾಟಿಕ್ 4+2 kg / ಲಿಕ್ವಿಡ್ 2 ℓ (ಟಾಪ್ / ಫ್ರಂಟ್ ಲೋಡ್) (ಆಯ್ದ ಪ್ರಕಾರಗಳು)
25% ಕಡಿತ
ಎಮ್‌ಆರ್‌ಪಿ ₹425 ರಿಂದ
ನಮ್ಮ ಬೆಲೆ ₹319 ರಿಂದ
ಫಾರ್ಚೂನ್ ರಿಫೈನ್ಡ್ ರೈಸ್ ಬ್ರಾನ್ ಹೆಲ್ದಿ ಆಯಿಲ್ 5 ℓ + ಕೊಹಿನೂರ್ ಚಾರ್ಮಿನಾರ್ ಸೆಲೆಕ್ಟ್ ಬಾಸ್ಮತಿ ರೈಸ್ 5 kg
ನಮ್ಮ ಬೆಲೆ ₹999
ಒಟ್ಟು ಎಮ್‌ಆರ್‌ಪಿ ₹1549
ಉಳಿಸಿರಿ ₹550
ಲೂಸ್ ತೊಗರಿ ಬೇಳೆ ವ್ಯಾಲ್ಯೂ 1 kg
ನಮ್ಮ ಬೆಲೆ ₹119
ಮಾರುಕಟ್ಟೆ ಬೆಲೆ ₹126
ಲೂಸ್ ಉದ್ದಿನ ಬೇಳೆ 1 kg
ನಮ್ಮ ಬೆಲೆ ₹107
ಮಾರುಕಟ್ಟೆ ಬೆಲೆ ₹114
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ನಮ್ಮ ಬೆಲೆ ₹199 (₹39.80/kg)
ಎಮ್‌ಆರ್‌ಪಿ ₹300
ಉಳಿಸಿರಿ ₹101
ಗುಡ್ ಲೈಫ್ ಡೈಲಿ ರೈಸ್ 30 kg
ನಮ್ಮ ಬೆಲೆ ₹1249 (₹41.63/kg)
ಎಮ್‌ಆರ್‌ಪಿ ₹1650
ಉಳಿಸಿರಿ ₹401
ಚಕ್ಕಿ ಆಟಾ 5 kg
ನಮ್ಮ ಬೆಲೆ ₹154.50
ಎಮ್‌ಆರ್‌ಪಿ ₹270
ಉಳಿಸಿರಿ ₹115.50
ಸನ್ ಪ್ರಿಮಿಯಮ್ ಸನ್ ಫ್ಲವರ್ ಆಯಿಲ್ 1 ℓ
ನಮ್ಮ ಬೆಲೆ ₹109
ಎಮ್‌ಆರ್‌ಪಿ ₹185
ಉಳಿಸಿರಿ ₹76
ಹೆರಿಟೇಜ್ ಹಸುವಿನ ತುಪ್ಪ 1 ℓ
ನಮ್ಮ ಬೆಲೆ ₹609
ಎಮ್‌ಆರ್‌ಪಿ ₹730
ಉಳಿಸಿರಿ ₹121
ಬ್ಲೆಂಡೆಡ್ ಸ್ಪೈಸಸ್ 50 g ರಿಂದ (ಆಯ್ದ ಶ್ರೇಣಿ)
BUY ANY2 GET ANY1 FREE*
*ಎಮ್‌ಆರ್‌ಪಿ ಮೇಲೆ
ಗುಡ್ ಲೈಫ್ ಬಾದಾಮ್ / ಕ್ಯಾಶೂ (W320) 500 g
ನಮ್ಮ ಬೆಲೆ ₹345/385
ಎಮ್‌ಆರ್‌ಪಿ ₹549 / ₹499
ಉಳಿಸಿರಿ ₹204 / ₹114
ಚೀಸ್ / ಮೊಸರು / ಮಿಲ್ಕ್ ಡ್ರಿಂಕ್ಸ್ / ಪನೀರ್ / ಕೇಕ್ & ರಸ್ಕ್ / ಫ್ರೊಝನ್ ವೆಜ್ / ಫ್ರೊಜನ್ ತಿಂಡಿಗಳು 47 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 25%* ಕಡಿತ
*ಎಮ್‌ಆರ್‌ಪಿ ಮೇಲೆ
Surya Flame SINGER
3 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ನಮ್ಮ ಬೆಲೆ ₹1999
ಎಮ್‌ಆರ್‌ಪಿ ₹7560 ರಿಂದ
Pigeon
ಸ್ಟೇನ್‌ಲೆಸ್ ಸ್ಟೀಲ್ ಪ್ರೆಶರ್ ಕುಕ್ಕರ್ - 3 ℓ (ಹೊರ / ಒಳ ಮುಚ್ಚಳ)
ನಮ್ಮ ಬೆಲೆ ₹999/₹1199
ಎಮ್‌ಆರ್‌ಪಿ ₹2295 / ₹2595
LA OPALA
ಒಪಲ್‌ವೇರ್ ಡಿನ್ನರ್ ಸೆಟ್ (18 Pcs)
ನಮ್ಮ ಬೆಲೆ ₹999
ಎಮ್‌ಆರ್‌ಪಿ ₹1995
SOOGO
ಮಲ್ಟಿಪರ್ಪಸ್ ಮಗ್
BUY 1 GET 2 FREE
ಎಮ್‌ಆರ್‌ಪಿ ₹149 ರಿಂದ
HAPPY LIVING Raymond WELSPUN TRIDENT DREAMLINE
ಕಾಟನ್ ಬೆಡ್ಶೀಟ್ -144 TC (ಆಯ್ದ ಶ್ರೇಣಿ)
ನಮ್ಮ ಬೆಲೆ ₹599
ಎಮ್‌ಆರ್‌ಪಿ ₹1799 ರಿಂದ
ಬಾತ್ ಟವೆಲ್ (ಸಂಪೂರ್ಣ ಶ್ರೇಣಿ)
BUY 1 GET 1 FREE
ಎಮ್‌ಆರ್‌ಪಿ ₹199 ರಿಂದ
ಮಧ್ಯಮ ಹಾರ್ಡ್ ಟ್ರಾಲಿ (65 cm) • 8 ಚಕ್ರಗಳು • ಟಿಎಸ್ಎ ಲಾಕ್
ನಮ್ಮ ಬೆಲೆ ₹1999
ಎಮ್‌ಆರ್‌ಪಿ ₹11000
ANCHOR by Panasonic
ರಿಮೋಟ್‌ನೊಂದಿಗೆ ಸೀಲಿಂಗ್ ಫ್ಯಾನ್ (ಬಿಎಲ್ ಡಿಸಿ ಮೋಟಾರ್)
ನಮ್ಮ ಬೆಲೆ ₹2499
ಎಮ್‌ಆರ್‌ಪಿ ₹4625
ಮಹಿಳೆಯರ ಉಡುಗೆ ಮತ್ತು ಮಕ್ಕಳ ಉಡುಗೆ | ₹129 ರಿಂದ
BUY 1 GET 1 FREE
*ಆಯ್ದ ಶ್ರೇಣಿ
SMART SUPERSTORE
• ಬೆಂಗಳೂರು • ಬೆಳಗಾವಿ • ಬಳ್ಳಾರಿ • ಬಿಜಾಪುರ • ಚಿಕ್ಕಮಂಗಳೂರು • ದಾವಣಗೆರೆ • ಗದಗ • ಗಂಗಾವತಿ • ಗೋಕಾಕ್ • ಗುಲ್ಬರ್ಗ • ಹಾಸನ • ಹುಬ್ಬಳ್ಳಿ • ಜಮಖಂಡಿ • ಕನಕಪುರ • ಮಂಗಳೂರು • ಮೈಸೂರು • ಪುತ್ತೂರು • ರಾಯಚೂರು • ತುಮಕೂರು • ಉಡುಪಿ
ನಿಮ್ಮ ಹತ್ತಿರದ ಅಂಗಡಿಗೆ ಭೇಟಿ ನೀಡಿ
SMART POINT
fresh Signature
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
RuPay Instant discount on RuPay Credit Cards
20% Off on purchase of ₹1000 onwards
Valid Once Per Customer | Limited Period Offer
T&C Apply
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಅಪ್ಪರೇಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಮತ್ತು ಸ್ಮಾರ್ಟ್ ಸೂಪರ್ ಸ್ಟೋರ್‌ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಎಲ್ಲಾ ಆಫರ್‌ಗಳು 3 ಮೇ 2023. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷನ್ಯಾಯವ್ಯಾಪ್ತಿಗೆಒಳಪಟ್ಟಿರುತ್ತವೆ.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ವಿಡಿಯಾ ಪೂರ್ಣ ಪ್ರಜ್ಞಾ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ನಾಗಸಂದ್ರದ ವಿಡಿಯಾ ಪೂರ್ಣ ಪ್ರಜ್ಞಾ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಎಸ್.ರಾಕೇಶ್ (ಶೇ 95.83), ಇಂಚರ ಜಿ. ಕುಂದೂರ್ (ಶೇ 95.33), ಲಾವಣ್ಯಲಕ್ಷ್ಮಿ ಗಣೇಶ್ (ಶೇ 95) ಅವರು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಾಂಶುಪಾಲ ಗುರುರಾಜ್ ಎಸ್. ದಾವಣಗೆರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಕೇಶ್ ಎಸ್

ಇಂಚರ ಜಿ. ಕುಂದೂರ್

ಲಾವಣ್ಯಲಕ್ಷ್ಮಿ ಗಣೇಶ್

ಡಿ.ದಿಶಾ, (ವಾಣಿಜ್ಯ ವಿಭಾಗ, ಶೇ 96.5), ಎಸ್‌ಕಡಂಬಿ ಪಿಯು ಕಾಲೇಜು

ಕೆ.ಶುಕ್ತಿಜಾ, (ವಿಜ್ಞಾನ ವಿಭಾಗ, ಶೇ 95), ಜೆಎಸ್ ಪಿಯು ಕಾಲೇಜು, ಕೆಂಗುಂಟೆ

ಬಿ.ಎಂ.ಶಿಲ್ಪಾಶ್ರೀ (ಶೇ 94.66 ವಾಣಿಜ್ಯ ವಿಭಾಗ), ನೆಲಮಂಗಲದ ಹೊಯ್ಸಳ ಕಾಲೇಜು

ಹಿಮಾನ್ಶಿ ಜೆ. ಗೋಯಲ್, (ಶೇ 97.7, ವಾಣಿಜ್ಯ ವಿಭಾಗ), ಜೆ.ಟಿ. ಇಂಡಿಪೆಂಡೆಂಟ್ ಪಿಯು ಕಾಲೇಜು

ಸೌಂದರ್ಯ ಆರ್., (ಶೇ 97.7, ವಿಜ್ಞಾನ ವಿಭಾಗ),ಜೆ.ಟಿ. ಇಂಡಿಪೆಂಡೆಂಟ್ ಪಿಯು ಕಾಲೇಜು

ನ್ಯೂ ನ್ಯಾಷನಲ್ ಪಿಯು ಕಾಲೇಜು: ಶೇ 100 ಫಲಿತಾಂಶ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ದ್ವಿತೀಯ ಪಿಯು ಪರೀಕ್ಷೆಯಲ್ಲಿ ನ್ಯೂ ನ್ಯಾಷನಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ರಚನಾ ಆರ್. ಗೋವಾಡಿ 594 ಅಂಕ ಗಳಿಸಿ ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ. ತನಿಷ್ಕಾ ಎಸ್. 584 ಅಂಕ, ಇಂದ್ರಜಿತ್ ಗೌಡ ಎಚ್. ಆರ್. 583 ಅಂಕ ಮತ್ತು ಶಬನಮ್ ಯಾಸ್ಮೀನ್ ಎಸ್ 580 ಅಂಕ (ಎಲ್ಲರೂ ವಿಜ್ಞಾನ ವಿಭಾಗ) ಪಡೆದಿದ್ದಾರೆ. ಕಾಲೇಜಿಗೆ ಶೇ 100 ಫಲಿತಾಂಶ ಬಂದಿದೆ.

ರಚನಾ ಆರ್.

ತನಿಷ್ಕಾ ಎಸ್.

ಇಂದ್ರಜಿತ್‌ಗೌಡ

ಶಬನಮ್ ಯಾಸ್ಮೀನ್

ಹೆಚ್ಚು ವಾಹನ ದಟ್ಟಣೆ ಏರ್ಪಡುವ ವೃತ್ತದ ದುಃಸ್ಥಿತಿ

ಗುಂಡಿ, ದೂಳಿನ ಗೂಡಾದ ನಾಗವಾರ ಜಂಕ್ಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ಮೆಟ್ರೊ ರೈಲು ಕಾಮಗಾರಿ, ಗುಂಡಿ ಬಿದ್ದ ರಸ್ತೆ, ಡಾಂಬರ್ ಕಾಣದ ಸರ್ವೀಸ್ ರಸ್ತೆ, ದೂಳು-ಗುಂಡಿಗಳ ನಡುವೆ ವಾಹನ ಸವಾರರ ಹರಸಾಹಸ...

ಇದು ನಾಗವಾರ ವೃತ್ತದ ಸ್ಥಿತಿ.

ಅತೀ ಹೆಚ್ಚು ವಾಹನ ದಟ್ಟಣೆಯ ಜಂಕ್ಷನ್‌ಗಳಲ್ಲಿ ನಾಗವಾರ ಜಂಕ್ಷನ್ ಕೂಡ ಒಂದು. ಮೇಲ್ಸೇತುವೆ ನಿರ್ಮಾಣವಾಗಿದ್ದರೂ ಅದರ ಕೆಳಗಿನ ಜಂಕ್ಷನ್ ಅಭಿವೃದ್ಧಿಯನ್ನು ಬಿಬಿಎಂಪಿ ಮರೆತಿದೆ. ಪರಿಣಾಮವಾಗಿ ರಸ್ತೆಗಳು ಗುಂಡಿ ಬಿದ್ದಿದ್ದು, ಸರ್ವೀಸ್ ರಸ್ತೆಗಳು ಅಭಿವೃದ್ಧಿಯನ್ನೇ ಕಾಣದಾಗಿವೆ.

ಹೆಬ್ಬಾಳ ಮತ್ತು ಕೆ.ಆರ್.ಪುರ ಕಡೆಗೆ ಹೋಗುವ ವಾಹನಗಳು ಮೇಲ್ಸೇತುವೆ ಮೇಲೆ ಹೋಗುತ್ತವೆ. ಥಣಿಸಂದ್ರ ಮುಖ್ಯರಸ್ತೆ ಮತ್ತು ನಾಗವಾರ ಮುಖ್ಯರಸ್ತೆಯಲ್ಲಿ ಸಾಗುವ ವಾಹನಗಳು ಮೇಲ್ಸೇತುವೆ ಅಡಿಯಲ್ಲಿನ ಜಂಕ್ಷನ್ ಹಾದು ಸಾಗಬೇಕು.

ಕೆಳಗಿನ ರಸ್ತೆ ಮತ್ತು ರಸ್ತೆ ವಿಭಜಕಗಳ ನಿರ್ವಹಣೆಯನ್ನೇ ಮಾಡಿಲ್ಲ. ರಸ್ತೆ ಸಂಪೂರ್ಣ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸವಾರರು ತಿಣುಕಾಡುವಂತಾಗಿದೆ. ಒಂದು ಭಾಗದ ಸರ್ವೀಸ್ ರಸ್ತೆಯಂತೂ ಡಾಂಬರ್ ಕಂಡೇ ಇಲ್ಲ. ಜಲ್ಲಿ ಸುರಿದು ಬಿಟ್ಟಿರುವ ರಸ್ತೆಯಲ್ಲಿ ವಾಹನಗಳು ಸಂಚರಿಸಬೇಕಿದೆ. ದ್ವಿಚಕ್ರ ವಾಹನಗಳ ಸವಾರರು ಗುಂಡಿಯಲ್ಲಿ ಬಿದ್ದು ಎದ್ದು ಸಂಚರಿಸುವುದು ಸಾಮಾನ್ಯವಾಗಿದೆ. ವಾಹನಗಳು ನಿರಂತರವಾಗಿ ಸಂಚರಿಸುವುದರಿಂದ ಜಲ್ಲಿ ರಸ್ತೆಯಲ್ಲಿ ದೂಳಿನ ನಡುವೆಯೇ ಪ್ರಯಾಣ ಮಾಡಬೇಕಾಗಿದೆ. ರಸ್ತೆ ಬದಿಯಲ್ಲಿರುವ ಅಂಗಡಿಗಳು, ಹೋಟೆಲ್‌ಗಳಿಗೂ ದೂಳು ನುಗ್ಗುತ್ತಿದ್ದು, ಸಮಸ್ಯೆಗೆ ಮುಕ್ತಿ ಇಲ್ಲವಾಗಿದೆ.

'ಹಲವು ಬಾರಿ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಸಮಸ್ಯೆ ಸರಿಯಾಗಿಲ್ಲ. ದೂಳಿನ ನಡುವೆ ಜೀವನ ಸಾಗಿಸಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದೇವೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

ನಾಗವಾರ ವೃತ್ತದಲ್ಲಿನ ಮೇಲ್ಸೇತುವೆಯ ಕೆಳಗಿರುವ ರಸ್ತೆ ವಿಭಜಕವು ಕಸದ ಗೂಡಾಗಿರುವುದು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಮೇಲ್ಸುತುವೆ ಕೆಳಗೆ ಕಸದ ಗೂಡು

ಮೇಲ್ಸೇತುವೆ ಕೆಳಗಿನ ರಸ್ತೆ ವಿಭಜಕಗಳ ನಿರ್ವಹಣೆ ಮಾಡದಿರುವುರಿಂದ ಕಸದ ಗೂಡಾಗಿ ಮಾರ್ಪಾಡಾಗಿದೆ.

'ಮಣ್ಣು ಮತ್ತು ಕಸದ ರಾಶಿಯಿಂದ ಕೂಡಿದ್ದು, ಸ್ವಚ್ಛಗೊಳಿಸಿ ಬಣ್ಣ ಬಳಿದರೆ ನಾಗರಿಕ ಸೌಲಭ್ಯಕ್ಕೆ ಬಳಸಿಕೊಳ್ಳಲು ಅವಕಾಶ ಇದೆ. ಆದರೆ, ಬಿಬಿಎಂಪಿ ಯಾವುದಕ್ಕೂ ತಲೆಕೆಡಿಸಿಕೊಂಡಿಲ್ಲ. ಇದರಿಂದಾಗಿ ಕಸ ಸುರಿಯುವ ತಾಣವಾಗಿದೆ' ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಸಲಿಂಗ ವಿವಾಹಕ್ಕೆ ಮಾನ್ಯತೆ ಬೇಡ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸುಪ್ರೀಂ ಕೋರ್ಟ್ ಯಾವುದೇ ಕಾರಣಕ್ಕೂ ಸಲಿಂಗ ವಿವಾಹಕ್ಕೆ ಮಾನ್ಯತೆ ಕೊಡಬಾರದು. ಒಂದೊಮ್ಮೆ ಇದನ್ನು ಕಾನೂನುಬದ್ಧಗೊಳಿಸಲು ಹೊರಟರೆ, ದೇಶದಾದ್ಯಂತ ಸಾಧು–ಸಂತರು ರಸ್ತೆಗಿಳಿದು ಹೋರಾಟ ಮಾಡುವ ಸಂದರ್ಭ ಬರಬಹುದು' ಎಂದು ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಲಿಂಗ ವಿವಾಹಕ್ಕೆ ಸಾಂವಿಧಾನಿಕ ಮಾನ್ಯತೆ ದೊರೆತರೆ ಹಾದಿಬೀದಿಯಲ್ಲಿ ಮುಜುಗರದ ಸಂಗತಿಗಳು ನಡೆಯುವ ಸಂಭವ ಇರುತ್ತದೆ. ಪ್ರಾಣಿಗಳಿಗೂ ಪ್ರಜ್ಞೆ ಇದೆ. ಅವು ಸಂಯಮದಿಂದ ವ್ಯವಹರಿಸುತ್ತವೆ. ಬುದ್ಧಿವಂತ ಮನುಷ್ಯನಲ್ಲಿ ಈ ಪ್ರಜ್ಞೆ ಇರಲೇಬೇಕು. ಹೀಗಾಗಿ, ಸಲಿಂಗ ಕಾಮಕ್ಕೆ ಮಾನ್ಯತೆ ನೀಡುವ ಪೂರ್ವದಲ್ಲಿ ಕಾನೂನು ಪಂಡಿತರು, ಧರ್ಮಗುರುಗಳು, ವಿಜ್ಞಾನಿಗಳು, ತತ್ವಜ್ಞಾನಿಗಳು ಎಲ್ಲರೂ ಸೇರಿ ಸಾಧಕ ಬಾಧಕ ಚರ್ಚಿಸಬೇಕು' ಎಂದರು.

'ವಿದ್ವಾಂಸರು, ಧರ್ಮಶಾಸ್ತ್ರ ತಜ್ಞರೊಂದಿಗೆ ಚರ್ಚಿಸಲಿ'

ಬಾಗಲಕೋಟೆ: ಸಲಿಂಗಿಗಳ ವೈವಾಹಿಕ ಜೀವನಕ್ಕೆ ಮುದ್ರೆ ಒತ್ತುವ ಮುನ್ನ ಕೇಂದ್ರ ಹಾಗೂ ಸುಪ್ರೀಂ ಕೋರ್ಟ್ ಹಿಂದೂ ಸಮಾಜದ ವಿದ್ವಾಂಸರು, ಧರ್ಮಶಾಸ್ತ್ರ ತಜ್ಞರೊಂದಿಗೆ ವಿಚಾರ, ವಿಮರ್ಶೆ ಮಾಡಿ ಮುಂದಿನ ಕ್ರಮಕೈಗೊಳ್ಳಬೇಕು ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

'ಸಲಿಂಗಿಗಳು ವಿವಾಹಕ್ಕೆ ಅನುಮತಿ ಕೋರಿದ್ದಾರೆ. ಅನುಮತಿ ನೀಡುವುದು ಸಲ್ಲ ಎಂಬುದು ನಮ್ಮ ಅಭಿಪ್ರಾಯ. ವೈವಾಹಿಕ ಜೀವನಕ್ಕೆ ಅದರದ್ದೇ ಆದ ಪಾವಿತ್ರ್ಯವಿದೆ. ಭಾವನಾತ್ಮಕ, ಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ನೇರವಾಗಿ ಕ್ರಮಕೈಗೊಳ್ಳಬಾರದು' ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಹಿರಿಯೂರಿನಿಂದ ಬೆಂಗಳೂರಿಗೆ ಪ್ರಯಾಣ

ಮತದಾನ ಜಾಗೃತಿಗೆ ಸೈಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಕೋರಾ (ತುಮಕೂರು): ಮತದಾನ ಜಾಗೃತಿಗಾಗಿ ತಮಿಳುನಾಡಿನ ಸಾಮಾಜಿಕ ಕಾರ್ಯಕರ್ತ, ಗಾಂಧಿವಾದಿ ಕರುಪಯ್ಯ ಹಿರಿಯೂರಿನಿಂದ ಬೆಂಗಳೂರಿನ ಫ್ರೀಡಂಪಾರ್ಕ್‌ವರೆಗೆ ಸೈಕಲ್ ಜಾಥಾ ಕೈಗೊಂಡಿದ್ದಾರೆ. ಶುಕ್ರವಾರ ತುಮಕೂರು ಗ್ರಾಮಾಂತರ ಪ್ರದೇಶದ ಮಾರ್ಗವಾಗಿ ಅವರು ಸಾಗಿದರು.

'ಮತ ಮಾರಾಟದ ವಸ್ತುವಲ್ಲ. ಚುನಾವಣೆ ಜೂಜಾಟದ ಕಣವಲ್ಲ. ಜೀವನ ಹಾಗೂ ಸಮಾಜದ ಬದಲಾವಣೆಗೆ ಸಿಗುವ ಅವಕಾಶ ಚುನಾವಣೆ. ತ್ಯಾಗ, ನ್ಯಾಯ, ನೀತಿ, ಧರ್ಮ ತುಂಬಿರಲಿ. ಪ್ರಕೃತಿ ಸಂರಕ್ಷಣೆ ಹಾಗೂ ಸಮಾಜದ ಏಳಿಗೆಯೇ ಗುರಿಯಾಗಲಿ. ಉತ್ತಮ ನೀತಿ ಅಳವಡಿಸಿಕೊಳ್ಳುವ ಮೂಲಕ ಎಲ್ಲ ರೀತಿಯ ಭ್ರಷ್ಟಾಚಾರಕ್ಕೂ ಅಂತ್ಯ ಹಾಡೋಣ' ಎನ್ನುವ ಜಾಗೃತಿ ಭಿತ್ತಿ ಪತ್ರಗಳೊಂದಿಗೆ ಜಾಥಾ ನಡೆಸುತ್ತಿದ್ದಾರೆ.

ಕರುಪಯ್ಯ 30 ವರ್ಷದಿಂದ 96 ಸಾವಿರ ಕಿ.ಮೀ.ಗೂ ಹೆಚ್ಚು ಪಾದಯಾತ್ರೆ ಮಾಡುವ ಮೂಲಕ ಲಿಮ್ಕಾ ಬುಕ್ ಆಫ್ ರೇಕಾರ್ಡ್ ದಾಖಲೆ ಮಾಡಿದ್ದಾರೆ.

ಸದ್ಯದ 7 ದಿನದ ಪಾದಯಾತ್ರೆಯನ್ನು ಬೆಳಿಗ್ಗೆ 6ರಿಂದ ರಾತ್ರಿ 6ರವರೆಗೆ ನಡೆಸುತ್ತಿದ್ದಾರೆ.

ರಸ್ತೆ ಪಕ್ಕದಲ್ಲಿ ಸಿಗುವ ದೇವಸ್ಥಾನ, ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ತಂಗುತ್ತಾರೆ.

ಹೆಚ್ಚು ಜನವಸತಿ ಇರುವ ಕಡೆ 12 ನಿಮಿಷದ ಧ್ವನಿ ಸುರುಳಿ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ಮತದಾನ ಜಾಗೃತಿ ಜಾಥಾ ಕೈಗೊಂಡಿರುವ ಕರುಪಯ್ಯ

'ವಂದನಾ ಪ್ರಶಸ್ತಿ'ಗೆ ನಟ ರಮೇಶ್ ಭಟ್ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಮತ್ತು ರೋಟರ್ಯಾಕ್ಟ್ ಕ್ಲಬ್ ಮಂಗಳೂರು ಸಿಟಿ ವಾರ್ಷಿಕವಾಗಿ ನೀಡುವ ರಾಜ್ಯಮಟ್ಟದ ವಂದನಾ ಪ್ರಶಸ್ತಿಗೆ ಚಿತ್ರನಟ ರಮೇಶ್ ಭಟ್ ಆಯ್ಕೆಯಾಗಿದ್ದಾರೆ.

ಮೇ 3ರಂದು ಸಂಜೆ 8 ಗಂಟೆಗೆ ನಗರದ ಮೋತಿ ಮಹಲ್ ಹೋಟೆಲ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಚಲನಚಿತ್ರ ಕ್ಷೇತ್ರದಲ್ಲಿ ರಮೇಶ್ ಭಟ್ ಅವರು ಸಲ್ಲಿಸಿದ ಸುದೀರ್ಘ ಸೇವೆ ಹಾಗೂ ಸಾಧನೆಯನ್ನು ಪರಿಗಣಿಸಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಫಲಕ, ಪ್ರಮಾಣಪತ್ರ, ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ಪ್ರಮುಖರಾದ ಡಾ. ದೇವದಾಸ್ ರೈ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಿಟ್ಟೆ ವಿಶ್ವವಿದ್ಯಾಲಯ ಕುಲಪತಿ ಡಾ. ಸತೀಶ್ ಭಂಡಾರಿ ಪ್ರಶಸ್ತಿ ಪ್ರದಾನ ಮಾಡುವರು. ರೋಟರಿ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಸಾಯಿಬಾಬಾ ರಾವ್ ಅಧ್ಯಕ್ಷತೆ ವಹಿಸುವರು. ರೋಟರಿ ಜಿಲ್ಲಾ ಸಹಾಯಕ ಗವರ್ನರ್ ರಾಜಗೋಪಾಲ್ ರೈ, ಜಿಲ್ಲಾ ಪ್ರತಿನಿಧಿ ನಿಖಿಲ್ ಆರ್.ಕೆ. ಪಾಲ್ಗೊಳ್ಳುವರು.

2004–05ನೇ ಸಾಲಿನಿಂದ ಈವರೆಗೆ ಹಲವರಿಗೆ ಪ್ರಶಸ್ತಿ ನೀಡಲಾಗಿದೆ. ಕ್ರೀಡೆ, ವಾಣಿಜ್ಯೋದ್ಯಮ, ಶಿಕ್ಷಣ, ಕಲೆ, ಸಂಗೀತ, ಸಾಹಿತ್ಯ, ವಿಜ್ಞಾನ, ಸಮಾಜ ಸೇವೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಲಾಗಿದೆ ಎಂದರು.

ರೋಟರಿ ಪ್ರಮುಖರಾದ ಸಾಯಿಬಾಬಾ ರಾವ್, ಅರ್ಜುನ್ ಪ್ರಕಾಶ್, ಎಂ.ವಿ.ಮಲ್ಯ ಇದ್ದರು.


ರಮೇಶ್ ಭಟ್

ಸುಧಾ, ಮಯೂರ ಓದಿರಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING
Real Estate Agents
Multiple Locations
"WANTED PURCHASE Sites/Houses/ Industrial/ Commercial Banashankari, Kanakapura Road, Jayanagar, J.P.Nagar, Bannergatta Road, BTM, HSR. 9845286505"

General
General
UNLOCK THE Value of your Mortgaged/NPA Land with our short-term funding. We specialize in releasing Residential, Commercial and Industrial Land, Which We then sell at Best Market Price. www. vernadevelopers.com 9353128035, 9916310226

Sites
Multiple Locations
ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

Vishweshwariah Layout
BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

WEEKEND CORNER ಕ್ಲಾಸಿಫೈಡ್ಸ್

RENTAL PROPERTIES
Accommodation Available
Flats
3BHK BRAND new premium Ground Floor, 2200 sft Apartment at Belvedere, Ozone Urbana Township near airport. 4 Toilets 2living rooms 2 balconies 2 sitouts utility room 2 car park. Interiors by Livspace. Contact - 9844089838

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

JOB OPPORTUNITIES
Drivers
CAR DRIVER Wanted Disciplined Professional & Experienced Around Vidyaranyapura - BEL Factory Area Salary13000/- Including Accommodation Contact:8884488887

Part-Time Jobs
RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

General
REQUIRED FOR LEGAL POSITION
We need a candidate for legal position with the more than 5 to 10 years' experience in Real Estate business, Non–litigation, litigation, legal opinion, and documentation in agriculture lands etc., candidate must be LLB Graduate.
Location: Banashankari 2nd stage, Bengaluru.
CONTACT NUMBER: 96114 51569, 99862 95507.

Marketing & Sales
URGENTLY REQUIRED sales staff for Ayurvedic Pharma chain for Bangalore Attractive Salary + Incentive, contact us- recruiter@ayurcentral.com or 7411002056

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

PERSONAL
Change of Name
I, SREEDEVI.S D/o Late. Subramani M, R/at No.81/15, 12th C Main, 4th Cross, Shivanagar Rajajinagar, Bengaluru- 560010 have changed my name to SRIDEVI.S vide affidavit dated: 25/4/2023 Before Notary B.Prasanna Bangalore.

I, DR. RAMESH KAJAMPADY/ RAMESHA K, s/o Ramakrishna Bhat residing at 59/14, Saketha Extension, Hunsur - 571105, have changed my name to RAMESHA KAJAMPADY vide affidavit dated 04.04.2023, notary H.Dinesh. Sd/ Ramesha Kajampady

LACHI SINGH, Mother/o, JC681892L, SUB/ASH, ASHOK KUMAR SINGH, Vill-Phoolpur, Laxmangarh, Sakaldiha, Chandauli, Uttar Pradesh changed name LACHI SINGH to LACHI DEVI, 27/04/2023, Notary K.V. Mani Bangalore

I, SRIVIDYA P D/o Parameswar Adiga, on 06 -12 -2022 I have changed my name to Srividya Adiga as stated in Affidavit (IN-KA07133932672495U).

DH DECCAN HERALD | ಪ್ರಜಾವಾಣಿ
NAME CHANGE
BOOK YOUR NAME CHANGE AD IN DECCAN HERALD ALL KARNATAKA + PRAJAVANI BENGALURU ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

IN THE COURT OF THE 7th ADDL. DISTRICT & SESSIONS JUDGE BENGALURU RURAL DISTRICT AT BENGALURU
P & SC No. 19/2023
Between : Sri N.R. Dodda Ramaiah, Aged about 70 years, S/o Late Ramaiah, Resident of No.534, I Main, I Cross, T. Dasarahalli, Bengaluru-560 057 ...Petitioner
And : NIL ...Respondent
PUBLIC NOTICE
Whereas, the above named has made Petition to this Court under Section 276 of Indian Succession Act for the grant of Probate in favour of the Petitioner, in respect of schedule mentioned below. The below mentioned schedule has held by Late C. Rangarao who expired on 19/07/2022.
Interested parties are hereby called upon to appear before this Court in person or by pleader duly instructed on 25.05.2023 at 11.00 a.m. inform to show cause against the Petitioner failing which the appearance will be heard and declared as Ex-parte.
SCHEDULE
All that piece and parcel of the Land bearing Sy.No.86, measuring 35 Acres, situated at Kumbalagodu Village, Kengeri Hobli, Bangalore South Taluk, Bangalore District, and bounded on:-
East by : Road, West by : Remaining Land in same Survey Number, North by : Hiduvali Land, South by : Remaining land in same Survey Number.
By order of the Court, Chief Administrative Officer, District & Sessions Court, Bangalore Rural District, Bangalore.
Address for Service :
H. Dayananda Saraswathi, V. Maniunatha, Advocates
No. 215, I Floor, Alankar Plaza, K.G Road, Bengaluru - 560 009.

ನೈರುತ್ಯ ರೈಲ್ವೆ G20
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:
ಟೆಂಡರ್ ಸೂಚನೆ ಸಂ. ECN/07/2023

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಮಂಡ್ಯ ರೈಲು ನಿಲ್ದಾಣದ ಬಳಿ ಎಲ್‌ಸಿ ನಂ. 73 ರ ಬದಲಾಗಿ ಉದ್ದೇಶಿತ ಆರ್‌ಯುಬಿಗಾಗಿ ವಿದ್ಯುತ್ ಉಲ್ಲಂಘನೆಗಳ ಮಾರ್ಪಾಡು / ಸ್ಥಳಾಂತರ ಮತ್ತು ಬೆಳಕಿನ ವ್ಯವಸ್ಥೆ ಮತ್ತು ರಾಮನಗರ–ಮೈಸೂರು ವಿಭಾಗದ ಚನ್ನಪಟ್ಟಣದ ಬಳಿ ಎಲ್‌ಸಿ ನಂ. 47 ರಲ್ಲಿ ಆರ್‌ಒಬಿ ಗಾಗಿ ಲೈಟಿಂಗ್ ಸೇರಿದಂತೆ ಬಾಕಿ ವಿದ್ಯುತ್ ಕೆಲಸಗಳು.	ರೂ. 58,84,817/-
	ಟೆಂಡರ್ ಸೂಚನೆ ಸಂ. ECN/11/2023	
2	I. ಶಹಪುರ್, ಶಿರವಾಲ್, ಬಿರಾಲ್ ಬುಜುರ್ಗ್ ಮತ್ತು ನರ್ಬೋಲಿ ರೈಲು ನಿಲ್ದಾಣಗಳಲ್ಲಿ ಹೊಸ ನಿಲ್ದಾಣದ ಕಟ್ಟಡಗಳ ವಿದ್ಯುತ್ ಸರಬರಾಜು ವ್ಯವಸ್ಥೆಗಳು ಮತ್ತು ವಿದ್ಯುದೀಕರಣ. II. ಗದಗ–ವಾಡಿ ಹೊಸ ಬಿಜಿ ಲೈನ್‌ನ ಶಹಪುರದಲ್ಲಿ ಓಆರ್‌ಎಚ್ ಮತ್ತು ಎಸ್‌ಆರ್‌ಎಚ್ ನ ವಿದ್ಯುದೀಕರಣ.	ರೂ. 5,25,34,834/-
	ಕ್ರ ಸಂ 1&2 ಕ್ಕೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–05–2023, 11:00 ಗಂಟೆಯವರೆಗೆ	
	ಟೆಂಡರ್ ಸೂಚನೆ ಸಂ. ECN/12/2023 ದಿನಾಂಕ: 20.04.2023	
3	i) ಬಾಗಲಕೋಟೆ–ಕುಡುಚಿ ಹೊಸ ಬಿಜಿ ಲೈನ್‌ನ ಖಜ್ಜಿಡೋಣಿ–ಲೋಕಾಪುರ ವಿಭಾಗದ ನಡುವಿನ ಯುಜಿ ಕೇಬಲ್–ಎಲ್‌ಟಿ–02 ಸಂಖ್ಯೆಗಳು ಮತ್ತು ಎಚ್‌ಟಿ 11ಕೆವಿ–05 ಸಂಖ್ಯೆಗಳ ಮೂಲಕ ಎಲ್‌ಟಿ, ಎಚ್‌ಟಿ 11 ಕೆವಿ ಓವರ್‌ಹೆಡ್ ಪವರ್‌ಲೈನ್ ಕ್ರಾಸಿಂಗ್‌ಗಳ ಮಾರ್ಪಾಡು / ಶಿಫ್ಟಿಂಗ್ (ವೇಳಾಪಟ್ಟಿ ಎ&ಬಿ) ii) ಬಾಗಲಕೋಟೆ–ಕುಡುಚಿ ಹೊಸ ಬಿಜಿ ಲೈನ್‌ನ ಲೋಕಾಪುರ ನಿಲ್ದಾಣದಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆಗಳು ಮತ್ತು ಸ್ಟೇಷನ್ ಕಟ್ಟಡ, ಸೇವಾ ಕಟ್ಟಡ, ಲೆವೆಲ್ ಕ್ರಾಸಿಂಗ್ ಗೇಟ್‌ಗಳು ಇತ್ಯಾದಿಗಳ ವಿದ್ಯುದ್ದೀಕರಣ ಮತ್ತು ಯಾರ್ಡ್ ಲೈಟಿಂಗ್ (ವೇಳಾಪಟ್ಟಿ ಸಿ&ಡಿ).	ರೂ. 1,83,91,776/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–05–2023, 11:00 ಗಂಟೆಯವರೆಗೆ	

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
PUB/48/AAV/PRB/SWR/2023-24
S.W.Railways SWRRLY SWRRLY

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು , ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್: 08029550091, 08029500191
ಇ–ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್01/2023–24 ದಿನಾಂಕ: 27/04/2023
:ಟೆಂಡರ್ ಪ್ರಕಟಣೆ:
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಹೊಸದಾಗಿ ಸಿ. ಸಿ. ಕ್ಯಾಮರಾ ಹಾಗು ಸಂಬಂಧಿಸಿದ ಇತರೆ ಪರಿಕರಗಳನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ ಇಚ್ಛಿಸುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿದ್ದು, ಮೊಹರಾದ ಟೆಂಡರ್ ಧರಪಟ್ಟಿಗಳನ್ನು ದಿನಾಂಕ:08/05/2023ರ ಅಪರಾಹ್ನ 5.30 ಘಂಟೆಯೊಳಗಾಗಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ದೇವಾಲಯದ ಕಛೇರಿಯನ್ನು ಸಂಪರ್ಕಿಸುವುದು. ಅವಧಿ ಮುಗಿದ ನಂತರ ಸ್ವೀಕೃತವಾಗುವ ಟೆಂಡರ್ ಗಳನ್ನು ಪರಿಗಣಿಸುವುದಿಲ್ಲ.
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್.ಘಾಟಿ

ಸಾರ್ವಜನಿಕ ಪ್ರಕಟಣೆ
ನಮ್ಮ ಕಕ್ಷಿದಾರ, ('ಕಕ್ಷಿದಾರ') ಈ ಕೆಳಕಂಡ "ಷೆಡ್ಯೂಲ್" ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲ್ಪಡುವ, ಮತ್ತು ಸದರಿ ಮಾಲೀಕರಾದ ಸಿ.ಆರ್. ದಿನೇಶ್, ವಾಸ: ನಂ.20, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು–560004 (ಮಾಲೀಕರು) ಇವರೊಡನೆ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವ್ಯವ್ಯಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಷೆಡ್ಯೂಲ್ ಸ್ವತ್ತಿಗೆ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.
ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಪ್ರಸ್ತುತ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮ್‌ಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮ್‌ಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ 15 (ಹದಿನೈದು) ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ, ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಪ್ರಸ್ತುತ ಮಾಲೀಕರನ್ನು ಹೊರತು ಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ, ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.
ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರಗಳು)
ಬೆಂಗಳೂರು, ಬಾಣಸವಾಡಿ ರಸ್ತೆ 2ನೇ ಬ್ಲಾಕ್ ಎಕ್ಸ್‌ಟೇನ್ಷನ್, ಹೆಣ್ಣೂರು ರಸ್ತೆ, ಇಲ್ಲಿರುವ ಸ್ವತ್ತಿನ ಸೈಟ್ ನಂ.4ಇಸಿ 509, ಇದರ ಒಟ್ಟಾರೆ ವಿಸ್ತೀರ್ಣ 223.26 ಚದರ ಮೀಟರುಗಳ (ಅಂದರೆ 2,403 ಚದರ ಅಡಿಗಳು) ಹಾಗೂ ಈ ಸಂಪೂರ್ಣ ಸ್ವತ್ತಿಗೆ ಚಕ್ಕುಬಂದಿ ಕೆಳಕಂಡಂತಿರುವುದು :– ಪೂರ್ವಕ್ಕೆ : ಸೈಟ್ ನಂ. 4ಇಸಿ 511; ಪಶ್ಚಿಮಕ್ಕೆ : ಸೈಟ್ ನಂ. 4ಇಸಿ 507; ಉತ್ತರಕ್ಕೆ : ಸೈಟ್ ನಂ. 5ಸಿ 510; ಮತ್ತು ದಕ್ಷಿಣಕ್ಕೆ : 4ನೇ ಇ ಕ್ರಾಸ್ ರಸ್ತೆ.
ಸಹಿ/-
ಶ್ರೀ. ಶ್ರೀನಿವಾಸ್ ಬಿ.ಆರ್, ಮತ್ತು ಶ್ರೀಮತಿ. ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7, ಬ್ರೈಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770
ಸ್ಥಳ: ಬೆಂಗಳೂರು
ದಿನಾಂಕ: 29.04.2023

ಪ್ರಿಯಕರನ ಮೋಹದಲ್ಲಿ ಪುತ್ರನ ಕಡೆಗಣನೆ, ಪತಿ ಸುಪರ್ದಿಗೆ ಒಪ್ಪಿಸದ ಆರೋಪ

ಮಹಿಳೆಗೆ ಜಾಮೀನು ರಹಿತ ವಾರಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿ–ಪತ್ನಿ ಮಧ್ಯದ ಕೌಟುಂಬಿಕ ವ್ಯಾಜ್ಯವೊಂದರಲ್ಲಿ, 'ನ್ಯಾಯಾಲಯದ ಆದೇಶದ ಹೊರತಾಗಿಯೂ ಪತ್ನಿ ಮಗುವನ್ನು ನನ್ನ ಸುಪರ್ದಿಗೆ ನೀಡಿಲ್ಲ' ಎಂಬ ಪತಿಯ ಮನವಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್, ಕೋರ್ಟ್ ಆದೇಶ ಪಾಲಿಸದ ಅರ್ಜಿದಾರರ ಪತ್ನಿಯ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಗೊಳಿಸಲು ಆದೇಶಿಸಿದೆ.

ಈ ಕುರಿತಂತೆ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯಪೀಠವು, 'ಅರ್ಜಿಯ ಮುಂದಿನ ವಿಚಾರಣೆ ವೇಳೆಗೆ ಅರ್ಜಿದಾರರ ಪತ್ನಿಯನ್ನು ನ್ಯಾಯಾಲಯದ ಮುಂದೆ ಹಾಜರು-ಪಡಿಸಬೇಕು' ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಆದೇಶಿಸಿದೆ.

'ಮಹಿಳೆಯನ್ನು ಕೋರ್ಟ್‌ಗೆ ಹಾಜರುಪಡಿಸುವ ವೇಳೆ

ಮಗುವೂ ಜೊತೆಯಲ್ಲಿರುವಂತೆ ನೋಡಿಕೊಳ್ಳಬೇಕು. ಒಂದೊಮ್ಮೆ ಕೋರ್ಟ್‌ನ ಹೊರಭಾಗದಲ್ಲಿ ಅರ್ಜಿದಾರರ ಪತ್ನಿಯನ್ನು ಬಂಧಿಸಿದ್ದೇ ಆದರೆ, ಮಗುವನ್ನು ಕೋರ್ಟ್ ಹಾಲ್ ಒಳಗೆ ಕರೆತರುವಾಗ ಪೊಲೀಸರು ಎಲ್ಲ ರೀತಿಯ ಸುರಕ್ಷತೆ ಮತ್ತು ಕಾಳಜಿಯುಕ್ತ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿದೆ.

ಅತೃಪ್ತಿ: 'ಅಪ್ರಾಪ್ತ ವಯಸ್ಸಿನ ಮಗುವನ್ನು ಅರ್ಜಿದಾರ ಪತಿಯ ಸುಪರ್ದಿಗೆ ನೀಡುವಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಪತ್ನಿ ಪಾಲಿಸಿಲ್ಲ. ಆಕೆ ಕೋರ್ಟ್ ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಈ ನಡವಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಕಠಿಣ ಕ್ರಮ ಕೈಗೊಳ್ಳದ ಹೊರತು ಆಕೆ ನ್ಯಾಯಾಲಯದ ಮುಂದೆ ಹಾಜರಾಗುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಲುಕ್ ಔಟ್ ನೋಟಿಸ್: ವಿಚಾರಣೆ ವೇಳೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ವಿ.ಎಸ್. ಹೆಗ್ಡೆ, 'ಪ್ರಕರಣವು ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ ಎಂಬುದು ಅರ್ಜಿದಾರರ ಪತ್ನಿಗೆ ಗೊತ್ತಿದ್ದೂ, ಆಕೆ ಕೋರ್ಟ್‌ಗೆ ಹಾಜರಾಗದೆ ತಪ್ಪಿಸಿಕೊಳ್ಳುತ್ತಿದ್ದಾರೆ. ತಾನಿದ್ದ ಮನೆ ಖಾಲಿ ಮಾಡಿದ್ದಾರೆ. ಕಚೇರಿಯಲ್ಲೂ ಲಭ್ಯವಾಗಿಲ್ಲ. ಸದ್ಯಕ್ಕೀಗ ಆಕೆ ದೆಹಲಿಯಲ್ಲಿ ನೆಲೆಸಿದ್ದಾರೆ ಎಂಬ ಮಾಹಿತಿ ಇದೆ. ಈಗಾಗಲೇ ಪ್ರಕರಣದ ಕುರಿತಂತೆ ವಿದೇಶಿ ಪ್ರಾದೇಶಿಕ ನೋಂದಣಿ ಅಧಿಕಾರಿಗೆ ಮಾಹಿತಿ ಒದಗಿಸಲಾಗಿದ್ದು, ಲುಕ್ ಔಟ್ ನೋಟಿಸ್ ಅನ್ನೂ ಜಾರಿಗೊಳಿಸಲಾಗಿದೆ' ಎಂದು ವಿವರಿಸಿದರು.

ಈ ಅಂಶಗಳನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಮಹಿಳೆಯು ಕರ್ನಾಟಕದ ವ್ಯಾಪ್ತಿಯಿಂದ ಹೊರಗಿದ್ದರೆ ಸಂಬಂಧಿಸಿದ ಪೊಲೀಸರು ನ್ಯಾಯಾಲಯ ಹೊರಡಿಸಿರುವ ಜಾಮೀನು ರಹಿತ ವಾರಂಟ್ ಜಾರಿಗೆ ಸಹಕರಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಮುಂದೂಡಿದೆ.

ಪ್ರಕರಣವೇನು?

ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದಂತೆ ವ್ಯಾಜ್ಯ ನಡೆಸುತ್ತಿರುವ ಪತಿ, 'ನನ್ನ ಪತ್ನಿಯ ಬಳಿಯಿರುವ ಮಗನನ್ನು ನನ್ನ ಸುಪರ್ದಿಗೆ ಒಪ್ಪಿಸುವಂತೆ ಪತ್ನಿಗೆ ನಿರ್ದೇಶಿಸಬೇಕು' ಎಂದು ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಪುರಸ್ಕ-ರಿಸಿದ್ದ ನ್ಯಾಯಾಲಯ, 'ಒಂದು ತಿಂಗಳಲ್ಲಿ ಮಗನನ್ನು ಪತಿಯ ವಶಕ್ಕೆ ನೀಡಬೇಕು' ಎಂದು ಪತ್ನಿಗೆ 2022ರ ಮಾರ್ಚ್ 3ರಂದು ನಿರ್ದೇಶಿಸಿತ್ತು. ಆದರೆ, ಮಗನನ್ನು ತನ್ನ ಸುಪರ್ದಿಗೆ ನೀಡದ ಹಿನ್ನೆಲೆಯಲ್ಲಿ ಪತಿ, ಪತ್ನಿಯ ವಿರುದ್ಧ ಅಕ್ರಮ ಬಂಧನ ಆರೋಪದಡಿ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು.

ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್, 'ಪತ್ನಿಯು ಮಗನ ಯೋಗ-ಕ್ಷೇಮಕ್ಕಿಂತ ತನ್ನ ಪ್ರಿಯಕರನ ಜೊತೆಗಿನ ಸಂಬಂಧಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿದ್ದಾರೆ' ಎಂಬ ಅರ್ಜಿದಾರ ಪತಿಯ ಆರೋಪವನ್ನು ಗಂಭೀರವಾಗಿ ಪರಿಗಣಿಸಿತ್ತು. 'ಇಂತಹ ಪ್ರಕರಣಗಳಲ್ಲಿ ಮಗುವಿನ ನೆಮ್ಮದಿ ಮತ್ತು ಭಾವನಾತ್ಮಕ ಅಂಶಗಳು ಮಾತ್ರವೇ ಮುಖ್ಯ-ವಾಗುವುದಿಲ್ಲ. ಅದು ಬೆಳೆಯುವ ವಾತಾವರಣ ಮತ್ತು ತನ್ನ ಸುತ್ತಲಿನ ಪರಿಸರದಿಂದ ಕಲಿಯಬಹುದಾದ ನೈತಿಕ ಮೌಲ್ಯಗಳ ಅರಿವೂ ಕೂಡಾ ಆದ್ಯತೆ ಪಡೆಯುತ್ತವೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ, 'ಮಗುವನ್ನು ಪತಿಯ ಸುಪರ್ದಿಗೆ ಒಪ್ಪಿಸಬೇಕು' ಎಂದು 2023ರ ಜನವರಿ 31ರಂದು ಪತ್ನಿಗೆ ಆದೇಶಿಸಿತ್ತು.

ಮತದಾನ ಜಾಗೃತಿ

ಬಿಬಿಎಂಪಿ ದಕ್ಷಿಣ ವಲಯದ ವಿಶೇಷ ಆಯುಕ್ತ ಜಯರಾಮ್ ರಾಯಪುರ ನೇತೃತ್ವದಲ್ಲಿ ಶಾಂತಿನಗರ, ಬಿಎಂಟಿಸಿ ಬಸ್ ನಿಲ್ದಾಣ ಮತ್ತು ವಿಲ್ಸನ್ ಗಾರ್ಡನ್‌ನ ಮುಖ್ಯರಸ್ತೆಗಳಲ್ಲಿ ಮತದಾನ ಜಾಗೃತಿ ಜಾಥಾ ನಡೆಸಲಾಯಿತು

1–2ಕ್ಕೆ 'ರಾಮಾಯಣ' ನೃತ್ಯ ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ ಪ್ರಯುಕ್ತ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ಹಾಗೂ 'ರೋಟರಿ-3190 ಜಿಲ್ಲೆ' ಜಂಟಿಯಾಗಿ ಮೇ 1 ಹಾಗೂ 2ರಂದು 'ರಾಮಾಯಣ' ನೃತ್ಯ ನಾಟಕ, ಯಕ್ಷಗಾನ ಹಾಗೂ ವಿವಿಧ ಪ್ರಕಾರದ ನೃತ್ಯ ಪ್ರದರ್ಶನ-ವನ್ನು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.



ಕೆರೆಮನೆ ಶಿವಾನಂದ ಹೆಗಡೆ

ಸೋಮವಾರ ಸಂಜೆ 5 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಯಾಗಲಿದ್ದು, ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಎಂ.ಆರ್. ವಿ. ಪ್ರಸಾದ್, ನೃತ್ಯ ಕಲಾವಿದರಾದ ವೈಜಯಂತಿ ಕಾಶಿ, ನಿವೇದಿತಾ ಹಾಗೂ ರೋಟರಿ 3191 ಚುನಾಯಿತ ಜಿಲ್ಲಾ ಪಾಲಕ ಉದಯಭಾಸ್ಕರ್ ಅವರು ಪಾಲ್ಗೊಳ್ಳಲಿದ್ದಾರೆ. ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದ ನಿರ್ದೇಶಕರೂ ಆಗಿರುವ ಎ.ವಿ. ಸತ್ಯನಾರಾಯಣ ಅವರು ರಾಮಾಯಣ ಏಕವ್ಯಕ್ತಿ ನೃತ್ಯವನ್ನು ಪ್ರಸ್ತುತಪಡಿಸಲಿದ್ದಾರೆ. ರಾಮ, ಲಕ್ಷ್ಮಣ, ಹನುಮಂತ, ರಾವಣ ಸೇರಿ ವಿವಿಧ ಪಾತ್ರಗಳಲ್ಲಿ ಅವರು ಅಭಿನಯಿಸಲಿದ್ದಾರೆ. ಭರತನಾಟ್ಯ, ಕಥಕ್, ಕೂಚಿಪುಡಿ, ಒಡಿಸ್ಸಿ ನೃತ್ಯ ಪ್ರದರ್ಶನ-ವನ್ನೂ ಕಲಾವಿದರು ಪ್ರಸ್ತುತಪಡಿಸ-ಲಿದ್ದಾರೆ.

ಮಾಯಾ ರಾವ್ ಅವರ ಸ್ಮರಣಾರ್ಥ ಮಂಗಳವಾರ ಸಂಜೆ 5.30ಕ್ಕೆ ಕಥಕ್ ನೃತ್ಯ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದ ಕಲಾವಿದರು 'ರಾಮಾಯಣ' ನೃತ್ಯ ನಾಟಕ ಪ್ರದರ್ಶಿ-ಸಲಿದ್ದಾರೆ. ಸಂಜೆ 6.30ಕ್ಕೆ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಅವರಿಗೆ 'ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣಿತ ಪ್ರಶಸ್ತಿ' ಹಾಗೂ 'ರೋಟರಿ ವೊಕೇಷನಲ್ ಎಕ್ಸಲೆನ್ಸ್ ಅವಾರ್ಡ್' ಅನ್ನು ಸಾಹಿತಿ ಚಂದ್ರಶೇಖರ ಕಂಬಾರ ಪ್ರದಾನ ಮಾಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಹಿರೇಮಠ, ರೋಟರಿ 3190 ಜಿಲ್ಲಾ ಗವರ್ನರ್ ಜಿತೇಂದ್ರ ಅನೇಜಾ ಉಪಸ್ಥಿತರಿರಲಿದ್ದಾರೆ. 'ಸೃಷ್ಟಿ ಸ್ಮರಣ ಸಂಚಿಕೆ'ಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಬಿಡುಗಡೆ ಮಾಡಲಿದ್ದಾರೆ. ರಾತ್ರಿ 8 ಗಂಟೆಗೆ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯಿಂದ 'ಪಂಚವಟಿ' ಯಕ್ಷಗಾನ ಪ್ರದರ್ಶನ ನಡೆಯಲಿದೆ.

'ಎರಡು ದಿನಗಳ ಕಾಲ ವಿವಿಧ ನೃತ್ಯ ಪ್ರದರ್ಶನಗಳು ನಡೆಯಲಿವೆ. 40 ನಿಮಿಷಗಳಲ್ಲಿ ನೃತ್ಯ ನಾಟಕವನ್ನು ಪ್ರಸ್ತು-ತಪಡಿಸಲಾಗುತ್ತದೆ. ಇದಕ್ಕೆ ಪೌರಾಣಿಕ ಚಲನಚಿತ್ರಗಳ ಗೀತೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಎರಡೂ ದಿನ ಪ್ರವೇಶ ಉಚಿತ ಇರಲಿದೆ' ಎಂದು ಎ.ವಿ. ಸತ್ಯನಾರಾಯಣ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಗೀತಗಾರರ ಕುಂದುಕೊರತೆ ಆಲಿಕೆ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಾಸ್ತ್ರೀಯ ಸಂಗೀತ ಒಕ್ಕೂಟ ಟ್ರಸ್ಟ್ (ಕೆಸಿಎಂಸಿ ಟ್ರಸ್ಟ್) ಇದೇ 29ರಂದು ಶೇಷಾದ್ರಿಪುರದ ಬಬ್ಬೂರಕಮ್ಮೆ ಸೇವಾ ಸಮಿತಿ ಸಭಾಂಗಣದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರ ಕುಂದು ಕೊರತೆ ಆಲಿಸಲು ಸಭೆ ಆಯೋಜಿಸಿದೆ.

ಬೆಳಿಗ್ಗೆ 10ರಿಂದ ಸಭೆ ನಡೆಯಲಿದೆ. ಶಾಸ್ತ್ರೀಯ ಸಂಗೀತ ಕಲಾವಿದರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಕಂಡುಕೊಳ್ಳುವುದು ಮತ್ತು ಕಲಾವಿದರ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಸಭೆಯ ಮುಖ್ಯ ಉದ್ದೇಶ ಎಂದು ಟ್ರಸ್ಟ್ ತಿಳಿಸಿದೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಸಂಗೀತ ಕಾರ್ಯಕ್ರಮಗಳಲ್ಲಿ ಶೇ 80ರಷ್ಟು ಅವಕಾಶ ನೀಡಬೇಕಿದೆ. ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆಯ ಪರಿಷ್ಕರಣೆಗೆ ಒತ್ತಾಯಿಸುವುದು, ಆಕಾಶವಾಣಿ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೆ ತರುವುದು ಸೇರಿ ವಿವಿಧ ಸಂಗತಿಗಳ ಬಗ್ಗೆ ಚರ್ಚಿಸಲಾಗುವುದು ಎಂದು ಟ್ರಸ್ಟ್ ತಿಳಿಸಿದೆ.

ಚಿಣ್ಣರ ಸಂಭ್ರಮ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲಾ-ಕಾಲೇಜುಗಳು ಯಾವುದೇ ಖಾಸಗಿ ಶಾಲೆಗಳಿಗೂ ಕಡಿಮೆಯಾಗಬಾರ-ದೆಂಬ ಉದ್ದೇಶದಿಂದ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಹಾಗೂ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ತಿಳಿಸಿದರು.

ಚಿನ್ನಯ್ಯನ ಪಾಳ್ಯದಲ್ಲಿರುವ ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಬಿಎಂಪಿ ದಕ್ಷಿಣ ವಲಯದ ವತಿಯಿಂದ ಆಯೋಜಿಸಿದ್ದ ಮಕ್ಕಳ ಬೇಸಿಗೆ ಶಿಬಿರ 'ಚಿಣ್ಣರ ಸಂಭ್ರಮ' ಕಾರ್ಯಕ್ರಮದ ಸಮಾರೋಪದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಪಾಲಿಕೆ ವತಿಯಿಂದ ಅನೇಕ ಮೂಲ ಸೌಲಭ್ಯಗಳನ್ನು ನೀಡಿ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಪಾಲಿಕೆಯ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ

ಚಿನ್ನಯ್ಯನ ಪಾಳ್ಯದಲ್ಲಿರುವ ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಬಿಎಂಪಿ ದಕ್ಷಿಣ ವಲಯದ ವತಿಯಿಂದ ಆಯೋಜಿಸಿದ್ದ ಬೇಸಿಗೆ ಶಿಬಿರ 'ಚಿಣ್ಣರ ಸಂಭ್ರಮ'ದಲ್ಲಿ ಭಾಗವಹಿಸಿದ್ದ ಮಕ್ಕಳು

ಕಲ್ಪಿಸಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಅಲ್ಲದೆ ಆಧುನಿಕ ಶಿಕ್ಷಣ ನೀಡುವ ಸಲುವಾಗಿ ಸ್ಮಾರ್ಟ್ ಕ್ಲಾಸ್ ಮಾಡಲಾಗುತ್ತಿದೆ. ವಿದ್ಯಾಭ್ಯಾಸ-ದಿಂದ ಹೊರಗುಳಿದಿರುವ ಮಕ್ಕಳನ್ನು ಶಾಲೆಗೆ ಕರೆತರುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಆಯಾ ಸ್ಥಳೀಯ ಪ್ರದೇಶದಲ್ಲಿ, ಕೊಳಗೇರಿ ಪ್ರದೇಶಗಳಿಗೆ ತೆರಳಿ ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರ ಬಳಿ ಪಾಲಿಕೆಯಿಂದ ಉಚಿತವಾಗಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ಆದ್ದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಮನವರಿಕೆ ಮಾಡುವ ಕೆಲಸ ಮಾಡಬೇಕೆಂದು ಸೂಚಿಸಿದರು.

ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಲೋಕೇಶ್, ಶೈಕ್ಷಣಿಕ ಸಲಹೆಗಾರರಾದ ಬಿ.ಕೆ ಬಸವರಾಜ ಉಪಸ್ಥಿತರಿದ್ದರು.

'ಬೆಂಗಳೂರು ಪೊಲೀಸ್' ನಕಲಿ ಖಾತೆ: ಸುರಕ್ಷಿತವಿಲ್ಲವೆಂದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮ 'ಟ್ವಿಟರ್'ನಲ್ಲಿ 'ಬೆಂಗಳೂರು ಪೊಲೀಸ್' ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಲಾಗಿದ್ದು, ಈ ಬಗ್ಗೆ ಪೊಲೀಸರು ಜನರಿಗೆ ಎಚ್ಚರಿಕೆ ಸಂದೇಶದ ಪೋಸ್ಟ್ ಪ್ರಕಟಿಸಿದ್ದಾರೆ.

'@BlrCityPolicee ಹ್ಯಾಶ್ ಟ್ಯಾಗ್ ಬಳಸಿ ನಕಲಿ ಖಾತೆ ತೆರೆದಿರುವ ಕಿಡಿಗೇಡಿಗಳು, ಕ್ರಿಕೆಟ್ ಆಟಗಾರ ವಿರಾಟ್ ಕೊಹ್ಲಿಗೆ ಸಂಬಂಧಪಟ್ಟಂತೆ ಪೋಸ್ಟ್ ಹಾಕಿದ್ದಾರೆ. 'ವಿರಾಟ್ ಕೊಹ್ಲಿ ತಮ್ಮ ಬ್ಯಾಟಿಂಗ್ ವೇಳೆ 50 ರನ್ ಹತ್ತಿರವಿದ್ದಾಗ, ಝಿಬ್ರಾ ಕ್ರಾಸ್‌ನಲ್ಲಿ ನಿಲ್ಲುವಂತೆ ತಟಸ್ಥರಾಗುತ್ತಾರೆ' ಎಂದು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಗುರುವಾರ ಮಧ್ಯಾಹ್ನ 2.20ಕ್ಕೆ ಈ ಪೋಸ್ಟ್ ಮಾಡಲಾಗಿದೆ. ಶುಕ್ರವಾರ ಸಂಜೆಯವರೆಗೆ 10 ಲಕ್ಷ ಮಂದಿ ಈ ಪೋಸ್ಟ್ ನೋಡಿದ್ದು, 'ಪೊಲೀಸರೇ ನಿಮಗೆ ಏಕೆ ಬೇಕಿತ್ತು ಈ ಪೋಸ್ಟ್' ಎಂದು ಹಲವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ನಕಲಿ ಖಾತೆ ಪೋಸ್ಟ್‌ನಿಂದ ಇಕ್ಕಟ್ಟಿಗೆ ಸಿಲುಕಿರುವ ಅಸಲಿ ಪೊಲೀಸರು, 'ಇದೊಂದು ನಕಲಿ ಖಾತೆ. ಇದನ್ನು ಯಾರೂ ನಂಬಬೇಡಿ. ಕೃತ್ಯ ಎಸಗಿರುವ ಕಿಡಿಗೇಡಿಗಳನ್ನು ಪತ್ತೆ ಮಾಡಿ ಕಠಿಣ ಕ್ರಮ ಜರುಗಿಸ-ಲಾಗುವುದು' ಎಂದು 'ಬೆಂಗಳೂರು ಸಿಟಿ ಪೊಲೀಸ್' ಖಾತೆಯಲ್ಲಿ ಶುಕ್ರವಾರ ಸಂಜೆ ಪೋಸ್ಟ್ ಪ್ರಕಟಿ-ಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಜನ, 'ಪೊಲೀಸರೇ ಸುರಕ್ಷಿತವಿಲ್ಲ. ಇನ್ನು ಸಾಮಾನ್ಯ ಜನರ ಗತಿಯೇನು' ಎಂದಿದ್ದಾರೆ.

'ಅತೀ ಬುದ್ಧಿವಂತರು, ಸೂರ್ಯನಿಗೆ ಟಾರ್ಚ್ ಹಿಡಿದಿದ್ದಾರೆ' ಎಂದೂ ಪ್ರತಿಕ್ರಿಯಿಸಿದ್ದಾರೆ.

'ಐಪಿಎಲ್ ಎಂದರೆ, ಇಂಡಿಯಲ್ ಪೊಲೀಸ್ ಲೀಗ್ ಎಂದು ಕಿಡಿಗೇಡಿಗಳು ತಿಳಿದಿರುವಂತಿದೆ. ನಕಲಿ ಖಾತೆ ಸೃಷ್ಟಿಸಿರುವವರನ್ನು ಬಂಧಿಸಿ, ಅವರ ಫೋಟೊಗಳನ್ನು ಅಸಲಿ ಖಾತೆಯಲ್ಲಿ ಪ್ರಕಟಿಸಿ' ಎಂದೂ ಕೆಲವರು ಒತ್ತಾಯಿಸಿದ್ದಾರೆ.

ಮೀನು ಸಾಕಣೆ: ₹ 39.29 ಲಕ್ಷ ಆದಾಯ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಕೆರೆಗಳಲ್ಲಿ ಮೀನು ಸಾಕಣೆಯಿಂದ ಸರ್ಕಾರಕ್ಕೆ 2022-23ನೇ ಸಾಲಿನಲ್ಲಿ ₹39,29,215 ಆದಾಯ ಬಂದಿದೆ. ತಾಲ್ಲೂಕಿನಲ್ಲಿ ಒಟ್ಟು 21 ಕೆರೆಗಳನ್ನು ಮೀನು ಸಾಕಣೆಗೆ ಗುರುತಿಸಲಾಗಿದ್ದು, ಈ ಪೈಕಿ 19 ಕೆರೆಗಳಲ್ಲಿ ಮೀನು ಸಾಕಾಣಿಕೆ ನಡೆಯುತ್ತಿದೆ.

ನೆಲಮಂಗಲ ಪಟ್ಟಣದ ಕೆರೆಯಲ್ಲಿನ ನೀರು ಮೀನು ಸಾಕಾಣಿಕೆಗೆ ಯೋಗ್ಯವಿಲ್ಲವೆಂದು ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ನೀಡಿದೆ. 19 ಕೆರೆಗಳಲ್ಲಿ ಸುಮಾರು 39 ಲಕ್ಷ ಮೀನು ಮರಿ ಬಿತ್ತನೆ ಆಗಿರುತ್ತದೆ. ಇದರಿಂದ ಮೀನುಗಾರಿಕಾ ಇಲಾಖೆಗೆ ಅಧಿಕ ಆದಾಯ ಬಂದಿದೆ ಎನ್ನುತ್ತಾರೆ ಮೀನುಗಾರಿಕೆ ಇಲಾಖೆ ತಾಲ್ಲೂಕು ಸಹಾಯಕ ನಿರ್ದೇಶಕಿ ಅಮೃತಾ.

2023-24ನೇ ಸಾಲಿನಲ್ಲಿ ಮೀನು ಸಾಕಾಣಿಕೆಯ ಕೆರೆಗಳ

ಶ್ರೀನಿವಾಸಪುರದ ಕೆರೆಯಲ್ಲಿ ಮೀನು ಹಿಡಿಯುತ್ತಿರುವ ಫಲಾನುಭವಿ ಮುಹಮ್ಮದ್ ಸಮೀವುಲ್ಲಾ

ನವೀಕರಣ ಏ.30ರೊಳಗೆ ಮಾಡಬೇಕಾಗಿದೆ. ನವೀಕರಣ ಮಾಡಲು ಈಗಾಗಲೇ ಮೀನುಗಾರರಿಗೆ ನೋಟಿಸ್ ನೀಡಲಾಗಿದೆ ಎಂದು ಅವರು ತಿಳಿಸಿದರು.

2022-23ರಲ್ಲಿ 19 ಕೆರೆಗಳಲ್ಲಿ ದೇವರಹೊಸಹಳ್ಳಿ, ಹಳೇನಿಜಗಲ್, ಕುಲುವನಹಳ್ಳಿ, ಬಿದಲೂರು ಗಂಗಮ್ಮನ ಗುಡಿ, ಗೊಲ್ಲಹಳ್ಳಿ, ಟಿ.ಬೇಗೂರು, ಬರಧಿ, ಓಬಳಾಪುರ, ಶ್ರೀನಿವಾಸಪುರ, ದೊಡ್ಡಬೆಲೆ ಕೋಣನಕೆರೆ ಹಾಗೂ ಮರಳಕುಂಟೆ ಕೆರೆಗಳು ಈ ಟೆಂಡರ್ ನಲ್ಲಿ ವಿಲೇವಾರಿ ಆಗಿದ್ದವು. ಬಿಲ್ಲಿನಕೋಟೆ, ಮದಗ, ನಿಡವಂದ, ತ್ಯಾಮಗೊಂಡ್ಲು ಹಿರೆಕೆರೆ, ಮಣ್ಣೇ ಅಮಾನಿಕೆರೆ ಮತ್ತು ಕಂಬಾಳು ಕೆರೆಗಳು ನವೀಕರಣದ ಮೂಲಕ ವಿಲೇವಾರಿಯಾಗಿವೆ.

ಕಳೆದ ಸಾಲಿನಲ್ಲಿ ಕುಲುವನಹಳ್ಳಿ ಕೆರೆ ಅತಿ ಹೆಚ್ಚು ₹13.50ಲಕ್ಷಕ್ಕೆ ಹರಾಜಾಗಿದ್ದರೆ, ಹೊನ್ನರಾಯನಹಳ್ಳಿ ಕೆರೆ ₹9,480 ಕಡಿಮೆ ಮೊತ್ತಕ್ಕೆ ಹರಾಜಾಗಿತ್ತು.

ದವಡೆಯಲ್ಲಿ ಗಡ್ಡೆ: ನೈಜೀರಿಯಾ ಪಾದ್ರಿಗೆ ನಗರದಲ್ಲಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದವಡೆಯಲ್ಲಿ ಕಾಣಿಸಿಕೊಂಡಿದ್ದ ಅಪರೂಪದ ಗಡ್ಡೆಯಿಂದ (ಅಮೆಲೋಬ್ಲಾಸ್ಟೋಮಾ) ಸಮಸ್ಯೆ ಎದುರಿಸುತ್ತಿದ್ದ 55 ವರ್ಷದ ನೈಜೀರಿಯಾದ ಕ್ರೈಸ್ತ ಪಾದ್ರಿಗೆ ಇಲ್ಲಿನ ಫೋರ್ಟಿಸ್ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನಡೆಸಿದ್ದಾರೆ.

ಆಸ್ಪತ್ರೆಯ ಡಾ. ಸಂದೀಪ್ ನಾಯಕ್, ಡಾ. ಆಥಿರಾ ರಾಮಕೃಷ್ಣನ್ ಮತ್ತು ಡಾ. ಸುಷ್ಮಾ ಮೆಹ್ತಾ ನೇತೃತ್ವದ ವೈದ್ಯರ ತಂಡ ಈ ಶಸ್ತ್ರ ಚಿಕಿತ್ಸೆ ನಡೆಸಿದೆ.

'ರೋಗಿಯು ಈ ಗಡ್ಡೆಗೆ ನೈಜೀರಿಯಾದಲ್ಲಿ ಮೂರು ಬಾರಿ ಶಸ್ತ್ರ-ಚಿಕಿತ್ಸೆ ಮಾಡಿಸಿಕೊಂಡಿದ್ದರು. ಆದರೂ ಗಡ್ಡೆ ಬೆಳೆಯುತ್ತಲೇ ಇತ್ತು. ಇದರಿಂದ ಆತಂಕಕ್ಕೆ ಒಳಗಾದ ಅವರು, ಇಲ್ಲಿಗೆ ಬಂದು ದಾಖಲಾದರು. ದವಡೆಯಲ್ಲಿ ಬೆಳೆಯುವ ಅಪರೂಪದ ಈ ಗಡ್ಡೆಯನ್ನು ಗುರುತಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಯಿತು. ಗಡ್ಡೆಯು ಸುಮಾರು 15x20 ಸೆಂ.ಮೀ. ಬೆಳೆದು, ಸಂಪೂರ್ಣ ಮುಖವನ್ನೇ ಆವರಿಸಿಕೊಂಡಿತ್ತು. ಇದರಿಂದ ರೋಗಿಗೆ ಆಹಾರ ಸೇವನೆಯೇ ಕಷ್ಟವಾಗಿತ್ತು' ಎಂದು ಡಾ. ಸಂದೀಪ್ ನಾಯಕ್ ತಿಳಿಸಿದರು.

'ಗಡ್ಡೆ ತೆಗೆದ ಜಾಗದಲ್ಲಿ ದವಡೆಯ ಮೂಳೆಯನ್ನು ಮರುನಿರ್ಮಾಣ ಮಾಡಲು ರೋಗಿಯ ಕಾಲಿನ ಮೂಳೆಯನ್ನು ಅಳವಡಿಸಲಾಯಿತು. ಇದಕ್ಕಾಗಿ 3ಡಿ ಮುದ್ರಣ ತಂತ್ರಜ್ಞಾನವನ್ನು ಬಳಸಿಕೊಳ್ಳಲಾ-ಯಿತು. ಕಾಲಿನ ಮೂಳೆಯ ಬೆಂಬಲ ನೀಡದಿದ್ದರೆ ರೋಗಿಯು ಬಾಯಿ ತೆರೆದು, ಆಹಾರ ತಿನ್ನಲು ಸಾಧ್ಯವಾಗುತ್ತಿರಲಿಲ್ಲ. ಈಗ ರೋಗಿ ಸಂಪೂರ್ಣ ಗುಣಮುಖರಾಗಿದ್ದು, ತಮ್ಮ ತಾಯ್ನಾಡಿಗೆ ಹಿಂತಿರುಗಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಎಸ್. ಸಾಕೇತ್‌ರಾಮನ್ ಅವರು ಶುಕ್ರವಾರ ಸಂಗೀತ ಕಛೇರಿ ಪ್ರಸ್ತುತಪಡಿಸಿದರು – ಪ್ರಜಾವಾಣಿ ಚಿತ್ರ

ಜಮೀರ್ ವಿರುದ್ಧದ ತನಿಖೆಗೆ ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಅವರ ವಿರುದ್ಧದ ಲೋಕಾಯುಕ್ತ ತನಿಖೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ನಿಗದಿತ ಆದಾಯ ಮೀರಿದ ಆಸ್ತಿಯನ್ನು ಹೊಂದಿರುವ ಪ್ರಕರಣದಲ್ಲಿ ತನಿಖೆಗೆ ತಡೆಯಾಜ್ಞೆ ನೀಡಲು ಕರ್ನಾಟಕ ಹೈಕೋರ್ಟ್ ಏ.6ರಂದು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಶಾಸಕರು ಮೇಲ್ಮನವಿ ಸಲ್ಲಿಸಿದ್ದರು.

ಶಾಸಕರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರ ವಾದವನ್ನು ಆಲಿಸಿದ ನ್ಯಾಯಮೂರ್ತಿಗ-ಳಾದ ವಿ.ರಾಮಸುಬ್ರಹ್ಮಣಿಯನ್ ಮತ್ತು ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠವು ಈ ಸಂಬಂಧ ಮಧ್ಯಂತರ ಆದೇಶ ನೀಡಿತು.

ಎರಡು ವಾರದ ಬಳಿಕ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲು ತೀರ್ಮಾನಿಸಿದ ಪೀಠವು, ಈ ಸಂಬಂಧ ರಾಜ್ಯ ಸರ್ಕಾರ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿತು.

'ಜಮೀರ್ ಅಹ್ಮದ್ ಖಾನ್ ಅವರು ₹ 87.5 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಇದು, ಅವರ ನಿಗದಿತ ಆದಾಯ ಮೂಲಕ್ಕಿಂತ ಶೇ 2,031ರಷ್ಟು ಹೆಚ್ಚಿದೆ' ಎಂದು ಲೋಕಾಯುಕ್ತ ಪೊಲೀಸರು 2022ರಲ್ಲಿ ಎಫ್‌ಐಆರ್ ಅನ್ನು ದಾಖಲಿಸಿದ್ದರು.

ಬಾಲಕಿ ಅನುಮಾನಾಸ್ಪದ ಸಾವು: ವ್ಯಕ್ತಿ ಬಂಧನ

ಎಚ್.ಡಿ.ಕೋಟೆ: ತಾಲ್ಲೂಕಿನ ಅಣ್ಣೂರು ಗ್ರಾಮದಲ್ಲಿ ಬಾಲಕಿಯೊಬ್ಬಳು ಗುರುವಾರ ರಾತ್ರಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾಳೆ.

ಅಣ್ಣೂರಿನ ತಾತನ ಮನೆಯಲ್ಲಿ 12 ವರ್ಷದ ಬಾಲಕಿ ವಾಸವಿದ್ದಳು. ಅದೇ ಗ್ರಾಮದಲ್ಲೇ ವಿದ್ಯಾಭ್ಯಾಸ ಮಾಡುತ್ತಿದ್ದಳು. ತಾಯಿ ಮೈಸೂರಿನಲ್ಲಿ ಹೊಸ ಮನೆ ಕಟ್ಟಿಸಿದ್ದರು. ಬಾಲಕಿಯನ್ನು ಮನೆಯಲ್ಲಿ ಬಿಟ್ಟು ಗೃಹ ಪ್ರವೇಶಕ್ಕೆ ಆಹ್ವಾನ ಪತ್ರಿಕೆ ನೀಡಲು ತಾತ ಹಾಗೂ ಅಜ್ಜಿಯನ್ನು ಕರೆದುಕೊಂಡು ಹೋಗಿದ್ದರು.

'ಯಾರೂ ಇಲ್ಲದ ವೇಳೆ ಬಾಲಕಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮನೆ ಕೆಲಸದಾತ ನೇಣು ಹಗ್ಗ ಬಿಚ್ಚಿ ಬಾಲಕಿ ದೇಹವನ್ನು ಮನೆಯಿಂದ ಹೊರ ತಂದಿದ್ದು, ಅನುಮಾನಕ್ಕೆ ಕಾರಣವಾಗಿದೆ. ಆತನನ್ನು ವಶಕ್ಕೆ ಪಡೆದಿದ್ದು, ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವೇ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಶುಕ್ರವಾರ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ಪದವಿ ಪ್ರದಾನ: ಮುಖ್ಯ ಅತಿಥಿ: ಗೋವಿಂದನ್ ರಂಗರಾಜನ್, ಗೌರವ ಅತಿಥಿ: ಸಿ.ಎನ್. ಬಾಲಕೃಷ್ಣ, ಟಿ. ಕೋನಪ್ಪರೆಡ್ಡಿ, ಡಿ. ಹನುಮಂತಯ್ಯ, ರಾಘವೇಂದ್ರ, ಡಾ.ಕೆ.ವಿ. ರೇಣುಕಾಪ್ರಸಾದ್, ಆರ್. ಪ್ರಕಾಶ್, ಆಯೋಜನೆ: ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಸ್ಥಳ: ಕುವೆಂಪು ಕಲಾಕ್ಷೇತ್ರ, ವಿವಿ ಪುರ, ಬೆಳಿಗ್ಗೆ 9

ಡಿ.ವಿ. ಪರಮಶಿವಮೂರ್ತಿ ಅವರಿಗೆ ಅಭಿನಂದನೆ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್.ಕೆ., ಅಭಿನಂದನಾ ನುಡಿ: ಕಾ.ವೆಂ. ಶ್ರೀನಿವಾಸಮೂರ್ತಿ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಮುಖ್ಯ ಅತಿಥಿಗಳು: ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ, ನಾಗರತ್ನಾ ವಿದ್ಯಾಶಂಕರ, ಆಯೋಜನೆ: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಿಗ್ಗೆ 10.30

ಡಿಜಿಟಲ್ ತಂತ್ರಜ್ಞಾನದ ಬಗ್ಗೆ ಉಪನ್ಯಾಸ: ವಿನಯ್ ಸಂಪತ್, ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಮಧ್ಯಾಹ್ನ 2

ಶಿಷ್ಯ ವೇತನ ವಿತರಣೆ: ಮುಖ್ಯ ಅತಿಥಿ: ಪ್ರೊ. ವಿದ್ಯಾಶಂಕರ್, ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸಪ್ತರ್ಷಿ ಫೌಂಡೇಷನ್, ಸ್ಥಳ: ಗಾಯತ್ರಿ ಭವನ, ಬಸವನಗುಡಿ, ಸಂಜೆ 5

'ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿ' ಮತ್ತು 'ಡಾ. ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ' ಪ್ರದಾನ: ಶೂದ್ರ ಶ್ರೀನಿವಾಸ್, ಪ್ರಶಸ್ತಿ ಪುರಸ್ಕೃತರು: ವಿನಯ್ ನಂದಿಹಾಳ, ರೂಪಾ ಹಾಸನ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಶೂದ್ರ ಶ್ರೀನಿವಾಸ್

ನೃತ್ಯ ಪ್ರದರ್ಶನ: ಹಾಸಿನಿ ಚಂದ್ರಶೇಖರ್, ಪ್ರತೀಕ್ಷಾ ಬಾಲಾಜಿ, ಸಾನ್ವಿ ಲಾಲ್ವಾನಿ, ಸಂಹಿತಾ ಶ್ರೀಧರ್, ಮುಖ್ಯ ಅತಿಥಿ: ರವಿ ನಾರಾಯಣ, ಗೌರವ ಅತಿಥಿ: ವಸಂತ್ ಕಿರಣ್, ಎಂ.ಎಸ್. ಪ್ರಸಾದ್, ಕೆ.ಎಸ್. ಮೃತ್ಯುಂಜಯ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಹಂತ, ಸಂಜೆ 5.30

ವಿಶ್ವ ನೃತ್ಯ ದಿನಾಚರಣೆ ಸಂಭ್ರಮ: ಉದ್ಘಾಟನೆ: ನಂಜುಂಡ ರಾವ್, ಮುಖ್ಯ ಅತಿಥಿಗಳು: ಎನ್.ಆರ್. ನಿರಂಜನ, ಕೆ.ವಿ. ಶ್ರೀನಿವಾಸಾಚಾರ್, ಆಯೋಜನೆ: ಶಾಂತಲಾ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ನೃತ್ಯ ಸಂಭ್ರಮ: ಆಯೋಜನೆ: ಸಂಯೋಗ ಕಲಾಶಾಲೆ, ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿ ಪಾರ್ಕ್ ಅಪ್ತ ರಂಗಮಂದಿರ, ಭಾರತ್ ನಗರ, ಬೆಳಿಗ್ಗೆ 6.30

'ವೆಡ್ಡಿಂಗ್ ರಿಂಗ್' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಂ, ಆಯೋಜನೆ: ಅಂತರಂಗ, ಸ್ಥಳ: ಪ್ರಭಾತ್ ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.15

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಚಂಪಾ ನಾರಾಯಣ ಮತ್ತು ಸಂಗಡಿಗರು, ಸಂಗೀತ ಕಛೇರಿ: ಸುಧಾ ರಘುನಂದನ್, ಎಂಬಾರ್ ಎಸ್. ಕಣ್ಣನ್, ನೈವೇಲಿ ಸ್ಕಂಧಸುಬ್ರಹ್ಮಣ್ಯಂ, ಜಿ. ಗುರುಪ್ರಸಾದ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

30ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತವಾದ್ಯ ಜುಗಲ್ ಬಂದಿ, ಪಿಟೀಲು: ಎಚ್.ಕೆ. ವೆಂಕಟ್ ರಾಮ್, ಸಿತಾರ್: ರವಿ ಚಾರಿ, ಕೀಬೋರ್ಡ್: ಸತ್ಯನಾರಾಯಣನ್, ಮೃದಂಗ: ಎಚ್.ಎಸ್. ಸುಧೀಂದ್ರ, ತಬಲಾ: ರಾಜೇಂದ್ರ ನಾಕೋಡ್, ಘಟ: ಗಿರಿಧರ್ ಉಡುಪ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.30

ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿ: ನೀರಿನ ಅಭಾವವೇ ಮತ ಸೆಳೆಯುವ ವಿಷಯ

ವರದಾ ತೀರದ 'ಬೋರ್‌ವೆಲ್ ರಾಜಕೀಯ'

• ರಾಜೇಂದ್ರ ಹೆಗಡೆ

ಶಿರಸಿ: ಯಲ್ಲಾಪುರ-ಮುಂಡಗೋಡ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯಲ್ಲಿ 'ಬೋರ್‌ವೆಲ್ ಪಾಲಿಟಿಕ್ಸ್' ಗರಿಗೆದರಿದೆ!

ನೀರಿನ ಅಭಾವವೇ ಚುನಾವಣೆಗೆ ಮತ ಸೆಳೆಯುವ ವಿಷಯವಾಗಿ ಮಾರ್ಪಟ್ಟಿದ್ದು, ಮತಯಾಚನೆ ವೇಳೆ ರಾಜಕೀಯ ಪಕ್ಷಗಳ ಮುಖಂಡರು 'ಬೋರ್‌ವೆಲ್' ಕೊರೆಸಿಕೊಡುವ ವಾಗ್ದಾನ ಮಾಡುತ್ತಿದ್ದಾರೆ. ಕೆಲವೆಡೆ ಬೋರ್‌ವೆಲ್ ಕೊರೆಯುವ ಕಾರ್ಯವೂ ಆರಂಭವಾಗಿದೆ.

ಯಲ್ಲಾಪುರ ವಿಧಾನಸಭಾ ಕ್ಷೇತ್ರವು ಶಿರಸಿ ತಾಲ್ಲೂಕಿನ ಒಂಬತ್ತು ಗ್ರಾಮ ಪಂಚಾಯ್ತಿ ಒಳಗೊಂಡಿದೆ. ಹೋಬಳಿ ವ್ಯಾಪ್ತಿಯಲ್ಲಿ ಬೇಸಿಗೆಯಲ್ಲಿ ನೀರಿಗೆ ತತ್ವಾರ. ಅಡಿಕೆ, ಬಾಳೆ, ಮೆಕ್ಕೆಜೋಳ, ಭತ್ತ, ಅನಾನಸ್ ಬೆಳೆಯುವ ಇಲ್ಲಿನವರಿಗೆ

ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯ ರೈತರ ಜಮೀನಿನಲ್ಲಿ ಬೋರ್‌ವೆಲ್ ಕೊರೆಯುತ್ತಿರುವುದು

ವರದಾ ನದಿಯೇ ಜೀವನಾಧಾರ. ಆದರೆ, ನದಿ ಒಡಲು ಬರಿದಾಗಿದೆ. ಏತ ನೀರಾವರಿ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದ್ದು, ಫಲ ನೀಡಿಲ್ಲ. ಇದನ್ನೇ ರಾಜಕೀಯ ಪಕ್ಷಗಳು ಬಂಡವಾಳ ಮಾಡಿಕೊಂಡಿವೆ.

'ಕೆರೆಗೆ ನೀರು ತುಂಬುವ ಯೋಜನೆ' ಈ ಭಾಗದಲ್ಲಿ ವಿಫಲ ಎಂದು ಕಾಂಗ್ರೆಸ್ ಪಕ್ಷ ಆರೋಪಿಸುತ್ತಿದೆ. ಬಿಜೆಪಿಯು ಈ ಯೋಜನೆಯನ್ನು ಸಮರ್ಥಿಸಿಕೊಳ್ಳು-ತ್ತಿದೆ. ಈ ನಡುವೆ ಎದುರಾದ ನೀರಿನ ಸಮಸ್ಯೆಗೆ ತಕ್ಷಣ ಸ್ಪಂದಿಸುವ ಜೊತೆಗೆ ರೈತರ ಮನವೊಲಿಸಿ ಮತ ಪಡೆಯಲು ರಾಜಕೀಯ ಪಕ್ಷಗಳ ಪ್ರಮುಖರು ಮನೆಮನೆ ಮತಯಾಚನೆ ವೇಳೆ 'ಬೋರ್‌ವೆಲ್' ಕೊರೆಸಿಕೊಡುವುದಾಗಿ ಭರವಸೆ ನೀಡುತ್ತಿದ್ದಾರೆ. ಕೆಲವೆಡೆ ತಕ್ಷಣವೇ ಬೋರ್‌ವೆಲ್ ಕೊರೆಯಿಸಿ ಕೊಡಲಾಗುತ್ತಿದೆ.

ಬನವಾಸಿ, ಅಂಡಗಿ, ಭಾಶಿ, ಗುಡ್ನಾಪುರ, ಉಂಚಳ್ಳಿ, ಬದನಗೋಡ, ಹಲಗದ್ದೆ ಭಾಗದಲ್ಲಿ ನಿತ್ಯ 10ಕ್ಕೂ ಹೆಚ್ಚು ಬೋರ್ ವೆಲ್ ವಾಹನಗಳು ಓಡಾಡುತ್ತಿವೆ. ಗ್ರಾಮಗಳ ಸಾರ್ವಜನಿಕ ಪ್ರದೇಶ, ರೈತರ ಜಮೀನಿನಲ್ಲಿ ಈ ಯಂತ್ರಗಳು ಸದ್ದು ಮಾಡುತ್ತಿವೆ.

'ತಮಿಳುನಾಡು ಮೂಲದ 5 ವಾಹನಗಳಿಗೆ ಮುಂಗಡ ಪಾವತಿಸಲಾಗಿದೆ. ಫಲಾನುಭವಿಗಳ ಪಟ್ಟಿ ನೀಡಲಾಗಿದೆ. ಉಳಿದ ವಾಹನಗಳು ಈ ವ್ಯವಸ್ಥೆಗೆ ಹೊರತಾಗಿಲ್ಲ' ಎಂದು ಬೋರ್‌ವೆಲ್ ಯಂತ್ರದ ವಾಹನ ಚಾಲಕರೊಬ್ಬರು ತಿಳಿಸಿದರು.

'ಇಲ್ಲಿ ನೀರಾವರಿ ಆಶ್ರಿತ ಕೃಷಿ ಭೂಮಿ ಹೆಚ್ಚು. ಸಾಲ ಮಾಡಿ ಬೋರ್‌ವೆಲ್ ಕೊರೆಸಿ ಬೆಳೆ ಉಳಿಸಿಕೊಳ್ಳಲು ಮುಂದಾಗುತ್ತಾರೆ. ಚುನಾವಣಾ ವರ್ಷದಲ್ಲಿ ರೈತರಿಗೆ ಸ್ವಲ್ಪ ಅನುಕೂಲ ಜಾಸ್ತಿ' ಎಂಬುದು ದಾಸನಕೊಪ್ಪ ರೈತ ಬಸವಪ್ಪ ಗೌಡರ ಮಾಹಿತಿ.

'ಇವೆಲ್ಲ ಚುನಾವಣೆ ಸಲುವಾಗಿ ಮಾಡುತ್ತಿಲ್ಲ. ಬಡವರ ಬೆಳೆ ನಾಶ ತಪ್ಪಿಸಲು ಮುನ್ನೆಚ್ಚರಿಕೆ ಕ್ರಮವಾಗಿದೆ' ಎನ್ನುವುದು ಇಲ್ಲಿನ ಬಿಜೆಪಿ ನಾಯಕರೊಬ್ಬರ ಸಮರ್ಥನೆ.

'ರೈತರನ್ನು ವಿಚಾರಿಸಿದರೆ ಸ್ವತಃ ಬೋರ್‌ವೆಲ್ ಕೊರೆಯಿಸುತ್ತಿರುವುದಾಗಿ ಹೇಳುತ್ತಾರೆ. ಯಂತ್ರದವರೂ ಗುಟ್ಟು ಬಿಡುವುದಿಲ್ಲ. ಬನವಾಸಿ ಹೋಬಳಿ ಸೇರಿ ಅರೆಮಲೆನಾಡು ವಾತಾವರಣದ ಮುಂಡಗೋಡದಲ್ಲೂ ನೀರಿನ ಅಭಾವವು ಮತ ಸೆಳೆಯುವ ವಿಷಯವಾಗಿದೆ' ಎಂಬುದು ಚುನಾವಣಾ ಅಧಿಕಾರಿಯೊಬ್ಬರ ಮಾತು.

ಸುಭಾಷಿತ

ಮನುಷ್ಯನನ್ನು ಕಡೆಗಣಿಸಿ ಮಾಡುವ ಯಾವುದೇ ಸತ್ಕರ್ಮ ನಿರರ್ಥಕ, ಅಪ್ರಯೋಜಕ.

–ಕೆ.ಎಸ್.ನಿಸಾರ್ ಅಹಮದ್

ಕೇಶವಾನಂದ ಭಾರತಿ ಪ್ರಕರಣಕ್ಕೆ 50 ಜನಹಿತವನ್ನು ಕಾಯ್ದ ಸ್ಮರಣೀಯ ತೀರ್ಪು

ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರವು ಸಂಸತ್ತಿಗೆ ಇದೆಯಾದರೂ, ಆ ಅಧಿಕಾರಕ್ಕೆ ಕೆಲವು ಮಿತಿಗಳು ಇವೆ ಎಂಬುದನ್ನು ಹೇಳುವ 'ಸಂವಿಧಾನದ ಮೂಲ ಸ್ವರೂಪ' ಸಿದ್ಧಾಂತಕ್ಕೆ ಸುಪ್ರೀಂ ಕೋರ್ಟ್ ಸ್ಪಷ್ಟ ರೂಪವನ್ನು ನೀಡಿದ ತೀರ್ಪಿಗೆ ಈಗ ಐವತ್ತು ವರ್ಷಗಳು ತುಂಬಿವೆ. ಈ ಹೊತ್ತಿನಲ್ಲಿ ಈ ಸಿದ್ಧಾಂತವು ಬಹಳ ಮಹತ್ವವನ್ನು ಪಡೆದುಕೊಂಡಿದೆ. ಸಂವಿಧಾನಕ್ಕೆ ಮೂಲಸ್ವರೂಪ ಇದೆ, ಸಂಸತ್ತು ಯಾವ ಕಾರಣಕ್ಕೂ ಆ ಮೂಲ ಸ್ವರೂಪಕ್ಕೆ ತಿದ್ದುಪಡಿ ತರುವ ಅಧಿಕಾರವನ್ನು ಹೊಂದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ಹೇಳಿದ್ದು ಕೇಶವಾನಂದ ಭಾರತಿ ಪ್ರಕರಣದಲ್ಲಿ. ಈ ತೀರ್ಪು ಬಂದು ಐವತ್ತು ವರ್ಷಗಳಾಗಿರುವ ಕಾರಣ, ಪ್ರಕರಣದ ಬಗ್ಗೆ ವಿಸ್ತೃತ ಮಾಹಿತಿ ನೀಡುವ ವೆಬ್‌ಪುಟವೊಂದನ್ನು ಸುಪ್ರೀಂ ಕೋರ್ಟ್ ಈಚೆಗೆ ಅನಾವರಣಗೊಳಿಸಿದೆ. ಯಾವೆಲ್ಲ ಅಂಶಗಳು ಸಂವಿಧಾನದ ಮೂಲಸ್ವರೂಪದ ವ್ಯಾಖ್ಯಾನದ ಅಡಿಯಲ್ಲಿ ಬರುತ್ತವೆ ಎಂಬುದನ್ನು ಕೋರ್ಟ್ ಕಾಲಕಾಲಕ್ಕೆ ಹೇಳುತ್ತ ಬಂದಿದೆ. ಪ್ರಜಾತಂತ್ರ ವ್ಯವಸ್ಥೆ, ಕಾನೂನಿನ ಅನ್ವಯ ಆಡಳಿತ ವ್ಯವಸ್ಥೆ ಮುನ್ನಡೆಯುವುದು, ಮೂಲಭೂತ ಹಕ್ಕುಗಳು, ಧರ್ಮನಿರಪೇಕ್ಷ ತತ್ವ, ನ್ಯಾಯಾಂಗಕ್ಕೆ ಇರುವ ಪರಾಮರ್ಶೆಯ ಅಧಿಕಾರ, ಒಕ್ಕೂಟ ವ್ಯವಸ್ಥೆ... ಇವೆಲ್ಲ ಸಂವಿಧಾನದ ಮೂಲ ಸ್ವರೂಪದ ಭಾಗ ಎಂದು ಕೋರ್ಟ್ ಹೇಳಿದೆ. ಸಂವಿಧಾನಕ್ಕೆ ಮೂಲ ಸ್ವರೂಪವೊಂದು ಇದೆ, ಯಾವುದೇ ಸಂದರ್ಭದಲ್ಲಿ ಮೂಲಸ್ವರೂಪಕ್ಕೆ ಬದಲಾವಣೆ ತರಲು ಅವಕಾಶ ಇಲ್ಲ ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್, ಅದರಲ್ಲೂ ನಿರ್ದಿಷ್ಟವಾಗಿ ಕೇಶವಾನಂದ ಭಾರತಿ ಪ್ರಕರಣವು, ಸಂವಿಧಾನವನ್ನು ರಕ್ಷಿಸುವ ಕೆಲಸ ಮಾಡಿದೆ. ಶಾಸಕಾಂಗವು ಅನುಮೋದನೆ ನೀಡಿದ ಹಲವು ಮಸೂದೆಗಳು ಎಷ್ಟರಮಟ್ಟಿಗೆ ಸಾಂವಿಧಾನಿಕ ಎಂಬುದನ್ನು ನ್ಯಾಯಾಂಗವು ನಂತರದ ದಿನಗಳಲ್ಲಿ, ಕೇಶವಾನಂದ ಭಾರತಿ ಪ್ರಕರಣದ ತೀರ್ಪಿನ ಆಧಾರದಲ್ಲಿ ಪರಾಮರ್ಶೆ ನಡೆಸಿದೆ.

ಸಂವಿಧಾನದ ಮೂಲಸ್ವರೂಪ ಸಿದ್ಧಾಂತಕ್ಕೆ ಬೆಂಬಲವಾಗಿ ಮಾತನಾಡುವುದು ಹಾಗೂ ಅದರ ಮಹತ್ವವನ್ನು ಮತ್ತೆ ಸಾರಿ ಹೇಳುವುದು ಈ ಹೊತ್ತಿನಲ್ಲಿ ಆಗಬೇಕಾದ ಕಾರ್ಯ

'ಪರಿಸ್ಥಿತಿಯು ಬಹಳ ಸಂಕೀರ್ಣವಾದ ಸಂದರ್ಭಗಳಲ್ಲಿ, ಸಂವಿಧಾನದ ವ್ಯಾಖ್ಯಾನಕಾರರಿಗೆ ಹಾಗೂ ಸಂವಿಧಾನವನ್ನು ಅನುಷ್ಠಾನಕ್ಕೆ ತರುವವರಿಗೆ ಮುಂದಿನ ದಾರಿ ಹೇಗಿರಬೇಕು ಎಂಬುದನ್ನು ಹೇಳುವ ದಿಗ್ದರ್ಶಕ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಮೂಲ ಸ್ವರೂಪ ಸಿದ್ಧಾಂತದ ಬಗ್ಗೆ ಹೇಳಿದ್ದಾರೆ. ಭಾರತದ ಸುಪ್ರೀಂ ಕೋರ್ಟ್ ಮೂಲ ಸ್ವರೂಪದ ಬಗ್ಗೆ ತೀರ್ಪು ನೀಡಿದ ನಂತರದಲ್ಲಿ, ಬೇರೆ ದೇಶಗಳಲ್ಲಿನ ನ್ಯಾಯಾಂಗ ವ್ಯವಸ್ಥೆಗಳು ತಮ್ಮಲ್ಲಿಯೂ ಈ ತೀರ್ಪಿನಲ್ಲಿರುವ ಚಿಂತನೆಗಳನ್ನು ಅಳವಡಿಸಿಕೊಂಡಿವೆ. ಇದು ಈ ತೀರ್ಪಿನ ಮಹತ್ವವನ್ನು ಹೇಳುವ ಒಂದು ಅಂಶ. ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಲವಾದ ಅಡಿಪಾಯವೊಂದನ್ನು ಹಾಕಿಕೊಟ್ಟಿರುವ ತೀರ್ಪು ಇದು. ಪ್ರಜಾಪ್ರಭುತ್ವ ವ್ಯವಸ್ಥೆಗೆ ಸ್ಥಿರತೆ ದಕ್ಕಿರುವುದರಲ್ಲಿ ಈ ತೀರ್ಪಿನ ಕೊಡುಗೆಯೂ ಇದೆ. ಸಂವಿಧಾನವನ್ನು ಸಂಸತ್ತು ಅನಿರ್ಬಂಧಿತವಾಗಿ ಬದಲಾಯಿಸುವಂತೆ ಇಲ್ಲ ಎಂಬ ನಿಲುವು ಸುಪ್ರೀಂ ಕೋರ್ಟ್ 1967ರಲ್ಲಿ ಗೋಲಕನಾಥ್ ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿಯೂ ವ್ಯಕ್ತವಾಗಿದೆ. ಮೂಲಸ್ವರೂಪ ಸಿದ್ಧಾಂತ ತರ್ಕಬದ್ಧವಾಗಿಯೇ ಇದೆ. ಏಕೆಂದರೆ, ಸಂವಿಧಾನದ ಕಾರಣದಿಂದಾಗಿ ಸೃಷ್ಟಿಯಾಗಿರುವ ಸಂಸತ್ತಿಗೆ, ಸಂವಿಧಾನದ ಮೂಲಸ್ವರೂಪವನ್ನೇ ಬದಲಾಯಿಸುವ ಅಧಿಕಾರ ಇರುವುದು ಸರಿಯಲ್ಲ.

ದೇಶದ ಸಂವಿಧಾನವು ಹಿಂದಿಗಿಂತಲೂ ಇಂದು ಹೆಚ್ಚಿನ ಸವಾಲುಗಳನ್ನು ಎದುರಿಸುತ್ತಿದೆ. ಉಪ ರಾಷ್ಟ್ರಪತಿ ಹುದ್ದೆಯು ಸಾಂವಿಧಾನಿಕವಾಗಿ ಬಹಳ ಮಹತ್ವದ್ದು. ಆ ಹುದ್ದೆಯಲ್ಲಿರುವ ಜಗದೀಪ್ ಧನಕರ್ ಅವರೇ ಮೂಲಸ್ವರೂಪ ಸಿದ್ಧಾಂತವನ್ನು ಪ್ರಶ್ನಿಸಿದ್ದಾರೆ. ಸಂವಿಧಾನಕ್ಕೆ ಸಂಸತ್ತು ತರುವ ತಿದ್ದುಪಡಿಗಳ ವಿಚಾರವಾಗಿ ತೀರ್ಮಾನ ಕೊಡುವ ಅಧಿಕಾರವು ಸುಪ್ರೀಂ ಕೋರ್ಟ್‌ಗೆ ಇಲ್ಲ ಎಂಬ ಅರ್ಥ ಬರುವ ಮಾತುಗಳನ್ನು ಕೂಡ ಧನಕರ್ ಅವರು ಆಡಿದ್ದಾರೆ. ಸಂವಿಧಾನಕ್ಕೆ ಬೇರೆ ಬೇರೆ ದಿಕ್ಕುಗಳಿಂದ ಸವಾಲುಗಳು ಎದುರಾಗಿದ್ದರೂ, ಉಪರಾಷ್ಟ್ರಪತಿ ಹುದ್ದೆಯಲ್ಲಿ ಇರುವವರಿಂದ ಇಂತಹ ಸವಾಲು ಎದುರಾಗಿರಲಿಲ್ಲ. ಹೀಗಾಗಿ, ಮೂಲಸ್ವರೂಪ ಸಿದ್ಧಾಂತಕ್ಕೆ ಬೆಂಬಲವಾಗಿ ಮಾತನಾಡುವುದು ಹಾಗೂ ಅದರ ಮಹತ್ವವನ್ನು ಮತ್ತೆ ಸಾರಿ ಹೇಳುವುದು ಈ ಹೊತ್ತಿನಲ್ಲಿ ಪ್ರಮುಖವಾಗುತ್ತದೆ. ಸಂವಿಧಾನದ ಮೂಲಸ್ವರೂಪವನ್ನು ರಕ್ಷಿಸುವ ಹೊಣೆ ಇರುವುದು ಸುಪ್ರೀಂ ಕೋರ್ಟ್ ಮೇಲೆ ಮಾತ್ರವೇ ಅಲ್ಲ ಎಂಬುದು ಮುಖ್ಯವಾಗಿ ನೆನಪಿಡಬೇಕಾದ ಅಂಶ. ಸಂವಿಧಾನ ಸಂರಕ್ಷಣೆಗೆ ಬಹುದೊಡ್ಡ ಹೊಣೆ ಇರುವುದು ದೇಶದ ಜನರ ಮೇಲೆ. ಏಕೆಂದರೆ ಸಂವಿಧಾನವು ಅಭಿವ್ಯಕ್ತಿಸುವುದು ಜನರ ಸಾಮೂಹಿಕ ಇಚ್ಛೆಯನ್ನು. ಸಂವಿಧಾನದ ಮೂಲಸ್ವರೂಪವು ಕಾಪಾಡುವುದು ಜನರ ಹಿತವನ್ನು. ಜನಹಿತವನ್ನು ಕಾಯುವ ಕೆಲಸ ಮಾಡಿರುವ ಕೇಶವಾನಂದ ಭಾರತಿ ಪ್ರಕರಣದ ತೀರ್ಪು ಸದಾ ಸ್ಮರಣೀಯ.

ದಿನದ ಟ್ವೀಟ್

ವೈಯಕ್ತಿಕ ದಾಳಿಗಿರಲಿ ಕಡಿವಾಣ

ಕಾಂಗ್ರೆಸ್ ಎಂದಿಗೂ ಪಾಠ ಕಲಿಯುವುದಿಲ್ಲ. ಕರ್ನಾಟಕದಲ್ಲಿ ಪಕ್ಷದ ಪ್ರಚಾರ ಕಾರ್ಯ ಸರಿಯಾದ ದಾರಿಯಲ್ಲೇ ಸಾಗುತ್ತಿದೆಯಾದರೂ, ಈ ಬಗೆಯ ಟೀಕೆಗಳು ಹಿಂದೆ ಪಕ್ಷಕ್ಕೆ ತಿರುಗುಬಾಣ ಆಗಿವೆ ಎಂಬುದರ ಪೂರ್ಣ ಅರಿವಿದ್ದೂ ಪ್ರಧಾನಿ ಮೋದಿ ಅವರ ವಿರುದ್ಧ ಖರ್ಗೆ ವೈಯಕ್ತಿಕ ದಾಳಿ ನಡೆಸಿದ್ದಾರೆ. ಬಿಜೆಪಿ ಎದುರು ನೋಡುತ್ತಿದ್ದುದು ಇಂತಹ ವಿಷಯಾಂತರವನ್ನೇ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿ ನಾಯಕರು ಮೂರು ವರ್ಷ 40 ಪರ್ಸೆಂಟ್ ಕಮಿಷನ್ ಪಡೆದಿದ್ದಾರೆ. ಬಿಜೆಪಿಗೆ 40ರ ಸಂಖ್ಯೆ ತುಂಬಾ ಇಷ್ಟ. 40ರ ಸಂಖ್ಯೆಯ ಮೇಲೆ ಅವರಿಗೆ ಪ್ರೀತಿ, ಒಲವಿದೆ. ಹೀಗಾಗಿ, ಬಿಜೆಪಿಗೆ ಈ ಚುನಾವಣೆಯಲ್ಲಿ ಕರ್ನಾಟಕದ ಜನರು 40 ಸೀಟ್‌ಗಳನ್ನು ಮಾತ್ರ ಕೊಡಬೇಕು.

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

25 ವರ್ಷಗಳ ಹಿಂದೆ

ಬುಧವಾರ, 29-4-1998

• ಉದ್ಯಮಿಗಳಿಗೆ ಕಿರುಕುಳ ತಡೆಗೆ ಆಯೋಗ– ಪ್ರಧಾನಿ

ನವದೆಹಲಿ, ಏ. 28 (ಯುಎನ್‌ಐ)– ಕೈಗಾರಿಕೆ ಹಾಗೂ ವ್ಯಾಪಾರ ರಂಗದ ಮೇಲಿನ ನೌಕರಶಾಹಿಯ ಹತೋಟಿಯನ್ನು ತೆಗೆದುಹಾಕುವುದಕ್ಕಾಗಿ ತಮ್ಮ ಸರ್ಕಾರ ಆಯೋಗವೊಂದನ್ನು ಸ್ಥಾಪಿಸುವುದು ಎಂದು ಪ್ರಧಾನಿ ಎ.ಬಿ. ವಾಜಪೇಯಿ ಅವರು ಇಂದು ಇಲ್ಲಿ ಪ್ರಕಟಿಸಿದರು.

ಅಲ್ಲದೆ, ಖೋತಾ ಹಣಕಾಸಿನಿಂದಾಗಿ ನಲುಗಿರುವ ಅರ್ಥವ್ಯವಸ್ಥೆಗೆ ಪುನಶ್ಚೇತನ ನೀಡಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಅರ್ಥವ್ಯವಸ್ಥೆಗೆ ರಾಜಕೀಯ ಲೇಪ ತಾಕದಂತೆ ನೋಡಿಕೊಳ್ಳಲಾಗುವುದು ಎಂದೂ ಅವರು ಭಾರತೀಯ ಕೈಗಾರಿಕಾ ಸಂಘಗಳ ಒಕ್ಕೂಟದ (ಸಿಐಐ) ವಾರ್ಷಿಕ ಸಭೆಯಲ್ಲಿ ಮಾತನಾಡುತ್ತ ಹೇಳಿದರು.

• ಶರಣಾಗಲಾರೆ: ವೀರಪ್ಪನ್

ಚೆನ್ನೈ, ಏ. 28 (ಪಿಟಿಐ)– ಕುಖ್ಯಾತ ನರಹಂತಕ ವೀರಪ್ಪನ್‌ನ ಶರಣಾಗತಿಯ ಊಹಾಪೋಹಗಳ ಮಧ್ಯೆ ಆತ ತಾನು ಅಧಿಕಾರಿಗಳಿಗೆ ಶರಣಾಗುವುದಿಲ್ಲ ಎಂದು ಖಚಿತವಾಗಿ ತಿಳಿಸಿದ್ದಾನೆ.

ತಮಿಳು ಪತ್ರಿಕೆಯ ಸಂಪಾದಕರಿಗೆ ನೀಡಿದ ಕ್ಯಾಸೆಟ್‌ವೊಂದರಲ್ಲಿ, 'ನಾನು? ಶರಣಾಗತಿ? ಇದೆಲ್ಲ ಅವಿವೇಕ' ಎಂದು ಆತ ತಳ್ಳಿಹಾಕಿದ್ದಾನೆ.

'ನಕ್ಕೀರನ್' ಪಾಕ್ಷಿಕದ ಸಂಪಾದಕ ಆರ್.ಆರ್. ಗೋಪಾಲ್ ಅವರು ಇಂದು ಸಂಜೆ ಪತ್ರಿಕಾಗೋಷ್ಠಿಯಲ್ಲಿ ವೀರಪ್ಪನ್ ವಿಡಿಯೊ ಕ್ಯಾಸೆಟ್ ಅನ್ನು ಹಾಕಿ ತೋರಿಸಿದರು.

'ವೀರಪ್ಪನ್ ಎಂದೂ ಶರಣಾಗಲಾರ. ಆತ ಇನ್ನೂ 25 ವರ್ಷ ಅದೇ ಹುಮ್ಮಸ್ಸಿನೊಂದಿಗೆ ಬೇಟೆಯಾಡಲಿದ್ದಾನೆ' ಎಂದು ಸ್ವತಃ ವೀರಪ್ಪನ್ ಹೇಳಿಕೊಂಡಿದ್ದಾನೆ.

50 ವರ್ಷಗಳ ಹಿಂದೆ

ಭಾನುವಾರ, 29-4-1973

• ದೇವರಿಂದ ನಮಗೆ ಲುಕ್ಸಾನು: ಲಾಭವಿಲ್ಲ ಎಂದು ಬಸವಲಿಂಗಪ್ಪ

ಬೆಂಗಳೂರು, ಏ. 28– 'ಲುಕ್ಸಾನು ಆಗುವ ವ್ಯಾಪಾರ ನನಗೆ ಬೇಕಿಲ್ಲ' ಎಂದು ಇಂದು ಇಲ್ಲಿ ಸ್ಪಷ್ಟಪಡಿಸಿದ ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪ ಅವರು, 'ಅದಕ್ಕೆಂದೇ ನಾನು ದೇವರ ಪಟಗಳನ್ನು ಕಟ್ಟಿ ಅಟ್ಟಕ್ಕೆ ಎಸೆಯಿರಿ ಎಂದು ಹೇಳಿದೆ' ಎಂದರು.

'ನಾವು ಪೂಜೆ ಮಾಡುವ ದೇವರಿಗೆ ನೀವೂ ಪೂಜೆ ಮಾಡಿ ಎಂಬ ವಿಚಾರಸರಣಿ ಆದಿಯಿಂದ ಬಂದಿದೆ. ಆ ದೇವರಿಂದ ನಮಗೆ ಲುಕ್ಸಾನು ಆಗಿದೆ. ಲಾಭವೇನೂ ಆಗಿಲ್ಲ' ಎಂದರು.

ಬಸವಲಿಂಗಪ್ಪ ಅವರು ಇತ್ತೀಚೆಗೆ ಮೈಸೂರಿನಲ್ಲಿ ಮಾಡಿದ್ದ ಭಾಷಣದಲ್ಲಿ ದೇವರ ಪಟಗಳನ್ನು ಎಸೆಯಿರಿ ಎಂದು ಹೇಳಿರುವುದಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಪಕ್ಷದ ಸದಸ್ಯ ಬಿ. ಚನ್ನಬೈರೇಗೌಡ ಅವರು ಕಳುಹಿಸಿದ್ದ ನಿಲುವಳಿ ಸೂಚನೆಯ ಅಂಗೀಕಾರಾರ್ಹತೆ ಮೇಲೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ ವಿರೋಧ ಪಕ್ಷದ ಸದಸ್ಯರು ಮತ್ತು ಪೌರಾಡಳಿತ ಸಚಿವರ ಮಧ್ಯೆ ಹಲವು ಬಾರಿ ಮಾತಿನ ಚಕಮಕಿ, ಘರ್ಷಣೆಗಳಾದವು.

ಮಹಿಳೆಯರಿಗೆ ಶಾಸನಸಭೆಗಳಲ್ಲಿ ಅರ್ಧದಷ್ಟು ರಾಜಕೀಯ ಮೀಸಲಾತಿ ಅಗತ್ಯ

ಹೆಂಗಳೆಯರು ಮತ್ತು ರಾಜಕಾರಣ

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

'**ಅಷ್ಟಕ್ಕೂ** ಅವಳು ಯಾರೊಡನೆಯೂ ಓಡಿಹೋಗದೆ, ಕಾಲುವೆಗೆ ಬಿದ್ದು ಸಾಯದೆ, ಮನೆಗೂ ಬಾರದೆ ಏನಾದಳಂತೆ? ಹೀಗೆ ಮಾಯವಾಗಿಬಿಡುತ್ತಿರುವ ಮಕ್ಕಳ ಬಗ್ಗೆ ಒಂದು ನಾಲ್ಕು ಜನ ಹೆಂಗಸರೋ ನಾಲ್ಕು ಜನ ಗಂಡಸರೋ ಕುಳಿತುಕೊಂಡು ಟಿ.ವಿ ಯಲ್ಲಿ ಮಾತನಾಡುವುದಿಲ್ಲವೇಕೆ? ... ನನ್ನ ಮಗಳಿಗಾಗಿ ನಾನೇ ಮೋಂಬತ್ತಿ ಹಚ್ಚುತ್ತೇನೆ ಎಂದು ಒಂದು ದಿನ ಹೊಸ್ತಿಲಾಚೆ ಹದಿನೇಳು ಮೋಂಬತ್ತಿ ಹಚ್ಚಿದಳು ಮಾಲಚ್ಮಿ'. ಪಿ.ಸತ್ಯವತಿಯವರ 'ಹೆಸರಿಲ್ಲದ ಹುಡುಗಿ' ('ದಮಯಂತಿಯ ಮಗಳು', ಅನು: ಅಜಯ ವರ್ಮ ಅಲ್ಲೂರಿ) ಕತೆಯಲ್ಲಿನ ತಾಯಿಯ ಅಸಹಾಯಕತೆಯ ಮೂಲದಲ್ಲಿ ಹೊಣೆಗಾರಿಕೆ ಮರೆತ ಪ್ರಜೆಗಳೂ ಪ್ರಭುಗಳೂ ಇದ್ದಾರೆ.

ಪ್ರತಿವರ್ಷವೂ ಅಸಂಖ್ಯ ಹೆಣ್ಣುಮಕ್ಕಳು ಕಾಣೆಯಾಗುತ್ತಲೇ ಇರುತ್ತಾರೆ. ಇದನ್ನು ಯಾರೂ ಗಮನಿಸುವುದಿಲ್ಲ. ಯಾರಿಗೂ ಆ ಬಗ್ಗೆ ಅಂತಹ ಕಾಳಜಿ ಇಲ್ಲ. ಯಾಕೆಂದರೆ ಆ ಯುವತಿಯರು ಹೆಚ್ಚಾಗಿ ಬಡವರೂ ದುರ್ಬಲ ವರ್ಗದವರೂ ಆಗಿರುತ್ತಾರೆ. ಹಿಂದಿನ ಕೆಲವು ತಿಂಗಳುಗಳಿಂದ ಹೊರಬೀಳುತ್ತಿರುವ ಸುದ್ದಿಗಳನ್ನು ನೋಡಿದಾಗ ಗಾಬರಿಯಾಗುತ್ತದೆ. ಅದೊಂದು ವಿಷಯವೇ ಅಲ್ಲ ಎಂಬಂತಿರುವ ನಾಯಕರು ಹಾಗೂ ಸಾಮಾನ್ಯರ ನಡವಳಿಕೆಗಳು ಇನ್ನೂ ಗಾಬರಿ ಹುಟ್ಟಿಸುತ್ತವೆ. ಉನ್ನಾವೊ ಅತ್ಯಾಚಾರ ಸಂತ್ರಸ್ತೆಯ ಗುಡಿಸಲಿಗೆ ಬೆಂಕಿ ಹಾಕಿ ಎರಡು ಹಸುಳೆಗಳನ್ನು ಅವಳ ಎದುರಿಗೇ ಬೆಂಕಿಗೆ ಎಸೆಯುವ ಕ್ರೌರ್ಯದ ಕುಣಿತವು ಭಾರತೀಯರ ಮನಸ್ಸುಗಳನ್ನು ಕಲಕುವುದಿಲ್ಲ ಎಂದಾದರೆ, ಆ ಸಾಮೂಹಿಕ ಅತ್ಯಾಚಾರಿಗಳಿಗೆ ಜಾಮೀನು ಸಿಕ್ಕ ಬಗ್ಗೆ ಯಾರಿಗೂ ಖೇದ ಉಂಟಾಗುವುದಿಲ್ಲ ಎಂದಾದರೆ, ಇನ್ನು ಯಾವ ಮಾತಿನಿಂದ ಏನು ಪ್ರಯೋಜನ?

ಬಿಲ್ಕಿಸ್ ಬಾನು ಎದುರಿಗೇ ಅವಳ ಮಗುವನ್ನು ಕಲ್ಲಿನಿಂದ ಜಜ್ಜಿ ಕೊಂದು, ಅವಳ ಗ್ಯಾಂಗ್‌ರೇಪ್ ಮಾಡಿದವರನ್ನು 'ಸನ್ನಡತೆ' ಆಧಾರದಲ್ಲಿ ಬಿಡುಗಡೆ ಮಾಡಿದ್ದೂ ಅಲ್ಲದೆ, ಮಹಿಳೆಯರಿಂದ ಅವರ ಹಣೆಗೆ ತಿಲಕ ಇಡಿಸಿ, ಆರತಿ ಎತ್ತಿಸಿ ಅವರನ್ನು ಸ್ವಾಗತಿಸಿದ ದೃಶ್ಯವನ್ನೇ ಅರಗಿಸಿಕೊಳ್ಳಲಾಗದಿರುವ ಸನ್ನಿವೇಶದಲ್ಲಿ, ಈಗ ಮತ್ತೆ ಇಂತಹದೇ ದೃಶ್ಯಗಳು ಪುನರಾವರ್ತನೆಯಾಗುವುದು, ಮತ್ತೆ ಅವುಗಳನ್ನು ಮೌನವಾಗಿ ಪ್ರೋತ್ಸಾಹಿಸುವುದನ್ನು ಹೇಗೆ ಅರ್ಥೈಸಬೇಕು?

ಸಂತ್ರಸ್ತರಲ್ಲಿ ಒಬ್ಬಾಕೆ ಮುಸ್ಲಿಂ, ಇನ್ನೊಬ್ಬಾಕೆ ದಲಿತಳಾಗಿರುವುದರಿಂದ ಅವೆಲ್ಲಾ ಸ್ವೀಕೃತವಾಗಿ ಬಿಡುತ್ತವೆಯೇ? ದೇಶದಲ್ಲಿ ಬಹಳ ಸುದ್ದಿಯಾದ ಇನ್ನೆರಡು ಪ್ರಕರಣಗಳ ಜೊತೆಗೆ ಇವನ್ನು ಇಟ್ಟು ನೋಡಿದಾಗ, ಕಟು ವಾಸ್ತವದ ಸಂಗತಿಗಳು ಬಯಲಾಗುತ್ತವೆ. ನಿರ್ಭಯಾ ಪ್ರಕರಣದಲ್ಲಿ ದೇಶದಾದ್ಯಂತ ಪ್ರತಿಭಟನೆ ನಡೆದು ಅಪರಾಧಿಗಳಿಗೆ ಶಿಕ್ಷೆ ಆಯಿತು. ಅಪರಾಧಿಗಳಿಗೆ ಪ್ರಬಲ ರಾಜಕೀಯ ಹಿನ್ನೆಲೆ ಇರಲಿಲ್ಲ. ಹೈದರಾಬಾದ್ ಪ್ರಕರಣದಲ್ಲಿಯೂ ಪ್ರತಿಭಟನೆಗಳು ನಡೆದವು. ಎನ್‌ಕೌಂಟರ್‌ನಲ್ಲಿ ಅಪರಾಧಿಗಳ ಸಾವು ಆಯಿತು. ಇವರಿಗೂ ಪ್ರಬಲ ರಾಜಕೀಯ ಹಿನ್ನೆಲೆ ಇರಲಿಲ್ಲ. ಉನ್ನಾವೊ ಮತ್ತು ಕಟುವಾದದಲ್ಲಿ ನಡೆದ ಗ್ಯಾಂಗ್ ರೇಪ್‌ಗಳನ್ನು ಮುಚ್ಚಿಡಲು ಪ್ರಯತ್ನಿಸಲಾಯಿತು. ಎರಡೂ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಪ್ರಬಲ ರಾಜಕೀಯ ಹಿನ್ನೆಲೆ ಇದೆ.

ಉನ್ನಾವೊ ಪ್ರಕರಣದಲ್ಲಿ ಆರೋಪಿಗಳು ಕೇಸು ವಾಪಸ್ ತೆಗೆದುಕೊಳ್ಳುವಂತೆ ಸಂತ್ರಸ್ತೆಯನ್ನು ಬೆದರಿಸಿದರು. ಒಪ್ಪದಿದ್ದಾಗ ಆಕೆಯ ಶೆಡ್‌ಗೆ ಬೆಂಕಿ ಹಚ್ಚಿ, ಅವಳ ಮಗು ಹಾಗೂ ತಂಗಿ ಸೇರಿದಂತೆ ಎರಡು ಶಿಶುಗಳನ್ನು ಬೆಂಕಿಗೆ ಎಸೆಯಲಾಯಿತು. ಆದರೆ ಈ ಬಡ ದಲಿತಳು ಹಾಗೂ ಆ ಮುಸ್ಲಿಮಳ ಪರವಾಗಿ ದೇಶದಾದ್ಯಂತ ಪ್ರತಿಭಟನೆಗಳು ಆಗಲೇ ಇಲ್ಲ. ವಾಟ್ಸ್‌ಆ್ಯಪ್ ಗ್ರೂಪ್‌ಗಳು ಮೌನವಾಗಿದ್ದವು. ಇವರು ಭಾರತೀಯರೆಂದಾಗಲೀ ಮನುಷ್ಯರೆಂದಾಗಲೀ ಮಹಿಳೆಯರೆಂದಾಗಲೀ ಇದನ್ನು ಹೀಗೇ ಬಿಟ್ಟರೆ ಅಪರಾಧಿಗಳಿಗೆ ಕುಮ್ಮಕ್ಕು ಕೊಟ್ಟಂತಾಗುತ್ತದೆ ಎಂದಾಗಲೀ ಭಾರತೀಯರಿಗೆ ಅನ್ನಿಸದೇ ಇರುವುದೇಕೆ?

ಬೆರಳೆಣಿಕೆಯಲ್ಲಿ ಬಿಟ್ಟರೆ, ನಮ್ಮ ಮಹಿಳಾ ಸಂಸದರು, ಆಯಾ ರಾಜ್ಯಗಳ ಮಹಿಳಾ ರಾಜಕಾರಣಿಗಳು ಈ ಬಗ್ಗೆ ತೀವ್ರವಾಗಿ ಪ್ರತಿರೋಧ ತೋರಲಿಲ್ಲ. ಯಾಕೆ? ನಮ್ಮಲ್ಲಿ ರಾಜಕೀಯ ಪ್ರಜ್ಞೆ ಬಹಳ ಕಡಿಮೆ ಇರುವುದನ್ನು ಇದು ತೋರಿಸುತ್ತದೆ. ಈ ಕಾರಣದಿಂದ, ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಬೇಕಾದ ಅವಶ್ಯಕತೆ ಇದೆ. ಈ ಮಾತುಗಳು ವೈರುಧ್ಯವೆನಿಸಬಹುದು. ಮಹಿಳಾ ಪ್ರಾತಿನಿಧ್ಯ ಹೆಚ್ಚಾಗುವುದೆಂದರೆ ಅಧಿಕಾರಕ್ಕಾಗಿ ಹೆಂಗಸರೂ ಹಪಹಪಿ ತೋರುವುದು ಎಂಬ ತಪ್ಪು ಅಭಿಪ್ರಾಯವೂ ಬರಬಹುದು. ಇದು ಅಷ್ಟು ಸರಳ ಸಂಗತಿಯಲ್ಲ.

ಮಹಿಳೆಯ ಮೇಲಿನ ದೌರ್ಜನ್ಯ ಕಡಿಮೆಯಾಗಬೇಕೆಂದರೆ ಮೊದಲ ಹೆಜ್ಜೆಯಾಗಿ ಈ ಪ್ರಾತಿನಿಧ್ಯದ ಅವಶ್ಯಕತೆ ಇದೆ. ಆದರೆ ಮುಂದುವರಿದ ಹಂತದಲ್ಲಿ ಅತಿ ಮುಖ್ಯವಾಗಿ ಬೇಕಿರುವುದು ಎಲ್ಲಾ ರೀತಿಯ ದೌರ್ಜನ್ಯಗಳನ್ನು ವಿರೋಧಿಸಬೇಕೆಂಬ ಜಾಗೃತಿ. ಒಂದೆಡೆ, ಜೇನಿನಂತಹ ಮಾತುಗಳನ್ನು ಹೆಣ್ಣುಮಕ್ಕಳ ಬಗೆಗೆ ಹೇಳುತ್ತಾ, ಇನ್ನೊಂದೆಡೆ, ಇಂತಹ ಪೈಶಾಚಿಕ ಕೃತ್ಯಗಳಿಗೆ ಮೂಕರೂ ಕಿವುಡರೂ ಕುರುಡರೂ ಆಗುವವರು ನಾಯಕರಿಂದ ಸಾಮಾನ್ಯರವರೆಗೆ ತುಂಬಿತುಳುಕುತ್ತಿದ್ದಾರೆ. ಬೆರಳೆಣಿಕೆಯಷ್ಟು ಇರುವ ಮಹಿಳಾ ಪ್ರತಿನಿಧಿಗಳು ಒಂದೋ ತಾವು ಜೈವಿಕವಾಗಿ ಹೆಂಗಸರಾದರೂ ಮಾನಸಿಕವಾಗಿ ಗಂಡಾಳಿಕೆಯನ್ನು ಬೆಂಬಲಿಸುವವರಾಗಿರುತ್ತಾರೆ. ಇಲ್ಲವೇ ರಾಜಕಾರಣದಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಈ ನಾಯಕರ ಬಾಲಂಗೋಚಿಗಳಾಗಿ ಬಾಯಿಮುಚ್ಚಿಕೊಂಡಿರುತ್ತಾರೆ. ಇದರೊಂದಿಗೆ ಮಹಿಳೆಯರಿಗೆ ಬಲಿಷ್ಠವಾದ ಆರ್ಥಿಕ, ಸಾಮಾಜಿಕ, ರಾಜಕೀಯ ನೆಲೆ ಇಲ್ಲದಿರುವುದೂ ಅವರು ಅಸಹಾಯಕರಾಗಲು ಕಾರಣವಾಗಿರುತ್ತದೆ. ಅವರು ದಿಟ್ಟವಾಗಿ ಮಾತಾಡುವಂತಾಗ ಬೇಕೆಂದರೆ, ಎಲ್ಲ ಹಂತಗಳಲ್ಲಿ ಶೇ 50ರಷ್ಟು ರಾಜಕೀಯ ಮೀಸಲಾತಿ ಬರುವುದು ಅನಿವಾರ್ಯ.

ಕೆಲವನ್ನು ಶಾಸನದ ಮೂಲಕವೇ ಅಭ್ಯಾಸ ಮಾಡಿಸಬೇಕು ಮತ್ತೆ ಅವು ಪ್ರಾಯೋಗಿಕವಾಗಿ ಯಶಸ್ಸನ್ನೂ ಪಡೆಯುತ್ತವೆ. ಇದು ಬರೀ ಕನಸಿನ ಮಾತಲ್ಲ. ಇದು ನನಸಾದ ಒಂದು ಉದಾಹರಣೆಯನ್ನು ನಿಮ್ಮ ಮುಂದಿಡಬಯಸುತ್ತೇನೆ. 'ಗಂಡ ಹೆಂಡತಿ ಇಬ್ಬರೂ ವೈದ್ಯರು. ಬೆಳಗ್ಗೆ ಕಣ್ಣುಜ್ಜಿ ನಾನು ಹೊರಬರುವ ವೇಳೆಗೆ ಅಡುಗೆ ಮನೆಯಲ್ಲಿ ಡಾ. ಗುಸ್ತೋ ಮ್ಯಾನ್ಯುಯೆಲ್ ಸೊಂಟಕ್ಕೆ ಏಪ್ರನ್ ಕಟ್ಟಿಕೊಂಡು ಕಚಕಚ ಮಾಂಸ ಕತ್ತರಿಸಿ, ಮೊಟ್ಟೆ ಹುರಿದು ಮುಗಿಸಿ ಪಾತ್ರೆ ತೊಳೆಯುತ್ತಾ ನಿಂತಿರುತ್ತಿದ್ದರು. ಉತ್ಸವದ ಕಲಾಪ ಮುಗಿಸಿ ಸಂಜೆ ನಾನು ಮನೆಗೆ ಬಂದಾಗ ಪುನಃ ಅದೇ ಕೆಲಸ. ಆದರೆ ಈ ಬಾರಿ ಗುಸ್ತೋ ಜಾಗದಲ್ಲಿ ಡಾ. ಓಲಿವಾ ರೊಮಿರೋ. ಈ ದೃಶ್ಯ ನಾನಿದ್ದ ಮನೆಯ ಎದುರಿಗಿದ್ದ ಶಿಕ್ಷಕ ದಂಪತಿಯ ಮನೆಯಲ್ಲಿ, ಪಕ್ಕದಲ್ಲಿದ್ದ ಮತ್ತೊಬ್ಬ ವೈದ್ಯ ದಂಪತಿಯ ಮನೆಯಲ್ಲಿ, ಹೀಗೆ ಎಲ್ಲ ಮನೆಗಳಲ್ಲಿ ನಡೆಯುತ್ತಿದ್ದ ನಿತ್ಯಯಾತ್ರೆ'.

'ಬೆಳಗ್ಗೆ ಕಚೇರಿಗೆ ಹೋಗುವವರೆಗೆ ಗಂಡ ಅಡುಗೆ ಮನೆಯಿಂದ ಆರಂಭಿಸಿ ಎಲ್ಲಾ ಕೆಲಸಗಳ ಉಸ್ತುವಾರಿ ನೋಡಿಕೊಂಡರೆ, ಪುಟ್ಟ ಮಕ್ಕಳನ್ನು ಕರೆದುಕೊಂಡು ಬಾಲವಾಡಿ, ಶಾಲೆಗಳಿಗೆ ಮುಟ್ಟಿಸಿ ಹೋಗುತ್ತಿದ್ದ ಹೆಂಡತಿ ಕಚೇರಿಯಿಂದ ಬಂದ ನಂತರ ಈ ಕೆಲಸಗಳನ್ನು ತಾನು ಕೈಗೆತ್ತಿಕೊಳ್ಳುತ್ತಿದ್ದಳು. ಇದನ್ನೇ ಫಿಡೆಲ್ ಕ್ಯಾಸ್ಟ್ರೋ 'ಕ್ರಾಂತಿಯೊಳಗಿನ ಕ್ರಾಂತಿ' ಎಂದು ಬಣ್ಣಿಸಿದ್ದಾರೆ'. (ನನ್ನೊಳಗಿನ ಹಾಡು ಕ್ಯೂಬಾ: ಜಿ.ಎನ್.ಮೋಹನ್).

ಇದು ಸುಮ್ಮನೇ ಆದದ್ದಲ್ಲ. ಅಲ್ಲಿನ ಸಂವಿಧಾನ ಹೆಣ್ಣಿಗೆ ಶಿಕ್ಷಣ, ಆರ್ಥಿಕತೆ, ರಾಜಕೀಯದಂತಹವುಗಳಲ್ಲಿ ಸಮಾನ ಹಕ್ಕು ನೀಡಿದೆ. ಮಾತ್ರವಲ್ಲ, ಕುಟುಂಬ ಕಾಯ್ದೆ-1975, ಮನೆಯ ಕರ್ತವ್ಯಗಳನ್ನು ಬಾಳಸಂಗಾತಿಯ ಜೊತೆಗೆ ಸಮಾನವಾಗಿ ಹಂಚಿಕೊಳ್ಳಲು ಕ್ಯೂಬಾದ ಮಹಿಳೆಗೆ ಅನುವು ಮಾಡಿಕೊಡುತ್ತದೆ. 2000ನೇ ಇಸವಿಯಲ್ಲಿ ಪಾರ್ಲಿಮೆಂಟ್‌ನಲ್ಲಿ ಶೇ 22.8ರಷ್ಟು ಇದ್ದ ಮಹಿಳಾ ಪ್ರಾತಿನಿಧ್ಯ 2015ರಲ್ಲಿ ಶೇ 53ರಷ್ಟು ಆಗಿದ್ದು, ಜಾಗತಿಕವಾಗಿ ಕ್ಯೂಬಾ ಎರಡನೆಯ ಸ್ಥಾನದಲ್ಲಿದೆ. ಇಂತಹ ಬೆಳವಣಿಗೆಯಿಂದ ಮಹಿಳೆ ತನ್ನದಲ್ಲದ ಕಾರಣಗಳಿಗಾಗಿ ಕೊಲೆಯಾಗುವ ಬರ್ಬರತೆಯಿಂದ, ಅಸಹಾಯಕತೆಯಿಂದ ಪಾರಾಗುವ ಸಾಧ್ಯತೆ ಹೆಚ್ಚುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ನಿರಾಳವಾಗಿ ಕೊಡುಗೆ ನೀಡುತ್ತಾ ದೇಶ ಕಟ್ಟುವ ಭಾಗೀದಾರಳಾಗಲು ಅನುವು ಮಾಡಿಕೊಡುತ್ತದೆ.

ಇದು ಒಂದು ಹಂತ ಮಾತ್ರ. ಈ ಪ್ರತಿನಿಧಿಗಳು ಅಧಿಕಾರಕ್ಕಾಗಿ ಏನು ಬೇಕಾದರೂ ಉಲಿವ ಗಿಣಿಗಳೂ ಕುಣಿವ ಕೆಂಬೂತಗಳೂ ಆದರೆ ಆಗ ಇದೂ ವ್ಯರ್ಥವೇ. ಹಾಗಂತ ಪ್ರಜಾಪ್ರಭುತ್ವದಲ್ಲಿ ಮತ್ತು ಪ್ರಜಾಪ್ರಭುತ್ವವಲ್ಲದೆ ಸದ್ಯಕ್ಕೆ ಬೇರೆ ಆಯ್ಕೆಗಳಿಲ್ಲವಾದ್ದರಿಂದ ಇದರಲ್ಲೇ ಮನುಷ್ಯತ್ವವನ್ನು ಹುಡುಕಬೇಕಾಗಿದೆ.

ಚುರುಮುರಿ

ಹುಲಿ ಕಾಳಗ

• ಸಿ.ಎನ್.ರಾಜು

'ಹುಬ್ಬಳ್ಳಿ ಹುಲಿ ಗೆಲ್ಲುವುದಿಲ್ಲ, ಇದನ್ನು ರಕ್ತದಲ್ಲೇ ಬರೆದುಕೊಡುತ್ತೇನೆ. ಆ ಹುಲಿಯನ್ನು ಸೋಲಿಸಲು ನಾನು ಹೊಣೆ ಹೊತ್ತಿದ್ದೇನೆ ಎಂದು ರಾಜಾಹುಲಿ ಗರ್ಜಿಸಿದೆ...' ಟಿ.ವಿ. ನ್ಯೂಸ್ ಆಫ್ ಮಾಡಿ ಗಿರಿ ಹೇಳಿದ.

'ಕಮಲ ಬಳಗದಲ್ಲಿ ರಕ್ತಸಂಬಂಧಿಗಳಂತೆ ಕೂಡಿ ಬೆಳೆದ ರಾಜಾಹುಲಿ, ಹುಬ್ಬಳ್ಳಿ ಹುಲಿ ಎಲೆಕ್ಷನ್ ಕಾಳಗದಲ್ಲಿ ದಾಯಾದಿಗಳಂತಾಗಿ ಪರಸ್ಪರ ರಕ್ತ ಕುದಿಯುವ ರೀತಿಯಲ್ಲಿ ಆರೋಪ ಮಾಡುತ್ತಿದ್ದಾರೆ, ಸ್ನೇಹ ಸಂಬಂಧಕ್ಕೆ ಬೆಲೆಯೇ ಇಲ್ಲ ಛೇ...' ಎಂದಳು ಅನು.

'ಚುನಾವಣಾ ಸಮರದಲ್ಲಿ ಸಂಬಂಧಗಳಿಗೆ ಬೆಲೆ ಇಲ್ಲ, ಗೆಲುವೊಂದೇ ಗುರಿ. ಜೋಡೆತ್ತಿನಂತೆ ದುಡಿದು ಕಮಲ ಬಳಗ ಕಟ್ಟಿ ರಾಜ್ಯಭಾರ, ಪಕ್ಷ ಭಾರ ನಿಭಾಯಿಸಿದ ಇವರು ಈಗ ಎದುರಾಳಿಗಳಾಗಿರುವುದು ವಿಧಿಲಿಖಿತ'.

'ಇಷ್ಟು ವರ್ಷ ದುಡಿದು ದಣಿದಿರುವಿರಿ, ಇನ್ನುಮುಂದೆ ವಿಶ್ರಾಂತ ಜೀವನ ನಡೆಸುತ್ತಾ ಕಮಲ ಬಳಗದ ಹಿರಿಯರಾಗಿ ಕಿರಿಯರಿಗೆ ಪಕ್ಷ ಪಾಠ ಹೇಳಿಕೊಂಡು ಸಂಸಾರ ಮುನ್ನಡೆಸಿ ಎಂಬ ಕಮಲಾಧಿಪತಿಗಳ ಸೂಚನೆಯನ್ನು ಹುಬ್ಬಳ್ಳಿ ಹುಲಿ ಧಿಕ್ಕರಿಸಿದರು. ಸಂಸಾರ ಆಳುವ ಶಕ್ತಿ ಸಾಮರ್ಥ್ಯ ಇನ್ನೂ ಉಳಿದಿದೆ, ಮನೆಯಲ್ಲೇ ಉಳಿದು ಮೊಮ್ಮಕ್ಕಳಿಗೆ ಎಬಿಸಿಡಿ ಪಾಠ ಹೇಳಲಾರೆ ಎಂದರಂತೆ'.

'ಇದೇ ಕಾರಣಕ್ಕೆ ಕುಟುಂಬಕಲಹವಾಗಿ ಹುಬ್ಬಳ್ಳಿ ಹುಲಿಯು ಕಮಲ ಸಂಸಾರ ತೊರೆದು ಕೈ ಕುಟುಂಬ ಸೇರಿ ಹೊಸ ಬದುಕು ರೂಪಿಸಿಕೊಳ್ಳುವ ಹಂತದಲ್ಲೇ ಕಮಲಪತಿಗಳು ಹುಬ್ಬಳ್ಳಿ ಹುಲಿಯ ಸೊಕ್ಕು ಮುರಿಯಲು ರಾಜಾಹುಲಿಗೆ ಸುಪಾರಿ ಕೊಟ್ಟಿದ್ದಾರಂತೆ'.

'ಗುಲಾಮಗಿರಿಯಲ್ಲಿ ಬಾಳಲಾಗದೆ ಮನೆ ತೊರೆದಿದ್ದೇನೆ. ಇದರ ಹೊರತಾಗಿ ನಾನು ಮಾಡಿದ ಪಾಪವೇನು? ಲೋಪವೇನು? ಬಡಪಾಯಿ ಮೇಲೆ ಬ್ರಹ್ಮಾಸ್ತ್ರ ಸರಿಯೇ ಎಂದು ಹುಬ್ಬಳ್ಳಿ ಹುಲಿ ಕಮಲಪತಿಗಳ ವಿರುದ್ಧ ಕಿಡಿಕಾರಿದ್ದಾರೆ'.

'ಏನೂ ಮಾಡಲಾಗುವುದಿಲ್ಲ, ಎಲ್ಲವೂ ದೆಹಲಿ ದೇವರ ಲೀಲೆ, ಅವರು ಆಡಿಸಿದಂತೆ ಆಡಬೇಕಷ್ಟೇ...' ಎಂದ ಗಿರಿ.

ಸಂಗತ

ನೃತ್ಯ ಪರೀಕ್ಷೆ: ಸುಧಾರಣೆ ಸಾಧ್ಯವೇ?

ನೃತ್ಯ, ಸಂಗೀತ ಪರೀಕ್ಷೆಗಳು ಶೈಕ್ಷಣಿಕ ಶಾಲಾ ಪರೀಕ್ಷೆಗಳಿಗಿಂತ ಭಿನ್ನ

• ಡಾ. ಕೆ.ಎಸ್.ಪವಿತ್ರ

ವಿಶ್ವ ನೃತ್ಯ ದಿನದ (ಏ. 29) ಸಂದರ್ಭದಲ್ಲಿಯೇ ಕರ್ನಾಟಕದ ನೃತ್ಯ ಜಗತ್ತಿನಲ್ಲಿ ಬಹುದಿನಗಳ ನಂತರ ಹೊಸತೊಂದು ಸಂಭವಿಸಿದೆ! ನೃತ್ಯ, ಸಂಗೀತ, ತಾಳವಾದ್ಯಗಳಿಗೆ ಸಂಬಂಧಿಸಿದ ವಿಶೇಷ ಪರೀಕ್ಷೆಗಳ ನಿರ್ವಹಣೆಯ ಹೊಣೆಯನ್ನು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲಾಗಿದೆ. ಈ ಹಿಂದೆಯೂ ಈ ವರ್ಗಾವಣೆ ನಡೆದಿತ್ತು! ಆಗ ವಿಶ್ವವಿದ್ಯಾಲಯ ಆ ಹೊಣೆಗಾರಿಕೆಯನ್ನು ಒಪ್ಪದೆ, ಮಂಡಳಿಯೂ ಹೊಣೆ ಹೊರಲು ನಿರಾಕರಿಸಿ, ಒಂದು ವರ್ಷ ಪರೀಕ್ಷೆಗಳೇ ನಡೆಯದೆ, ಆಮೇಲೆ 'ಮೇ'ಯಲ್ಲಿ ನಡೆಯಬೇಕಿದ್ದ ಪರೀಕ್ಷೆ ಒಂದೂವರೆ ವರ್ಷದಷ್ಟು ತಡವಾಗಿ ಅಕ್ಟೋಬರ್‌ನಲ್ಲಿ ನಡೆದಿತ್ತು. ಈಗ ವಿಶ್ವವಿದ್ಯಾಲಯ ತೆರೆದ ಕೈಗಳಿಂದ ಪರೀಕ್ಷೆಯ ಜವಾಬ್ದಾರಿ ಹೊರಲು ಸಿದ್ಧವಾಗಿರುವುದು ಸ್ವಾಗತಾರ್ಹ ಮತ್ತು ಅಚ್ಚರಿಯ ಬೆಳವಣಿಗೆಯೇ.

ಆದರೆ ಹೀಗೆ ನಿರ್ವಹಣೆಯ ಹೊಣೆಯನ್ನು ವರ್ಗಾಯಿಸಿದ ಮಾತ್ರಕ್ಕೆ ಪರೀಕ್ಷಾ ಕ್ರಮದಲ್ಲಿ ಸುಧಾರಣೆ ಸುಲಭ ಸಾಧ್ಯವೆಂದು ಹೇಳಲು ಬರುವಂತಿಲ್ಲ. ಅದರ ಕಾರಣಗಳನ್ನು ಹುಡುಕಲು, ಇರುವ ಅಡ್ಡಿಗಳನ್ನು ಸರಿಪಡಿಸಲು ನಡೆಯಬೇಕಾದ ಚರ್ಚೆ, ಅಧ್ಯಯನ ಅಪಾರ. ನೃತ್ಯ, ಸಂಗೀತ ಪರೀಕ್ಷೆಗಳು ನಾವು 'ಬಹುಮುಖ್ಯ' ಎಂದು ಭಾವಿಸುವ 'ಶೈಕ್ಷಣಿಕ' ಶಾಲಾ ಪರೀಕ್ಷೆಗಳಿಗಿಂತ ಭಿನ್ನ. ಹತ್ತು ವರ್ಷ ವಯಸ್ಸು ದಾಟಿದ ಯಾರೂ ಜೂನಿಯರ್ ಪರೀಕ್ಷೆ ತೆಗೆದುಕೊಳ್ಳಬಹುದು. ಹತ್ತು ವರ್ಷದಿಂದ 60 ವರ್ಷದವರೆಗಿನ ಅಭ್ಯರ್ಥಿಗಳು ಒಂದೇ ಶಾಸ್ತ್ರ (ಥಿಯರಿ) ಪ್ರಶ್ನೆಪತ್ರಿಕೆ, ಪ್ರಯೋಗ (ಪ್ರ್ಯಾಕ್ಟಿಕಲ್) ಪರೀಕ್ಷೆಗಳಲ್ಲಿ ಭಾಗಿಯಾಗುತ್ತಾರೆ. ನಾವು ಇವುಗಳನ್ನು 'ವಿಶೇಷ' ಎಂದು ಭಾವಿಸುವುದು ಬರೀ ಈ ಅಂಶದಿಂದಷ್ಟೇ ಅಲ್ಲ!

ಸಾಮಾನ್ಯವಾಗಿ ಇಡೀ ವರ್ಷ ಓದಿ, ಆಗಾಗ್ಗೆ ಕಿರುಪರೀಕ್ಷೆ ಬರೆದು, ಶಾಲೆಯಲ್ಲಿ ಮಾರ್ಚ್ ತಿಂಗಳಲ್ಲಿ ದೊಡ್ಡ ಪರೀಕ್ಷೆ ಬರೆದರೆ, ಇಲ್ಲಿ ಹಾಗಲ್ಲ. ವಾರಕ್ಕೆ ಎರಡೇ ತರಗತಿ, ಅದೂ ಹೆಚ್ಚೆಂದರೆ ಒಂದು ಗಂಟೆ ಬಂದು, ಮಧ್ಯೆ ಮಧ್ಯೆ ತಪ್ಪಿಸಿ, ಹೇಗೋ ಶಾಸ್ತ್ರ ಉರು ಹೊಡೆದು, ಮೇ ತಿಂಗಳಲ್ಲಿ ಗುರು-ಶಿಷ್ಯ ಇಬ್ಬರೂ ಗಂಟೆಗಟ್ಟಲೆ 'ಸಾಧನೆ' ಮಾಡಿ ಒಮ್ಮೆಲೇ ಪರೀಕ್ಷೆ ಎದುರಿಸಬೇಕು. ಇದು 'ವಿಶೇಷ'ವೇ ಅಲ್ಲವೇ? ನೃತ್ಯ ಕ್ಷೇತ್ರದಲ್ಲಿಯಂತೂ ಪಕ್ಕವಾದ್ಯ, ಹಾಡುಗಾರಿಕೆಯನ್ನೂ ಅಭ್ಯರ್ಥಿ ಒದಗಿಸಿಕೊಳ್ಳದೆ ವಿಧಿಯಿಲ್ಲ. ಆದ್ದರಿಂದ ಪರೀಕ್ಷೆ ಎಂದರೆ ಬಹಳಷ್ಟು ಖರ್ಚಿನ ಬಾಬತ್ತೇ. ಆದರೂ ಶೈಕ್ಷಣಿಕ ಟ್ಯೂಷನ್‌ಗಳು, ಶಾಲೆಗಳಿಗೆ ನಾವು ಸುರಿಯುವಷ್ಟು ಖರ್ಚಲ್ಲ!

ನೃತ್ಯ, ಸಂಗೀತ, ತಾಳವಾದ್ಯ ಪ್ರದರ್ಶನ ಕಲೆಗಳಷ್ಟೆ. ಹಾಗಾಗಿ ಬರೀ ಶಾಸ್ತ್ರ ಬಂದರೆ ಸಾಲದು. ಪ್ರಾಯೋಗಿಕ ಪ್ರದರ್ಶನವೇ ಇಲ್ಲಿ ಮಹತ್ವದ್ದು. ಹಾಗೆ ಪ್ರಾಯೋಗಿಕ ಪರೀಕ್ಷೆ ಮಾಡುವ ಪರೀಕ್ಷಾ ಮಂಡಳಿಯಲ್ಲಿ ಇರುವ ಪರೀಕ್ಷಕರು ಹಾಗೂ ಅಭ್ಯರ್ಥಿಯ ಕಲಿಕೆಯ ರೀತಿಯಲ್ಲಿ ವ್ಯತ್ಯಾಸಗಳಿರಲು ಸಾಧ್ಯವಿದೆ. ಹಲವು ವಿಧದ, ಸರಿಯೇ ಆದ ಕಲಿಸುವ ಕ್ರಮಗಳಿರಲು ಸಾಧ್ಯ ಎಂಬ ವಿಶಾಲ ಮನೋಭಾವ ಎಲ್ಲ ಶಿಕ್ಷಕರಿಗೆ ಇರುವ ಸಾಧ್ಯತೆ ಇಲ್ಲ. ಹಾಗಾಗಿ, ಸಂಗೀತ, ನೃತ್ಯ ಪರೀಕ್ಷೆಗಳಲ್ಲಿ ಗೊಂದಲ, ದೂರು ಸಾಮಾನ್ಯ.

ಪರೀಕ್ಷಾ ಮಂಡಳಿ ಇತ್ತೀಚಿನವರೆಗೆ, ಅಂದರೆ ಈ ವರ್ಷದ ಜನವರಿವರೆಗೆ ಪಾಲಿಸಿಕೊಂಡು ಬಂದಿರುವ ಪಠ್ಯಕ್ರಮ ರೂಪುಗೊಂಡದ್ದು 1994ರಲ್ಲಿ. ಅಂದರೆ ಬರೋಬ್ಬರಿ 29 ವರ್ಷಗಳ ಹಿಂದೆ! ನೃತ್ಯ, ಸಂಗೀತ ಕ್ಷೇತ್ರಗಳಲ್ಲಿ ನಡೆದಿರಬಹುದಾದ ಹೊಸ ಅಧ್ಯಯನ, ಪ್ರಯೋಗಾತ್ಮಕತೆ, ಸಂಶೋಧನೆ ಯಾವುದನ್ನೂ ಅಳವಡಿಸುವ ಪ್ರಯತ್ನವೇ ನಡೆದಿಲ್ಲ ಅಥವಾ ಪ್ರಾಥಮಿಕ ಹಂತದ 10 ವರ್ಷ ವಯಸ್ಸಿನ ಅಭ್ಯರ್ಥಿಗೆ, 'ಕಷ್ಟ' ಎನಿಸಬಲ್ಲ ಪ್ರಶ್ನೆಪತ್ರಿಕೆ, ಸೀನಿಯರ್ ಹಂತಕ್ಕೆ ಸುಮಾರು 13-14ರ ವಯಸ್ಸಿಗೆ, ವಿದ್ವತ್‌ಪೂರ್ವ ಹಂತಕ್ಕೆ 'ಕಡಿಮೆ ಗುಣಮಟ್ಟ'ದ, 'ಪರೀಕ್ಷೆ ತೆಗೆದುಕೊಂಡರೆ ಪಾಸೇ ಆಗುವ' ಸಾಧ್ಯತೆಯಾಗಿ ಬದಲಾಗಿಬಿಡುತ್ತದೆ. ಅಂದರೆ ಯಾವುದೇ ಪಠ್ಯಕ್ರಮ, ಪರೀಕ್ಷಾ ಕ್ರಮ ಜಾರಿಗೆ ಬಂದ ಸುಮಾರು ಹತ್ತು ವರ್ಷಗಳ ನಂತರ ಅದರ ಮೌಲ್ಯಮಾಪನ ನಡೆಯಬೇಕಾದ ಅಗತ್ಯವನ್ನು ಎತ್ತಿ ತೋರುತ್ತದೆ.

ಪಠ್ಯಕ್ರಮದ ಬಗ್ಗೆ ಗಮನವನ್ನೇ ಹಾಯಿಸದ ಆಡಳಿತ ವ್ಯವಸ್ಥೆ, ನಿಯಮಗಳನ್ನು ಮಾತ್ರ ಮನಬಂದಂತೆ ಆಗಾಗ್ಗೆ ಬದಲಿಸುತ್ತಾ ಬಂದಿದೆ! ಇಡೀ ಕೇಂದ್ರಕ್ಕೆ ಒಬ್ಬರೇ ಮೃದಂಗದವರು, ಇಬ್ಬರೇ ಹಾಡುವವರು ಎಂದು ಗೋಗರೆದರೂ, 'ಅದು ನಮ್ಮ ತಲೆನೋವಲ್ಲ, ಬೇಕಾದರೆ ಪರೀಕ್ಷೆ ಕಟ್ಟಿ' ಎಂದು ತಿರಸ್ಕರಿಸಲಾಗುತ್ತದೆ. ನೇರವಾಗಿ ಸೀನಿಯರ್ ಕಟ್ಟಬಹುದು, ಜೂನಿಯರ್ ಮಾಡಿಯೇ ಕಟ್ಟಬೇಕು ಇಂಥ ಗೊಂದಲಗಳು ಆಗಾಗ ಬದಲಾಗುತ್ತಲೇ ಇವೆ. ಪ್ರಶ್ನೆಪತ್ರಿಕೆಗಳಲ್ಲಿಯೂ ಜ್ಞಾನದ ಬದಲು ಬರೀ ಬರಹದ ಕೌಶಲವನ್ನು ಪರೀಕ್ಷಿಸುವಂತೆ ಪ್ರಶ್ನೆಗಳು ಬಂದ ಉದಾಹರಣೆಗಳು ಬಹಳಷ್ಟು.

100- 150 ಪುಟಗಳ ಜೂನಿಯರ್ ಸಂಗೀತ ಪರೀಕ್ಷೆಯ ಪಠ್ಯಪುಸ್ತಕದಲ್ಲಿರುವ ಜೀವನಚರಿತ್ರೆಗೆ, ಒಂದು ಪ್ರಶ್ನೆಗೆ 15 ಅಂಕಗಳು. ಈ ರೀತಿ ಸುಮಾರು 4 ಪ್ರಶ್ನೆಗಳು. ಮಕ್ಕಳ ಜ್ಞಾನ ಪರೀಕ್ಷಿಸುವ ಒಂದು ಅಂಕದ ಪ್ರಶ್ನೆಗಳು ಬರೀ 20! ಮೂರು ಹಿಂದೂಸ್ತಾನಿ ಸಂಗೀತ ವಾದ್ಯ ಹೆಸರಿಸಿ ಎಂಬ ಪ್ರಶ್ನೆಗೆ 15 ಅಂಕ! 10 ವರ್ಷದ ವಿದ್ಯಾರ್ಥಿಗಳು ಮೂರು ಹೆಸರು ಬರೆದಿಟ್ಟು ಬಂದರೆ, 19 ವರ್ಷದ ವಿದ್ಯಾರ್ಥಿಗಳು ಅದೇ ಪತ್ರಿಕೆಗೆ ಮೂರೂ ವಾದ್ಯಗಳ ಚಿತ್ರ, ರಚನಾ ಕ್ರಮ ಬರೆದಿಡುವ ಪರಿಸ್ಥಿತಿ! ಇದರ ಬಗ್ಗೆ ಮಂಡಳಿಯ ಗಮನ ಸೆಳೆದರೆ ಬರುವ ಉತ್ತರ 'ಬ್ಲೂ ಪ್ರಿಂಟ್ ಇರುವುದೇ ಹಾಗೆ!'

ಕಲಿಕೆಯ ಗುಣಮಟ್ಟವನ್ನು ವರ್ಧಿಸದ ಪರೀಕ್ಷಾ ಕ್ರಮದಿಂದ ಸಂಪನ್ಮೂಲಗಳ ವೃಥಾ ವ್ಯಯ! ಹಿಂದಿನಂತೆ ನಿರಾಕರಿಸದೆ ಪರೀಕ್ಷೆಗಳ ನಿರ್ವಹಣೆಯ ಹೊಣೆಯನ್ನು ಮಂಡಳಿಯಿಂದ ವಿಶ್ವವಿದ್ಯಾಲಯ ಎತ್ತಿಕೊಂಡಿದೆ. ಪಠ್ಯಕ್ರಮದ ಪರಿಷ್ಕರಣೆ, ಪರೀಕ್ಷಾ ಕ್ರಮದ ಸುಧಾರಣೆಗಳೂ ಬಹುಕಾಲದ ನಂತರ ಸಾಧ್ಯವಾಗಬಹುದೇ?! ಕಾದು ನೋಡಬೇಕಾಗಿದೆ.

ವಾಚಕರ ವಾಣಿ

ಭ್ರಾತೃತ್ವದ ಮೌಲ್ಯ ಹುರಿಗೊಂಡ ಸಹಜ ಬದುಕು

'ಕಾಂಗ್ರೆಸ್ ಗೆದ್ದರೆ ಕರ್ನಾಟಕದಲ್ಲಿ ಗಲಭೆಗಳು ಉಂಟಾಗುತ್ತವೆ' ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ಅವರಿಗೆ ಮತ್ತು ಅವರ ಸ್ಥಾನಕ್ಕೆ ಶೋಭೆ ತರುವಂಥದ್ದಲ್ಲ. ಒಂದು, ಅವರಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸುಳಿವು ಸಿಕ್ಕಿರಬಹುದು. ಇಲ್ಲ, ಮತ ಬೇಟೆಗೆಂದೇ ಹಾಗೆ ಅವರು ಹೇಳಿರಬಹುದು. ಆದರೆ ಅದು ಕೈಗೂಡದು. ಆ ಬಗೆಯ ಹೇಳಿಕೆಗಳ ಕಾರ್ಯತಂತ್ರಕ್ಕೆ ಕರ್ನಾಟಕದ ಮತದಾರರು ಈಡಾಗುವುದಿಲ್ಲ. ಯಾಕೆಂದರೆ ಕರ್ನಾಟಕದ ಜನರು ಸಹಬಾಳ್ವೆಗೆ ಹೆಸರಾದವರು. ನಮ್ಮ ಸಾಮಾಜಿಕ, ಧಾರ್ಮಿಕ ಆಚರಣೆಗಳ ಸಂರಚನೆ ಸಹ ಹಾಸುಹೊಕ್ಕಾದ ಕೂಡು ಬದುಕಿನದ್ದೇ ಆಗಿದೆ. ಅದಕ್ಕೆ ಕಾರಣ ನಮ್ಮ ಸಮಾಜದ ಆಳದಲ್ಲಿ ಬೇರೂರಿರುವ ನೂರಾರು ವರ್ಷಗಳ ಶರಣ, ಸೂಫಿ ತತ್ವ, ಸಿದ್ಧಾಂತಗಳು ಹೇಳಿಕೊಟ್ಟ ದಟ್ಟ ಪರಂಪರೆಯೇ ಆಗಿದೆ. ಭ್ರಾತೃತ್ವದ ಮೌಲ್ಯಗಳು ನಮ್ಮ ಮಧ್ಯದಲ್ಲಿ ಹುರಿಗೊಂಡಿವೆ. ಅದೊಂದು ಕೂಡು ಸಂಸ್ಕೃತಿ.

ಇಲ್ಲಿ ಸಿದ್ಧಪ್ಪನ ಚಕ್ಕಡಿಗೆ ಕಾಶಿಮ್ ಎತ್ತುಗಳನ್ನು ಹೂಡಿ ಹೊಲ ಉಳುತ್ತಾನೆ. ಶಿವಕ್ಕನ ಅಡುಗೆಯನ್ನು ಜೈತುನಬಿ ಉಣಬಡಿಸುವಳು. ಗಂಗಾಳ ಆರೋಗ್ಯ ಹದಗೆಟ್ಟರೆ ರೋಜಿ ಶುಶ್ರೂಷೆಯಲ್ಲಿ ತೊಡಗುವಳು. ಇದು ಕನ್ನಡ ಮಣ್ಣಿನ ಸಹಜ ಬದುಕು.

ಡಾ. ಡಿ.ಎಸ್.ಚೌಗಲೆ, ಬೆಳಗಾವಿ

ಮಾಪನ ಪದ ಬಳಕೆ ಇರಲಿ

ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಆದರೆ ಅದೇ ಪ್ರಮಾಣದಲ್ಲಿ ಮೌಲ್ಯಗಳು ಕುಸಿಯುತ್ತಿವೆ. ಅಂಕಗಳನ್ನು ಪಡೆದ ರೀತಿಯಲ್ಲಿ ಮೌಲ್ಯಗಳನ್ನೂ ಕಾಪಾಡಿಕೊಂಡರೆ ಮಾತ್ರ ಜೀವನಕ್ಕೊಂದು ಅರ್ಥ. ಹೀಗಾಗಿ, ಉತ್ತರಪತ್ರಿಕೆಯ ಅಂಕಗಳಿಗೆ ಮೌಲ್ಯಮಾಪನ ಎಂಬುದಕ್ಕಿಂತ ಮಾಪನ ಎಂಬ ಪದ ಬಳಕೆಯೇ ಸರಿಯಾಗಿದೆ ಎನಿಸುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಈ ಮಟ್ಟಕ್ಕೆ ಇಳಿಯಿತೇ ರಾಜಕೀಯ ದ್ವೇಷ?

'ರಕ್ತದಲ್ಲಿ ಬರೆದುಕೊಡುತ್ತೇನೆ, ಜಗದೀಶ ಶೆಟ್ಟರ್ ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಮತ್ತು ಅವರನ್ನು ಸೋಲಿಸುವ ಹೊಣೆ ನನ್ನದು' ಎಂದು ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಹೇಳಿದರೆನ್ನುವ ಮಾತು ಮತ್ತು 'ನರೇಂದ್ರ ಮೋದಿಯವರು ವಿಷ ಸರ್ಪದಂತೆ' ಎಂಬ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯು ಪ್ರಜ್ಞಾವಂತರು ಮತ್ತು ಜನಸಾಮಾನ್ಯರು ಎಲ್ಲರಿಗೂ ದಿಗ್ಭ್ರಮೆ ಮೂಡಿಸಿವೆ. ರಾಜಕೀಯ ದ್ವೇಷ ಈ ಮಟ್ಟಕ್ಕೆ ಇಳಿಯಿತೇ ಎಂದು ಆಶ್ಚರ್ಯ ಪಡುವಂತೆ ಮಾಡಿವೆ. ತಾವು ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪನವರಿಂದ ನಿರೀಕ್ಷಿತ ಸಹಕಾರ ದೊರಕದಿದ್ದಾಗಲೂ ಶೆಟ್ಟರ್ ಅವರು ಎಂದೂ ಇಂತಹ ಹೇಳಿಕೆ ನೀಡಿರಲಿಲ್ಲ ಎನ್ನುವುದನ್ನು ಅವರು ನೆನಪಿನಲ್ಲಿ ಇಟ್ಟುಕೊಂಡಿರಬೇಕಿತ್ತು.

ಹಾಗೆಯೇ ಐದಾರು ದಶಕಗಳಿಂದ ರಾಜಕೀಯದಲ್ಲಿರುವ ಖರ್ಗೆಯವರು ತಮ್ಮ ರಾಜಕೀಯ ಎದುರಾಳಿ ಗಳನ್ನು ಟೀಕಿಸುವಾಗ, ಪದ ಬಳಕೆಯಲ್ಲಿ ಇನ್ನೂ ಹೆಚ್ಚಿನ ಸಂಯಮ ತೋರಬೇಕಿತ್ತು. ಅವರು, 'ನಾನು ಹೇಳಿರುವುದು ವೈಯಕ್ತಿಕವಾಗಿ ಮೋದಿ ಅವರನ್ನು ಉದ್ದೇಶಿಸಿ ಅಲ್ಲ. ಬದಲಾಗಿ ಅವರು ಪ್ರತಿನಿಧಿಸುವ ಸಿದ್ಧಾಂತದ ಕುರಿತಾಗಿ' ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ ಮಾತು ಒಮ್ಮೆ ಆಡಿದರೆ ಮುಗಿಯಿತು ಎನ್ನುವುದು ಗಮನದಲ್ಲಿ ಇಡಬೇಕಾದ ಅಂಶ.

ರಮಾನಂದ ಶರ್ಮಾ, ಬೆಂಗಳೂರು

'ತೆರೆಮರೆಯ ಕುಸ್ತಿ': ತನಿಖೆ ಚುರುಕಾಗಲಿ

'ಕುಸ್ತಿಪಟುಗಳು ಬೀದಿಗಿಳಿದು ಧರಣಿ ನಡೆಸುತ್ತಿರುವುದರಿಂದ ದೇಶಕ್ಕೆ ಕಳಂಕ' ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ.ಉಷಾ ಹೇಳಿದ್ದಾರೆ (ಪ್ರ.ವಾ., ಏ. 28). ಸಂಸದ, ಹಾಗೂ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿರುವ ಕುಸ್ತಿಪಟುಗಳು, ನ್ಯಾಯಕ್ಕಾಗಿ ಆಗ್ರಹಿಸಿ ಕೆಲವು ದಿನಗಳಿಂದ ಧರಣಿ ನಡೆಸಿದ್ದಾರೆ. ಇವರೆಲ್ಲ ದೇಶ ವಿದೇಶದಲ್ಲಿ ತಮ್ಮ ಕ್ರೀಡಾ ಸಾಧನೆಗಾಗಿ ಕೇಂದ್ರ ಸರ್ಕಾರದಿಂದ ಪುರಸ್ಕೃತರಾದವರು ಎಂಬುದನ್ನು ಗಮನಿಸಬೇಕು. ಜನವರಿಯಲ್ಲಿಯೇ ದೌರ್ಜನ್ಯಕ್ಕೆ ಸಂಬಂಧಿಸಿ ಧರಣಿ ನಡೆಸಿದ್ದರು. ಆಗ ಐಒಎ ಹಾಗೂ ಕೇಂದ್ರ ಕ್ರೀಡಾ ಸಚಿವಾಲಯವು ಕೆಲವು ಭರವಸೆಗಳನ್ನು ನೀಡುವ ಮೂಲಕ ಧರಣಿ ಕೈಬಿಡುವಂತೆ ಕುಸ್ತಿಪಟುಗಳ ಮನವೊಲಿಸಿದ್ದವು. ಅಷ್ಟಾಗಿಯೂ ಕ್ರಮ ಕೈಗೊಳ್ಳದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಧರಣಿ ನಡೆಸುತ್ತಿರುವುದು ನಮ್ಮ ದೇಶದಲ್ಲಿಯೇ ವಿನಾ ಹೊರದೇಶದಲ್ಲಿ ಅಲ್ಲ. ಹೀಗಾಗಿ, ಉಷಾ ಅವರು ಹೇಳಿರುವಂತೆ ದೇಶಕ್ಕೆ ಕಳಂಕ ಬರುವ ಪ್ರಶ್ನೆ ಉದ್ಭವಿಸುವುದಿಲ್ಲ.

ತನಿಖೆ ವಿಳಂಬ ಮಾಡಿದಷ್ಟೂ ಆರೋಪಿಗಳು ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇರುತ್ತದೆ. ಹೀಗಾಗಿ, ಉಷಾ ಅವರು ತ್ವರಿತ ತನಿಖೆಗೆ ಆಸಕ್ತಿ ತೋರಲಿ. ಇದರಿಂದ ದೇಶಕ್ಕೆ ಕಳಂಕವೋ ಸರ್ಕಾರಕ್ಕೆ ಕಳಂಕವೋ ಎಂಬುದು ದೇಶದ ಜನರ ಮುಂದೆ ಆದಷ್ಟು ಬೇಗ ಬರಲಿ. ಅಂತೂ ಇದೊಂದು, ಕುಸ್ತಿಪಟುಗಳು ಹಾಗೂ ಸರ್ಕಾರದ ನಡುವೆ ನಡೆಯುತ್ತಿರುವ ತೆರೆಮರೆಯ ಕುಸ್ತಿಯೇ ಸರಿ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಅಂಚೆ ಮತದಾನಕ್ಕೆ ಪರಿಗಣಿಸಿ

ಕರ್ನಾಟಕ ಹೈಕೋರ್ಟ್ ಹಾಗೂ ಅಧೀನ ನ್ಯಾಯಾಲಯಗಳಿಗೆ ಏಪ್ರಿಲ್, ಮೇ ತಿಂಗಳಿನಲ್ಲಿ ಬೇಸಿಗೆ ರಜೆ ಇರುತ್ತದೆ. ಸಾಮಾನ್ಯವಾಗಿ ಅಧೀನ ನ್ಯಾಯಾಲಯಗಳಲ್ಲಿ ಕೆಲಸ ನಿರ್ವಹಿಸುವವರು ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದಿರುತ್ತಾರೆ. ಇಂಥವರಿಗೆ ಅಂಚೆ ಮತದಾನ ಲಭ್ಯವಾಗದೇ ಇರುವುದರಿಂದ ಅವರು ಒಂದೇ ದಿನದಲ್ಲಿ ತಮ್ಮ ವಿಧಾನಸಭಾ ಕ್ಷೇತ್ರಕ್ಕೆ ಹೋಗಿ ಮತದಾನ ಮಾಡಿ ಬರುವುದು ಕಷ್ಟವಾಗುತ್ತದೆ. ಆದಕಾರಣ ಅಧೀನ ನ್ಯಾಯಾಲಯಗಳ ನೌಕರರನ್ನು ಅಂಚೆ ಮತದಾನದ ಅಡಿಯಲ್ಲಿ ತರುವ ಬಗ್ಗೆ ರಾಜ್ಯ ಚುನಾವಣಾ ಆಯೋಗವು ಗಮನಹರಿಸಬೇಕಾಗಿದೆ.

ವಿನಯ್ ಕೆ.ಎಲ್., ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿನಿ ಸಮ್ಮಾನ: ಟ್ರೋಫಿ ಅನಾವರಣ

ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಸಿನಿ ಸಮ್ಮಾನ' ಟ್ರೋಫಿ ಅನಾವರಣದಲ್ಲಿ ತಾಂತ್ರಿಕ ತೀರ್ಪುಗಾರರ ಮಂಡಳಿಯ ಸದಸ್ಯರು –ಪ್ರಜಾವಾಣಿ ಚಿತ್ರ

ಚಂದನವನ; ಹೆಸರಲ್ಲೇ ಗಂಧದ ಘಮಲಿದೆ. ಆ ಘಮಲನ್ನು ಹರಡಲು ಸಜ್ಜಾಗಿದೆ 'ಪ್ರಜಾವಾಣಿ'. ಪ್ರಜಾವಾಣಿ @75 ಸಂಭ್ರಮದ ಸಂದರ್ಭದಲ್ಲಿ ಚಂದನವನಕ್ಕೂ ಸಂಭ್ರಮ ಹಂಚುವ ಚೊಚ್ಚಲ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭಕ್ಕೆ ದಿನಗಣನೆ ಆರಂಭವಾಗಿದೆ.

ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿರುವ ಈ 'ಸಿನಿ ಸಮ್ಮಾನ'ದ ಟ್ರೋಫಿ ಹೇಗಿರಲಿದೆ ಎನ್ನುವ ಕುತೂಹಲಕ್ಕೆ ಶುಕ್ರವಾರ(ಏ.28) ತೆರೆಬಿದ್ದಿದೆ. 'ಸಿನಿ ಸಮ್ಮಾನ'ದ ಆಕರ್ಷಕ ಟ್ರೋಫಿಯ ಅನಾವರಣ ಬೆಂಗಳೂರಿನ ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಯಿತು.

ಕನ್ನಡ ಚಿತ್ರರಂಗದ ದಿಗ್ಗಜರಾದ ನಿರ್ದೇಶಕ ಗಿರೀಶ ಕಾಸರವಳ್ಳಿ, ಸ್ವರ ಸಂಯೋಜಕ ಹಂಸಲೇಖ, ನಿರ್ದೇಶಕಿ ಸುಮನಾ ಕಿತ್ತೂರು, ವಿಮರ್ಶಕ ಎನ್. ವಿದ್ಯಾಶಂಕರ್ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಟ್ರೋಫಿ ಅನಾವರಣಗೊಳಿಸಿದರು.

ಈ ವೇಳೆ ಮಾತನಾಡಿದ ಗಿರೀಶ ಕಾಸರವಳ್ಳಿ, 'ಪ್ರಜಾವಾಣಿ' ಮೊದಲಿನಿಂದಲೂ ಕನ್ನಡ ಸಿನಿಮಾದ ಜೀವಸೆಲೆಯಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಕೊರೊನಾ ಬಳಿಕ ಕನ್ನಡ ಚಿತ್ರರಂಗ ಚೇತರಿಸಿಕೊಳ್ಳುವುದೇ ಇಲ್ಲ ಎಂಬ ಸ್ಥಿತಿಯಲ್ಲಿದ್ದಾಗ, ಕಳೆದ ಒಂದು ವರ್ಷದಲ್ಲಿ ಅದ್ವಿತೀಯ ಎನ್ನಿಸುವಂತೆ ಕನ್ನಡ ಚಿತ್ರರಂಗ ಮತ್ತೆ ಪುಟಿದೆದ್ದು ಹೊಸ ಉತ್ಸಾಹ, ಹೊಸ ರಕ್ತದಿಂದ ವಿಜೃಂಭಿಸುತ್ತಿದೆ. ಅಂಥ ಸಂದರ್ಭದಲ್ಲಿ ಈ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿಯನ್ನು ಕೊಡುವ ಮೂಲಕ, ಕನ್ನಡ ಚಿತ್ರರಂಗಕ್ಕೆ ತೀರಾ ಅಗತ್ಯವಾದ ಪ್ರೋತ್ಸಾಹವನ್ನು ನೀಡಲಿದೆ ಎಂದು ನಂಬಿದ್ದೇನೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ನೆಲದ ಸೊಗಡನ್ನು, ಕನ್ನಡತನವನ್ನು ಕನ್ನಡ ಸಿನಿಮಾಗಳು ಕಟ್ಟಿಕೊಡುತ್ತಿರುವಾಗ, ಅವುಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿದೆ' ಎಂದು ಶ್ಲಾಘಿಸಿದರು.

'ಕನ್ನಡ ಚಿತ್ರರಂಗದೊಂದಿಗಿನ ಪ್ರಜಾವಾಣಿಯ ನಂಟು ಹಲವು ದಶಕಗಳದ್ದು. ತೆರೆ ಮುಂದೆ ಹಾಗೂ ತೆರೆಯ ಹಿಂದೆ ಕೆಲಸ ಮಾಡಿದವರತ್ತ ಪತ್ರಿಕೆ ಬೆಳಕು ಚೆಲ್ಲಿದೆ. ಕನ್ನಡ ಚಿತ್ರರಂಗಕ್ಕೆ 2022 ಅದ್ಭುತ ವರ್ಷವಾಗಿತ್ತು. ಆದರೆ ನಿರೀಕ್ಷಿತ ಗಮನ ಇದರತ್ತ ಹೊರಳಲಿಲ್ಲ. ಹೀಗಾಗಿ 'ಸಿನಿ ಸಮ್ಮಾನ'ದ ಕನಸಿಗೆ ನಾವು ಜೀವತುಂಬಿದೆವು' ಎಂದರು ಟಿಪಿಎಂಎಲ್ ಸಿಇಒ, ಡೆಕ್ಕನ್ ಹೆರಾಲ್ಡ್ ಸಂಪಾದಕ ಸೀತಾರಾಮನ್ ಶಂಕರ್.

'ಪ್ರಜಾವಾಣಿ @75ಕ್ಕೆ 'ಸಿನಿ ಸಮ್ಮಾನ' ಆರಂಭಿಸುತ್ತಿದ್ದೇವೆ. ಇನ್ನು 25 ವರ್ಷ ಕಳೆದ ನಂತದ ಕನ್ನಡ ಚಿತ್ರರಂಗದ ಆರೋಗ್ಯಕ್ಕೆ ಪ್ರಜಾವಾಣಿ ಕಾರಣ ಎಂದರೆ ಈ 'ಸಿನಿ ಸಮ್ಮಾನ' ಸಾರ್ಥಕವಾಗುತ್ತದೆ. ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಂತೆ, ಕನ್ನಡ ಸಿನಿ ಸಮ್ಮಾನದಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿ ಆತ ಒಳ್ಳೆಯ ನಿರ್ದೇಶಕ, ಒಳ್ಳೆಯ ನಟ ಎನ್ನುವುದಾಗಲಿದೆ ಎಂಬುವುದು ನಮ್ಮ ಭಾವನೆ, ಅದು ಸತ್ಯ. ಒಳ್ಳೆಯ ಸಂದೇಶ ನೀಡುವ ಮಾಧ್ಯಮ ಎಂದೇ ಪರಿಗಣಿಸಿ ಸಿನಿಮಾಗೆ ಪ್ರಜಾವಾಣಿ ಕೊಡುಗೆ ನೀಡಿದೆ. 'ಸಿನಿ ಸಮ್ಮಾನ' ಮುಂದುವರಿಯಲಿದೆ' ಎಂದು 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಆಶಾವಾದ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ತಾಂತ್ರಿಕ ತೀರ್ಪುಗಾರರ ಮಂಡಳಿ ಸದಸ್ಯರಾದ ವಿ.ಮನೋಹರ್, 'ಸ್ಪರ್ಶ' ರೇಖಾ, ಪ್ರೀತಿ ನಾಗರಾಜ್, ಗಂಗಾಧರ್ ಮೊದಲಿಯಾರ್, ಸಂಪತ್, ಜಯತೀರ್ಥ, ಸಂಧ್ಯಾರಾಣಿ, ಪ್ರತಿಭಾ ನಂದಕುಮಾರ್, ವಿಶ್ವನಾಥ್, ಎಂ.ಎಸ್.ಸ್ವಾಮಿ, ಪ್ರೇಮ್‌ಕುಮಾರ್ ಹರಿಯಬ್ಬೆ, ಎಚ್.ಎಂ.ರಾಮಚಂದ್ರ, ಶ್ರುತಿ, ಭಾಸ್ಕರ್ ರಾವ್, ಎಂ.ಕೆ. ರಾಘವೇಂದ್ರ, ರೂಪಾ ರಾವ್, ಹರೀಶ್ ಮಲ್ಯ ಉಪಸ್ಥಿತರಿದ್ದರು.

ಮೇ 27ರಂದು ಕಾರ್ಯಕ್ರಮ: 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಪ್ರಶಸ್ತಿ ಪ್ರದಾನ ಸಮಾರಂಭವು ಮೇ 27ರಂದು ನಡೆಯಲಿದೆ.

2022ರಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಪ್ರಶಸ್ತಿಗಳು ಯಾರು ಯಾರಿಗೆ ಸಲ್ಲಲಿವೆ ಎನ್ನುವ ಕುತೂಹಲ ಇನ್ನೇನು ಕೆಲವೇ ದಿನಗಳಲ್ಲಿ ತಣಿಯಲಿದೆ. 15 ವಿಭಾಗಗಳಲ್ಲಿ ಅಸಾಧಾರಣ ಪ್ರತಿಭೆಗಳ ಗುರುತಿಸುವಿಕೆ ನಡೆಯಲಿದೆ. ಜೊತೆಗೆ ಸಾರ್ವಜನಿಕರೂ ಶ್ರೇಷ್ಠ ನಟ, ನಟಿ, ಚಿತ್ರ ಹಾಗೂ ಅತ್ಯುತ್ತಮ ಸಂಗೀತವನ್ನು ಮತದಾನದ ಮುಖಾಂತರ ಆಯ್ಕೆ ಮಾಡಬಹುದು. ಇದಕ್ಕಾಗಿ https://www.prajavani.net/cinesamman ಗೆ ಭೇಟಿ ನೀಡಿ.

ಮುಖ್ಯ ತೀರ್ಪುಗಾರರ ಮಂಡಳಿ

ಗಂಭೀರ ಧೋರಣೆಯ ಮುಂದುವರಿಕೆ

ಬಹುತೇಕ ಮಾಧ್ಯಮಗಳು ಸಿನಿಮಾ ಉದ್ಯಮವನ್ನು ದೃಷ್ಟಿಯಲ್ಲಿಟ್ಟುಕೊಂಡು ವರದಿ ಮಾಡುವುದು ಸಹಜ. ಆದರೆ, 'ಪ್ರಜಾವಾಣಿ' ಕಲಾಪ್ರಕಾರವಾಗಿಯೂ ಚಲನಚಿತ್ರವನ್ನು ಸೂಕ್ಷ್ಮವಾಗಿ ದಾಖಲಿಸಿದೆ. ಹೀಗಾಗಿಯೇ 1960–70ರ ದಶಕಗಳಲ್ಲಿ ಹೊಸ ಅಲೆಯ ಚಿತ್ರಗಳು ಕೂಡ ಜನಪ್ರಿಯವಾದವು. ವ್ಯಕ್ತಿ ಕೇಂದ್ರಿತ ಉದ್ಯಮದಿಂದ ವಸ್ತು ಕೇಂದ್ರಿತ ಕಲಾಪ್ರಕಾರ ಸಿನಿಮಾ ಎಂದು ಪತ್ರಿಕೆಯು ಪರಿಭಾವಿಸಿದೆ. ಇಲ್ಲಿನ ವಿಮರ್ಶೆಗಳನ್ನು ಆಧರಿಸಿ ಗುಣಾವಗುಣಗಳ ಚರ್ಚೆ ನಡೆಯುವುದು ಗಮನಾರ್ಹ. ಈ ಗಂಭೀರ ಧೋರಣೆಯ ಮುಂದುವರಿದ ಭಾಗವೇ 'ಸಿನಿ ಸಮ್ಮಾನ'. ಚಿತ್ರೋದ್ಯಮದ ಎಲ್ಲರ ಸಹಕಾರ, ಸಹಭಾಗಿತ್ವದಿಂದ ಮೂರು ಸ್ತರಗಳಲ್ಲಿ ಪರಿಣಾಮಕಾರಿ ನಿಷ್ಕರ್ಷೆಗೆ ಒಳಪಡಿಸಿ ಅರ್ಹರನ್ನು ಸಿನಿ ಸಮ್ಮಾನಕ್ಕೆ ಆಯ್ಕೆ ಮಾಡುತ್ತಿರುವುದು ಸ್ವಾಗತಾರ್ಹ

ಗಿರೀಶ ಕಾಸರವಳ್ಳಿ, ನಿರ್ದೇಶಕರು, ಮುಖ್ಯ ತೀರ್ಪುಗಾರರ ಮಂಡಳಿಯ ಅಧ್ಯಕ್ಷರು

ಫಿದಾ ಫೆಸ್ಟಿವಲ್

ಅಬ್ಬಾ ನನ್ನ ನೆಚ್ಚಿನ 'ಪ್ರಜಾವಾಣಿ' ಕೈಗೆತ್ತುಕೊಂಡಿತಲ್ಲಪ್ಪ ಚಂದನವನಕ್ಕೆ ಸುಂದರ ಕಿರೀಟ ಇಡುವ ಸುಂದರ ಕಾಯಕ. 'ಸಿನಿ ಸಮ್ಮಾನ' ಇದು ಸ್ಯಾಂಡಲ್‌ವುಡ್‌ನ ಫಿದಾ ಫೆಸ್ಟಿವಲ್. ಇದು ನನ್ನ ಮೂವತ್ತು ವರ್ಷಗಳ ಕನಸು. ನಾನು ಮೊದಲ ಸಲ ಫಿಲ್ಮ್‌ಫೇರ್ ಪ್ರಶಸ್ತಿ ತೆಗೆದುಕೊಂಡಾಗ, ಕನ್ನಡದಲ್ಲಿ ಇಂತಹ ಪ್ರಶಸ್ತಿ ಯಾವಾಗ ಶುರು ಮಾಡ್ತೀರಿ ಅಂತ ನಾನು ಅವರನ್ನು ಕೇಳಿದ್ದೆ. ಆಗ ಅವರು ಸುಮ್ಮನೆ ನಕ್ಕಿದ್ದರು. ಇವತ್ತು ಆ ಕನಸು 'ಪ್ರಜಾವಾಣಿ' ಮೂಲಕ ನನಸಾಗುತ್ತಿದೆ. 'ಸಿನಿ ಸಮ್ಮಾನ' ನನ್ನ ಪ್ರಕಾರ 'ಕನ್ನಡಿಗರ ಸ್ವಾಭಿಮಾನ'.

ಹಂಸಲೇಖ, ಸ್ವರ ಸಂಯೋಜಕರು–ಚಿತ್ರಸಾಹಿತಿ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

ಪ್ರತಿಷ್ಠಿತ ಸಮ್ಮಾನವಾಗಲಿ

ದಶಕಗಳಿಂದ 'ಪ್ರಜಾವಾಣಿ'ಯನ್ನು ಓದುತ್ತಾ ಬಂದಿರುವೆ. ಅದು ಎಲ್ಲ ಕಲಾ ಪ್ರಕಾರಗಳಂತೆ ಸಿನಿಮಾವನ್ನೂ ಸಾಂಸ್ಕೃತಿಕ ಮಾಧ್ಯಮವಾಗಿ ನೋಡುತ್ತಾ ಬಂದಿದೆ. ಅವರ ಬರಹಗಳಾಗಲೀ, ವಿಮರ್ಶೆಗಳಾಗಲೀ, ಉದ್ಯಮದವರಲ್ಲಿನ ಮಾತಾಗಲೀ ಎಲ್ಲವನ್ನೂ ಸಾಂಸ್ಕೃತಿಕವಾಗಿಯೇ ನೋಡುತ್ತಾ ಬಂದಿರುವ ಪತ್ರಿಕೆ ಇದು. ಅದರ ಮುಂದುವರಿಕೆಯಾಗಿ ಈಗ 'ಸಿನಿ ಸಮ್ಮಾನ' ಪ್ರಾರಂಭವಾಗುತ್ತಿದೆ. ಪಾರದರ್ಶಕವಾಗಿ ಮೂರು ಹಂತಗಳ ಆಯ್ಕೆ ಪ್ರಕ್ರಿಯೆ ಒಳಗೊಂಡಂಥ ಪುರಸ್ಕಾರ ಇದು. ಇದು ಪ್ರತಿಷ್ಠಿತ ಸಮ್ಮಾನವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಮುಖ್ಯ ತೀರ್ಪುಗಾರರ ಬಳಗದಲ್ಲಿ ನಾನೂ ಒಬ್ಬ ಎನ್ನುವ ಹೆಮ್ಮೆ ಇದೆ.

ಪ್ರಕಾಶ್ ರೈ, ನಟ–ನಿರ್ದೇಶಕ–ನಿರ್ಮಾಪಕ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

ಅರ್ಹರ ಆಯ್ಕೆ ಗಮನಾರ್ಹ



ಸಮಾಜದ ಮೇಲೆ ಪತ್ರಿಕೋದ್ಯಮ ಹಾಗೂ ಇತರ ಚಟುವಟಿಕೆಯ ಮೂಲಕ ಒಳಿತನ್ನೇ ಬಯಸುವ ಪ್ರಗತಿಪರ ಮನಃಸ್ಥಿತಿಯವರಿಂದಲೇ 'ಪ್ರಜಾವಾಣಿ' ಅಲಂಕೃತವಾಗಿದೆ ಎಂದೇ ನಾನು ಮೊದಲಿನಿಂದಲೂ ಭಾವಿಸಿರುವೆ. 'ಪ್ರಜಾವಾಣಿ ಸಿನಿ ಸಮ್ಮಾನ' ಕೂಡ ಇದಕ್ಕೆ ಹೊರತಾದುದಲ್ಲ. ಬಾಕ್ಸ್‌ಆಫೀಸ್ ಗಳಿಕೆಯೊಂದನ್ನೆ ಮುಖ್ಯವಾಗಿಸಿಕೊಳ್ಳದೆ ಕಲೆ, ಕಲಾವಿದರನ್ನು ಗೌರವಿಸುವ ಪರಿಪಾಟ ನಮ್ಮ ದೇಶದಲ್ಲಿ ಅಪರೂಪ. ಈ ಸಮ್ಮಾನಗಳ ಗುಚ್ಛವು ರಾಜ್ಯದ ಅರ್ಹ ಪ್ರತಿಭಾನ್ವಿತರಿಗೆ ಸಲ್ಲುವ ಘನತೆಯ ಗೌರವ ಎಂದೇ ಭಾವಿಸುವೆ. ಈ ಪುರಸ್ಕಾರದ ಅಧ್ಯಾಯ ದೊಡ್ಡದಾಗಿ ಬೆಳೆಯಲಿ ಎಂದು ಹಾರೈಸುವೆ.

ಶ್ರುತಿ ಹರಿಹರನ್, ನಟಿ–ನಿರ್ಮಾಪಕಿ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

ಚಿತ್ರರಂಗಕ್ಕೆ, ಜನರಿಗೂ ಇದು ಮುಖ್ಯ



ಕನ್ನಡಿಗರು ಏಕೀಕರಣಕ್ಕೆ ದನಿಎತ್ತುತ್ತಿದ್ದ ಸಂದರ್ಭದಲ್ಲಿಯೇ 'ಪ್ರಜಾವಾಣಿ' ಬೆಳೆಯಲಾರಂಭಿಸಿತು. ಕನ್ನಡ ಸಿನಿಮಾ ಮೇಲೇಳಲು ಶುರುವಾದದ್ದೂ ಅದೇ ಕಾಲಘಟ್ಟದಲ್ಲಿ. 'ಪ್ರಜಾವಾಣಿ', ಸಿನಿಮಾ ಎರಡೂ ಏಕೀಕರಣಕ್ಕೆ ಕೊಡುಗೆ ನೀಡಿವೆ. 'ಪ್ರಜಾವಾಣಿ' ಜನರು ಓದುವ ಯಃಕಶ್ಚಿತ್ ಪತ್ರಿಕೆಯಲ್ಲ; ಅದು ಕಲೆ, ಸಂಸ್ಕೃತಿ ಹಾಗೂ ಕರ್ನಾಟಕದ ಜನರ ಧ್ವನಿ. ಕನ್ನಡ ಸಿನಿಮಾ ಕೂಡ ಹಾಗೆಯೇ. ಅದು ಬರೀ ಮನರಂಜನೆಯಲ್ಲ, ಸಾಂಸ್ಕೃತಿಕ ವಿದ್ಯಮಾನವೂ ಹೌದು. ಈ ಕಾರಣಕ್ಕೇ 'ಪ್ರಜಾವಾಣಿ ಸಿನಿ ಸಮ್ಮಾನ' ಪತ್ರಿಕೆಗಷ್ಟೇ ಅಲ್ಲದೆ ಕನ್ನಡ ಚಿತ್ರರಂಗಕ್ಕೆ ಹಾಗೂ ಜನರಿಗೂ ಮುಖ್ಯ.

ಎನ್. ವಿದ್ಯಾಶಂಕರ್, ವಿಮರ್ಶಕ–ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

ಘನತೆಯ ಸಮ್ಮಾನ

ಯಾವುದೋ ಒಂದು ಊರಲ್ಲಿ ಏನಾದರೂ ಗಲಾಟೆ, ಅನ್ಯಾಯ, ಪಂಚಾಯಿತಿ ನಡೆದಲ್ಲಿ 'ಅವರನ್ನು ಒಂದು ಮಾತು ಕೇಳಿರಿ, ನೆಟ್ಟಗೆ ಹೇಳ್ತಾರೆ' ಅಂತ ಸೂಕ್ಷ್ಮವಾದ ವ್ಯಕ್ತಿಯತ್ತ ಮಂದಿ ಹೋಗುತ್ತಾ ಇದ್ದರು. ಹಾಗೆಯೇ 'ಪ್ರಜಾವಾಣಿ' ಕೂಡ. ಅದು ನಮ್ಮೂರಿನ, ನಮ್ಮ ನಾಡಿನ ಶ್ರೇಷ್ಠ ಸೂಕ್ಷ್ಮಗ್ರಾಹಿ ಪತ್ರಿಕೆ. 'ಪ್ರಜಾವಾಣಿ'ಯ ಮಾತಿಗೆ ಯಾವತ್ತೂ ಒಂದು ತೂಕ ಇರುತ್ತದೆ ಎನ್ನುವುದು ನನ್ನ ಅಭಿಮಾನ. ಸಾಂಸ್ಕೃತಿಕವಾಗಿಯೇ ಸಿನಿಮಾವನ್ನು ಪರಿಗಣಿಸಿರುವ ಪತ್ರಿಕೆಯು 'ಸಿನಿ ಸಮ್ಮಾನ' ಪ್ರಾರಂಭಿಸುತ್ತಿರುವುದು ಖುಷಿಯ ವಿಷಯ. ಇದು ಘನತೆಯ ಸಮ್ಮಾನವಾಗಿ ಹೊರಹೊಮ್ಮಲಿ. ಮುಖ್ಯ ತೀರ್ಪುಗಾರರಲ್ಲಿ ನಾನೂ ಒಬ್ಬ ಎನ್ನುವುದು ಹೆಮ್ಮೆಯ ವಿಷಯ.

ಯೋಗರಾಜ ಭಟ್, ನಿರ್ದೇಶಕ–ನಿರ್ಮಾಪಕ–ನಟ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

ಸಾಧಕರ ಗುರುತಿಸುವ ಹೆಜ್ಜೆ

ನಾಡಿಗೆ 'ಪ್ರಜಾವಾಣಿ'ಯ ಕೊಡುಗೆ ಅನನ್ಯ ಎನ್ನುವುದು ಮೊದಲಿನಿಂದಲೂ ಸ್ಪಷ್ಟ. ಸಮಗ್ರ ಚಿತ್ರೋದ್ಯಮವನ್ನು ಒಳಗೊಂಡ ಇಂತಹ ಸಮ್ಮಾನವು ಎಂದೋ ಪ್ರಾರಂಭವಾಗಬೇಕಿತ್ತು ಎಂದು ನಾನು ಬಯಸಿದ್ದೆ. ಹಾಗೆ ಮೊದಲೇ ಆಗಿದ್ದರೆ ಎಷ್ಟೋ ದಿಗ್ಗಜರು ಭಾಗಿಯಾಗುತ್ತಿದ್ದರಲ್ಲ ಎನ್ನುವ ಸ್ವಾರ್ಥ ನನ್ನದು. ಎಷ್ಟೋ ಪ್ರತಿಭೆಗಳನ್ನು ಪತ್ರಿಕೆ ಹುಟ್ಟುಹಾಕಿದೆ. ಅಪರಿಚಿತ ಮುಖಗಳನ್ನು ಪರಿಚಯಿಸಿದೆ. ಈಗ ಸಾಧನೆ ಮಾಡಿದ ಅರ್ಹ ಕಲಾವಿದರಿಗೆ ಮನ್ನಣೆ ಕೊಡುವ ಅವಕಾಶ. ಅದೇ 'ಸಿನಿ ಸಮ್ಮಾನ'. ನಾನೂ ಇದರಲ್ಲಿ ಇರುವುದು ಬೇರೆಯದೇ ಅನುಭವ.

ಸುಮನಾ ಕಿತ್ತೂರು, ನಿರ್ದೇಶಕಿ–ಚಿತ್ರಕಥಾ ಲೇಖಕಿ, ಮುಖ್ಯ ತೀರ್ಪುಗಾರರ ಮಂಡಳಿಯ ಸದಸ್ಯರು

'ಸ್ಟೋರ್ಸ್'ನಲ್ಲಿ ಹಲವು 'ವಿಷಯ' ಪದಾರ್ಥ



ರಾಘವೇಂದ್ರ ಸ್ಟೋರ್ಸ್
- ನಿರ್ಮಾಣ: ಹೊಂಬಾಳೆ ಫಿಲ್ಮ್ಸ್
- ನಿರ್ದೇಶನ: ಸಂತೋಷ್ ಆನಂದ್‌ರಾಮ್
- ತಾರಾಗಣ: ಜಗ್ಗೇಶ್, ದತ್ತಣ್ಣ, ಅಚ್ಯುತ್ ಕುಮಾರ್, ಮಿತ್ರ, ಶ್ವೇತಾ ಶ್ರೀವಾತ್ಸವ್

'ರಾಘವೇಂದ್ರ ಸ್ಟೋರ್ಸ್'; ಹೆಸರಿಗೆ ತಕ್ಕ ಹಾಗೆ ಇಲ್ಲಿ ಹಲವು ಪದಾರ್ಥಗಳಿವೆ. ಒಂದೇ ಪದದಲ್ಲಿ ಹೇಳುವುದಿದ್ದರೆ 'ನವರಸ'ಗಳ ಮಿಶ್ರಣವಿಲ್ಲಿದೆ. ನಿರ್ದೇಶಕ ಸಂತೋಷ್ ಆನಂದ್‌ರಾಮ್ ತಮ್ಮ ಹಿಂದಿನ ಸಿನಿಮಾ ಟ್ರ್ಯಾಕ್‌ನಿಂದ ಕೊಂಚ ಸರಿದು, ಗಂಭೀರವಾದ ವಿಷಯಗಳನ್ನು ಹಾಸ್ಯಮಿಶ್ರಿತ ಬುಟ್ಟಿಯಲ್ಲಿಟ್ಟು ಕೊಂಚ 'ರಭಸ'ವಾಗಿ ಪ್ರೇಕ್ಷಕರಿಗೆ ಬಡಿಸಿದ್ದಾರೆ.

ಚಿತ್ರದ ಒಟ್ಟು ಅವಧಿ ಕೇವಲ 104 ನಿಮಿಷ. ಎರಡು ಕಥೆಯನ್ನು ಕಟ್ಟಿಕೊಡುವ ಈ ಅವಧಿಯ ಮೊದಲಾರ್ಧದ ಸ್ಕ್ರೀನ್‌ಪ್ಲೇ ಧುಮ್ಮಿಕ್ಕಿ ಸಾಗುತ್ತದೆ. ತಂದೆ ಗುಂಡಾ ಭಟ್ಟರ(ದತ್ತಣ್ಣ) 'ರಾಘವೇಂದ್ರ ಸ್ಟೋರ್ಸ್'ನಲ್ಲಿ ಕೆಲಸ ಮಾಡುವ ಹಯವದನ(ಜಗ್ಗೇಶ್) ಮದುವೆ ವಯಸ್ಸು ದಾಟಿದ ಬ್ರಹ್ಮಚಾರಿ. ನಲವತ್ತಾದರೂ ಮದುವೆಯಾಗಿಲ್ಲ ಎಂಬ ತೀರದ ಕೊರಗು. ಇದರ ನಡುವೆ ರಾಜಕೀಯ ಪಕ್ಷವೊಂದರ ಕಾರ್ಯಕರ್ತ ಕುಮಾರ್(ಅಚ್ಯುತ್ ಕುಮಾರ್) ಎಂಬಾತನ ಷಡ್ಯಂತ್ರದ ಕಥನ. ಹಯವದನನ ವಧು ಅನ್ವೇಷಣೆ ಹಾಗೂ ಮುಂದಿನ 'ಗುರಿ'ಗಳೇ ಚಿತ್ರದ ಕಥಾಹಂದರ.

ಮಲಯಾಳಂನಲ್ಲಿ ಬಂದ 'ಉಸ್ತಾದ್ ಹೋಟೆಲ್' ಸಿನಿಮಾದ ನೆನಪು ಈ ಸಿನಿಮಾ ನೋಡುವಾಗ ಒಮ್ಮೆ ಕಾಡುತ್ತದೆ. ಹಾಗೆಂದು ಇದು ರಿಮೇಕ್ ಅಲ್ಲ. ವಯಸ್ಸು ಮೀರಿದ ಬಳಿಕದ ಮದುವೆ, ಬಾಡಿಗೆ ತಾಯ್ತನ, ಮಕ್ಕಳ ದತ್ತು, ರಾಜಕೀಯದಲ್ಲಿ ಬೆರೆತಿರುವ ಜಾತಿ, ಮಕ್ಕಳ ಅನಾಥಾಶ್ರಮಗಳ ದುರ್ಬಳಕೆ ಹೀಗೆ ಹಲವು 'ಪದಾರ್ಥ'ಗಳು ಇಲ್ಲಿ ತುಂಬಿವೆ. ಇಷ್ಟೆಲ್ಲಾ ಪದಾರ್ಥಗಳನ್ನು ಕಡಿಮೆ ಅವಧಿಯಲ್ಲೇ ಬಡಿಸುವ ಸಾಹಸ ನಿರ್ದೇಶಕರದ್ದು.

ನಟನೆಯಲ್ಲಿ ಜಗ್ಗೇಶ್ ಇಡೀ ಸಿನಿಮಾ ಆವರಿಸಿಕೊಂಡಿದ್ದಾರೆ. ಮದುವೆ ಆಗಲಿಲ್ಲ ಎಂಬ ಕೊರಗು, ವೇದನೆ, 'ಮೊದಲ ರಾತ್ರಿ'ಗಾಗಿ ಚಡಪಡಿಕೆ ಹೀಗೆ ಪ್ರತಿ ದೃಶ್ಯದಲ್ಲೂ ತಮ್ಮ ಹಾವಭಾವದಿಂದ ನಗಿಸುತ್ತಾರೆ. ಆಸ್ಪತ್ರೆ ದೃಶ್ಯದಲ್ಲಿ ಈ 'ತುಂಟತನ' ಅತಿಯಾಯಿತು ಎನಿಸುತ್ತದೆ. ಮೊದಲಾರ್ಧದಲ್ಲಿ ತೆರೆದ ಮನಸ್ಸಿನ ದತ್ತಣ್ಣ ತುಂಟತನ ತೋರುತ್ತಾ, ದ್ವಿತೀಯಾರ್ಧದಲ್ಲಿ ಬಾಡಿಗೆ ತಾಯ್ತನ ವಿಚಾರದಲ್ಲಿ ಏಕಾಏಕಿ ಗಂಭೀರವಾದಾಗ ಗಲಿಬಿಲಿಯಾಗುತ್ತದೆ. ಹಲವು ಸನ್ನಿವೇಶದ ಬರವಣಿಗೆಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕಿತ್ತು. 'ಕೋಗಿಲೆ'ಯಾಗಿ ನಟ ಮಿತ್ರ ನಟನೆಗೆ ಹೆಚ್ಚು ಅಂಕ. ಅಚ್ಯುತ್ ಕುಮಾರ್, ಶ್ವೇತಾ ಶ್ರೀವಾತ್ಸವ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಒಂದು ಹಾಡು ಎಲ್ಲೋ ಗುನುಗಿದ ಅನುಭವ! ಶ್ರೀಶ ಕೂದುವಳ್ಳಿ ಛಾಯಾಗ್ರಹಣ ಚಿತ್ರಕ್ಕೆ ಜೀವ ತುಂಬಿದೆ. ಇಡೀ ಸಿನಿಮಾದ 'ಜೀವಾಳ'ವನ್ನು ಪುನೀತ್ ರಾಜ್‌ಕುಮಾರ್ ಅವರ ಗುಣಕ್ಕೆ ಅರ್ಪಿಸಿದೆ ಚಿತ್ರತಂಡ.

ಅಭಿಲಾಷ್ ಪಿ.ಎಸ್.

ಬಲವಂತದ ಏಕಪಾತ್ರ ಸೂತ್ರ

ರಾಘು
- ನಿರ್ಮಾಣ: ಕೋಟಾ ಫಿಲಂ ಫ್ಯಾಕ್ಟರಿ, ಡಿಕೆಎಸ್ ಸ್ಟುಡಿಯೋ
- ನಿರ್ದೇಶನ: ಆನಂದ್ ರಾಜ್
- ತಾರಾಗಣ: ವಿಜಯ್ ರಾಘವೇಂದ್ರ

ನಾಟಕ, ನೃತ್ಯ, ಯಕ್ಷಗಾನದಂತಹ ಬೇರೆ ಬೇರೆ ಕಲಾಪ್ರಕಾರಗಳಲ್ಲಿ ಏಕವ್ಯಕ್ತಿ ಪ್ರದರ್ಶನ ವಿರಳವಲ್ಲ. ಆದರೆ ಸಿನಿಮಾ ವಿಷಯಕ್ಕೆ ಬಂದಾಗ, ಅದರಲ್ಲಿಯೂ ಕನ್ನಡದಲ್ಲಿ ಒಂದೇ ಪಾತ್ರ ಹೊಂದಿರುವ ಚಿತ್ರ ಬಂದಿದ್ದು ಅತ್ಯಂತ ವಿರಳ. ಆ ನೆಲೆಯಲ್ಲಿ ನೋಡಿದಾಗ ವಿಜಯ್ ರಾಘವೇಂದ್ರ ಅಭಿನಯದ 'ರಾಘು' ವಿಶಿಷ್ಟ ಪ್ರಯೋಗ. ಈ ಚಿತ್ರದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುವ ನಟ ವಿಜಯ್ ರಾಘವೇಂದ್ರ, ತಮಗೆ ಸಿಕ್ಕ ಪಾತ್ರವನ್ನು ಬಹಳ ಸಮರ್ಥವಾಗಿ ನಿಭಾಯಿಸಿದ್ದಾರೆ.

ಇಡೀ ಚಿತ್ರದಲ್ಲಿ ಇತರ ಪಾತ್ರಗಳು ಅಗತ್ಯ ಮತ್ತು ಅನಿವಾರ್ಯವಾಗಿದ್ದರೂ ಓರ್ವ ಪಾತ್ರಧಾರಿಯನ್ನು ಮಾತ್ರ ತೋರಿಸುತ್ತೇನೆ ಎಂಬಂತಹ ಚಿತ್ರಕಥೆಗೆ ನಿರ್ದೇಶಕ ಆನಂದ್ ರಾಜ್ ಮಾರುಹೋಗಿರುವುದು ಇಡೀ ಪ್ರಯೋಗವನ್ನೇ ಹಾಸ್ಯಾಸ್ಪದವಾಗಿಸಿಬಿಡುತ್ತದೆ. ಚಿತ್ರದುದ್ದಕ್ಕೂ ತರ್ಕವಿಲ್ಲದ ಈ ರೀತಿಯ ಸಾಕಷ್ಟು ದೃಶ್ಯಗಳು ಕಾಣಸಿಗುತ್ತವೆ. ಇಲ್ಲಿ ನಾಯಕನನ್ನು ಬಿಟ್ಟು ಉಳಿದ ಪಾತ್ರ ಏಕಿಲ್ಲ ಎಂಬ ಪ್ರಶ್ನೆಗೆ ಉತ್ತರವೇ ಸಿಗುವುದಿಲ್ಲ! ತೀರ ನಗು ತರಿಸುವುದು ಪೊಲೀಸ್ ಠಾಣೆಯ ದೃಶ್ಯ. ದೂರು ಬರೆಸಿಕೊಳ್ಳುವ ಪೇದೆಯ ಮಾತನ್ನು ಮಾತ್ರ ಕೇಳಿಸುತ್ತಾರೆ. ಆದರೆ ಮುಖ ಕಾಣಿಸುವುದಿಲ್ಲ. ಇಡೀ ಚಿತ್ರಕಥೆ ನಿಂತಿರುವುದೇ ರಾಘುವಿನ ಪ್ರೇಯಸಿ ಪಾತ್ರದ ಮೇಲೆ. ಆದರೆ ಆಕೆಯ ಮುಖ ಯಾಕೆ ಚಿತ್ರದಲ್ಲಿ ಕಾಣುವುದಿಲ್ಲ ಎಂದರೆ, ಬಹುಶಃ ಅದಕ್ಕೆ ಉತ್ತರ ಇದು ಒಂದೇ ಪಾತ್ರ ಹೊಂದಿರುವ ಸಿನಿಮಾ ಎಂದಿರಬೇಕು

ಒಂದೇ ಪಾತ್ರವೇ ಹಿಡಿದಿಟ್ಟುಕೊಳ್ಳುವಂತಹ ಗಟ್ಟಿಯಾದ ಕಥೆಯೇ ಚಿತ್ರಕ್ಕಿಲ್ಲ. ರಾಘುವಿನ ಆಪ್ತಮಿತ್ರ ಅನಾಸಿನ್, ಲಾಕ್‌ಡೌನ್ ಪ್ರಾರಂಭವಾಯ್ತು ಎಂಬ ಸುದ್ದಿ ನೀಡುವ ಕರೆಯೊಂದಿಗೆ ಚಿತ್ರ ಪ್ರಾರಂಭವಾಗುತ್ತದೆ ಮತ್ತು ಚಿತ್ರ ಮುಗಿಯುವ ಹೊತ್ತಿಗೆ ಪ್ರೇಕ್ಷಕನಿಗೂ ಆತ ಆಪ್ತಮಿತ್ರನಾಗಿರುತ್ತಾನೆ!

ಛಾಯಾಗ್ರಾಹಕ ಉದಯ್ ಲೀಲಾ ಮುಚ್ಚುತ್ತಿದ್ದ ಕಣ್ಣುಗಳನ್ನು ಆಗಾಗ ತೆರೆಸುತ್ತಾರೆ. ರಿತ್ವಿಕ್ ಮುರಳೀಧರ್ ಹಿನ್ನೆಲೆ ಸಂಗೀತದಿಂದ ಒಂದಷ್ಟು ಕುತೂಹಲ ಹುಟ್ಟಿಸುತ್ತಾರೆ.

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5303

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
- 2.ಹಿಗ್ಗಿನಿಂದ ಕಲಿತಿರುವ ಅಂಕಗಣಿತದ ಕೋಷ್ಟಕ (2)
- 4.ಒಳ್ಳೆಯ ಅಥವಾ ಕೆಟ್ಟ ನಾತ (3)
- 5.ಅಂಗಣಕ್ಕೇರಿದಾಗ ಕಾಣಿಸಿದ ಮಂಗಳಗ್ರಹ (4)
- 6.ಇದು ಮಾತಿಗೆ ನಿಲುಕದ್ದು (4)
- 7.ನಗರದಲ್ಲಿರುವ ಮನುಷ್ಯ (2)
- 9.ಕವಿಪುಂಗವರು ಹೊಕ್ಕಿರುವ ಗುಹೆ! (2)
- 13.ಹೊಸಯುಗ ಈ ತರ ಬಂದಿದೆ (4)
- 14.ಅವಶ್ಯವಿಲ್ಲದ ಖರ್ಚು (4)
- 15.ಕಪಟವನ್ನು ಹೀಗೂ ಹೇಳುವರು (3)
- 16.ಹಂತಕನೇರಿದ ಸೋಪಾನ (2)

ಮೇಲಿಂದ ಕೆಳಕ್ಕೆ
- 1.ಜರಿಯಲ್ಲಿಟ್ಟಿರುವ ರತ್ನ ಖಚಿತವಾದ ಒಡವೆ! (4)
- 2.ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು (5)
- 3.ನೆನಪಿನಲ್ಲಿ ಉಳಿಯದಿರುವುದು (3)
- 5. ಒಳಮನಸ್ಸು ಇದು (4)
- 8.ದ್ರವದಿಂದ ತುಂಬಿರುವುದು (4)
- 10.ಈತ ವಿವೇಕಶಾಲಿ (5)
- 11.ಸಮರ್ಪಕವಲ್ಲದ ಕಾರಣ (4)
- 12.ಅತಿಯಾದ ಬಯಕೆ (3)



5302ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಯೋಗ 3.ಮಂದುರ
6.ರಿವಾಜು 7.ಸಿಬ್ಬಂದಿ
8.ನಲುಮೆ 9.ಚಿಂತೆ
10.ಬಸದಿ 12.ತೀರ
14.ವಿನಂತಿ 15.ಓಲಗ
16.ಸಮರ 17.ತಗರಿ
18.ಸನ್ನಾಹ

ಮೇಲಿಂದ ಕೆಳಕ್ಕೆ:
1.ವಿಧಾನಸೌಧ
2.ಗರಿಮೆ 3.ಮಂಜುಳ
4.ರಸಿಕತೆ 5.ಹಂದಿ
9.ಚಿಂದಿ 10.ಬರ
11.ವಿಶ್ರಾಂತಿಗೃಹ
12.ತೀವ್ರಗತಿ 13.ನಸರಿ
14.ವಿರಸ 15.ಓಲೆ

ಸುಡೊಕು 5689

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

5688 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ನವಮಿ ಗಂ. 18-23 ನಕ್ಷತ್ರ: ಆಶ್ಲೇಷ ಗಂ. 12.47 ಯೋಗ: ಗಂಡ ಗಂ. 10- 31, ಕರಣ: ಕೌಲವ ಗಂ. 18-23, ಮೇಷ ಮಾಸದ 15 ನೇ ದಿನ, ಮಳೆನಕ್ಷತ್ರ: ಭರಣಿ 1. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 06-14 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 08 ಶವ್ವಾಲ್

ದಿನ ವಿಶೇಷ: ಸೀತಾ ನವಮಿ

ಅದೃಷ್ಟ ಸಂಖ್ಯೆ : 6, 8

ಮೇಷ: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಮಾರ್ಗದರ್ಶಕರ ಸಲಹೆ ಪಡೆದು ಪಾಲಿಸಿರಿ. ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನ ನೀಡುವುದು.

ವೃಷಭ: ಆರ್ಥಿಕ ಬಲ ಮತ್ತು ನೆಮ್ಮದಿಯನ್ನು ಸದ್ಯದ ಪರಿಸ್ಥಿತಿಯಲ್ಲಿ ಕಡಿಮೆ ಹೊಂದಿರುವ ನಿಮಗೆ ಮಹಾಗಣಪತಿಯ ಆರಾಧನೆ ಶುಭವನ್ನುಂಟುಮಾಡು-ವುದು. ಅವಿವಾಹಿತರು ಬಾಳಸಂಗಾತಿಯನ್ನು ಪಡೆಯುವ ಸೂಚನೆ ಕಾಣಲಿವೆ.

ಮಿಥುನ: ಈ ದಿನದಂದು ಹಿರಿಯರ ಆಶೀರ್ವಾದ ಪಡೆದು ಕೆಲಸ ಕಾರ್ಯಗಳನ್ನು ಆರಂಭಿಸಿದಲ್ಲಿ ಜಯ ನಿಮ್ಮದೇ ಆಗಿರುತ್ತದೆ. ಹಿಂದೆ ರೂಪಿಸಿದ್ದ ಯೋಜನೆಗಳು ಯಶಸ್ಸು ಕಾಣುವುದನ್ನು ಕಂಡು ಸಂತಸಪಡುವಿರಿ.

ಕರ್ಕಾಟಕ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಅರ್ಧದ ಹಾದಿ ನೋಡುವುದು. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ. ಉತ್ಸಾಹ ಹೆಚ್ಚುವಂತಾಗಲಿದೆ.

ಸಿಂಹ: ಈ ದಿನ ದೈಹಿಕ ಶ್ರಮ ಕಡಿಮೆ ಇದ್ದರೂ, ಹೆಚ್ಚಿನ ಆದಾಯವಿರುವು-ದರಿಂದ ಮನಸ್ಸಿಗೆ ಸ್ವಲ ನೆಮ್ಮದಿ ತೋರುವುದು. ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ.

ಕನ್ಯಾ: ವಿನಾಕಾರಣ ಬೇರೆಯವರ ಮನಸ್ಸನ್ನು ನೋಯಿಸುವುದು ಸರಿಯಲ್ಲವೆಂದು ಗೊತ್ತಿದ್ದೂ ಆ ತಪ್ಪುಗಳು ನೆರವೇರಬಹುದು. ನಿಮ್ಮ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುವುದು. ಬಿಳಿ ಬಣ್ಣ ಅದೃಷ್ಟ ತರುವುದು.

ತುಲಾ: ಇಂದು ಹಲವು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರ ಅಪೇಕ್ಷಿಸಬಹುದು. ಸುಖ-ಶಾಂತಿ ಸಮೃದ್ಧಿಯಾಗಿದ್ದರೂ ಮನದಲ್ಲಿ ಮಕ್ಕಳ ವಿಚಾರ ಭಯದ ಭೀತಿ ತೋರಿಬಂದೀತು.

ವೃಶ್ಚಿಕ: ಇಂದು ನಿಮ್ಮೊಳಗಿನ ಹಲವಾರು ವರ್ಷಗಳ ದುಃಖ ಪ್ರಕಾಶಿಸಲಿದೆ. ಅದು ನಿಮಗೆ ಅಚ್ಚರಿ ಉಂಟು ಮಾಡಬಹುದು. ಗ್ರಾಮ ಪಂಚಾಯ್ತಿಯಂಥ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಕಾರ್ಯಭಾರ ಹೊರಬೇಕಾಗುವುದು.

ಧನು: ಹಿತವನ್ನು ಬಯಸುವ ಕುಟುಂಬ ಸದಸ್ಯರನ್ನು ಹೊಂದಿ ರುವುದರಿಂದ ನಿಮ್ಮ ಮಾನಸಿಕ ಸ್ಥೈರ್ಯ ಸದೃಢವಾಗುವುದು. ಗೃಹೋಪಕರಣಗಳ ಖರೀದಿ ನಡೆಸುವಿರಿ. ಮನೆಯಲ್ಲಿ ದೇವತಾಕಾರ್ಯ ಮಾಡುವ ತೀರ್ಮಾನ ಮಾಡಿರಿ.

ಮಕರ: ಬಂಧುಗಳ ಮೂಲಕ ಹೆಚ್ಚಿನ ಸಹಕಾರ ದೊರೆತು ವ್ಯಾಪಾರದಲ್ಲಿ ಅಧಿಕ ಧನಲಾಭವಾಗಿ ಸಂತೋಷವಿರುವುದು. ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ನೆಮ್ಮದಿ ಮೂಡುತ್ತದೆ. \

ಕುಂಭ: ನೆರೆಯವರ ಮನೆಯ ಶುಭ ಸಮಾರಂಭಕ್ಕೆ ಹೋಗುವ ಸಲುವಾಗಿ ಕಿರು ಪ್ರಯಾಣ ಇರುವುದು. ನಡೆದು ಹೋದ ದುರ್ಘಟನೆಗಳನ್ನು ಪದೇ ಪದೇ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ.

ಮೀನ: ಹೊಸ ಒಪ್ಪಂದವೊಂದನ್ನು ಒಪ್ಪಿಕೊಳ್ಳುವ ಮುನ್ನ ಯೋಚಿಸುವುದು ಉತ್ತಮ ಎಂಬ ಭಾವನೆ ನಿಮ್ಮ ಮನಸ್ಸಿಗೆ ಬರಲಿದೆ ಹಾಗು ಅದು ಸರಿಯಾದದ್ದು. ಗೃಹ ಉತ್ಪಾದಕ ವಸ್ತುಗಳ ಮಾರಾಟದಲ್ಲಿ ಉತ್ತಮ ಲಾಭ.

ರಾಹುಲ್ ಗಾಂಧಿ ಭಾಷಣಕ್ಕೆ ಮಳೆಯಲ್ಲಿ ಕಾದು ನಿಂತ ಜನರು

ಬಿಜೆಪಿ ವಿರುದ್ಧ ಟೀಕೆಯ 'ಮಳೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: ಇನ್ನೇನೂ ಸಭೆ ಶುರುವಾಗಬೇಕು. ಅಷ್ಟರಲ್ಲಿ ಗುಡುಗು, ಮಿಂಚು, ಸಿಡಿಲು, ಬಿರುಗಾಳಿ ಸಹಿತ ಜೋರು ಮಳೆ. ಸಭೆಯಲ್ಲಿದ್ದ ಕೆಲವರು ನೋಡುನೋಡುತ್ತಿದ್ದಂತೆ ಚದುರಿದರು. ಆದರೆ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವೇದಿಕೆಯನ್ನೇರಿ ಬಿಜೆಪಿ ವಿರುದ್ಧ 'ಟೀಕೆಗಳ ಮಳೆ' ಸುರಿಸುತ್ತಿದ್ದಂತೆ 'ಕೆಸರು ಗದ್ದೆ' ಓಟದಂತೆ ಕಾಲ್ಕಿತ್ತು ವಾಪಸ್ ಬಂದರು.

ಜೇವರ್ಗಿಯ ಎನ್.ಧರ್ಮಸಿಂಗ್ ಕ್ರೀಡಾಂಗಣದಲ್ಲಿ ಶುಕ್ರವಾರ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಡಾ.ಅಜಯ ಸಿಂಗ್ ಪ್ರಚಾರ ಸಭೆ ಆಯೋಜಿಸಿದ್ದರು. ಸಭೆ ಆರಂಭದ ವೇಳೆ ಧಾರಾಕಾರ ಮಳೆ ಶುರುವಾಯಿತು. ಕೂರಲು ಹಾಕಿದ್ದ ಕುರ್ಚಿಗಳನ್ನೇ ಕೆಲವರು ಕೊಡೆ ಮಾಡಿಕೊಂಡರು. ಮಳೆಯಲ್ಲೇ ನೆನೆಯುತ್ತಾ ಸ್ಥಳೀಯ ನಾಯಕರ ಭಾಷಣ ಆಲಿಸಿ, ರಾಹುಲ್ ಗಾಂಧಿಗಾಗಿ ಕಾದು ನಿಂತರು.

ಕಿವಿಗಡಚಿಕ್ಕುವ ಗುಡುಗು, ಸಿಡಿಲಿನ ಅಬ್ಬರ, ಟೆಂಟ್‌ನಿಂದ ಜೋರಾಗಿ ಜಿನುಗುತ್ತಿದ್ದ ಮಳೆ ನೀರಿಗೆ ತೊಯ್ದು ತೊಪ್ಪೆಯಾಗಿದ್ದರೂ ಕೆಸರು ಗದ್ದೆಯಂತೆಯಾದ ನೆಲದಿಂದ ಕೆಲ ಜನರು ಕದಲಲಿಲ್ಲ. ಸುಮಾರು ಅರ್ಧಗಂಟೆ ಮಳೆಯ ಹೊಡೆತ ಸಹಿಸಿಕೊಂಡರು. ಜೋರಾಗಿ ಗಾಳಿ ಬೀಸಿ ಟೆಂಟ್‌ಗೆ ಹೊದಿಸಿದ್ದ ಬಟ್ಟೆಗಳು ಕಿತ್ತು ಹಾರಾಡುತ್ತಿದ್ದಂತೆ, ಜನರು ಗ್ಯಾಲರಿಯತ್ತ ಓಡಿದರು. ಚದುರಿ ಕ್ರೀಡಾಂಗಣದ ಪ್ರೇಕ್ಷಕರ ಇದೆಲ್ಲವೂ ಕಂಡು ಮಳೆಯಲ್ಲೇ ಜನರತ್ತ ಧಾವಿಸಿದ ಡಾ.ಅಜಯ್ ಸಿಂಗ್, ಜನರ ಸುರಕ್ಷತೆ ವಿಚಾರಿಸಿದರು.

ಜೇವರ್ಗಿಯಲ್ಲಿ ಶುಕ್ರವಾರ ಸುರಿಯುತ್ತಿದ್ದ ಮಳೆಯಲ್ಲೇ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಿದರು. ಅಭ್ಯರ್ಥಿ ಡಾ. ಅಜಯ್ ಸಿಂಗ್ ಮತ್ತು ಪ್ರಮುಖರು ಇದ್ದಾರೆ (ಎಡಚಿತ್ರ). ಮಳೆಯಿಂದ ತಪ್ಪಿಸಿಕೊಳ್ಳಲು ಜನರು ತಲೆಯ ಮೇಲೆ ಕುರ್ಚಿ ಹೊತ್ತು ನಿಂತರು –ಪ್ರಜಾವಾಣಿ ಚಿತ್ರಗಳು

ಬಳ್ಳಾರಿಯನ್ನು ಜೀನ್ಸ್ ರಾಜಧಾನಿ ಮಾಡುತ್ತೇವೆ'

ಬಳ್ಳಾರಿ: 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಬಳ್ಳಾರಿಯನ್ನು ದೇಶದ ಜೀನ್ಸ್ ರಾಜಧಾನಿ ಮಾಡಲಾಗುವುದು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾನ ನೀಡಿದರು.

ಇಲ್ಲಿನ ಎಚ್.ಆರ್.ಗವಿಯಪ್ಪ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿದ ರಾಹುಲ್ ಭಾಷಣ ಆರಂಭಿಸುತ್ತಿದ್ದಂತೆ ಮಳೆ ಜಿನುಗಲಾರಂಭಿಸಿತು. ಮಳೆಯಲ್ಲೇ 15 ನಿಮಿಷ ಮಾತನಾಡಿದರು. ಜನರೂ ಮಳೆಯಲ್ಲೇ ನಿಂತು ಅವರ ಮಾತು ಆಲಿಸಿದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಜೀನ್ಸ್ ರಾಜಧಾನಿ ಸ್ಥಾಪನೆಗಾಗಿ ಬಜೆಟ್‌ನಲ್ಲಿ ₹ 5,000 ಕೋಟಿ ಒದಗಿಸಲಾಗುವುದು. ಇದು ಕಾಂಗ್ರೆಸ್ ವಾಗ್ದಾನವಲ್ಲ. ನನ್ನ ವೈಯಕ್ತಿಕ ವಾಗ್ದಾನ. ನಾನು ಬರೀ ಹೇಳುವ ವ್ಯಕ್ತಿಯಲ್ಲ; ಹೇಳಿದ್ದನ್ನು ಮಾಡುವ ವ್ಯಕ್ತಿ. ಪ್ರಧಾನಿ ಮೋದಿ ಸುಳ್ಳು ಹೇಳುತ್ತಾರೆ. ನಾನು ಆ ತರಹದವನಲ್ಲ' ಎಂದು ಕುಟುಕಿದರು.

'ಎಷ್ಟೇ ಮಳೆಯಾದರೂ ರಾಹುಲ್ ಗಾಂಧಿ ಅವರು ಬರುವುದು ಖಚಿತ' ಎಂದು ಸಮಾಧಾನ ಪಡಿಸಿದರು.

'ಇದು ಕಳ್ಳ ಸರ್ಕಾರ': ಸ್ವಾಗತ ಭಾಷಣ, ಉದ್ಘಾಟನೆಗೂ ಕಾಯದೇ ವೇದಿಕೆಯನ್ನೇರಿ ನೇರವಾಗಿ ಮೈಕ್ ಮುಂದೆ ನಿಂತ ರಾಹುಲ್ ಗಾಂಧಿ, 'ರಾಜ್ಯದಲ್ಲಿ ಇರುವುದು ಕಳ್ಳ ಸರ್ಕಾರ. ಇದು ಜನರು ಆಯ್ಕೆ ಮಾಡಿದಲ್ಲ. ಶಾಸಕರನ್ನು ಹಣದಿಂದ ಖರೀದಿಸಿ ರಚಿತ ಸರ್ಕಾರ. ಪ್ರತಿ ಕೆಲಸಕ್ಕೆ 40 ಪರ್ಸೆಂಟ್ ಕಮಿಷನ್ ಪಡೆದ ಸರ್ಕಾರ' ಎಂದು ಬಿಜೆಪಿ ವಿರುದ್ಧ ಟೀಕಾ ಪ್ರಹಾರ ಮಾಡುತ್ತಿದ್ದಂತೆ ಜನರು ಓಡಿ ಬಂದರು.

'ನಾವು ಕೊಟ್ಟ ಭರವಸೆಗಳ ಈಡೇರಿಕೆ ಅಸಾಧ್ಯವೆಂದು ಪ್ರಧಾನಿ ಮೋದಿ ಹೇಳುತ್ತಾರೆ. ಸರ್ಕಾರಿ ಯೋಜನೆಗಳಲ್ಲಿ 40 ಪರ್ಸೆಂಟ್ ಕದಿಯುವವರಿಂದ ಇಂತಹ ಆಶ್ವಾಸನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ. ಹೀಗಾಗಿ, ಅವರು ಇದು ಅಸಾಧ್ಯ ಎನ್ನುತ್ತಿದ್ದಾರೆ. ಅವರು ಏನೇ ಮಾಡಿದರೂ ನಾವು ಅಧಿಕಾರಕ್ಕೆ ಬರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ' ಎಂದರು.

ಈ ಕಾರ್ಯಕ್ರಮದ ಬಳಿಕ ರಾಹುಲ್ ಗಾಂಧಿಯವರು ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಬೇಕಿತ್ತು. ಆದರೆ, ಹವಾಮಾನ ವೈಪರೀತ್ಯದಿಂದ ಅವರಿಗೆ ಭಾಗವಹಿಸಲು ಸಾಧ್ಯವಾಗಲಿಲ್ಲ.

ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ಉಚಿತ ಬಸ್ ಪಾಸ್: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಈ ಬಾರಿ ಬಿಜೆಪಿ ಸರ್ಕಾರ ರಚನೆಯಾದರೆ ಎಲ್ಲ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಿಸಲಾಗುವುದು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಘೋಷಿಸಿದರು.

ಜಿಲ್ಲೆಯ ಕಮಲಾಪುರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಮತ್ತಮಡು ಪರ ಶುಕ್ರವಾರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ನಾನು ಮುಖ್ಯ ಮಂತ್ರಿಯಾಗಿದ್ದಾಗ ಭಾಗ್ಯಲಕ್ಷ್ಮಿ ಯೋಜನೆ, ಉಚಿತ ವಿದ್ಯುತ್, ಬಡ್ಡಿರಹಿತ ಸಾಲ ಸೇರಿದಂತೆ ಅನೇಕ ಜನ ಪರ ಯೋಜನೆಗಳನ್ನು ಜಾರಿಗೊಳಿಸಿದ್ದೇನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮೀಸಲಾತಿ ಹೆಚ್ಚಿಸಿದ್ದೇವೆ. ಬಸವಕಲ್ಯಾಣ ಅಭಿವೃದ್ಧಿಗೆ ₹ 600 ಕೋಟಿ ನೀಡಿದ್ದೇನೆ. ಹೀಗಾಗಿ, ಈ ಬಾರಿಯೂ ಪಕ್ಷ ಅಧಿಕಾರಕ್ಕೆ ಬಂದರೆ ಉಚಿತ ಬಸ್ ಪಾಸ್ ಘೋಷಣೆ ಈಡೇರಿಸಲಿದ್ದೇವೆ' ಎಂದರು.

'ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಲು ಹಿಂದೆ ಮುಂದೆ ನೋಡುವ ಈ ದಿನಗಳಲ್ಲಿ ನಾನು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ. ಶಿಕಾರಿಪುರದಲ್ಲಿ ನನ್ನ ಮಗ ವಿಜಯೇಂದ್ರ ಸ್ಪರ್ಧಿಸಿದ್ದರೂ ನಾನು ಅಲ್ಲಿ ಪ್ರಚಾರಕ್ಕೆ ಹೋಗುವ ಬದಲು ರಾಜ್ಯದ ವಿವಿಧೆಡೆ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡುತ್ತಿದ್ದೇನೆ. ನನ್ನ ಮಗ 50 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ' ಎಂದರು.

'ಪ್ರಜಾವಾಣಿ' ವರದಿ ಓದಿದ ಬಿಎಸ್‌ವೈ: ಅಫಜಲಪುರದಲ್ಲಿ ಬಿಜೆಪಿ ಅಭ್ಯರ್ಥಿ ಮಾಲೀಕಯ್ಯ ಗುತ್ತೇದಾರ ಪರ ಪ್ರಚಾರ ಸಭೆಯಲ್ಲಿ, ತಮ್ಮ ಭಾಷಣವನ್ನು 'ಪ್ರಜಾವಾಣಿ'ಯ ಮುಖಪುಟದಲ್ಲಿ ಪ್ರಕಟವಾದ 'ವಿಷ'ದ ಮಾತಿನ ಕೋಲಾಹಲ ವರದಿ ಓದುವುದರ ಮೂಲಕ ಆರಂಭಿಸಿದ ಯಡಿಯೂರಪ್ಪ, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಮೋದಿ ಅವರನ್ನು ವಿಷ ಸರ್ಪಕ್ಕೆ ಹೋಲಿಸುವ ಮೂಲಕ ಇಡೀ ವಿಶ್ವವೇ ಮೆಚ್ಚಿದ ನಾಯಕನನ್ನು ಅವಮಾನ ಮಾಡಿದ್ದಾರೆ' ಎಂದರು.

'ದೊಂಬಿ ನಡೆಸಿ ಚುನಾವಣೆ ಗೆಲ್ಲಲು ಶಾ ಸಂಚು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೊಂಬಿ ನಡೆಸಿ ಕರ್ನಾಟಕದ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಚು ನಡೆಸಿದ್ದಾರೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೊಂಬಿ ಆಗುತ್ತದೆ ಎಂದು ಅಮಿತ್ ಶಾ ಹೇಳಿಕೆ ನೀಡಿದ್ದಾರೆ. ಚುನಾವಣೆಯಲ್ಲಿ ಬಿಜೆಪಿಯ ಗೆಲುವಿಗೆ ಪೂರಕವಾಗಿ ಗಲಭೆ ನಡೆಸಲು ಅವರು ಸಂಚು ನಡೆಸಿರುವುದಕ್ಕೆ ಇದು ಸಾಕ್ಷಿ' ಎಂದರು.

ರಾಜ್ಯದಲ್ಲಿ ಗಲಭೆ ಸೃಷ್ಟಿಸುವುದಕ್ಕೆ ಶಾ ಪ್ರಚೋದನೆ ನೀಡುತ್ತಿದ್ದಾರೆ. ಚುನಾವಣೆ ಮುಗಿಯುವವರೆಗೂ ಕರ್ನಾಟಕ ಪ್ರವೇಶಿಸದಂತೆ ಅವರಿಗೆ ಚುನಾವಣಾ ಆಯೋಗ ನಿರ್ಬಂಧ ಹೇರಬೇಕು ಎಂದು ಆಗ್ರಹಿಸಿದರು.

ಕರ್ನಾಟಕವು ಪುರಂದರದಾಸರು ಮತ್ತು ಕನಕದಾಸರು ನಡೆದಾಡಿದ ನೆಲ. ಇಲ್ಲಿ ಉತ್ತರ ಪ್ರದೇಶದ ಮಾದರಿಯ ಅಗತ್ಯವಿಲ್ಲ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ 27 ಕ್ರಿಮಿನಲ್ ಪ್ರಕರಣಗಳಿದ್ದವು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಮೊಕದ್ದಮೆಗಳನ್ನು ಹಿಂಪಡೆಯಲಾಗಿದೆ. ಅವರ ಮಾದರಿ ಈ ರಾಜ್ಯಕ್ಕೆ ಬೇಡ ಎಂದು ಹೇಳಿದರು.

'ಸೋನಿಯಾ ನಾಗಕನ್ಯೆ' ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, 'ಯತ್ನಾಳ ತರದವರಿಗೆ ಬಿಜೆಪಿಯವರು ಕೊಟ್ಟಿರುವ ತರಬೇತಿಯೇ ಹಾಗಿದೆ. ಅವರವರ ಭಾಷೆ ಅವರಿಗೆ. ಅದಕ್ಕೆ ಏನೂ ಮಾಡಲಾಗದು' ಎಂದರು.

ಗೀತಾ ಶಿವರಾಜ್‌ಕುಮಾರ್, ನಿಂಗಯ್ಯ ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರನಟ ಶಿವರಾಜ್‌ಕುಮಾರ್ ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಮತ್ತು ಮಾಜಿ ಸಚಿವ ಬಿ.ಬಿ. ನಿಂಗಯ್ಯ ಅವರು ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇಬ್ಬರಿಗೂ ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು.

ಗೀತಾ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ನಂತರ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. ಸೊರಬ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ತಮ್ಮ ಮಧು ಬಂಗಾರಪ್ಪ ಪರ ಪ್ರಚಾರ ನಡೆಸುವುದಕ್ಕಾಗಿ ಅವರು ಪಕ್ಷ ಸೇರಿದ್ದಾರೆ.

ನಿಂಗಯ್ಯ ಅವರು ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಅವರ ಹೆಸರನ್ನು ಮೊದಲ ಪಟ್ಟಿಯಲ್ಲಿ ಘೋಷಿಸಲಾಗಿತ್ತು. ಆದರೆ, ಕೊನೆ ಗಳಿಗೆಯಲ್ಲಿ ಬಿಜೆಪಿ ತೊರೆದು ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಜೆಡಿಎಸ್ ಸೇರಿದ ಎಂ.ಪಿ. ಕುಮಾರಸ್ವಾಮಿ ಅವರಿಗೆ ಟಿಕೆಟ್ ನೀಡಲಾಗಿತ್ತು.

ಇಬ್ಬರನ್ನೂ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಮಾತನಾಡಿದ ಶಿವಕುಮಾರ್, 'ಪಕ್ಷ ಸೇರುವಂತೆ ಗೀತಾ ಅವರಿಗೆ ಹಲವು ಬಾರಿ ಮನವಿ ಮಾಡಿದ್ದೆ. ಈಗ ಅವರು ಪಕ್ಷ ಘೋಷಿಸಿರುವ ಗ್ಯಾರಂಟಿಗಳ ಮೇಲೆ ನಂಬಿಕೆ ಇಟ್ಟು ಬಂದಿದ್ದಾರೆ' ಎಂದರು.

ಶಿವರಾಜ್‌ಕುಮಾರ್ ಅವರು ಸೊರಬ ಕ್ಷೇತ್ರದಲ್ಲಿ ಮಾತ್ರ ಪ್ರಚಾರ ನಡೆಸುತ್ತಾರೆಯೇ ಎಂಬ ಪ್ರಶ್ನೆಗೆ, 'ಅವರು ಪತ್ನಿಯನ್ನು ಕಾಂಗ್ರೆಸ್ ಕಚೇರಿಗೆ ಕಳುಹಿಸಿಕೊಟ್ಟಿದ್ದಾರೆ. ಪತ್ನಿ ಗೀತಾ ಈಗ ಕಾಂಗ್ರೆಸ್ ಸದಸ್ಯತ್ವ ಪಡೆದಿದ್ದಾರೆ. ಇಬ್ಬರ ದೇಹ ಬೇರೆಯಾದರೂ ಮನಸ್ಸು ಒಂದೇ' ಎಂದು ಉತ್ತರಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ, ಶಾಸಕ ಬೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್ ಇದ್ದರು.

ಪ್ರತ್ಯೇಕ ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಶಂಷುಲ್ಲಾ ಖಾನ್ ಹಾಗೂ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಸೊಹೇಲ್ ದಿಲ್ವಾಜಿ ಕೂಡ ಕಾಂಗ್ರೆಸ್ ಪಕ್ಷ ಸೇರಿದರು. ಎಐಸಿಸಿ ವಕ್ತಾರ ಗೌರವ್ ವಲ್ಲಭ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಇಬ್ಬರನ್ನೂ ಬರಮಾಡಿಕೊಂಡರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದ ಗೀತಾ ಶಿವರಾಜ್ ಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು. ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ಮಾಜಿ ಸಚಿವ ಬಿ.ಬಿ. ನಿಂಗಯ್ಯ, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ ಇದ್ದರು – ಪ್ರಜಾವಾಣಿ ಚಿತ್ರ

ಮುಸ್ಲಿಂ ಮೀಸಲಾತಿ ಮರಳಿ ತರಲು ಬಿಡೆವು: ಶಾ

ಪ್ರಜಾವಾಣಿ ವಾರ್ತೆ

ಧಾರವಾಡ: 'ಸಂವಿಧಾನದಲ್ಲಿ ಇರದ ಧರ್ಮಾಧಾರಿತ ಮೀಸಲಾತಿ ರಾಜ್ಯದಲ್ಲಿತ್ತು. ಅದನ್ನು ಬಿಜೆಪಿ ಸರ್ಕಾರ ತೆಗೆದುಹಾಕಿದೆ. ಮುಂದೆಂದೂ ಅದು ಮರಳಿ ಜಾರಿಯಾಗಲು ಬಿಡುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಅಣ್ಣಿಗೇರಿಯಲ್ಲಿ ಶುಕ್ರವಾರ ನಡೆದ ನವಲಗುಂದ ಹಾಗೂ ಗದಗ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳಾದ ಶಂಕರಪಾಟೀಲ ಮುನೇನಕೊಪ್ಪ ಹಾಗೂ ಅನಿಲ್ ಮೆಣಸಿನಕಾಯಿ ಪರವಾಗಿ ಪ್ರಚಾರ ಮಾಡಿ ಅವರು ಮಾತನಾಡಿದರು.

'ಕಾಂಗ್ರೆಸ್ ಜಾರಿಗೆ ತಂದಿದ್ದ ಈ ಧರ್ಮಾಧಾರಿತ ಮೀಸಲಾತಿಯನ್ನು ಬಿಜೆಪಿ ಸರ್ಕಾರ ತೆಗೆದುಹಾಕಿ, ಅದನ್ನು ಒಕ್ಕಲಿಗ, ಲಿಂಗಾಯತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಹಂಚಲಾಗಿದೆ. ಕಾಂಗ್ರೆಸ್ ಸರ್ಕಾರ ಬಂದರೆ ಈ ಮೀಸಲಾತಿಯನ್ನು ಮರಳಿ ತರುವುದಾಗಿ ಕಾಂಗ್ರೆಸ್ ಅಧ್ಯಕ್ಷರು ಹೇಳಿದ್ದಾರೆ. ಯಾರ ಮೀಸಲಾತಿಯನ್ನು ಕಸಿದುಕೊಳ್ಳಲಿದ್ದಾರೆ ಎಂಬುದನ್ನು ಅವರೇ ಸ್ಪಷ್ಟಪಡಿಸಲಿ' ಎಂದು ಸವಾಲು ಹಾಕಿದರು.

'ನನ್ನ ವಿರುದ್ಧ ಕಾಂಗ್ರೆಸ್‌ನವರು ಪೊಲೀಸರಿಗೆ ದೂರು ನೀಡಿದ್ದಾರೆ. ಪಿಎಫ್‌ಐನಂತ ದೇಶದ್ರೋಹಿ ಸಂಘಟನೆ ವಿರುದ್ಧ ಬಿಜೆಪಿ ಸರ್ಕಾರ ಕೈಗೊಂಡ ಕ್ರಮದಿಂದಾಗಿ ಕರ್ನಾಟಕವನ್ನು ನಾವು ರಕ್ಷಿಸಿದ್ದೇವೆ. ಪ್ರವೀಣ ನೆಟ್ಟಾರು ಹತ್ಯೆ, ದೇಶ ವಿಭಜಿಸುವ ಕೆಲಸ ಮಾಡುತ್ತಿದ್ದ ಇಂಥ ಸಂಘಟನೆಯನ್ನು ಕಾಂಗ್ರೆಸ್ ತನ್ನ ತಲೆ ಮೇಲೆ ಹೊತ್ತು ಮರೆಯುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಸಂಘಟನೆಯ ಒಬ್ಬೊಬ್ಬರನ್ನೂ ಹುಡುಕಿ, ಕಂಬಿಯ ಹಿಂದೆ ಕಳುಹಿಸುವ ಕೆಲಸ ಮಾಡಿದೆ. ಕಾಂಗ್ರೆಸ್ ನಾಯಕರ ದೂರಿಗೆ ನಾನು ಹೆದರಬೇಕಿಲ್ಲ' ಎಂದರು.

'ಒಂದು ಕಾಲದಲ್ಲಿ ಕೇಂದ್ರ, ರಾಜ್ಯ ಹಾಗೂ ಪಕ್ಕದ ಗೋವಾದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ಆಗ ಮಹದಾಯಿ ನದಿಯ ವಿವಾದ ಇತ್ಯರ್ಥಪಡಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ನರೇಂದ್ರ ಮೋದಿ ಸರ್ಕಾರವು ಅದನ್ನು ಸಾಧ್ಯವಾಗಿಸಿತು. ಜತೆಗೆ ಕಳಸಾ ಬಂಡೂರಿ ನಾಲಾ ಯೋಜನೆಗೂ ಅಸ್ತು ಎಂದಿದೆ. ಇದರೊಂದಿಗೆ ಭದ್ರಾ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಗಳಿಗೂ ನೂರಾರು ಕೋಟಿ ರೂಪಾಯಿ ಹಣ ನೀಡಿದೆ. ಇದು ಸಾಧ್ಯವಾಗಿದ್ದು ಡಬ್ಬಲ್ ಎಂಜಿನ್ ಸರ್ಕಾರದಿಂದ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಿವರ್ಸ್ ಗೇರ್ ಮೂಲಕ ರಾಜ್ಯ ಹಿಮ್ಮುಖವಾಗಿ ಚಲಿಸಲಿದೆ' ಎಂದು ಶಾ ಎಚ್ಚರಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇದ್ದರು.

ಗುಜರಾತ್‌ನ ರಾಣಿಯರಾದ ರಾಜ್ಯದ ಪುತ್ರಿಯರ ನೆನೆದ ಶಾ

'ಕಿತ್ತೂರು ಸಂಸ್ಥಾನದ ಮೃನಾಲ್ ದೇವಿ ಹಾಗೂ ನಾಯಿಕಾ ದೇವಿಯರು ಗುಜರಾತ್‌ನ ರಾಜ ಮನೆತನದ ಸೊಸೆಯರಾಗಿ ಅದ್ಭುತ ಕೆಲಸಗಳನ್ನು ಮಾಡಿದ್ದಾರೆ. ಮಹಮ್ಮದ್ ಘೋರಿಯನ್ನು ಹಿಮ್ಮೆಟ್ಟಿಸಲು ಹಾಗೂ ರಾಜ್ಯದ ಅಭಿವೃದ್ಧಿಗೆ ಕಾರಣರಾಗಿದ್ದು, ಅಲ್ಲಿನ ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ' ಎಂದು ಶಾ ಹೇಳಿದರು, ಭಾಷಣದ ಆರಂಭಕ್ಕೂ ಮೊದಲು ರಾಮಲಿಂಗ ಕಾಮಣ್ಣ, ಅಮೃತೇಶ್ವರ, ಕನ್ನಿಕಾ ಪರಮೇಶ್ವರಿ ದೇವಿ, ಮೂರುಸಾವಿರ ಮಠ, ಸಿದ್ಧಾರೂಢ ಮಠ ಹಾಗೂ ಬಸವಣ್ಣನವರನ್ನು ನೆನಪಿಸಿಕೊಂಡರು.

ಲಿಂಗಾಯತ ನಾಯಕತ್ವ ಹೊರಗಿಟ್ಟು ಸರ್ಕಾರ ರಚಿಸಲು ಬಿಜೆಪಿ ಯತ್ನ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲಿಂಗಾಯತ ನಾಯಕತ್ವವನ್ನು ಸಂಪೂರ್ಣವಾಗಿ ನಾಶ ಮಾಡುವುದು ಹಾಗೂ ಲಿಂಗಾಯತ ನಾಯಕತ್ವವನ್ನು ಹೊರಗಿಟ್ಟು ಸರ್ಕಾರ ರಚಿಸುವ ಪ್ರಯತ್ನ ಬಿಜೆಪಿಯಲ್ಲಿ ನಡೆದಿದೆ' ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಂಬರ್ 1 ಸ್ಥಾನದ (ಮುಖ್ಯಮಂತ್ರಿ) ಮೇಲೆ ಕಣ್ಣಿಟ್ಟಿರುವ ಕೆಲವು ವ್ಯಕ್ತಿಗಳು ಇದೇ ಕಾರಣಕ್ಕಾಗಿ ನನ್ನ ವಿರುದ್ಧ ಷಡ್ಯಂತ್ರ ನಡೆಸಿದರು. ನನಗೆ ಟಿಕೆಟ್ ಸಿಗದಂತೆ ನೋಡಿಕೊಂಡರು' ಎಂದು ಹರಿಹಾಯ್ದರು.

ಇದು ಸೆಮಿಫೈನಲ್: ಈ ಚುನಾವಣೆ ಜೋಶಿ ಹಾಗೂ ಶೆಟ್ಟರ್ ನಡುವಿನ ಹೋರಾಟ ಎನ್ನುವಂತಾಗಿದೆಯೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಇದು ಮುಂಬರುವ ಲೋಕಸಭಾ ಚುನಾವಣೆಯ ಸೆಮಿಫೈನಲ್‌ನಂತೆ ನಡೆಯುತ್ತಿದೆ' ಎಂದರು.

ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಿರಾ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, 'ಸದ್ಯಕ್ಕೆ ಕಾಂಗ್ರೆಸ್ ಸೇರಿದ್ದೇನೆ. ಟ್ರಯಲ್ ಎನ್ನುವಂತೆ ಈ ಚುನಾವಣೆಗೆ ನಿಲ್ಲಿಸಿದ್ದಾರೆ. ಮುಂದಿನದ್ದು ಇನ್ನೂ ನಿರ್ಧಾರವಾಗಿಲ್ಲ' ಎಂದು ಹೇಳಿದರು.

ಶೆಟ್ಟರ್ ಬೆಂಬಲಿಗರ ಉಚ್ಚಾಟನೆ

ಹುಬ್ಬಳ್ಳಿ: ಬಿಜೆಪಿ ತೊರೆದು ಕಾಂಗ್ರೆಸ್‌ನಿಂದ ಚುನಾವಣೆಗೆ ಸ್ಪರ್ಧಿಸಿರುವ ಜಗದೀಶ ಶೆಟ್ಟರ್ ಅವರೊಂದಿಗೆ ಗುರುತಿಸಿಕೊಂಡಿರುವ 27 ಮಂದಿಯನ್ನು, ಬಿಜೆಪಿ ಆರು ವರ್ಷ ಉಚ್ಚಾಟನೆ ಮಾಡಿದೆ.

ಶೆಟ್ಟರ್ ಆಪ್ತರಾದ ಹುಬ್ಬಳ್ಳಿ–ಧಾರವಾಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಾಗೇಶ ಕಲಬುರ್ಗಿ, ಕೆಎಸ್‌ಡಿಎಲ್ ಮಾಜಿ ನಿರ್ದೇಶಕ ಮಲ್ಲಿಕಾರ್ಜುನ ಸಾವಕಾರ, ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಮಹೇಶ ಬುರ್ಲಿ, ಭಾರತಿ ಟಪಾಲ, ಅಲ್ಪಸಂಖ್ಯಾತ ಮೋರ್ಚಾದ ಹಟೇಲಸಾಬ ಮುಲ್ಲಾ ಸೇರಿದಂತೆ 27 ಮಂದಿಯನ್ನು ಪಕ್ಷ ವಿರೋಧಿ ಚಟುವಟಿಕೆಗಾಗಿ ಉಚ್ಚಾಟನೆ ಮಾಡಲಾಗಿದೆ ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸಂತೋಷ ಚವ್ಹಾಣ ತಿಳಿಸಿದ್ದಾರೆ.

ಉಚ್ಚಾಟನೆಯಾಗಿರುವವರ ಪೈಕಿ ಕೆಲವರು ಈಗಾಗಲೇ ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ.

ಬಿಜೆಪಿ ಸೋಲಿಸಿ: ಜನವಾದಿ ಮಹಿಳಾ ಸಂಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾತಂತ್ರ ರಕ್ಷಣೆ, ಸಂವಿಧಾನದ ಉಳಿವಿಗಾಗಿ ಕೋಮುವಾದಿ ಬಿಜೆಪಿ ಸೋಲಿಸಬೇಕು. ರಾಜ್ಯದ ನಾಗರಿಕರು ಹೊಣೆ ಅರಿತು ಮತ ಚಲಾಯಿಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕೋರಿದೆ.

ಕೋವಿಡ್ ಸಮಯದಲ್ಲಿ ಮಧ್ಯಮ ವರ್ಗದವರು ಬಡವರಾಗಿದ್ದಾರೆ. ಬಡವರು ನಿರ್ಗತಿಕರಾಗಿದ್ದಾರೆ. ಕೂಲಿ ಕಾರ್ಮಿಕರು ದಿವಾಳಿಯಾಗಿದ್ದಾರೆ. ಇಂತಹ ಸ್ಥಿತಿಯಲ್ಲಿ ಜನರು ಬದುಕುತ್ತಿದ್ದರೂ, ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಬೆಲೆ ಏರಿಕೆ ನಿಯಂತ್ರಣಕ್ಕೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಅಡುಗೆ ಅನಿಲ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ ಎಂದು ಸಂಘಟನೆ ದೂರಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಲ್ಲಿ ಶಿಕ್ಷಣದ ಕೇಸರೀಕರಣ ನಡೆಯುತ್ತಿದೆ. ಪದವಿ ಪರಿಕಲ್ಪನೆಯನ್ನೇ ವಿರೂಪಗೊಳಿಸಲಾಗಿದೆ. ಒಂದು ವರ್ಷಕ್ಕೆ ಪದವಿ ಪ್ರಮಾಣ ಪತ್ರ ನೀಡುವ ಅವರು, ಯುವಜನರಿಗೆ ಉದ್ಯೋಗ ನೀಡಲು ಸಾಧ್ಯವೇ? ಮಹಿಳೆಯರನ್ನು ಶಿಕ್ಷಣದಿಂದ ವಂಚಿತರಾಗಿಸುವ ಹುನ್ನಾರವೂ ಅಡಗಿದೆ. ಪಠ್ಯಪುಸ್ತಕದಲ್ಲಿನ ಸಾಮರಸ್ಯದ ವಿಚಾರಗಳಿಗೂ ಕತ್ತರಿ ಹಾಕಲಾಗುತ್ತಿದೆ. ರಾಜ್ಯದಲ್ಲೂ ಪಠ್ಯಪುಸ್ತಕ ವಿರೂಪಗೊಳಿಸಲಾಗಿದೆ. ಅದಕ್ಕಾಗಿ ಶಿಕ್ಷಣ ತಜ್ಞರಲ್ಲದವರನ್ನು ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿ, ಅಧ್ವಾನ ಮಾಡಲಾಗಿದೆ ಎಂದು ಆರೋಪಿಸಿದೆ.

ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದು ರೈತರ ಬೆನ್ನು, ಮೂಳೆ ಮುರಿಯಲಾಗಿದೆ. ಶ್ರೀಮಂತ ಮಧ್ಯವರ್ತಿಗಳಿಗೆ ಅವಕಾಶ ಮಾಡಿಕೊಡಲಾಗಿದೆ. ದುಡಿಯುವ ಅವಧಿ ಹೆಚ್ಚಿಸಿ, ಕಾರ್ಮಿಕರು, ಮಹಿಳಾ ಕಾರ್ಮಿಕರ ಸ್ಥಿತಿಯನ್ನು ಶೋಚನೀಯಗೊಳಿಸಿದೆ. ಉದ್ಯಮಿಗಳ ಪರ ಸರ್ಕಾರ ನಿಂತಿದೆ. ಕೋವಿಡ್ ಸಂಕಷ್ಟದಲ್ಲೂ ಹಣ ದೋಚಲಾಗಿದೆ. ಮಹಿಳೆಯ ಹಣೆಯಲ್ಲಿ ಕುಂಕುಮ ಇಲ್ಲವೆಂದು ಕೋಲಾರದ ಬಿಜೆಪಿ ಸಂಸದರು ಹೀಯಾಳಿಸಿದ್ದರು. ಯುವಜನರ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಮಹಿಳೆಯರು, ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ ಎಂದೂ ಸಂಘಟನೆ ಹೇಳಿದೆ.

ಸ್ವಯಂ ಘೋಷಿತ ಗೋರಕ್ಷಕರು ಜನರ ಜೀವವನ್ನೇ ತೆಗೆಯುತ್ತಿದ್ದಾರೆ. ಕೋಮುವಾದದ ಅಗ್ನಿಕುಂಡಕ್ಕೆ ಬಡವರ ಮಕ್ಕಳನ್ನು ದೂಡುತ್ತಿದ್ದಾರೆ. ಚುನಾವಣೆಯಲ್ಲಿ ಅಭಿವೃದ್ಧಿ ವಿಚಾರಗಳಿಗಿಂತ ಕೋಮು ವಿಚಾರಗಳೇ ಅವರ ಅಸ್ತ್ರಗಳಾಗಿವೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ಹಾಳುಗೆಡವಲಾಗಿದೆ. ಶಾಸನ ಸಭೆಯಲ್ಲಿ ಮಹಿಳೆಯರನ್ನು ಕಡೆಗಣಿಸಲಾಗಿದೆ. ಇಂತಹ ಬಿಜೆಪಿ ಸೋಲಿಸಲು ರಾಜ್ಯದ ಪ್ರತಿಯೊಬ್ಬರೂ ಪಣತೊಡಬೇಕು ಎಂದು ಸಂಘಟನೆ ಉಪಾಧ್ಯಕ್ಷೆ ವಿಮಲಾ ಕೆ.ಎಸ್. ಮನವಿ ಮಾಡಿದ್ದಾರೆ.

ಯತ್ನಾಳ ಹೇಳಿಕೆಯನ್ನು ಕಾಂಗ್ರೆಸ್ ಸಹಿಸುವುದಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರನ್ನು ನಾಗಕನ್ಯೆ ಎಂದು ಕರೆದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳರ ಹೇಳಿಕೆಯನ್ನು ಕಾಂಗ್ರೆಸ್ ಸಹಿಸುವುದಿಲ್ಲ. ನಮ್ಮ ಕಾರ್ಯಕರ್ತರು ರೊಚ್ಚಿಗೇಳುವ ಮುನ್ನ ಬಿಜೆಪಿ ವರಿಷ್ಠರು ಯತ್ನಾಳರ ವಿರುದ್ಧ ಕ್ರಮ ಜರುಗಿಸಬೇಕು' ಎಂದರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯತ್ನಾಳರ ಹೇಳಿಕೆಯಿಂದ ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿರುವ ಮಹಿಳೆಯರಿಗೆ ಅವಮಾನವಾಗಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ನಿಜವಾಗಿಯೂ ಮಹಿಳೆಯರ ಮೇಲೆ ಗೌರವವಿದ್ದರೆ ಯತ್ನಾಳ ಅವರನ್ನು ತಕ್ಷಣವೇ ಪಕ್ಷದಿಂದ ಉಚ್ಚಾಟಿಸಬೇಕು' ಎಂದು ಒತ್ತಾಯಿಸಿದರು.

'ಮಹಿಳೆಯರನ್ನು, ನೆಹರೂ ಕುಟುಂಬವನ್ನು, ಗಾಂಧಿ ಕುಟುಂಬವನ್ನು ಟೀಕಿಸುವುದು ಬಿಜೆಪಿಯವರಿಗೆ ಚಾಳಿಯಾಗಿಬಿಟ್ಟಿದೆ. ಇದನ್ನು ಕಾಂಗ್ರೆಸ್ ಪಕ್ಷ ಸಹಿಸುವುದಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ರೊಚ್ಚಿಗೇಳುವ ಮುನ್ನ ಯತ್ನಾಳ್‌ರನ್ನು ಪಕ್ಷದಿಂದ ಹೊರಹಾಕಿ' ಎಂದರು.

'ಮಿಸ್ಟರ್ ಯತ್ನಾಳ್ ನಿನ್ನ ನಾಲಿಗೆಯನ್ನು ಯಾರು ಏನು ಮಾಡುತ್ತಾರೋ ಗೊತ್ತಿಲ್ಲ. ಸಂಸ್ಕೃತಿ ಇರುವ ಈ ರಾಜ್ಯದ ಜನ ಏನು ಮಾಡುತ್ತಾರೋ ಗೊತ್ತಿಲ್ಲ. ತಾಯಿ ಸಮಾನರಾದ ಸೋನಿಯಾ ಗಾಂಧಿ ಅವರನ್ನು ವಿಷ ಕನ್ಯೆ ಎಂದು ಕರೆದಿರುವುದನ್ನು ಕಾಂಗ್ರೆಸ್ ಪಕ್ಷ ಸಹಿಸಿಕೊಳ್ಳುವುದಿಲ್ಲ' ಎಂದು ಶಿವಕುಮಾರ್ ಏಕವಚನದಲ್ಲಿ ಹರಿಹಾಯ್ದರು.

'ಯತ್ನಾಳ ಕೆಟ್ಟ ಮನುಷ್ಯ. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ಕೀಳುಮಟ್ಟದ ಟೀಕೆಗೆ ಇಳಿದಿದ್ದ. ಮುಖ್ಯಮಂತ್ರಿ ಹುದ್ದೆಗೆ ₹ 2,500 ಕೋಟಿ ಪಡೆಯುತ್ತಾರೆ ಎಂದು ಬಿಜೆಪಿ ನಾಯಕರ ವಿರುದ್ಧವೇ ಆರೋಪ ಮಾಡಿದ್ದ. ಆಗ ಆತನ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಅದೇ ಕಾರಣದಿಂದ ಈಗ ಇನ್ನಷ್ಟು ಕೀಳುಮಟ್ಟಕ್ಕೆ ಇಳಿದಿದ್ದಾನೆ' ಎಂದು ಹೇಳಿದರು.

ಯಾರಿಂದ ಅನುಮತಿ ಪಡೆಯಲಾಗಿತ್ತು?: 'ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಕಾರ್ಯಕರ್ತರ ಸಭೆ ನಡೆಸಿದ್ದಾರೆ. 50 ಲಕ್ಷ ಕಾರ್ಯಕರ್ತರ ಜತೆ ಸಭೆ ನಡೆಸಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ಯಾರಿಂದ ಅನುಮತಿ ಪಡೆಯಲಾಗಿತ್ತು? ಮತ್ತು ಈ ಸಭೆಯ ವೆಚ್ಚವನ್ನು ಯಾರ ಲೆಕ್ಕಕ್ಕೆ ಪರಿಗಣಿಸಲಾಗುತ್ತದೆ ಎಂಬುದನ್ನು ಕೇಂದ್ರ ಚುನಾವಣಾ ಆಯೋಗ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

ಕ್ಷಮೆಯಾಚನೆಗೆ ಕಾಂಗ್ರೆಸ್ ನಾಯಕಿಯರ ಆಗ್ರಹ

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಸೋನಿಯಾ ಗಾಂಧಿ ನಾಗಕನ್ನಿಕೆಯೇ' ಎಂದು ಪ್ರಶ್ನಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಈ ನೆಲದ ಹೆಣ್ಣು ಮಗಳಿಗೆ ಅವಮಾನಿಸಿದ್ದಾರೆ. ಯತ್ನಾಳ ಮತ್ತು ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸುವ ಮೂಲಕ ಮತದಾರರು ತಕ್ಕ ಉತ್ತರ ನೀಡುವರು' ಎಂದು ಕಾಂಗ್ರೆಸ್ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ನೆಟ್ಟಾ ಡಿಸೋಜಾ ತಿಳಿಸಿದರು.

ಕುಷ್ಟಗಿಯಲ್ಲಿ ಶುಕ್ರವಾರ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ ಮಹಿಳೆಯರ ಜೊತೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮತದಾರರಿಂದ ಬಿಜೆಪಿಗೆ ತಕ್ಕ ಪಾಠ ಕಲಿಸುವರು' ಎಂದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಕಾಂಗ್ರೆಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ, 'ಮಲ್ಲಿಕಾರ್ಜುನ ಖರ್ಗೆ ತಮ್ಮ ಹೇಳಿಕೆಗೆ ಈಗಾಗಲೇ ವಿಷಾದಿಸಿದ್ದಾರೆ. ಇದರ ಬಗ್ಗೆ ಪದೇಪದೆ ಚರ್ಚೆ ಅಗತ್ಯವಿಲ್ಲ. ಯತ್ನಾಳ ಮಹಿಳೆಗೆ ಅಪಮಾನಿಸಿದ್ದಾರೆ. ಸೋನಿಯಾ ಗಾಂಧಿ ಈ ದೇಶದ ಸೊಸೆ. ಇಲ್ಲಿನ ಸಂಸ್ಕೃತಿ ಒಪ್ಪಿಕೊಂಡು ಬಂದ ಹೆಣ್ಣುಮಗಳನ್ನು ಅವಮಾನಿಸಿದ್ದು ಸರಿಯೇ' ಎಂದರು.

₹ 5.88 ಕೋಟಿ ಮೌಲ್ಯದ ಸ್ವತ್ತುಗಳ ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನೇಮಿಸಿರುವ ಜಾಗೃತ ದಳಗಳು ಹಾಗೂ ಸ್ಥಾಪಿಸಿರುವ ತನಿಖಾ ಠಾಣೆಗಳ ವ್ಯಾಪ್ತಿಯಲ್ಲಿ ಗುರುವಾರ ಒಂದೇ ದಿನ ₹ 2.57 ಕೋಟಿ ನಗದು ಸೇರಿದಂತೆ ₹ 5.88 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, '₹ 6.63 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 2.34 ಕೋಟಿ ಮೌಲ್ಯದ 88,177 ಲೀಟರ್ ಮದ್ಯ, ₹ 89.87 ಲಕ್ಷ ಮೌಲ್ಯದ 139.45 ಕೆ.ಜಿ. ಮಾದಕ ವಸ್ತುಗಳು ಗುರುವಾರ ವಶಪಡಿಸಿಕೊಂಡಿರುವ ಸ್ವತ್ತುಗಳಲ್ಲಿ ಸೇರಿವೆ' ಎಂದು ತಿಳಿಸಿದ್ದಾರೆ.

ಈವರೆಗೆ ಒಟ್ಟು ₹ 292.06 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ 2,226 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 28,127 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮತದಾನದ ಮಹತ್ವ, ಗಾಂಧಿ ತತ್ವದ ಪ್ರಚಾರದಲ್ಲಿ ತೊಡಗಿದ ಪಕ್ಷೇತರ ಅಭ್ಯರ್ಥಿ

ಚುನಾವಣಾ ಅಖಾಡದಲ್ಲಿ ಗಾಂಧಿವಾದಿ ಹೋರಾಟ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಚರಕ, ಖಾದಿ ಬಟ್ಟೆ ಹಾಗೂ ಸರಳ ಜೀವನದ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿದ್ದ ಡಾ.ಎಚ್.ಕೆ.ಎಸ್. ಸ್ವಾಮಿ ಪಕ್ಷೇತರ ಅಭ್ಯರ್ಥಿಯಾಗಿ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಅಖಾಡಕ್ಕೆ ಧುಮುಕಿದ್ದಾರೆ. ಆಮಿಷಕ್ಕೆ ಒಳಗಾಗದೇ ಮತದಾನ ಮಾಡುವಂತೆ ಜಾಗೃತಿ ಮೂಡಿಸುತ್ತಿದ್ದಾರೆ.

ಅಭ್ಯರ್ಥಿಯ ಈ ಅಭಿಯಾನಕ್ಕೆ ಪುತ್ರಿಯರಿಬ್ಬರು ಜೊತೆಯಾಗಿದ್ದಾರೆ. ಸೈಕಲ್ ಏರಿ ಕ್ಷೇತ್ರ ಸಂಚರಿಸುವ ಈ ಕುಟುಂಬ ಮತಯಾಚನೆ ಮಾಡುವ ಬದಲು ಸಾಮಾಜಿಕ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುತ್ತಿದೆ. ಅಭ್ಯರ್ಥಿಯ ಈ ನಡೆ ರಾಜಕಾರಣಿಗಳು ಹುಬ್ಬೇರಿಸುವಂತೆ ಮಾಡಿದೆ.

ಚಿತ್ರದುರ್ಗದ ಲಕ್ಷ್ಮಿ ಬಜಾರ್‌ನಲ್ಲಿ ಗಾಂಧಿವಾದಿ ಡಾ.ಎಚ್.ಕೆ. ಎಸ್.ಸ್ವಾಮಿ ಅವರು ಪುತ್ರಿಯರೊಂದಿಗೆ ಮತದಾನ ಜಾಗೃತಿ ಮೂಡಿಸುತ್ತ ಮತಯಾಚನೆ ಮಾಡಿದರು

ಔಷಧ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ಚಿತ್ರದುರ್ಗದ ಎಸ್‌ಜೆಎಂ ಫಾರ್ಮಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಸ್ವಾಮಿ ಅವರು ಮಹಾತ್ಮ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದಾರೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿ ಹೊರರಾಜ್ಯದಲ್ಲಿಯೂ ಗಾಂಧಿ ತತ್ವ ಪಸರಿಸುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಚರಕ ಹಿಡಿದು ಊರೂರು ಸುತ್ತಿ ಖಾದಿ ಬಟ್ಟೆಯ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಾರೆ. ಚುನಾವಣೆಗೆ ಸ್ಪರ್ಧಿಸಿರುವ ನಿರ್ಧಾರದ ಹಿಂದೆಯೂ ಗಾಂಧಿ ಪ್ರೇರಣೆ ಇದೆ.

> **ಜನರು ಅರ್ಹರನ್ನು ಆಯ್ಕೆ ಮಾಡಬೇಕಿದೆ. ಆಮಿಷಕ್ಕೆ ಒಳಗಾಗದೇ ಹಕ್ಕು ಚಲಾಯಿಸಿದರೆ ಇದು ಸಾಧ್ಯ. ಅಭ್ಯರ್ಥಿಯಾಗಿ ನೀಡುವ ಸಲಹೆ ಮತದಾರರನ್ನು ತಲುಪುತ್ತದೆ**
> **ಡಾ.ಎಚ್.ಕೆ. ಎಸ್.ಸ್ವಾಮಿ,** ಪಕ್ಷೇತರ ಅಭ್ಯರ್ಥಿ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರ

'ಗಾಂಧೀಜಿ ಬರಹ ಅಧ್ಯಯನ ಮಾಡುವಾಗ ರಾಜಕೀಯ ಅಧಿಕಾರದ ಅರಿವು ಮೂಡಿತು. ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸುವುದು ಅಸಾಧ್ಯ ಎಂಬುದೂ ಖಚಿತವಾಯಿತು. ಬಡವನೊಬ್ಬ ಹಣ ಖರ್ಚು ಮಾಡದೇ ಚುನಾವಣೆಗೆ ಸ್ಪರ್ಧಿಸಬಹುದು ಎಂಬುದನ್ನು ತೋರಿಸುವ ಉದ್ದೇಶದಿಂದ ಕಣಕ್ಕೆ ಇಳಿದಿದ್ದೇನೆ. ಗಾಂಧಿ ತತ್ವದ ಜೊತೆಗೆ ಮತದಾನದ ಮಹತ್ವ ತಿಳಿಸುತ್ತಿದ್ದೇನೆ' ಎನ್ನುತ್ತಾರೆ ಡಾ.ಎಚ್.ಕೆ.ಎಸ್.ಸ್ವಾಮಿ.

ನಾಮಪತ್ರ, ಅಫಿಡವಿಟ್ ಸೇರಿ ಎಲ್ಲ ದಾಖಲೆಗಳನ್ನು ಕೈಯಲ್ಲಿಯೇ ಭರ್ತಿ ಮಾಡಿದ್ದಾರೆ. ವಕೀಲರೊಬ್ಬರು ದೃಢೀಕರಿಸಿದ ಬಳಿಕ ಚುನಾವಣಾಧಿಕಾರಿಗೆ ಸಲ್ಲಿಸಿದ್ದಾರೆ. ಚಿಹ್ನೆಯಾಗಿ ಪಡೆದ 'ಧ್ವನಿವರ್ಧಕ'ವನ್ನು ಸೈಕಲ್‌ನಲ್ಲಿ ಇಟ್ಟುಕೊಂಡು ಜನನಿಬಿಡ ಪ್ರದೇಶ, ಹಳ್ಳಿಗಳಿಗೆ ಸಂಚಾರಿಸುತ್ತಿದ್ದಾರೆ. ಪುತ್ರಿಯರಾದ ಎಚ್.ಎಸ್.ರಚನಾ, ಎಚ್.ಎಸ್.ಪ್ರೇರಣಾ ತಂದೆಯೊಂದಿಗೆ ಪ್ರಚಾರದಲ್ಲಿ ತೊಡಗಿದ್ದಾರೆ. ಪರಿಸರ ಪ್ರಜ್ಞೆ, ಸಂಚಾರ ಜಾಗೃತಿ, ಸ್ವಚ್ಛತೆಗೆ ಸಂಬಂಧಿಸಿದ ಹಾಡುಗಳನ್ನು ಹೇಳಿ ಜನರನ್ನು ಆಕರ್ಷಿಸುತ್ತಿದ್ದಾರೆ.

ಮೈಸೂರು ಹೊಸಮುಖ, ವಲಸಿಗರಿಗೆ ಬಿಜೆಪಿ ಮಣೆ, ಈ 'ಪ್ರಯೋಗ' ಕಮಲ ಅರಳಿಸುವುದೇ?

ಪುಟಿದೇಳಲು ಕಾಂಗ್ರೆಸ್ ಕಸರತ್ತು

• ಎಂ.ಮಹೇಶ

ಸಿದ್ದರಾಮಯ್ಯ | ವಿ.ಸೋಮಣ್ಣ | ಜಿ.ಟಿ.ದೇವೇಗೌಡ | ಜಿ.ಡಿ.ಹರೀಶ್ ಗೌಡ | ತನ್ವೀರ್ ಸೇಠ್ | ದರ್ಶನ್ ಧ್ರುವನಾರಾಯಣ | ಎಚ್‌ಸಿ.ಮಹದೇವಪ್ಪ



ಮೈಸೂರು: ಈ ಬಾರಿಯ ಚುನಾವಣೆಯಲ್ಲಿ ಜಿಲ್ಲೆಯು ಹಲವು ವಿಶೇಷಗಳಿಂದಾಗಿ ಗಮನ ಸೆಳೆದಿದೆ. ಭದ್ರಕೋಟೆಯನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಕಸರತ್ತು ನಡೆಸುತ್ತಿದ್ದರೆ, ನೆಲೆ ವಿಸ್ತರಿಸಿಕೊಳ್ಳಲು ಜೆಡಿಎಸ್ ಪ್ರತಿತಂತ್ರ ರೂಪಿಸಿದೆ. ಬಲ ಹೆಚ್ಚಿಸಿಕೊಳ್ಳಲು ಬಿಜೆಪಿಯು 'ಪ್ರಯೋಗ'ದ ಮೊರೆ ಹೋಗಿದೆ. ಹೆಚ್ಚಿನ ಕ್ಷೇತ್ರಗಳಲ್ಲಿ ಕಾಂಗ್ರೆಸ್–ಜೆಡಿಎಸ್ ನಡುವೆಯೇ ನೇರ ಹಣಾಹಣಿ ಇದೆ.

ಜಿಲ್ಲೆಯಲ್ಲಿ ಕಾಂಗ್ರೆಸ್, ಜೆಡಿಎಸ್‌ನ ತಲಾ ನಾಲ್ವರು ಮತ್ತು ಬಿಜೆಪಿಯ ಮೂವರು ಶಾಸಕರಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಕಳೆದುಕೊಂಡಿದ್ದ ಕ್ಷೇತ್ರಗಳನ್ನು ಗಳಿಸಲು ಕಾಂಗ್ರೆಸ್ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಪಕ್ಷಾಂತರ, ಪ್ರತಿಷ್ಠೆ, ವೈಯಕ್ತಿಕ ವರ್ಚಸ್ಸು, ಹೊಂದಾಣಿಕೆ ರಾಜಕಾರಣ ಪ್ರಭಾವಿಸುವ ಲಕ್ಷಣಗಳಿವೆ. ತವರಿನಲ್ಲಿ ಹೆಚ್ಚಿನ ಸ್ಥಾನ ಗೆಲ್ಲಬೇಕೆಂಬ ಹಂಬಲದಲ್ಲಿರುವ ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕು ವುದೇ ಬಿಜೆಪಿ–ಜೆಡಿಎಸ್‌ನ ಗುರಿಯಾಗಿದೆ.

ಸಿದ್ದರಾಮಯ್ಯ ತಂತ್ರ: ತಾವು ಒಕ್ಕಲಿಗರ ವಿರೋಧಿಯಲ್ಲ ಎಂಬುದನ್ನು ತೋರಿಸಲು ಸಿದ್ದರಾಮಯ್ಯ ಆ ಸಮುದಾಯದ ನಾಯಕರ ಸಖ್ಯದಲ್ಲಿದ್ದಾರೆ. ಬಹಳ ವರ್ಷಗಳಿಂದ ದೂರವಿಟ್ಟಿದ್ದ ಮುಖಂಡ ಸಿ.ದಾಸೇಗೌಡ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. ಚಾಮುಂಡೇಶ್ವರಿಯಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡ ವಿರುದ್ಧ ತಮ್ಮ ಆಪ್ತ, ಕುರುಬ ಸಮಾಜದ ಕೆ.ಮರೀಗೌಡ ಬದಲಿಗೆ ಈಚೆಗೆ ಪಕ್ಷ ಸೇರಿದ 'ಮೈಮುಲ್' ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ ಅವರಿಗೆ ಟಿಕೆಟ್ ಕೊಡಿಸಿದ್ದಾರೆ.

ತಮ್ಮ ಸಮುದಾಯದ ನಾಯಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಉನ್ನತ ಸ್ಥಾನಕ್ಕೇರಬಹುದಾದ ಸಾಧ್ಯತೆ ಇರುವುದರಿಂದ ಅವರನ್ನು ಬೆಂಬಲಿಸುವಂತೆ ಸಮುದಾಯದ ಸಭೆಗಳಲ್ಲಿ ನಡೆಯುತ್ತಿರುವ ಚರ್ಚೆಯು ಗುಪ್ತಗಾಮಿನಿಯಾಗಿ ಕೆಲಸ ಮಾಡುತ್ತಿರುವುದು ಕಾಂಗ್ರೆಸ್‌ಗೆ 'ಪ್ಲಸ್ ಪಾಯಿಂಟ್'.

ಹೈವೋಲ್ಟೇಜ್ ವರುಣ: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ (ಕಾಂಗ್ರೆಸ್) ಹಾಗೂ ಸಚಿವ ವಿ.ಸೋಮಣ್ಣ (ಬಿಜೆಪಿ) ಸ್ಪರ್ಧೆಯಿಂದಾಗಿ ವರುಣ 'ಹೈ ವೋಲ್ಟೇಜ್' ಕ್ಷೇತ್ರವಾಗಿದೆ. ಇಲ್ಲಿ 'ಹೊರಗಿನವರು' ಹಾಗೂ 'ಸ್ಥಳೀಯರು' ಎಂಬ ಚರ್ಚೆ ಜೋರಾಗಿದೆ.

'ಇದು ನನ್ನ ಕೊನೆಯ ಚುನಾವಣೆ, ಮನೆ ಮಗನಿಗೆ ಅವಕಾಶ ಕೊಡಿ' ಎಂದು ಸಿದ್ದರಾಮಯ್ಯ ಭಾವನಾತ್ಮಕ ಅಸ್ತ್ರ ಪ್ರಯೋಗಿ ಸುತ್ತಿದ್ದಾರೆ. 'ಗೋವಿಂದರಾಜ ನಗರದ ಮಾದರಿಯಲ್ಲಿ ಅಭಿವೃದ್ಧಿಗಾಗಿ ನನ್ನನ್ನು ಬೆಂಬಲಿಸಿ' ಎಂದು ಸೋಮಣ್ಣ ಕೋರುತ್ತಿದ್ದಾರೆ.

ಇವರಿಬ್ಬರ ಸ್ಪರ್ಧೆಯಿಂದಾಗಿ ಜೆಡಿಎಸ್ ಅಭ್ಯರ್ಥಿಯನ್ನೇ ಬದಲಿಸಿದ್ದು, ಅಭಿಷೇಕ್ ಬದಲಿಗೆ ಮಾಜಿ ಶಾಸಕ, ಪರಿಶಿಷ್ಟ ಜಾತಿಯ ಡಾ.ಭಾರತಿ ಶಂಕರ್ ಅವರನ್ನು ಕಣಕ್ಕಿಳಿಸಿದೆ. ಅಚ್ಚರಿಯ ಬೆಳವಣಿಗೆಯಲ್ಲಿ ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಕೂಡ ಕಣಕ್ಕಿಳಿದಿದ್ದಾರೆ. ಪರಿಶಿಷ್ಟರ ಮತಗಳ ವಿಭಜನೆಯ ಲಾಭ–ನಷ್ಟದ ಲೆಕ್ಕಾಚಾರ ಎಲ್ಲ ಪಕ್ಷಗಳಲ್ಲಿ ನಡೆದಿದೆ.

ಕಾಂಗ್ರೆಸ್–ಜೆಡಿಎಸ್ ಹಣಾಹಣಿ: ಪಿರಿಯಾಪಟ್ಟಣ, ಕೆ.ಆರ್.ನಗರ, ಹುಣಸೂರು, ತಿ.ನರಸೀಪುರ (ಪರಿಶಿಷ್ಟ ಜಾತಿ ಮೀಸಲು) ಮತ್ತು ಎಚ್‌.ಡಿ.ಕೋಟೆ (ಪರಿಶಿಷ್ಟ ಪಂಗಡ ಮೀಸಲು) ಕ್ಷೇತ್ರಗಳಲ್ಲಿ ಕಾಂಗ್ರೆಸ್–ಜೆಡಿಎಸ್ ನಡುವೆ ನೇರ ಹಣಾಹಣಿ ಇದೆ.

ಪರಿಶಿಷ್ಟ ಜಾತಿಗೆ ಮೀಸಲಾದ ನಂಜನಗೂಡಿನಲ್ಲಿ ಟಿಕೆಟ್ ಬಯಸಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ನಿಧನದಿಂದ ಅವರ ಪುತ್ರ ದರ್ಶನ್ ಅಭ್ಯರ್ಥಿಯಾಗಿದ್ದಾರೆ. ಶಾಸಕ ಬಿ.ಹರ್ಷವರ್ಧನ್ ಬಿಜೆಪಿ ಅಭ್ಯರ್ಥಿ. ತಿಂಗಳ ಅಂತರದಲ್ಲಿ ತಂದೆ– ತಾಯಿ ಕಳೆದುಕೊಂಡು ಸಂಕಷ್ಟದ ಸನ್ನಿವೇಶದಲ್ಲಿ ಕಣಕ್ಕಿಳಿದಿರುವ ದರ್ಶನ್ ಅವರನ್ನು ಅನುಕಂಪವು ಗೆಲುವಿನ ದಡಸೇರಿಸಬಹುದೆಂಬುದು ಕಾಂಗ್ರೆಸ್ ಲೆಕ್ಕಾಚಾರ. ದರ್ಶನ್‌ಗೆ ಅನುಕೂಲವಾಗಲಿ ಎಂದೇ ಇಲ್ಲಿ ಜೆಡಿಎಸ್ ಅಭ್ಯರ್ಥಿ ಹಾಕಿಲ್ಲ.

ಬಿಜೆಪಿಯು ವಲಸಿಗರಿಗೆ ಮಣೆ ಹಾಕಿರುವುದು 'ಒಳೇಟು' ಕೊಡಬಹುದು. ಎಚ್‌.ಡಿ. ಕೋಟೆಯ ಕೃಷ್ಣ ನಾಯಕ, ಹುಣಸೂರಿನ ಸೋಮಶೇಖರ್, ಕೆ.ಆರ್.ನಗರದ ಹೊಸಹಳ್ಳಿ ವೆಂಕಟೇಶ ಅವರು ಜೆಡಿಎಸ್‌ನಿಂದ ಬಂದವರು. ಕಾಂಗ್ರೆಸ್‌ನ ಮಾಜಿ ಶಾಸಕ ವಾಸು ಪುತ್ರ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್ ಗೌಡ ಈಚೆಗೆ ಪಕ್ಷ ಸೇರಿದವರು. ತಿ.ನರಸೀಪುರದ ಅಭ್ಯರ್ಥಿ ಡಾ.ಎಂ.ರೇವಣ್ಣ ಬಿಜೆಪಿ ಸೇರಿ ಟಿಕೆಟ್ ಗಿಟ್ಟಿಸಿದ್ದಾರೆ.

ಕೃಷ್ಣರಾಜದಲ್ಲಿ ಶಾಸಕ ಎಸ್‌.ಎ. ರಾಮದಾಸ್ ಬದಲಿಗೆ, ಹೊಸಮುಖ ಟಿ.ಎಸ್.ಶ್ರೀವತ್ಸ ಅವರನ್ನು ಕಣಕ್ಕಿಳಿಸಿ ಬಿಜೆಪಿ 'ಪ್ರಯೋಗ'ಕ್ಕೆ ಮುಂದಾಗಿದೆ. ಇಲ್ಲಿ ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಹಾಗೂ ಜೆಡಿಎಸ್‌ನಿಂದ ಕೆ.ವಿ.ಮಲ್ಲೇಶ್ ಕಣದಲ್ಲಿದ್ದು, ಬಿಜೆಪಿ–ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಟಿಕೆಟ್ ಆಕಾಂಕ್ಷಿಗಳಾಗಿದ್ದವರು- ಬೆಂಬಲಿಗರ ಪಡೆಯು ಒಳಹೊಡೆತ ಕೊಟ್ಟರೆ ಬಿಜೆಪಿ ಬಯಸುವ ಫಲಿತಾಂಶ ಸಿಗುವುದಿಲ್ಲ.

ನರಸಿಂಹರಾಜದಲ್ಲಿ ಕಾಂಗ್ರೆಸ್‌ನ ತನ್ವೀರ್ ಸೇಠ್ ಗೆಲುವಿನ ಓಟ ತಡೆಯಲು ಎಸ್‌ಡಿಪಿಐನ ಅಬ್ದುಲ್ ಮಜೀದ್, ಬಿಜೆಪಿಯ ಎಸ್. ಸಂದೇಶ್ ಸ್ವಾಮಿ ಪ್ರಯತ್ನಿಸಿದ್ದಾರೆ. ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅಬ್ದುಲ್ ಅಜೀಜ್ ಸೇರ್ಪಡೆಯಿಂದ ಶಕ್ತಿ ವೃದ್ಧಿಸಬಹುದೆಂದು ಕಾಂಗ್ರೆಸ್ ಕಾಯುತ್ತಿದೆ.

ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ವರುಣ	ಕಾಂಗ್ರೆಸ್	ಕಾಂಗ್ರೆಸ್
ತಿ.ನರಸೀಪುರ	ಕಾಂಗ್ರೆಸ್	ಜೆಡಿಎಸ್
ನರಸಿಂಹರಾಜ	ಕಾಂಗ್ರೆಸ್	ಕಾಂಗ್ರೆಸ್
ಪಿರಿಯಾಪಟ್ಟಣ	ಕಾಂಗ್ರೆಸ್	ಜೆಡಿಎಸ್
ಕೆ.ಆರ್.ನಗರ	ಜೆಡಿಎಸ್	ಜೆಡಿಎಸ್
ಎಚ್‌.ಡಿ.ಕೋಟೆ	ಜೆಡಿಎಸ್	ಕಾಂಗ್ರೆಸ್
ಚಾಮುಂಡೇಶ್ವರಿ	ಜೆಡಿಎಸ್	ಜೆಡಿಎಸ್
ಹುಣಸೂರು	ಕಾಂಗ್ರೆಸ್	ಜೆಡಿಎಸ್
ಕೃಷ್ಣರಾಜ	ಕಾಂಗ್ರೆಸ್	ಬಿಜೆಪಿ
ನಂಜನಗೂಡು	ಕಾಂಗ್ರೆಸ್	ಬಿಜೆಪಿ
ಚಾಮರಾಜ	ಕಾಂಗ್ರೆಸ್	ಬಿಜೆಪಿ

(ನಂಜನಗೂಡಿನಲ್ಲಿ 2017ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪುನರಾಯ್ಕೆಯಾಗಿತ್ತು. 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಆಯ್ಕೆ. 2019ರಲ್ಲಿ ಹುಣಸೂರು ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲುವು)

ಗೆಲ್ಲುವರೇ ತಂದೆ–ಮಗ?

ಮೂರು ವರ್ಷಗಳಿಂದ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರು ತಮ್ಮೊಂದಿಗೆ ಪುತ್ರ ಜಿ.ಡಿ.ಹರೀಶ್ (ಹುಣಸೂರು) ಅವರಿಗೂ ಟಿಕೆಟ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಮಗನ ಪರವಾಗಿ ಪ್ರಚಾರವನ್ನೂ ಮಾಡುತ್ತಿದ್ದಾರೆ. ಎರಡೂ ಕಡೆಗಳಲ್ಲಿ ಗೆಲ್ಲಲು ಇಡೀ ಕುಟುಂಬವೇ ಶ್ರಮಿಸುತ್ತಿದೆ.

ಕಾಂಗ್ರೆಸ್ ಹಾಗೂ ಬಿಜೆಪಿಯ ಕದ ತಟ್ಟಿದ್ದ ಜಿ.ಟಿ.ದೇವೇಗೌಡರಿಗೆ 'ಡಬಲ್ ಟಿಕೆಟ್' ಖಾತ್ರಿಯಾಗಿರಲಿಲ್ಲ. ಈ ನಡುವೆ, ವರಿಷ್ಠ ಎಚ್‌.ಡಿ.ದೇವೇಗೌಡರ ಮನವೊಲಿಕೆಯ ನಂತರ ಜೆಡಿಎಸ್‌ನಲ್ಲೇ ಉಳಿದು, ಇಬ್ಬರಿಗೂ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ.

ಹುಣಸೂರಿನಲ್ಲಿ 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎ.ಎಚ್. ವಿಶ್ವನಾಥ್ ಗೆದ್ದಿದ್ದರು. ಅವರ ರಾಜೀನಾಮೆಯಿಂದಾಗಿ2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ (ಎಚ್.ಪಿ.ಮಂಜುನಾಥ್) ಗೆದ್ದಿತ್ತು. ಬಿಜೆಪಿಯಿಂದ ಕಣಕ್ಕಿಳಿದಿದ್ದ ವಿಶ್ವನಾಥ್ ಸೋಲನುಭವಿಸಿದ್ದರು. ಈಗ, ವಿಶ್ವನಾಥ್ ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದಾರೆ.

ಜಿಲ್ಲೆಯಲ್ಲಿ ತಂದೆ–ಮಗ ಸ್ಪರ್ಧಿಸಿರುವ 2ನೇ ಚುನಾವಣೆ ಇದು. 2018ರಲ್ಲಿ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ (ಚಾಮುಂಡೇಶ್ವರಿ) ಹಾಗೂ ಅವರ ಪುತ್ರ ಡಾ.ಯತೀಂದ್ರ (ವರುಣ) ಸ್ಪರ್ಧಿಸಿದ್ದರು. ಸಿದ್ದರಾಮಯ್ಯ ಸೋತರೆ, ಯತೀಂದ್ರ ಗೆದ್ದಿದ್ದರು. ಈ ಬಾರಿ, ಜಿಟಿಡಿ ಹಾಗೂ ಅವರ ಮಗ ಗೆದ್ದರೆ ದಾಖಲೆ ನಿರ್ಮಾಣವಾಗಲಿದೆ.

ಸಾಕ್ಷಾತ್ ಸಮೀಕ್ಷೆ

ಬೀದರ್ ಗಡಿ ಜಿಲ್ಲೆಯಲ್ಲಿ ಹೆಚ್ಚಿದ ಕುತೂಹಲ

'ಕಲ್ಯಾಣ' ನಾಡಿನಲ್ಲಿ ಕೈ, ಕಮಲ, ತೆನೆ ಪೈಪೋಟಿ

• ಚಂದ್ರಕಾಂತ ಮಸಾನಿ

ಈಶ್ವರ ಖಂಡ್ರೆ | ಬಂಡೆಪ್ಪ ಕಾಶೆಂಪೂರ | ಅಶೋಕ ಖೇಣಿ | ಪ್ರಭು ಚವಾಣ್ | ಪ್ರಕಾಶ ಖಂಡ್ರೆ | ರಾಜಶೇಖರ ಪಾಟೀಲ



ಬೀದರ್: ಬೀದರ್ ಜಿಲ್ಲೆಯು ಕಲ್ಯಾಣ ಕ್ರಾಂತಿಯ ನೆಲವಷ್ಟೇ ಅಲ್ಲ; ಬಹುತ್ವದ ಸಂಕೇತವೂ ಹೌದು. ಸೌಹಾರ್ದ ಸಂಸ್ಕೃತಿ ಬೇರೂರಿರುವ ಈ ಜಿಲ್ಲೆಯಲ್ಲಿ ವಿವಿಧ ಧರ್ಮೀಯರು, ಜಾತಿಯವರು ಮತ್ತು ಸಮುದಾಯದವರು ಒಂದಾಗಿ ಬಾಳ್ವೆ ನಡೆಸುತ್ತಿದ್ದಾರೆ. ಆದರೆ, ಚುನಾವಣೆ ಸಮೀಪಿಸಿದಾಗಲೆಲ್ಲ ಜಾತಿ, ಸಮುದಾಯಗಳ ಬಲಾಬಲ, ಪ್ರಭಾವದ ಬಗ್ಗೆ ಹೆಚ್ಚು ಚರ್ಚೆಯಾಗುತ್ತದೆ.

ಜಿಲ್ಲೆಯ ಆರೂ ಕ್ಷೇತ್ರಗಳು ವಿಶಿಷ್ಟತೆಯಿಂದ ಕೂಡಿವೆ. ಭಾಲ್ಕಿಯಲ್ಲಿ ಕಾಂಗ್ರೆಸ್ ಗಟ್ಟಿಯಾಗಿ ನೆಲೆಯೂರಿದ್ದರೆ, ಔರಾದ್‌ನಲ್ಲಿ ಬಿಜೆಪಿಯು ಭದ್ರಕೋಟೆ ಕಟ್ಟಿಕೊಂಡಿದೆ. ಉಳಿದ ನಾಲ್ಕೂ ಕ್ಷೇತ್ರಗಳಾದ ಬೀದರ್, ಬೀದರ್ ದಕ್ಷಿಣ, ಬಸವಕಲ್ಯಾಣ ಮತ್ತು ಹುಮನಾಬಾದ್‌ನಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ಪೈಪೋಟಿ ಇದೆ.

ಈ ಭಾಗದಲ್ಲಿ ಮಠಗಳು ಮತ್ತು ಮಠಾಧೀಶರು ಪ್ರಭಾವಿಗಳು ಎಂದು ಅರಿತು ಬಿಜೆಪಿಯು ಆರಂಭಿಕ ಹಂತದಲ್ಲೇ ಪ್ರತಿತಂತ್ರ ರೂಪಿಸಿತು. ಬರೀ ಪ್ರಚಾರ ಸಭೆಗಳನ್ನು ನಡೆಸಿದರೆ ಸಾಲದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಜಿಲ್ಲೆಗೆ ಬಂದು, ಮಠಾಧೀಶರನ್ನು ಭೇಟಿಯಾದರು. ಸಭೆಯನ್ನೂ ನಡೆಸಿದರು.

ಇದಕ್ಕೆ ಪೂರಕವಾಗಿ ಕಾಂಗ್ರೆಸ್‌ನವರು ತಮ್ಮ ಪಕ್ಷದ ರಾಷ್ಟ್ರೀಯ ನಾಯಕರನ್ನು ಕರೆ ತಂದು ಮತದಾರರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರೆ, ಜೆಡಿಎಸ್‌ನವರು ತಮ್ಮ ಪಕ್ಷದ ವರಿಷ್ಠರ ಕರೆ ತಂದು ಪಂಚರತ್ನ ಯಾತ್ರೆ ಮೂಲಕ ಸೆಳೆಯಲು ಆದ್ಯತೆ ನೀಡಿದರು.

ಹುಮನಾಬಾದ್ ಮತ್ತು ಭಾಲ್ಕಿಯಲ್ಲಿನ ಕಾಂಗ್ರೆಸ್ ಕೋಟೆಯಲ್ಲಿ ಬಿರುಕು ಮೂಡಿಸಲು ಬಿಜೆಪಿ ಸತತ ಪ್ರಯತ್ನ ನಡೆಸಿದ್ದು, ನಿರಂತರವಾಗಿ ಪ್ರಚಾರ ಸಭೆಗಳು ನಡೆದಿವೆ. ಕಾರ್ಯಕರ್ತರು ಸೇರಿದಂತೆ ಮುಖಂಡರು ಮನೆಮನೆಗೆ ತೆರಳಿ ಮತಯಾಚನೆ ಮುಂದುವರೆಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಗಾಗಲೇ ಪ್ರಚಾರ ಸಭೆ ನಡೆಸಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತಯಾಚಿಸಿದ್ದಾರೆ. ಬಿಜೆಪಿಯು ಹುಮನಾಬಾದ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮ ಆಯೋಜಿಸಿ, ಮತದಾರರ ಮನ ಗೆಲ್ಲಲು ಶತಪ್ರಯತ್ನ ನಡೆಸಿದೆ.

ಭಾಲ್ಕಿಯಲ್ಲಿ ಕಾಂಗ್ರೆಸ್‌ನ ಈಶ್ವರ ಖಂಡ್ರೆ ವಿರುದ್ಧ ಸೋದರ ಸಂಬಂಧಿ ಪ್ರಕಾಶ ಖಂಡ್ರೆ ಅವರನ್ನು, ಹುಮನಾಬಾದ್‌ನಲ್ಲಿ ಕಾಂಗ್ರೆಸ್‌ನ ರಾಜಶೇಖರ ಪಾಟೀಲ ವಿರುದ್ಧ ಅವರ ಸೋದರ ಸಂಬಂಧಿ ಸಿದ್ದು ಪಾಟೀಲ ಅವರನ್ನು ಬಿಜೆಪಿ ಚುನಾವಣಾ ಕಣಕ್ಕೆ ಇಳಿಸಿದೆ. ಹೇಗಾದರೂ ಮಾಡಿ, ಗೆಲುವಿನ ನಗೆ ಬೀರಬೇಕು ಎಂಬ ಗುರಿ ಹೊಂದಿದೆ.

'ಹುಮನಾಬಾದ್‌ನಲ್ಲಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರ ಪುತ್ರ ಸಿ.ಎಂ. ಫೈಜ್ ಸ್ಪರ್ಧಿಸಿದ್ದಾರೆ. ಇದು ಕಾಂಗ್ರೆಸ್‌ಗೆ ಪೆಟ್ಟು ನೀಡಲಿದೆ. ಲಿಂಗಾಯತ ಮತಗಳು ಬಿಜೆಪಿ, ಕಾಂಗ್ರೆಸ್‌ಗೆ ವಿಭಜನೆಯಾಗಲಿವೆ. ಚುನಾವಣೆ ಫಲಿತಾಂಶದ ವೇಳೆ ರಾಜಕೀಯ ವಿಶ್ಲೇಷಕರ ಲೆಕ್ಕಾಚಾರ ಬುಡಮೇಲು ಆದರೂ ಅಚ್ಚರಿ ಇಲ್ಲ' ಎಂಬ ಚರ್ಚೆ ಕ್ಷೇತ್ರದಲ್ಲಿ ನಡೆದಿದೆ.

ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಬಂಡೆಪ್ಪ ಕಾಶೆಂಪೂರ, ಕಾಂಗ್ರೆಸ್‌ನಿಂದ ಮಾಜಿ ಶಾಸಕ ಅಶೋಕ ಖೇಣಿ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅಳಿಯ ಚಂದ್ರಾಸಿಂಗ್, ಬಿಜೆಪಿಯಿಂದ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶೈಲೇಂದ್ರ ಬೆಲ್ದಾಳೆ, ಆಮ್ ಆದ್ಮಿ ಪಾರ್ಟಿಯಿಂದ ನಸೀಮೋದ್ದಿನ್ ಪಟೇಲ್ (ಮಾಜಿ ಸಚಿವ ಮೆರಾಜುದ್ದೀನ್ ಪಟೇಲ್ ಸಹೋದರ) ಸ್ಪರ್ಧಿಸಿದ್ದಾರೆ. ಘಟಾನುಘಟಿಗಳು ಸ್ಪರ್ಧಿಸಿರುವ ಈ ಕ್ಷೇತ್ರದಲ್ಲಿ ಒಲವು ಯಾರ ಪರವಿದೆ ಎಂಬುದನ್ನು ಮತದಾರರು ಗುಟ್ಟು ಬಿಟ್ಟುಕೊಡಲು ಸಿದ್ಧರಿಲ್ಲ.

'ಬಂಡಾಯ ಅಭ್ಯರ್ಥಿ ಹಾಗೂ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿಗಳು ಕಾಂಗ್ರೆಸ್‌ನ ಮತಗಳನ್ನು ಸೆಳೆದುಕೊಳ್ಳುವರು. ಬಂಡಾಯ ಅಭ್ಯರ್ಥಿಯಿಂದ ಕಾಂಗ್ರೆಸ್‌ಗೆ ಒಳಏಟು ಬೀಳುವ ಸಾಧ್ಯತೆ ಇದೆ. ಲಿಂಗಾಯತ ಮತಗಳು ಬಿಜೆಪಿ–ಕಾಂಗ್ರೆಸ್‌ಗೆ ಹಂಚಿ ಹೋಗಲಿವೆ. ಇಲ್ಲಿ ಮುಸ್ಲಿಮರ ಮತಗಳು ವಿಭಜನೆ ಆಗುವುದು ಬಹಳ ವಿರಳ. ಮುಸ್ಲಿಮರು ಕೊನೆಯ ಕ್ಷಣದಲ್ಲಿ ಯಾರ ಪರವಾಗಿ ಮತ ಚಲಾಯಿಸುವರೋ ಅವರೇ ಗೆಲ್ಲುವುದು ನಿಶ್ಚಿತ' ಎಂದು ಕ್ಷೇತ್ರದ ಜನ ಹೇಳುತ್ತಾರೆ.

ಬಸವಕಲ್ಯಾಣದಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಮತ್ತು ಶಾಸಕ ಶರಣು ಸಲಗರ ನಡುವೆ ಶೀತಲ ಸಮರ ಮುಂದುವರೆದಿದ್ದು, ಬಿಜೆಪಿ ಒಡೆದ ಮನೆಯಂತಾಗಿದೆ. ಇದರ ಮಧ್ಯೆಯೂ ಎಲ್ಲವನ್ನೂ ಮರೆಮಾಚಿ ಬಿಜೆಪಿಯವರು ಮತದಾರರ ಮನಗೆಲ್ಲಲು ಪ್ರಯತ್ನ ನಡೆಸಿದ್ದಾರೆ. ಬಿಜೆಪಿಯಲ್ಲಿನ ಭಿನ್ನಮತವೇ ತಮಗೆ ವರ ಆಗಬಹುದು ಎಂಬ ನಿರೀಕ್ಷೆಯಲ್ಲಿ ಕಾಂಗ್ರೆಸ್ ಇದೆ. ಅಲ್ಲಿ ಮಾಜಿ ಮುಖ್ಯಮಂತ್ರಿ ದಿ.ಧರ್ಮಸಿಂಗ್ ಅವರ ಪುತ್ರ ವಿಜಯ ಸಿಂಗ್ ಸ್ಪರ್ಧಿಸಿದ್ದಾರೆ.

ಔರಾದ್‌ನಲ್ಲಿ ಸತತ ಮೂರು ಬಾರಿ ಗೆದ್ದಿರುವ ಸಚಿವ ಪ್ರಭು ಚವಾಣ್ ಈ ಬಾರಿಯೂ ಗೆಲ್ಲುವ ನಿರೀಕ್ಷೆಯಲ್ಲಿದ್ದರೆ, ಕಾಂಗ್ರೆಸ್‌ನ ಅಭ್ಯರ್ಥಿ ಭೀಮಸೇನರಾವ್ ಶಿಂಧೆ ಕಳೆದ ಸಲದಂತೆ ಈ ಬಾರಿಯೂ ಪ್ರಬಲ ಪೈಪೋಟಿ ನೀಡಲು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಅದಕ್ಕೆ ಪೂರಕವಾಗಿ ಮತದಾರರ ಭೇಟಿ ಮುಂದುವರೆಸಿದ್ದಾರೆ.

ಬೀದರ್‌ನಲ್ಲಿ ಕಾಂಗ್ರೆಸ್‌ನ ಶಾಸಕ ರಹೀಂ ಖಾನ್ ಅವರಿಗೆ ಪೈಪೋಟಿ ನೀಡುತ್ತಿರುವ ಬಿಜೆಪಿಯ ಈಶ್ವರ ಸಿಂಗ್ ಠಾಕೂರ್ ಅವರು, 'ಸಾಮಾನ್ಯ ಶಿಕ್ಷಕ ಕುಟುಂಬದಿಂದ ಬಂದ ನನಗೆ ಒಮ್ಮೆ ವಿಧಾನಸಭೆ ಪ್ರವೇಶಿಸಲು ಅವಕಾಶ ನೀಡಿ' ಎಂದು ಕೋರುತ್ತಿದ್ದಾರೆ. ಆದರೆ, ಬಿಜೆಪಿ ಟಿಕೆಟ್ ಸಿಗದಿರುವುದಕ್ಕೆ ಬಂಡಾಯವೆದ್ದು ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಸೂರ್ಯಕಾಂತ ನಾಗಮಾರಪಳ್ಳಿ ಅವರು ಎಲ್ಲಾ ಜಾತಿ, ಸಮುದಾಯದವರ ವಿಶ್ವಾಸ ಗಳಿಸಿಕೊಂಡು ಗೆಲ್ಲಬೇಕೆಂದು ಪಣತೊಟ್ಟಿದ್ದಾರೆ.

ಜಾತಿಗಳ ಲೆಕ್ಕಾಚಾರ, ರಾಷ್ಟ್ರೀಯ ನಾಯಕರ ಭರವಸೆ, ಪ್ರಾದೇಶಿಕ ಪಕ್ಷದ ಮನವೊಲಿಕೆ ಮಧ್ಯೆ ಮತದಾರರು ಯಾರ ಪರ ಒಲವು ತೋರಿ, ವಿಜಯಮಾಲೆ ಹಾಕುತ್ತಾರೆ ಎಂಬುದೇ ಕುತೂಹಲ.

ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ಬೀದರ್	ಕೆಜೆಪಿ*	ಕಾಂಗ್ರೆಸ್
ಬೀದರ್ ದಕ್ಷಿಣ	ಕರ್ನಾಟಕ ಮಕ್ಕಳ ಪಕ್ಷ	ಜೆಡಿಎಸ್
ಭಾಲ್ಕಿ	ಕಾಂಗ್ರೆಸ್	ಕಾಂಗ್ರೆಸ್
ಔರಾದ್	ಬಿಜೆಪಿ	ಬಿಜೆಪಿ
ಬಸವಕಲ್ಯಾಣ	ಜೆಡಿಎಸ್	ಕಾಂಗ್ರೆಸ್
ಹುಮನಾಬಾದ್	ಕಾಂಗ್ರೆಸ್	ಕಾಂಗ್ರೆಸ್**

*2015ರಲ್ಲಿ ಕೆಜೆಪಿ ಶಾಸಕ ಗುರುಪಾದಪ್ಪ ನಾಗಮಾರಪಳ್ಳಿ ನಿಧನ. ನಂತರ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ರಹಿಂ ಖಾನ್ ಶಾಸಕರಾಗಿ ಆಯ್ಕೆಯಾದರು.

**2020ರಲ್ಲಿ ಕಾಂಗ್ರೆಸ್‌ನ ಬಿ.ನಾರಾಯಣರಾವ್ ನಿಧನ. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯ ಶರಣು ಸಲಗರ ಶಾಸಕರಾಗಿ ಆಯ್ಕೆಯಾದರು.

ಸೆಲ್ಫಿಗಾಗಿ ಇಷ್ಟೆಲ್ಲ...

ಕಲಬುರಗಿ ಜಿಲ್ಲೆಯ ಜೇವರ್ಗಿನಲ್ಲಿ ಶುಕ್ರವಾರ ಕಾಂಗ್ರೆಸ್ ಪ್ರಚಾರ ಸಭೆ ಬಳಿಕ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವ ವೇಳೆ ಯುವಕನ ಕೈಯಲ್ಲಿದ್ದ ಮೊಬೈಲ್ ಜಾರಿ ಮಳೆ ನೀರಿನಲ್ಲಿ ಬಿತ್ತು. ನಂತರ ಹುಡುಕಾಡಿ, ಅದೇ ಮೊಬೈಲ್‌ನಿಂದ ಸೆಲ್ಫಿ ತೆಗೆದುಕೊಂಡ. ಅಲ್ಲಿಯವರೆಗೆ ರಾಹುಲ್ ಗಾಂಧಿ ಕಾದು, ಸೆಲ್ಫಿ ತೆಗೆದುಕೊಳ್ಳಲು ಸಹಕರಿಸಿದರು.

ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ವಿಜಯನಗರ ಹೊಸ ಜಿಲ್ಲೆ ರಚನೆಯಾದ ನಂತರ ಮೊದಲ ಸಾರ್ವತ್ರಿಕ ಚುನಾವಣೆ

ಅನಿರೀಕ್ಷಿತ ಫಲಿತಾಂಶಕ್ಕೆ ಸಾಕ್ಷಿಯಾಗುವುದೇ?

• ಶಶಿಕಾಂತ ಎಸ್. ಶೆಂಬೆಳ್ಳಿ

ಪಿ.ಟಿ. ಪರಮೇಶ್ವರ ನಾಯ್ಕ | ಭೀಮ ನಾಯ್ಕ | ಕರುಣಾಕರ ರೆಡ್ಡಿ | ಸಿದ್ಧಾರ್ಥ ಸಿಂಗ್ | ಕೃಷ್ಣ ನಾಯ್ಕ | ಕೆ. ನೇಮರಾಜ ನಾಯ್ಕ | ಡಾ. ಎನ್‌.ಟಿ. ಶ್ರೀನಿವಾಸ್ | ಎನ್ ಕೊಟ್ರೇಶ್ | ಲೋಕೇಶ್ ವಿ. ನಾಯಕ | ಎಚ್‌.ಆರ್ ಗವಿಯಪ್ಪ



ಹೊಸಪೇಟೆ (ವಿಜಯನಗರ): ರಾಜ್ಯದ 31ನೇ ಜಿಲ್ಲೆಯಾಗಿ ಉದಯವಾದ ನಂತರ ವಿಜಯನಗರ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ವಿಧಾನಸಭೆ ಚುನಾವಣೆ ನಡೆಯುತ್ತಿದೆ.

ಹೊಸ ಜಿಲ್ಲೆಯಲ್ಲಿ ಹೆಚ್ಚು ಸ್ಥಾನ ಗಳಿಸಿ ಕೀರ್ತಿ ಪತಾಕೆ ಹಾರಿಸಬೇಕೆಂಬ ಜಿದ್ದಾಜಿದ್ದಿ ರಾಜಕೀಯ ಪಕ್ಷಗಳಲ್ಲಿ ಕಾಣಿಸುತ್ತಿದೆ. ಜಿಲ್ಲೆ ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳೇ ಕಳೆದಿವೆ. ಈ ಅವಧಿಯಲ್ಲೇ ಇಲ್ಲಿನ ರಾಜಕಾರಣದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ.

ಜಿಲ್ಲೆ ಒಟ್ಟು ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ಆದರೆ, ಇದರ ವ್ಯಾಪ್ತಿಗೆ ಐದು ವಿಧಾನಸಭಾ ಕ್ಷೇತ್ರಗಳಿವೆ. ವಿಜಯನಗರ (ಹೊಸಪೇಟೆ) ಹಾಗೂ ಹರಪನಹಳ್ಳಿ ಸಾಮಾನ್ಯ ಕ್ಷೇತ್ರಗಳಾದರೆ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಪರಿಶಿಷ್ಟ ಜಾತಿಗೆ ಮೀಸಲಾಗಿವೆ. ಕೂಡ್ಲಿಗಿ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದೆ.

2018ರ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು, ಬಿಜೆಪಿ ಎರಡು ಕ್ಷೇತ್ರಗಳಲ್ಲಿ ಗೆಲುವು ಕಂಡಿತ್ತು. ಕಾಂಗ್ರೆಸ್‌ನಿಂದ ಗೆಲುವು ಕಂಡಿದ್ದ ಆನಂದ್ ಸಿಂಗ್ ವಿಜಯನಗರ ಕ್ಷೇತ್ರದ ಶಾಸಕ ಸ್ಥಾನಕ್ಕೆ ವರ್ಷ ಕಳೆಯುವುದರೊಳಗೆ ರಾಜೀನಾಮೆ ನೀಡಿ, 2019ರ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಬಳಿಕ ಸಚಿವರಾಗಿ ವಿಜಯನಗರ ಜಿಲ್ಲೆ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಸಲ ಅವರು ಕಣದಿಂದ ಹಿಂದೆ ಸರಿದು ಮಗ ಸಿದ್ಧಾರ್ಥ ಸಿಂಗ್ ಅವರಿಗೆ ವಿಜಯನಗರ ಕ್ಷೇತ್ರ ಬಿಟ್ಟು ಕೊಟ್ಟಿದ್ದಾರೆ.

27 ವರ್ಷ ವಯಸ್ಸಿನ ಸಿದ್ಧಾರ್ಥ ಸಿಂಗ್ ಹಾಗೂ ಮಾಜಿ ಶಾಸಕ, ಕಾಂಗ್ರೆಸ್ ಅಭ್ಯರ್ಥಿ ಎಚ್‌.ಆರ್. ಗವಿಯಪ್ಪ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ಆನಂದ್ ಸಿಂಗ್ ವಿರುದ್ಧ ಸಾಕಷ್ಟು ಅಕ್ರಮದ ಆರೋಪಗಳು ಕೇಳಿ ಬಂದದ್ದರಿಂದ ಅವರು ಕಣದಿಂದ ಹಿಂದೆ ಸರಿದು, ಮಗನಿಗೆ ಚುನಾವಣೆಗೆ ನಿಲ್ಲಿಸಿದ್ದಾರೆ ಎಂಬ ಮಾತುಗಳಿವೆ. ಇನ್ನು, 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಗವಿಯಪ್ಪ ಬದಲಾದ ಸನ್ನಿವೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. 'ಭ್ರಷ್ಟಾಚಾರ, ಸ್ವಜನಪಕ್ಷಪಾತದಿಂದ ಜನ ರೋಸಿ ಬದಲಾವಣೆ ಬಯಸಿದ್ದಾರೆ. ನನ್ನ ಗೆಲುವು ಶತಃಸಿದ್ಧ' ಎಂಬ ವಿಶ್ವಾಸದಲ್ಲಿ ಪ್ರಚಾರ ನಡೆಸುತ್ತಿದ್ದಾರೆ.

ಆನಂದ್ ಸಿಂಗ್ ಸಹೋದರಿ ರಾಣಿ ಸಂಯುಕ್ತಾ ಹಾಗೂ ಹಲವು ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರಿರುವುದರಿಂದ 'ಕೈ'ಗೆ ಬಲ ಬಂದಿದೆ. ಸರಳ, ಸಜ್ಜನಿಕೆ, ಯಾವುದೇ ಕಳಂಕ ಇಲ್ಲದಿರುವುದು ಗವಿಯಪ್ಪ ಅವರ ಪ್ಲಸ್ ಪಾಯಿಂಟ್. ಇನ್ನು, ಸಿದ್ಧಾರ್ಥ, ಬಿಬಿಎ, ಎಲ್ ಎಲ್ ಬಿ ಓದಿದ್ದಾರೆ. ಕ್ಷೇತ್ರಕ್ಕೆ ಹೊಸ ಮುಖ. 'ಅಪ್ಪ, ವಿಜಯನಗರ ಜಿಲ್ಲೆ ರಚನೆಗಾಗಿ ಶ್ರಮಿಸಿದ್ದಾರೆ. ಈ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತೇನೆ' ಎಂದು ತಿಳಿಸುತ್ತ ಮತ ಯಾಚಿಸುತ್ತಿದ್ದಾರೆ. ಜನರ ವಿಶ್ವಾಸ ಗಳಿಸಲು ಕ್ಷೇತ್ರದಲ್ಲಿ 'ನಗರ ಹಾಗೂ ಗ್ರಾಮ ವಾಸ' ಕಾರ್ಯಕ್ರಮ ಮಾಡಿದ್ದಾರೆ. ಆದರೆ, ಜಿಲ್ಲೆಯಾದ ನಂತರ ನಿವೇಶನಗಳ ಬೆಲೆ, ಕಟ್ಟಡಗಳ ಬಾಡಿಗೆ ಗಗನಕ್ಕೆ ಏರಿರುವುದರಿಂದ ಜನ ಬೇಸರಗೊಂಡಿದ್ದಾರೆ. ಸ್ವಜನಪಕ್ಷಪಾತದ ಗಂಭೀರ ಆರೋಪಗಳಿವೆ. ಇದು ಬಿಜೆಪಿ ಅಭ್ಯರ್ಥಿ ಮೇಲೆ ಪರಿಣಾಮ ಬೀರಿದರೂ ಅಚ್ಚರಿ ಪಡಬೇಕಿಲ್ಲ.

ಹೂವಿನಹಡಗಲಿಯಲ್ಲಿ ಮೇಲ್ನೋಟಕ್ಕೆ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಇದ್ದಂತೆ ಕಂಡರೂ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ಕಾಂಗ್ರೆಸ್‌ನ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ 'ಹ್ಯಾಟ್ರಿಕ್' ಗೆಲುವಿನ ಭರವಸೆಯಲ್ಲಿದ್ದಾರೆ. ಅವರದೇ ಪಕ್ಷದ ಅಭ್ಯರ್ಥಿ, ಯುವ ಮುಖಂಡ ಕೃಷ್ಣ ನಾಯ್ಕ ಅವರನ್ನು ಚುನಾವಣೆ ಹೊಸ್ತಿಲಲ್ಲಿ ಪಕ್ಷಕ್ಕೆ ಸೇರಿಸಿಕೊಂಡು ಬಿಜೆಪಿ ಕಣಕ್ಕಿಳಿಸಿದೆ. ಕ್ಷೇತ್ರದಲ್ಲಿ ಕೆರೆಗಳನ್ನು ತುಂಬಿಸಿರುವುದು ಪರಮೇಶ್ವರ ನಾಯ್ಕ ಅವರ ಪ್ಲಸ್ ಪಾಯಿಂಟ್. ಕಾಂಗ್ರೆಸ್ ಹಿರಿಯ ಮುಖಂಡ ಕೆ.ಸಿ. ಕೊಂಡಯ್ಯ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಕೃಷ್ಣ ನಾಯ್ಕ ಅವರ ಬೆನ್ನಿಗೆ ನಿಂತಿರುವುದು ಪರಮೇಶ್ವರ ನಾಯ್ಕ ಅವರ ನಿದ್ದೆಗೆಡಿಸಿದೆ. ಕೃಷ್ಣನಾಯ್ಕ, ಮೆಕ್ಯಾನಿಕಲ್ ಎಂಜಿನಿಯರ್. ಇಟಲಿಯಲ್ಲಿ ಕೆಲಕಾಲ ಕೆಲಸ ಮಾಡಿದವರು. ಬೆಂಗಳೂರಿನಲ್ಲಿ ಉದ್ಯಮ ಹೊಂದಿದ್ದಾರೆ. 'ನಾನು ಯುವ ಉದ್ಯಮಿ. ಗೆಲ್ಲಿಸಿದರೆ ಉದ್ಯೋಗ ಸೃಷ್ಟಿಗೆ ಶ್ರಮಿಸುವೆ' ಎಂದು ಮತ ಕೇಳುತ್ತಿದ್ದಾರೆ. ಇದು ಯುವ ಮತದಾರರನ್ನು ಆಕರ್ಷಿಸುತ್ತಿದೆ.

ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಹಾಗೂ ಕೂಡ್ಲಿಗಿ ಕ್ಷೇತ್ರಗಳು ತ್ರಿಕೋನ ಸ್ಪರ್ಧೆಯ ಕಣವಾಗಿ ಮಾರ್ಪಟ್ಟಿವೆ. ಬಿಜೆಪಿ, ಹಗರಿಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತ, ಮಾದಿಗ ಸಮಾಜದ ಬಲ್ಲಾಹುಣ್ಸಿ ರಾಮಣ್ಣ ಅವರಿಗೆ ಟಿಕೆಟ್ ಕೊಟ್ಟಿರುವುದರಿಂದ ಕ್ಷೇತ್ರದ ಚಿತ್ರಣ ಬದಲಾಗಿದೆ. ಮಾಜಿ ಶಾಸಕ ಕೆ. ನೇಮರಾಜ ನಾಯ್ಕ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿರುವುದರಿಂದ ಅವರು ಜೆಡಿಎಸ್‌ನಿಂದ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್‌ನಿಂದ ಶಾಸಕ ಭೀಮ ನಾಯ್ಕ 'ಹ್ಯಾಟ್ರಿಕ್' ಗೆಲುವಿನ ಕನಸು ಕಾಣುತ್ತಿದ್ದಾರೆ. ಎರಡು ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಶ್ರಮಿಸಿದ್ದಾರೆ. ಸದಾ ಜನರ ನಡುವೆ ಇರುತ್ತಾರೆ. ಇದು ಭೀಮ ನಾಯ್ಕ ಬಗೆಗಿರುವ ಉತ್ತಮ ಅಭಿಪ್ರಾಯ. ಟಿಕೆಟ್ ಕೈತಪ್ಪಿದ್ದಕ್ಕೆ ನೇಮರಾಜ ನಾಯ್ಕ ಹಾಗೂ ಅವರ ಪತ್ನಿ, ಕಾರ್ಯಕರ್ತರ ಸಭೆಯಲ್ಲಿ ಕಣ್ಣೀರು ಹಾಕಿರುವುದು ಕ್ಷೇತ್ರದಲ್ಲಿ ಅವರ ಬಗ್ಗೆ ಅನುಕಂಪ ಮೂಡಿದೆ. ಬಲ್ಲಾಹುಣ್ಸಿ ರಾಮಣ್ಣ ಅವರು ಹೊಸಬರಾದ ಕಾರಣ ಕ್ಷೇತ್ರದ ಮೇಲೆ ಹಿಡಿತವಿಲ್ಲ. ಮೋದಿ ಹಾಗೂ ಪಕ್ಷದ ಹೆಸರು ನೆಚ್ಚಿಕೊಂಡಿದ್ದಾರೆ. ಕಾಂಗ್ರೆಸ್–ಜೆಡಿಎಸ್ ನಡುವೆ ನೇರ ಸ್ಪರ್ಧೆ ನಡೆಯುವ ಸಾಧ್ಯತೆ ಹೆಚ್ಚಿದ್ದು, ಯಾರೇ ಗೆದ್ದರೂ ಗೆಲುವಿನ ಅಂತರ ತೀರ ಕಡಿಮೆ ಇರಬಹುದು.

ಕೂಡ್ಲಿಗಿ ಕ್ಷೇತ್ರದಲ್ಲಿ ಮಾಜಿ ಶಾಸಕ ಎನ್‌.ಟಿ. ಬೊಮ್ಮಣ್ಣ ಅವರ ಮಗ ಡಾ.ಎನ್‌.ಟಿ. ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದರೆ, ಇತ್ತೀಚೆಗೆ ಕಾಂಗ್ರೆಸ್‌ನಿಂದ ಬಿಜೆಪಿ ಸೇರಿರುವ ಲೋಕೇಶ್ ವಿ. ನಾಯಕ ಅವರು 'ಕಮಲ' ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಇನ್ನು, ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡು ಕೊನೆಯ ಕ್ಷಣದಲ್ಲಿ ಜೆಡಿಎಸ್ ಸೇರಿರುವ ಕೋಡಿಹಳ್ಳಿ ಭೀಮಣ್ಣ ಆ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ಇದರಿಂದ ಬಿಜೆಪಿಗೆ ಮತ ವಿಭಜನೆಯ ಚಿಂತೆ ಕಾಡುತ್ತಿದೆ.

ಹರಪನಹಳ್ಳಿ ಕ್ಷೇತ್ರ ಕೂಡ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ಬಿಜೆಪಿ ಶಾಸಕ ಜಿ. ಕರುಣಾಕರ ರೆಡ್ಡಿ ಅವರು ಪುನರಾಯ್ಕೆ ಬಯಸಿದ್ದಾರೆ. ಕಾಂಗ್ರೆಸ್, ಉದ್ಯಮಿ ಎನ್. ಕೊಟ್ರೇಶ್ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದಕ್ಕೆ ಮುನಿಸಿಕೊಂಡಿರುವ ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರ ಮಗಳು ಎಂ.ಪಿ. ಲತಾ ಮಲ್ಲಿಕಾರ್ಜುನ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಇದರಿಂದಾಗಿ ಕ್ಷೇತ್ರ ಕುತೂಹಲದ ಕಣವಾಗಿ ಮಾರ್ಪಟ್ಟಿದೆ.

ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ವಿಜಯನಗರ	ಬಿಜೆಪಿ	ಕಾಂಗ್ರೆಸ್
ಹಗರಿಬೊಮ್ಮನಹಳ್ಳಿ	ಜೆಡಿಎಸ್	ಕಾಂಗ್ರೆಸ್
ಹೂವಿನಹಡಗಲಿ	ಕಾಂಗ್ರೆಸ್	ಕಾಂಗ್ರೆಸ್
ಹರಪನಹಳ್ಳಿ	ಕಾಂಗ್ರೆಸ್	ಬಿಜೆಪಿ
ಕೂಡ್ಲಿಗಿ	ಪಕ್ಷೇತರ	ಬಿಜೆಪಿ

ಜಂಬೂಸವಾರಿ ಮಾರ್ಗದಲ್ಲಿ ಮೋದಿ ರೋಡ್ ಶೋ ನಾಳೆ

ಮೈಸೂರು: ಪಕ್ಷದ ಚುನಾವಣೆ ಪ್ರಚಾರ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಇದೇ 30ರಂದು ನಗರಕ್ಕೆ ಭೇಟಿ ನೀಡಲಿದ್ದು, ಜಂಬೂಸವಾರಿ ಮಾರ್ಗವೂ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ರೋಡ್‌ಶೋ ನಡೆಸಲಿದ್ದಾರೆ.

'ನಗರದ ಓವೆಲ್ ಮೈದಾನದ ಹೆಲಿಪ್ಯಾಡ್‌ಗೆ ಸಂಜೆ 5.35ಕ್ಕೆ ಬಂದಿಳಿಯಲಿರುವ ಪ್ರಧಾನಿ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆಯವರೆಗೆ ತಮ್ಮ ವಾಹನದಲ್ಲೇ ತೆರಳಲಿದ್ದಾರೆ. ಗನ್‌ಹೌಸ್ ವೃತ್ತದಲ್ಲಿ ಅವರಿಗೆ ಮೈಸೂರಿನ ವೀಳ್ಯದೆಲೆ, ಶ್ರೀಗಂಧ, ಗಂಧದ ಕಡ್ಡಿ, ಮೈಸೂರು ರೇಷ್ಮೆ ಉಡುಗೊರೆ ನೀಡಲಾಗುವುದು. ಅಲ್ಲಿಂದ ತೆರೆದ ವಾಹನದಲ್ಲಿ ಅವರು ಸಂಸ್ಕೃತ ಪಾಠಶಾಲೆ ವೃತ್ತ, ಸಿಟಿ ಬಸ್ ನಿಲ್ದಾಣ ವೃತ್ತ, ಕೆ.ಆರ್. ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ವೃತ್ತ, ಹೈವೇ ವೃತ್ತ, ಮಿಲೇನಿಯಂ ವೃತ್ತದವರೆಗೂ ರೋಡ್ ಶೋ ನಡೆಸಲಿದ್ದಾರೆ' ಎಂದು ಶಾಸಕ ಎಸ್‌.ಎ.ರಾಮದಾಸ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ರೋಡ್‌ಶೋವನ್ನು 80 ಸಾವಿರದಿಂದ 1 ಲಕ್ಷ ಮಂದಿ ವೀಕ್ಷಿಸುವ ನಿರೀಕ್ಷೆಯಿದೆ. ಹಿರಿಯ ನಾಗರಿಕರಿಗೆ ಐದು ಕಡೆ ವೀಕ್ಷಣಾ ಸ್ಥಳದ ವ್ಯವಸ್ಥೆ ಮಾಡಲಾಗುತ್ತದೆ. 21 ಕಲಾತಂಡಗಳು ಕಲಾ ಪ್ರದರ್ಶನ ನೀಡಲಿವೆ. ಮೆರವಣಿಗೆ ಮಾರ್ಗದಲ್ಲಿ 'ಮೋದಿ ನಡೆದು ಬಂದ ಹಾದಿ', ಸರ್ಕಾರದ ಯೋಜನೆಗಳ ಕುರಿತು ಕಟೌಟ್, ಸ್ವಾಗತ ಕಮಾನುಗಳನ್ನು ನಿರ್ಮಿಸಲಾಗುತ್ತದೆ' ಎಂದರು.

'30ರಂದು ಮೋದಿ ಭಾಷಣ ಮಾಡುವುದಿಲ್ಲ. ಮೇ 6ರಂದು ನಂಜನಗೂಡಿಗೆ ಮತ್ತೆ ಭೇಟಿ ನೀಡಲಿದ್ದು, ರ್‍ಯಾಲಿಯಲ್ಲಿ ಮಾತನಾಡಲಿದ್ದಾರೆ' ಎಂದು ಸ್ಪಷ್ಟಪಡಿಸಿದರು.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಕಿತ್ತಳೆ ಹಣ್ಣಿನ ಜ್ಯೂಸ್

ಬೇಕಾಗುವ ಸಾಮಗ್ರಿಗಳು

ಕಿತ್ತಳೆ ಹಣ್ಣು 4, ಬ್ಲಾಕ್ ಸಾಲ್ಟ್ 1/4ಟೀ ಚಮಚ, ಚಾಟ್ ಮಸಾಲ 1/2ಟೀ ಚಮಚ, ಸಕ್ಕರೆ ನಿಮ್ಮ ಸಿಹಿಗೆ ಅನುಸಾರವಾಗಿ ಹಾಕಿ, ಐಸ್ ಕ್ಯೂಬ್ ಸ್ವಲ್ಪ.

ತಯಾರಿಸುವ ವಿಧಾನ

ಕಿತ್ತಳೆ ಹಣ್ಣಿನ ಸಿಪ್ಪೆ ಮತ್ತು ಬೀಜವನ್ನು ಬಿಡಿಸಿಕೊಳ್ಳಿ. ನಂತರ ಮಿಕ್ಸಿಯಲ್ಲಿ ಕಿತ್ತಳೆ ಹಣ್ಣು, ಸಕ್ಕರೆ, ಬ್ಲಾಕ್ ಸಾಲ್ಟ್, ಚಾಟ್ ಮಸಾಲವನ್ನು ಹಾಕಿ ರುಬ್ಬಿ ಕೊಂಡು ರಸವನ್ನು ತಯಾರಿಸಿ ಕೊಳ್ಳಿ. ತಯಾರಿಸಿ ಕೊಂಡ ಜ್ಯೂಸ್ ಗೆ ಐಸ್ ಕ್ಯೂಬ್ ಸೇರಿಸಿ ಇನ್ನೊಮ್ಮೆ ಒಂದು ಸುತ್ತು ಮಿಕ್ಸಿಯಲ್ಲಿ ರುಬ್ಬಿ.

ನಂತರ ಸರ್ವಿಂಗ್ ಗ್ಲಾಸ್ ನಲ್ಲಿ ಹಾಕಿ. ಚಿಟಿಕೆ ಚಾಟ್ ಮಸಾಲೆಯನ್ನು ಅದರ ಮೇಲೆ ಉದುರಿಸಿ ಅಲಂಕರಿಸಿ. ರುಚಿಕರವಾದ ಕಿತ್ತಳೆ ಹಣ್ಣಿನ ಜ್ಯೂಸ್ ತಯಾರಿಸಿ ಸವಿಯಿರಿ.

ಮಿಂಟ್ ಮಜ್ಜಿಗೆ ಕುಲ್ಕಿ ಶರಬತ್

ನಳಪಾಕ

ಬೇಸಿಗೆಯಲ್ಲಿ ತಂಪು ಪಾನೀಯಗಳದ್ದೇ ದರ್ಬಾರು. ಬೇರೆ ದಿನಗಳಲ್ಲಿ ಅಡುಗೆ ಮನೆಯಲ್ಲಿ ವಿಶಿಷ್ಟ ಖಾದ್ಯಗಳ ತಯಾರಿಕೆ ಪ್ರಯೋಗಗಳು ನಡೆದಂತೆ, ಬೇಸಿಗೆಯಲ್ಲಿ ಹೊಸ ರೀತಿಯ ಪಾನೀಯಗಳನ್ನು ತಯಾರಿಸುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಅಂಥ ವಿಶಿಷ್ಟ ಪಾನೀಯಗಳ ರೆಸಿಪಿಗಳನ್ನು **ಎಚ್.ಎಸ್.ವೇದಾವತಿ** ಯವರು ಇಲ್ಲಿ ಹಂಚಿಕೊಂಡಿದ್ದಾರೆ.

ಮಿಂಟ್ ಮಸಾಲೆ ಮಜ್ಜಿಗೆ

ಬೇಕಾಗುವ ಸಾಮಗ್ರಿಗಳು: ಗಟ್ಟಿ ಮೊಸರು 1/2 ಲೀಟರ್, ಉಪ್ಪು ರುಚಿಗೆ ತಕ್ಕಷ್ಟು, ಚಿಕ್ಕದಾಗಿ ಕತ್ತರಿಸಿದ ಹಸಿ ಮೆಣಸಿನಕಾಯಿ 1, ಕೊತ್ತಂಬರಿ ಸೊಪ್ಪು, ಪುದೀನಾ, ಕರಿಬೇವು ಎಲ್ಲವೂ ಸ್ವಲ್ಪ ಸ್ವಲ್ಪ, ಶುಂಠಿ ಒಂದಿಂಚು, ಹುರಿದು ಪುಡಿ ಮಾಡಿದ ಜೀರಿಗೆ 1/2ಟೀ ಚಮಚ.

ತಯಾರಿಸುವ ವಿಧಾನ:

ಮೇಲೆ ತಿಳಿಸಿರುವ ಸಾಮಗ್ರಿಗಳನ್ನು ಮಿಕ್ಸಿಯಲ್ಲಿ ಹಾಕಿ ಜೊತೆಗೆ ಸ್ವಲ್ಪ ಮೊಸರನ್ನು ಸೇರಿಸಿ ಚೆನ್ನಾಗಿ ರುಬ್ಬಿಕೊಳ್ಳಿ. ನಂತರ ಉಳಿದ ಮೊಸರನ್ನು ಅದಕ್ಕೆ ಸೇರಿಸಿ ಒಂದು ಸುತ್ತು ಮಿಕ್ಸಿಯಲ್ಲಿ ರುಬ್ಬಿ ಕೊಳ್ಳಿ. ತಯಾರಿಸಿದ ಮಿಂಟ್ ಮಸಾಲೆ ಮಜ್ಜಿಗೆಯನ್ನು ಸರ್ವಿಂಗ್ ಮಾಡುವಾಗ ಐಸ್ ಕ್ಯೂಬ್ ಸೇರಿಸಿ ಸರ್ವ್ ಮಾಡಿ. ರುಚಿಕರವಾದ ಆರೋಗ್ಯಕ್ಕೆ ಹಿತಕರವಾದ ಮಿಂಟ್ ಮಸಾಲೆ ಮಜ್ಜಿಗೆ ತಯಾರಿಸಿ ಸವಿಯಿರಿ.

ಶುಂಠಿ-ನಿಂಬೆ ಜ್ಯೂಸ್

ಬೇಕಾಗುವ ಸಾಮಗ್ರಿಗಳು

ನಿಂಬೆ ಹಣ್ಣು 1, ಶುಂಠಿ 2 ಇಂಚು, ಬೇಸಿಲ್ ಸೀಡ್ಸ್ 1ಟೇಬಲ್ ಚಮಚ(ಕಾಮಕಸ್ತೂರಿ ಬೀಜ), ಫ್ರೆಶ್ ಅರಿಶಿನದ ಗಡ್ಡೆ 2ಇಂಚು, ಕ್ಯಾರೆಟ್ 2, ಬ್ಲಾಕ್ ಸಾಲ್ಟ್ ಚಿಟಿಕೆ, ಪುದೀನ ಎಲೆಗಳು 15, ಜೇನು ತುಪ್ಪ ನಿಮ್ಮ ಸಿಹಿಗೆ ಅನುಗುಣವಾಗಿ ಹಾಕಿ.

ತಯಾರಿಸುವ ವಿಧಾನ:

ಬೇಸಿಲ್ ಸಿಡ್ಸ್‌ಅನ್ನು ಮುಕ್ಕಾಲು ಕಪ್ ನೀರಿನಲ್ಲಿ ನೆನೆಸಿಟ್ಟುಕೊಳ್ಳಿ. ತಾಜಾ ಅರಿಶಿನ ಗಡ್ಡೆ, ಶುಂಠಿ ಮತ್ತು ಕ್ಯಾರೆಟ್ ಸಿಪ್ಪೆಯನ್ನು ತೆಗೆದು ಚಿಕ್ಕದಾಗಿ ಕತ್ತರಿಸಿ ಕೊಳ್ಳಿ. ಹೆಚ್ಚಿಕೊಂಡ ಕ್ಯಾರೆಟ್, ಅರಿಶಿನ ಮತ್ತು ಶುಂಠಿಯನ್ನು ಮಿಕ್ಸಿಯಲ್ಲಿ ಹಾಕಿ, ಜೊತೆಗೆ ಪುದೀನ, ಜೇನುತುಪ್ಪ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ಕಪ್ ನೀರನ್ನು ಸೇರಿಸಿ ಮತ್ತೊಮ್ಮೆ ರುಬ್ಬಿಕೊಳ್ಳಿ. ಒಂದು ಪಾತ್ರೆಯಲ್ಲಿ ಹಾಕಿ ನಿಂಬೆರಸ ಮತ್ತು ಬೇಸಿಲ್ ಸೀಡ್ಸ್‌ಅನ್ನು ಸೇರಿಸಿ ಮಿಶ್ರಣ ಮಾಡಿ. ರುಚಿಕರವಾದ ಮತ್ತು ಆರೋಗ್ಯಕರವಾದ ಶುಂಠಿ-ನಿಂಬೆ ಜ್ಯೂಸ್ ತಯಾರಿಸಿ ಸವಿಯಿರಿ.

ಕುಲ್ಕಿ ಶರಬತ್

ಇದು ಕೇರಳ ರಾಜ್ಯದ ಪಾನೀಯವಾಗಿದೆ. ಕೆಲವೇ ಕೆಲವು ಸಾಮಗ್ರಿಗಳನ್ನು ಉಪಯೋಗಿಸಿ ತಯಾರಿಸುವಂಥದ್ದು, ತುಂಬಾ ಸುಲಭವಾಗಿ ತಯಾರಿಸಬಹುದು.

ಬೇಕಾಗುವ ಸಾಮಗ್ರಿಗಳು:

ನಿಂಬೆ ಹಣ್ಣು 1, ಕಾಮಕಸ್ತೂರಿ ಬೀಜ 2ಟೀ ಚಮಚ, ಹಸಿರು ಮೆಣಸಿನ ಕಾಯಿ 1(ಒಂದು ಗ್ಲಾಸಿಗೆ ಒಂದರಂತೆ ಹಾಕಬೇಕು), ಸಕ್ಕರೆ 2ಟೇಬಲ್ ಚಮಚ ಅಥವಾ ಜೇನು ತುಪ್ಪ. (ನಿಮ್ಮ ಸಿಹಿಗೆ ಅನುಗುಣವಾಗಿ ಹಾಕಿ), ಉಪ್ಪು ಚಿಟಿಕೆ, ನೀರು ಒಂದು ಗ್ಲಾಸ್, ಪುದೀನ ಸೊಪ್ಪು ಸ್ವಲ್ಪ.

ತಯಾರಿಸುವ ವಿಧಾನ

ಕಾಮಕಸ್ತೂರಿ ಬೀಜವನ್ನು ನೀರಿನಲ್ಲಿ ಐದು ನಿಮಿಷಗಳ ಕಾಲ ನೆನೆಸಿಡಿ. ನಿಂಬೆ ಹಣ್ಣನ್ನು ಒಂದರಲ್ಲಿ ಒಂದು ಚಿಕ್ಕದಾಗಿ ವೃತ್ತಾಕಾರವಾಗಿ ಕತ್ತರಿಸಿ. ಅದನ್ನು ಗ್ಲಾಸಿನಲ್ಲಿ ಹಾಕಿ. ಚಿಟಿಕೆ ಉಪ್ಪು ಮತ್ತು ಸಕ್ಕರೆಯನ್ನು ಗ್ಲಾಸಿನೊ ಳಗೆ ಹಾಕಿ. ನಂತರ ನೆನೆಸಿದ ಕಾಮಕಸ್ತೂರಿ ಬೀಜವನ್ನು ಅದರಲ್ಲಿ ಸೇರಿಸಿ. ಬಳಿಕ ಹಸಿರು ಮೆಣಸಿನ ಕಾಯಿಯನ್ನು ತೊಟ್ಟಿನ ಬುಡದಿಂದ ಕೊನೆಯವರೆಗೆ ಮಧ್ಯದಲ್ಲಿ ಕತ್ತರಿಸಿ ಅದನ್ನು ಗ್ಲಾಸಿನೊಳಗೆ ಹಾಕಿ. ಒಂದು ನಿಂಬೆ ಹಣ್ಣಿನ ರಸವನ್ನು ಸೇರಿಸಿ. ಈಗ ಐಸ್ ಕ್ಯೂಬ್ ಸೇರಿಸಿ. ನೀರನ್ನು ಗ್ಲಾಸಿನಲ್ಲಿ ಹಾಕಿ. ಕೊನೆಯಲ್ಲಿ ಪುದೀನ ಸೊಪ್ಪು ಸೇರಿಸಿ.

ಅದೇ ಗಾತ್ರದ ಒಂದು ಲೋಟದಿಂದ ಗಟ್ಟಿಯಾಗಿ ಮುಚ್ಚಿ ಚನ್ನಾಗಿ ಕಲಕಿ. ಸಕ್ಕರೆ ಪೂರ್ತಿ ಕರಗುವರೆಗೆ ಕಲಕಿ. ಈಗ ರುಚಿಕರವಾದ ಮತ್ತು ದೇಹಕ್ಕೆ ತಂಪಾದ ಕುಲ್ಕಿ ಶರಬತ್ ಸವಿಯಲು ರೆಡಿ.

ಮಾನಸಿಕ ಸಂಘರ್ಷಕ್ಕೆ ತಡೆ ಹೇಗೆ ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• ನಾನು ಅತಿಯಾದ ದೈವಭಕ್ತಳಲ್ಲ ಹಾಗೆಯೇ ನಾಸ್ತಿಕಳು ಅಲ್ಲ. ಸಂಕಟ ಬಂದಾಗ ವೆಂಕಟರಮಣ ಎನ್ನುವ ಪೈಕಿಯವಳು. ಸಮಸ್ಯೆ ಇರುವಾಗ ವಿಪರೀತವಾಗಿ ಅನುಷ್ಠಾನ, ಪೂಜೆ ಕೈಗೊಳ್ಳುತ್ತೇನೆ. ಪರಿಹಾರವಾದ ಕೂಡಲೇ ದೇವರ ಅಸ್ತಿತ್ವದ ಬಗ್ಗೆ ಮನಸ್ಸಿನಲ್ಲಿ ಬೇಡವೆಂದರೂ ಹಲವು ಪ್ರಶ್ನೆಗಳು ಏಳುತ್ತವೆ. ಇದು ನನ್ನೊಳಗೆ ಹೊಸ ದಿಗಿಲು ಹುಟ್ಟಿಸುತ್ತದೆ. ದೇವರ ಬಗ್ಗೆಯೂ ಹೀಗೆ ವ್ಯವಹಾರಿಕವಾಗಿ ಯೋಚಿಸಿದನಲ್ಲ ಎಂಬ ಪಾಪಪ್ರಜ್ಞೆ ಉಂಟಾಗುತ್ತದೆ. ಈ ಪಾಪಪ್ರಜ್ಞೆ ಮತ್ತೆ ನನ್ನೊಳಗೆ ದೇವರ ಬಗ್ಗೆ ಭಯ ಹುಟ್ಟಿಸುತ್ತದೆ. ಲೌಕಿಕವಾಗಿ ನಡೆಯುವ ಎಲ್ಲಾ ಸಂಗತಿಗಳಿಗೂ ದೇವರು ಶಿಕ್ಷೆ ಕೊಡುತ್ತಿದ್ದಾನೆ ಎನ್ನುವ ದೃಷ್ಟಿಕೋನ ದಲ್ಲಿಯೇ ನೋಡುವಂತಾಗುತ್ತದೆ. ಪದೇ ಪದೇ ದೇವರೇ ಶಪಿಸಿದಂತೆ ಆಗುತ್ತದೆ. ಇದೇನಾದರೂ ಬೈಪೋಲಾರ್ ಡಿಸಾರ್ಡರ್ ಇರಬಹುದೇ? ಇದರಿಂದ ಹೊರಬರುವುದು ಹೇಗೆ? ಹೆಸರು, ಊರು ತಿಳಿಸಿಲ್ಲ.

ಬಹಳ ಆಸಕ್ತಿದಾಯಕವಾದ ಪ್ರಶ್ನೆ ಕೇಳಿದ್ದೀರಿ. ನಿಮ್ಮ ಮಾನಸಿಕ ತೊಳಲಾಟವನ್ನು ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸಿರುವ ರೀತಿ ಮೆಚ್ಚುಗೆಯಾಗುವಂತಿದೆ. ನಿಮ್ಮದು ಬೈಪೋಲಾರ್ ಮೂಡ್ ಡಿಸಾರ್ಡರ್ ಖಂಡಿತವಾಗಿ ಅಲ್ಲ. ಅಂತರ್ಜಾಲದಲ್ಲಿ ಹುಡುಕಾಡಿ ಮೋಸಹೋಗಬೇಡಿ.

ಮಾನವನ ಮಿದುಳು ಏಕಕೋಶಜೀವಿಗಳಿಂದ ಹಂತಹಂತವಾಗಿ ಅಭಿವೃದ್ಧಿಯಾಗಿ ಈ ಸ್ಥಿತಿಗೆ ಬಂದಿದೆ ಎನ್ನುವುದು ನಿಮಗೆ ತಿಳಿದಿರಬಹುದಲ್ಲವೇ? ನಮ್ಮ ಈಗಿನ ಮಿದುಳಿನಲ್ಲಿ ಮಾನವನಿಗೆ ಮಾತ್ರ ಇರುವ ತರ್ಕ ವಿವೇಚನೆಗಳಿಗೆ ಬಳಕೆಯಾಗುವ ಮುಮ್ಮೆದುಳು ಒಟ್ಟು ಮಿದುಳಿನ ಸುಮಾರು ಶೇ 20 ಭಾಗ ಮಾತ್ರ. ಉಳಿದ ಶೇ 80 ಭಾಗ ಪ್ರಾಣಿಮಿದುಳಿನ ರಚನೆಯನ್ನೇ ಹೊಂದಿದೆ. ನಮ್ಮ ಭಯ ಸಂತೋಷ ಹಿಂಜರಿಕೆ ನೋವು ಕೋಪ ಪ್ರೀತಿ ನಂಬಿಕೆ ಮುಂತಾದವುಗಳನ್ನು ಪ್ರಾಣಿಮಿದುಳಿನ ಭಾಗವೇ ನಿರ್ದೇಶಿಸುತ್ತದೆ. ವಿದ್ಯಾಭ್ಯಾಸ ಹಣ ವ್ಯವಹಾರಿಕ ಬದುಕು ಮುಂತಾದವುಗಳಿಗಾಗಿ ಮಾತ್ರ ಮುಮ್ಮೆದುಳು ಬಳಕೆಯಾಗುತ್ತದೆ. ಮಿದುಳಿನ ಎಲ್ಲಾ ಭಾಗಗಳನ್ನು ಸಮರ್ಪಕವಾಗಿ ಬಳಸಿ ಸಂತೋಷ ಸಮಾಧಾನಗಳಿಂದ ಬದುಕಲು ಸಾಧ್ಯವಾಗುವ ಸಂಪರ್ಕ ಜಾಲಗಳನ್ನು ನಾವು ಸೃಷ್ಟಿಸಿಕೊಳ್ಳಬಹುದು. ಅಂತಹ ಸಂಪರ್ಕ ಜಾಲಗಳು ನಮ್ಮನಮ್ಮ ಬಾಲ್ಯದ ಅನುಭವಗಳ ಆಧಾರದ ಮೇಲೆ ಬೆಳವಣಿಗೆಯಾಗುತ್ತದೆ.

ನೀವು ಒಂದು ಕಡೆ ನಂಬಿಕೆಗಳು (ಪ್ರಾಣಿಮಿದುಳು) ಮತ್ತೊಂದು ಕಡೆ ತರ್ಕವನ್ನು (ಮುಮ್ಮೆದುಳು) ನಿಲ್ಲಿಸಿಕೊಂಡು ಅವೆರಡರಲ್ಲಿ ಸ್ಪರ್ಧೆಯನ್ನು ಏರ್ಪಡಿಸಿದ್ದೀರಿ.

ಅಂದರೆ ನಿಮ್ಮದೇ ವ್ಯಕ್ತಿತ್ವದ ಎರಡು ಭಾಗಗಳು ಶತ್ರುಗಳಂತೆ ಹೋರಾಡುತ್ತಿರುತ್ತವೆ. ಕೆಲವೊಮ್ಮೆ ನಂಬಿಕೆಗಳು ಮೇಲುಗೈ ಸಾಧಿಸಿದರೆ ಉಳಿದ ಸಂಭರ್ಗಗಳಲ್ಲಿ ತರ್ಕ ಜಯಿಸುತ್ತದೆ. ಸೋಲು ಗೆಲುವುಗಳು ಯಾವ ಭಾಗದ್ದೇ ಆದರೂ ತೊಳಲಾಟ ಮಾತ್ರ ನಿಮ್ಮದೇ ಆಗಿರುತ್ತದೆ.

ಈಗ ನೀವು ಸಂಪೂರ್ಣ ಮಿದುಳು ವ್ಯಕ್ತಿತ್ವಗಳನ್ನು ಏಕೀಕರಿಸಿ ಬದುಕುವುದನ್ನು ಕಲಿಯಬೇಕಾಗಿದೆ. ಮೊದಲು ನಿಮ್ಮ ಬಾಲ್ಯದ ಅನುಭವಗಳತ್ತ ಗಮನಹರಿಸಿ. ಆಗ ನಿಮಗೆ ಇಷ್ಟವಿಲ್ಲದಿದ್ದರೂ ಪೋಷಕರು ಒತ್ತಾಯದಿಂದ ಅವರ ನಂಬಿಕೆಗಳನ್ನು ಹೇರುತ್ತಿದ್ದಿರಬಹುದೇ? ಪೋಷಕರ ಮೇಲೆ ಅವಲಂಬಿತರಾಗಿದ್ದರಿಂದ ನಿಮಗೆ ಆಗ ಪ್ರತಿಭಟಿಸುವುದು ಸಾಧ್ಯವಿರಲಿಲ್ಲ ಅಲ್ಲವೇ? ಆಗ ತೋರಿಸಲು ಸಾಧ್ಯವಿರದಿದ್ದ ಪ್ರತಿಭಟನೆಯನ್ನು ಈಗ ನಂಬಿಕೆಗಳ ವಿರುದ್ಧವಾಗಿ ತೋರಿಸುತ್ತಿದ್ದಿರಬಹುದೇ? ಒಮ್ಮೊಮ್ಮೆ ಪೋಷಕರು ಹೇರಿದ್ದ ನಂಬಿಕೆಯು ಕಾಡಿದರೆ ಉಳಿದಂತೆ ಸ್ವಂತಿಕೆಯ ಹುಡುಕಾಟದಲ್ಲಿ ಪೋಷಕರು ಹೇರಿದ ನಂಬಿಕೆಗಳ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಿದ್ದೀರಲ್ಲವೇ? ಈ ಎಲ್ಲಾ ಅಂಶಗಳನ್ನು ನಿಧಾನವಾಗಿ ಯೋಚಿಸಿ ಬರೆಯುತ್ತಾ ಹೋಗಿ.

ಪೋಷಕರು ಪ್ರೀತಿ ಕಾಳಜಿ ಮತ್ತು ಒಳ್ಳೆಯ ಉದ್ದೇಶದಿಂದಲೇ ತಮ್ಮ ನಂಬಿಕೆಗಳನ್ನು ಮಕ್ಕಳ ಮೇಲೆ ಒತ್ತಾಯದಿಂದ ಹೇರುತ್ತಾರೆ. ಆದರೆ ಅದು ಮಕ್ಕಳ ಮುಕ್ತಮನಸ್ಸಿನ ಆಯ್ಕೆಯಾಗದಿದ್ದಾಗ ಅವರೊಳಗೆ ಪ್ರತಿಭಟನೆಯ ಧ್ವನಿಗಳು ಏಳುತ್ತವೆ. ಆದರೆ ಬಾಲ್ಯದ ಅವಲಂಬನೆಯಿಂದಾಗಿ ಆಗಲೇ ವ್ಯಕ್ತವಾಗದೆ ಉಳಿದುಬಿಡುತ್ತವೆ. ಈಗ ನೀವು ವಯಸ್ಕರಾಗಿದ್ದೀರಿ. ಸಂತೋಷ ಸಮಧಾನಗಳಿಂದ ಬದುಕುವುದಕ್ಕೆ ನೆರವಾಗಬಲ್ಲ ಮತ್ತು ಬದುಕಿನ ಉದ್ದೇಶಗಳಿಗೆ ಪೂರಕವಾಗಬಲ್ಲ ನಂಬಿಕೆಗಳೇನು ಎಂದು ಯೋಚಿಸಿ. ಅವುಗಳನ್ನು ಆಚರಿಸುವುದು ಹೇಗೆ ಎಂದು ಸ್ಪಷ್ಟಪಡಿಸಿಕೊಂಡು ಅಷ್ಟನ್ನು ಮಾತ್ರ ಯಾವಾಗಲೂ ಪಾಲಿಸಿ. ಗೊಂದಲಗಳು ಶುರುವಾದಾಗ ದೀರ್ಘವಾಗಿ ಉಸಿರಾಡುತ್ತಾ ನಿಮ್ಮ ನಿರ್ಧಾರಗಳನ್ನು ನೆನಪಿಸಿಕೊಡು ದೇಹ ಮನಸ್ಸುಗಳನ್ನು ಶಾಂತಗೊಳಿಸಿಕೊಳ್ಳಿ.

ಹೀಗೆ ಬಾಲ್ಯದ ಅನುಭವಗಳನ್ನು ಅರ್ಥಮಾಡಿಕೊಂಡು ನಮಗೆ ಅಗತ್ಯವಿರುವ ಬದಲಾವಣೆ ಮಾಡಿಕೊಳ್ಳಲು ಸಮಯ ಸಹನೆಯ ಅಗತ್ಯವಿದೆ. ಮೇಲಿನ ಅಭ್ಯಾಸವನ್ನು ಆಗಾಗ ಮಾಡುತ್ತಲೇ ಇದ್ದರೆ ನಿಧಾನವಾಗಿ ನಿಮ್ಮ ಸಂಪೂರ್ಣ ಮಿದುಳು ಒಂದೇ ಗುರಿಯತ್ತ ತೊಡಗಿಕೊಂಡು ಗೊಂದಲಗಳ ಒತ್ತಡ ಕಡಿಮೆಯಾಗುತ್ತದೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಬಿಸಿಲ ಬೇಗೆ... ಪಾರಾಗಲು ಮಾಡಿ ಹೀಗೆ

ಗರ್ಭಿಣಿಯರು, ಬಾಣಂತಿಯರಿಗಾಗಿ ವೈದ್ಯರ ಕಿವಿಮಾತು

ಬಿಸಿಲು ಹೆಚ್ಚಾದಂತೆ ಗರ್ಭಿಣಿಯರು, ಬಾಣಂತಿಯರ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ ಇರುತ್ತದೆ. ವಾತಾವರಣದಲ್ಲಾಗುವ ಇಂಥ ವ್ಯತ್ಯಾಸಗಳಿಂದ ಹಲವು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ, ಅವುಗಳಿಗೆ ಪರಿಹಾರಗಳೇನು ಹಾಗೂ ಯಾವ ರೀತಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ? – ಈ ಕುರಿತು ಒಂದಷ್ಟು ಮಾಹಿತಿ ನೀಡಿದ್ದಾರೆ ಸ್ತ್ರೀಆರೋಗ್ಯ ತಜ್ಞೆ ಡಾ. ವೀಣಾ ಎನ್. ಸುಳ್ಯ.

ಆರು ತಿಂಗಳ ಗರ್ಭಿಣಿ ರಾಧಿಕಾ, ಮಾಸಿಕ ತಪಾಸಣೆಗೆಂದು ಬಂದಿದ್ದರು. ಹೊರಗಡೆ ಸಂಜೆಯ ಇಳಿ ಬಿಸಿಲು. ಆದರೂ ಏದುಸಿರು ಬಿಡುತ್ತಿದ್ದರು. ‘ಡಾಕ್ಟ್ರೆ, ಬಿಸಿಲೇರಿದಂತೆ, ಉಸಿರಾಡೋದಕ್ಕೆ ಕಷ್ಟವಾಗುತ್ತೆ. ತುಂಬಾ ಸುಸ್ತು, ನಿಶ್ಯಕ್ತಿ ಅನ್ನಿಸುತ್ತಿದೆ’ ಎಂದರು.

ಮೊದಲ ಬಾರಿಗೆ ಗರ್ಭಿಣಿಯಾಗಿರುವ ಸವಿತಾಗೆ ಎಂಟು ತಿಂಗಳು. ತಿಂಗಳ ಚೆಕ್‌ಅಪ್‌ಗಾಗಿ ಬಂದಿದ್ದ ಅವರು, ಕೆಲವು ಸೋಂಕಿನ ಸಮಸ್ಯೆಗಳನ್ನು ಹೇಳಿಕೊಂಡರು. ಆರು ತಿಂಗಳ ಗರ್ಭಿಣಿ ಶಮಂತ ಅವರದ್ದೂ ಇಂಥದ್ದೇ ಬೇಸಿಗೆಯ ಬಿಸಿಲಿನ ಸಮಸ್ಯೆಯೇ...

ಈ ಬಾರಿಯ ದೀರ್ಘ ಅವಧಿಯ ಬೇಸಿಗೆಯ ತಾಪ, ಗರ್ಭಿಣಿಯರು, ಬಾಣಂತಿಯರನ್ನು ಹೀಗೆ ಹೈರಾಣಾಗಿಸುತ್ತಿದೆ. ಕೆಲವರಿಗೆ ಬಳಲಿಕೆ, ಸುಸ್ತು ಕಾಣಿಸಿಕೊಂಡರೆ, ಇನ್ನೂ ಕೆಲವರಿಗೆ ಸೋಂಕುಗಳು ಬಾಧಿಸುತ್ತವೆ. ದೇಹದಲ್ಲಿನ ಬದಲಾವಣೆಗಳನ್ನು ಸರಿಯಾಗಿ ಗಮನಿಸದೇ ನಿರ್ಲಕ್ಷ್ಯಿಸಿದರೆ ಅಪಾಯಗಳು ಎದುರಾಗಲೂಬಹುದು.

ಯಾಕೆ ಹೀಗೆ ಆಗುತ್ತದೆ?

ವಾತಾವರಣದಲ್ಲಿ ಉಷ್ಣತೆ ಹೆಚ್ಚಾದಾಗ, ದೇಹ ಅದಕ್ಕೆ ಹೊಂದಿಕೊಳ್ಳಲು ಒದ್ದಾಡುತ್ತದೆ. ಆಗ ಗರ್ಭಿಣಿಯರಲ್ಲಿ ಬೇಸಲ್ ಮೆಟಬಾಲಿಕ್ ರೇಟ್ (BMR)ಹೆಚ್ಚಾಗಿರುತ್ತದೆ. ನಮ್ಮ ದೇಹದ ಎಲ್ಲಾ ಕೆಲಸಗಳನ್ನು ಸುಸೂತ್ರವಾಗಿ ನಡೆಸಲು ಬೇಕಾಗಿರುವ ಒಟ್ಟು ಶಕ್ತಿಯನ್ನು ನಾವು ಬಿಎಂಆರ್ ಎಂದು ಕರೆಯುತ್ತೇವೆ. ಇದು ಸಾಮಾನ್ಯವಾಗಿ ದಿನನಿತ್ಯದ ದೇಹದ ಕೆಲಸಕ್ಕೆ ಕಾರ್ಯಗಳು ನಡೆಯಲು ಬೇಕಾಗುವ ಶಕ್ತಿ. ಉದಾಹರಣೆಗೆ ಉಸಿರಾಟ, ರಕ್ತ ಪರಿಚಲನೆ.. ಇತ್ಯಾದಿ.

ಬಿಎಂಆರ್ ಎನ್ನುವುದು ಸಾಮಾನ್ಯರಲ್ಲಿ ಒಂದು ರೀತಿ ಉತ್ಪತ್ತಿಯಾದರೆ, ಗರ್ಭಿಣಿ, ಬಾಣಂತಿಯರಲ್ಲಿ ಒಂದು ರೀತಿ ಇರುತ್ತದೆ. ಇದು ದೇಹದ ಗಾತ್ರ ಮತ್ತು ದೇಹದೊಳಗೆ ನಡೆಯುವ ಕೆಲವು ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ.

ಗರ್ಭಿಣಿಯರಲ್ಲಿ ಕೊನೆಯ ಮೂರು ತಿಂಗಳಲ್ಲಿ ಬಿಎಂಆರ್ ಉತ್ಪತ್ತಿ ದುಪ್ಪಟ್ಟಾಗಿರುತ್ತದೆ. ಮೊದಲ ಮೂರು ತಿಂಗಳಲ್ಲಿ ಗರ್ಭಿಣಿ ಆಹಾರವನ್ನು ಕಡಿಮೆ ತೆಗೆದುಕೊಳ್ಳುವುದರಿಂದ, ದೇಹದ ಕೊಬ್ಬು ಕರಗಿ ಶಕ್ತಿಯನ್ನು ಉತ್ಪಾದಿಸುತ್ತದೆ. ನಾಲ್ಕರಿಂದ ಒಂಬತ್ತು ತಿಂಗಳಲ್ಲಿ ದೇಹದ ತೂಕದಲ್ಲಿ ಹೆಚ್ಚಳ ಮತ್ತು ಹೃದಯ ಬಡಿತ ಹೆಚ್ಚಾಗುವುದು, ಮಗುವಿನ ದೇಹದ ಜೀರ್ಣಕ್ರಿಯೆಗಳು, ತಾಯಿಯ ದೇಹದಲ್ಲಿ ಹೆಚ್ಚಿನ ಶಕ್ತಿಯನ್ನು ಉತ್ಪತ್ತಿ ಮಾಡಬೇಕಾದಂತ ಸಂದರ್ಭ ಕೂಡ ಬಿಎಂಆರ್ ಹೆಚ್ಚುವಂತೆ ಮಾಡುತ್ತದೆ.

ವಾತಾವರಣದಲ್ಲಿ ವ್ಯತ್ಯಾಸಗಳಾದಾಗ ಗರ್ಭಿಣಿಯರು ತುಂಬಾ ಬೆವರುವುದನ್ನು ನಾವು ಕಾಣುತ್ತೇವೆ. ಫ್ಯಾನ್ ಉಪಯೋಗಿಸಿದರೂ ಸೆಕೆ ಕಡಿಮೆಯಾಗುವುದಿಲ್ಲ. ರಾತ್ರಿ ಎಲ್ಲಾ ನಿದ್ದೆ ಬಾರದೇ ಒದ್ದಾಡುವುದನ್ನು ನೋಡುತ್ತೇವೆ. ಇದಕ್ಕೆ ಕಾರಣ ಕೂಡ ಅವರ ಶರೀರದಲ್ಲಿ ಹೆಚ್ಚಾಗಿ ಬಿಎಂಆರ್ ಉತ್ಪತ್ತಿಯಾಗುವುದು.

ಬಿಎಂಆರ್ ಹೆಚ್ಚಾದಾಗ

ವಾತಾವರಣದಲ್ಲಿ ತಾಪ ಹೆಚ್ಚಾದಾಗ, ಬಿಎಂಆರ್ ಉತ್ಪತ್ತಿ ಹೆಚ್ಚಾಗುತ್ತದೆ. ಆಗ ಗರ್ಭಿಣಿಯರಲ್ಲಿ ರಕ್ತದೊತ್ತಡ ಹೆಚ್ಚಾಗುತ್ತದೆ. ಅದು ಬೇರೆ ಆರೋಗ್ಯ ಸಮಸ್ಯೆಗಳು ಉದ್ಭವಿಸಲು ಕಾರಣವಾಗಬಹುದು. ಮಧುಮೇಹ ಕಾಣಿಸಿಕೊಳ್ಳಬಹುದು. ದಿನ ತುಂಬುವುದಕ್ಕೆ ಮೊದಲೇ ಹೆರಿಗೆ ಆಗುವುದು. ಮಗುವಿನ ಬೆಳವಣಿಗೆ ಕುಂಠಿತವಾಗುವುದು. ಹೊಟ್ಟೆಯಲ್ಲಿ ಮಗು ಸಾಯುವುದು- ಇವು ಪ್ರಮುಖವಾದವು.

ಗ್ಲುಕೋಸ್ ಮೆಟಬಾಲಿಸಂನಿಂದ ವ್ಯತ್ಯಾಸವಾಗಿ ಗರ್ಭಿಣಿಯಲ್ಲಿ ಮಧುಮೇಹ ಉಂಟಾಗಬಹುದು. ರಕ್ತದೊತ್ತಡವು ಜಾಸ್ತಿಯಾಗಬಹುದು.

ಅಲ್ಲದೆ ಈ ಸಮಯದಲ್ಲಿ ಸಹಜವಾಗಿ, ಗರ್ಭಿಣಿಯರಲ್ಲಿ ತೂಕ ಹೆಚ್ಚಾಗಿ, ಕೊಬ್ಬು ಶರೀರದಲ್ಲಿ ಸಂಗ್ರಹವಾಗುವ ಜೊತೆಗೆ ಶಕ್ತಿಯ ಉತ್ಪಾದನೆಯು ಆಗುತ್ತಿರುತ್ತದೆ. ದೇಹದ ಗಾತ್ರ ಮತ್ತು ವಿಸ್ತೀರ್ಣದಲ್ಲಿ ವ್ಯತ್ಯಾಸವಾಗುವುದರಿಂದ ಶರೀರವನ್ನು ತಂಪುಗೊಳಿಸುವಷ್ಟು ಬೆವರು ಉತ್ಪತ್ತಿಯಾಗುವುದರಲ್ಲಿ ಏರುಪೇರು ಆಗಬಹುದು.

ದೇಹದ ಉಷ್ಣತೆಯನ್ನು ಕಡಿಮೆ ಮಾಡಿಕೊಳ್ಳಲು ದೇಹ ಚರ್ಮದ ರಕ್ತನಾಳಗಳು ವಿಕಸಿತವಾಗಿ ಹೆಚ್ಚು ಬೆವರು ಉತ್ಪತ್ತಿ ಮಾಡುತ್ತದೆ. ದೇಹದ ಉಷ್ಣತೆಯನ್ನು ತಹಬಂದಿಗೆ ತರಲು ಪ್ರಯತ್ನಿಸುತ್ತದೆ. ಆ ಸಂದರ್ಭದಲ್ಲಿ ಗರ್ಭಕೋಶದ ರಕ್ತನಾಳಗಳಲ್ಲಿ ರಕ್ತ ಸಂಚಾರ ಕಡಿಮೆ ಆಗುತ್ತದೆ. ಅದರಿಂದಾಗಿ ಮಗುವಿನ ಹೊಕ್ಕಳ ಬಳ್ಳಿಯಲ್ಲೂ ರಕ್ತ ಸಂಚಾರ ಕಡಿಮೆಯಾಗಿ ಮಗುವಿನ ಬೆಳವಣಿಗೆಗೆ ತೊಂದರೆ ಆಗುತ್ತದೆ.

ದೇಹದ ಚರ್ಮದ ಉಷ್ಣತೆಯಲ್ಲಿ ಏರಿಕೆ, ತಲೆನೋವು, ತಲೆಸುತ್ತು, ಮಾಂಸಖಂಡಗಳಲ್ಲಿ ಬಿಗಿತ, ಗಲಿಬಿಲಿ, ನಿಶ್ಯಕ್ತಿ, ಸುಸ್ತು, ವಿಪರೀತ ಬೆವರುತ್ತದೆ. ತುಂಬಾ ಬೆವರುವುದರಿಂದ ಸ್ತನಗಳ ಕೆಳಗೆ ತೊಡೆ ಸಂಧಿಗಳಲ್ಲಿ ಚರ್ಮ ಒದ್ದೆಯಾಗುವುದರಿಂದ ಫಂಗಲ್ ನಂಜು ಆಗಬಹುದು.

ಉಷ್ಣತೆ ಹೆಚ್ಚಿದಂತೆಲ್ಲ ಶರೀರದಲ್ಲಿ ದೇಹದಲ್ಲಿ ಡಿಹೈಡ್ರೇಶನ್ (ನಿರ್ಜಲೀಕರಣ) ಉಂಟಾಗುತ್ತದೆ. ಆಗ ಮೂತ್ರ ಕಡಿಮೆ ಉತ್ಪತ್ತಿ ಮಾಡುವ ಹಾರ್ಮೋನ್ ಮತ್ತು ಆಕ್ಸಿಟೋಸಿನ್ ಸ್ರವಿಸಲ್ಪಡುತ್ತದೆ. ಆಕ್ಸಿಟೋಸಿನ್ ಹಾರ್ಮೋನ್‌ನಿಂದಾಗಿ ದಿನ ತುಂಬುವುದಕ್ಕೆ ಮೊದಲೇ ಹೆರಿಗೆ ನೋವು ಪ್ರಾರಂಭವಾಗಬಹುದು.

ಪರಿಹಾರಗಳೇನು ?

- ಬಿಸಿಲಿನ ಸಮಯದಲ್ಲಿ ಹೊರಗೆ ಓಡಾಡುವುದನ್ನು ತಪ್ಪಿಸಬೇಕು. ಆಸ್ಪತ್ರೆಗೆ ತಪಾಸಣೆಗೆ ಹೋಗಬೇಕಾದರೂ ಸಂಜೆ ಅವಧಿಯನ್ನೇ ಆಯ್ಕೆ ಮಾಡಿಕೊಳ್ಳಬೇಕು.
- ಬಿಸಿಲೇರುವ ಮುನ್ನವೇ ಅಡುಗೆ ಮನೆ(ಒಲೆ ಮುಂದಿನ ಕೆಲಸ)ಕೆಲಸ ಮುಗಿಸಿಕೊಳ್ಳಬೇಕು.
- ಹೊರಗೆ ಹೋಗುವ ಅನಿವಾರ್ಯತೆ ಇದ್ದರೆ, ಬಿಸಿಲು ನೇರವಾಗಿ ಬೀಳದಂತೆ ಛತ್ರಿ, ತಲೆಗೆ ಬಟ್ಟೆ ಟೋಪಿಯನ್ನು ಬಳಸಬಹುದು.
- ವ್ಯಾಯಾಮ ಮಾಡಿ ಶರೀರದಲ್ಲಿ ಉಷ್ಣತೆ ಹೆಚ್ಚಾಗದಂತೆ ನೋಡಿಕೊಳ್ಳಬಹುದು
- ಸಡಿಲವಾಗಿರುವ ಹತ್ತಿಯ ಉಡುಪುಗಳನ್ನು ಧರಿಸುವುದು ಉತ್ತಮ. ತಿಳಿಬಣ್ಣದ ಬಟ್ಟೆಯನ್ನೇ ಬಳಸಿ.

ಆಹಾರ ಕ್ರಮದಲ್ಲೂ ಎಚ್ಚರವಿರಲಿ

- ಧಾರಾಳ ನೀರು ಕುಡಿಯುರಿ. ಹೆಚ್ಚು ಸಲಾಡ್ ಅಥವಾ ಹಣ್ಣುಗಳನ್ನು ಸೇವಿಸಿ.
- ಅಜೀರ್ಣವಾಗುವ, ಗಟ್ಟಿ ಆಹಾರವನ್ನು ಸೇವಿಸಬೇಡಿ. ನಾರಿನಂಶ ಹೆಚ್ಚಿರುವ ಆಹಾರ ಸೇವನೆ ಒಳ್ಳೆಯದು.
- ಎಣ್ಣೆಯಲ್ಲಿ ಕರಿದಿರುವ ತಿಂಡಿಗಳ ಸೇವನೆ ತಪ್ಪಿಸಿ.
- ಸುಲಭವಾಗಿ ಜೀರ್ಣವಾಗುವ ಲಘು ಆಹಾರವನ್ನೇ ಸೇವಿಸಬೇಕು.
- ಫ್ರಿಡ್ಜ್‌ನಲ್ಲಿಟ್ಟ ತೀವ್ರ ತಂಪು ನೀರನ್ನು ಕುಡಿಯದಿರಿ.

ಮನೆಯೊಳಗೆ- ಹೊರಗೆ

- ಬೆಳಗಿನ ಹೊತ್ತು ನೇರವಾಗಿ ಬಿಸಿಲು ಪ್ರವೇಶಿಸಿದಂತೆ ಕಿಟಕಿಗಳನ್ನು ಮುಚ್ಚಬಹುದು
- ಕಿಟಕಿ ಪರದೆಗಳನ್ನು ಉಪಯೋಗಿಸಿ.
- ತಂಪು ಗಾಳಿ ಬರುವಂತೆ ಕಿಟಕಿ ಪರದೆಗಳನ್ನು ಒದ್ದೆ ಮಾಡಿ ಹಾಕಬಹುದು.
- ಸಂಜೆ ಹಾಗೂ ರಾತ್ರಿ ಕಿಟಕಿ ಬಾಗಿಲುಗಳನ್ನು ತೆರೆದು ಗಾಳಿ ಒಳಗೆ ಬರುವಂತೆ ಮಾಡುವುದು ಅತಿ ಅವಶ್ಯಕ.
- ಅನುಕೂಲ ಇದ್ದರೆ ಹವಾ ನಿಯಂತ್ರಿತ ಸಾಧನಗಳನ್ನು ಬಳಸಿ, ಮನೆಯನ್ನು ತಂಪಾಗಿಡಿ.
- ಮನೆಯ ಒಳಗಡೆ ಹಾಗೂ ಹೊರಗಡೆ ಗಿಡಗಳನ್ನು ಬೆಳೆಸಿ ಅವುಗಳಿಗೆ ನೀರು ಉಣಿಸುತ್ತಾ ವಾತಾವರಣ ತಂಪಿಡಬಹುದು.

ಸುಡುವ ಸೂರ್ಯನೆದುರು ಸುಳಿಯುವ ಮುನ್ನ...

ಕಾಳಜಿ

ಪವಿತ್ರಾ ಭಟ್

ಹವಾಮಾನ ಬದಲಾದಂತೆ ಅದಕ್ಕೆ ತಕ್ಕ ಹಾಗೆ ನಮ್ಮನ್ನು ಸಿದ್ಧಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಮಳೆಗಾಲ ಬಂದರೆ ಛತ್ರಿ, ರೇನ್ ಕೋಟ್ ಕೊಂಡರೆ ಚಳಿಗಾಲದಲ್ಲಿ ಬೆಚ್ಚನೆಯ ಉಡುಪುಗಳನ್ನು ಕೊಳ್ಳುತ್ತೇವೆ. ಅದೇ ಬೇಸಿಗೆ ಬಂದರೆ ಉಳಿದ ಕಾಲಕ್ಕಿಂತ ತುಸು ಹೆಚ್ಚಾಗಿಯೇ ಕಾಳಜಿ ಮಾಡಿಕೊಳ್ಳಬೇಕಾಗುತ್ತದೆ. ಸೌಂದರ್ಯದ ಜೊತೆಗೆ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬೇಸಿಗೆಯಲ್ಲಿ ಸವಾಲಿನ ಕೆಲಸ.

ಕೆಲವು ದಿನಗಳಿಂದ ಸೂರ್ಯ ಯಾಕೋ ಮುನಿಸಿಕೊಂಡಿದ್ದಾನೇನೋ ಎನ್ನುವಷ್ಟು ಬಿಸಿಲಿನ ತಾಪ ಏರಿಕೆಯಾಗಿದೆ, ಏರಿಕೆಯಾಗುತ್ತಿದೆ. ಹೀಗಾಗಿ ಹೊರಹೋಗುವಾಗ ಎಚ್ಚರಿಕೆವಹಿಸುವುದು ಬಹಳ ಮುಖ್ಯ. ಬೇಸಿಗೆಯಲ್ಲಿ ನಮ್ಮನ್ನು ರಕ್ಷಿಸಿಕೊಳ್ಳಲು ಒಂದಷ್ಟು ವಸ್ತುಗಳು ಸದಾ ಕಾಲ ನಮ್ಮೊಂದಿಗಿರಬೇಕು, ಅವು ಈ ಕೆಳಗಿನಂತಿವೆ.

ನೀರಿನ ಬಾಟಲಿ: ಬಿಸಿಲಿನ ಝಳಕ್ಕೆ ದೇಹ ಬೇಗನೆ ನಿರ್ಜಲೀಕರಣಗೊಳ್ಳುತ್ತದೆ. ಹೀಗಾಗಿ ಹೆಚ್ಚು ನೀರಿನ ಸೇವನೆ ಅಗತ್ಯ. ಅದಕ್ಕಾಗಿ ಮನೆಯಿಂದ ಹೊರಹೋಗುವಾಗ ನೀರಿನ ಬಾಟಲಿಯನ್ನು ಕೊಂಡೊಯ್ಯುವುದನ್ನು ಮರೆಯಬೇಡಿ. ಸ್ಟೀಲ್ ಬಾಟಲಿಗಳಲ್ಲಿ ನೀರನ್ನು ಇಟ್ಟುಕೊಂಡರೆ ತಣ್ಣಗೆ ಇರುವಂತೆ ನೋಡಿಕೊಳ್ಳುತ್ತದೆ. ಅದರಲ್ಲೂ ಮಕ್ಕಳನ್ನು ಹೊರ ಕರೆದೊಯ್ಯುವಾಗ ನೀರಿನ ಬಾಟಲಿಯನ್ನು ಮರೆಯುವಂತಿಲ್ಲ.

ಸನ್ ಗ್ಲಾಸ್:ಬಿಸಿಲಿನ ತಾಪಕ್ಕೆ ಕಣ್ಣುಗಳು ಆರ್ದ್ರತೆ ಕಳೆದುಕೊಂಡು ಉರಿ ಕಾಡಬಹುದು. ಹೀಗಾಗಿ ಮನೆಯಿಂದ ಹೊರಹೋಗುವಾಗ ಸನ್ ಗ್ಲಾಸ್ ಅಥವಾ ಕೂಲಿಂಗ್ ಗ್ಲಾಸ್ ಧರಿಸಿ. ಇದು ನಿಮಗೆ ವಿಭಿನ್ನ ಹಾಗೂ ಟ್ರೆಂಡಿ ಲುಕ್ ಕೂಡ ನೀಡುತ್ತದೆ. ಕಣ್ಣುಗಳ ಆರೋಗ್ಯವನ್ನೂ ಕಾಪಾಡುತ್ತದೆ. ಆದರೆ ನೆನಪಿಡಿ, ಸನ್ ಗ್ಲಾಸ್ ಆಯ್ಕೆ ಮಾಡುವಾಗ ವೈದ್ಯರ ಸಲಹೆ ಇದ್ದರೆ ಉತ್ತಮ.

ಟೋಪಿ/ ಸ್ಕಾರ್ಫ್:ನೆತ್ತಿಯ ಮೇಲೆ ಬೀಳುವ ಸುಡು ಬಿಸಲು ಬೇಗನೆ ಸುಸ್ತಾಗುವಂತೆ ಮಾಡುತ್ತದೆ. ಅಲ್ಲದೆ ತಲೆನೋವು, ತಲೆಸುತ್ತುವಿಕೆ ಕಾರಣವಾಗುತ್ತದೆ. ಅಷ್ಟೇ ಅಲ್ಲದೆ ಕೂದಲಿನ ಆರೋಗ್ಯವನ್ನೂ ಹಾಳು ಮಾಡಿ ಕೂದಲು ಉದುರುವಿಕೆಯನ್ನು ಹೆಚ್ಚಿಸುತ್ತದೆ. ಇದಕ್ಕೆ ಉತ್ತಮ ಪರಿಹಾರ ಎಂದರೆ ಬಿಸಿಲಿಗೆ ಹೋಗುವಾಗ ಸಡಿಲವಾದ ಟೋಪಿಗಳನ್ನು ಧರಿಸಿ. ಇನ್ನೊಂದು ಉತ್ತಮ ಆಯ್ಕೆ ಎಂದರೆ ಬಟ್ಟೆಯ ಸ್ಕಾರ್ಫ್‌ಗಳು. ಇದನ್ನು ನೆತ್ತಿಯ ಮೇಲೆ ಟೋಪಿ ಗಳಂತೆಯೂ ಹಾಕಿಕೊಳ್ಳಬಹುದು ಅಥವಾ ಕೂದಲಿಗೆ ಮಾತ್ರ ಕಟ್ಟಿಕೊಳ್ಳಬಹುದು. ಮುಖ್ಯವಾಗಿ ಸಮುದ್ರ ದಂಡೆಗಳ ಬಳಿ ಹೋಗುವಾಗ, ಶಾಪಿಂಗ್ ಹಾಗೂ ಇನ್ನಿತರ ಕೆಲಸಗಳಿಗೆ ಬಿಸಿಲಿನಲ್ಲಿ ಸುತ್ತುವಾಗ ಟೋಪಿ ಇದ್ದರೆ ಆರೋಗ್ಯ, ಸೌಂದರ್ಯ ಎರಡಕ್ಕೂ ಒಳ್ಳೆಯದು.

ಸನ್ ಸ್ಕ್ರೀನ್ ಕ್ರೀಮ್‌ಗಳು: ಚರ್ಮದ ಅಂದ, ಆರೋಗ್ಯ ಎರಡನ್ನೂ ಬೇಸಿಗೆಯಲ್ಲಿ ಕಾಪಾಡಿಕೊಳ್ಳುವುದು ಬಹು ಮುಖ್ಯ. ಬಿಸಿಲಿಗೆ ಒಡ್ಡಿಕೊಂಡರೆ ಚರ್ಮ ಕಳೆಗುಂದಿದಂತಾಗುವುದು. ಅಲ್ಲದೆ ತುರಿಕೆ, ಅಲರ್ಜಿ ಗುಳ್ಳೆಗಳು ಕಾಡಬಹುದು. ಹೀಗಾಗಿ ಮನೆಯಿಂದ ಹೊರಹೋಗುವ ಮುನ್ನ ವೈದ್ಯರು ಸೂಚಿಸಿದ ಸನ್‌ಸ್ಕ್ರೀನ್‌ಗಳನ್ನು ಹಚ್ಚಿಕೊಂಡು ಹೋಗುವುದು ಒಳ್ಳೆಯದು. ಇವು ಚರ್ಮದ ಮೇಲೆ ನೇರವಾಗಿ ಬೀಳುವ ಸೂರ್ಯನ ಹಾನಿಕಾರಕ ನೇರಳಾತೀತ ಕಿರಣಗಳಿಂದ ರಕ್ಷಿಸುತ್ತವೆ.

ಕಾಟನ್ ಕರವಸ್ತ್ರ: ಉಣ್ಣೆ ಬಟ್ಟೆಗಳು ನೀರನ್ನು ಸಂಪೂರ್ಣವಾಗಿ ಹೀರಿಕೊಳ್ಳುತ್ತವೆ. ಬೇಸಿಗೆಯಲ್ಲಿ ಹೆಚ್ಚು ಬೆವರುವುದರಿಂದ ಜೊತೆಯಲ್ಲಿ ಯಾವಾಗಲೂ ಕಾಟನ್ ಕರವಸ್ತ್ರವನ್ನು ಇಟ್ಟುಕೊಳ್ಳಿ. ಇದರಿಂದ ಮುಖ, ಕೈ ಒರೆಸಿಕೊಂಡಾಗ ಹಿತವೆನಿಸುತ್ತದೆ. ಅದೇ ನೀವು ನೈಲಾನ್ ಕರವಸ್ತ್ರಗಳ ಬಳಕೆ ಮಾಡಿದರೆ ಮುಖದಲ್ಲಿ ಉರಿ ಕಾಣಿಸಿಕೊಳ್ಳಬಹುದು. ಕರವಸ್ತ್ರಗಳಿಗೆ ಬದಲಿ ಆಯ್ಕೆಯಾಗಿ ನೀವು ವೆಟ್ ಟಿಶ್ಯೂಗಳನ್ನು ಬಳಸಬಹುದು. ಆದರೆ ನೆನಪಿಡಿ ಹೆಚ್ಚು ಸುಗಂಧವಿರುವ ಟಿಶ್ಯೂಗಳನ್ನು ಬಳಸಬೇಡಿ. ಇದರಿಂದ ಚರ್ಮಕ್ಕೆ ಹಾನಿಯಾಗಬಹುದು, ಕೆಲವರಿಗೆ ಅಲರ್ಜಿಯಾಗಬಹುದು.

ಛತ್ರಿ: ಬಿಸಿಲಿನ ಪ್ರಖರತೆ ಹೆಚ್ಚಿರುವಾಗ ಛತ್ರಿಯನ್ನು ಬಳಸುವುದು ಒಳ್ಳೆಯದು. ಆದರೆ ನೆನಪಿರಲಿ, ಕಪ್ಪು ಅಥವಾ ಗಾಢ ಬಣ್ಣದ ಛತ್ರಿಯನ್ನು ಬಳಸಬೇಡಿ. ಆದಷ್ಟು ತಿಳಿ ಬಣ್ಣದ ಛತ್ರಿಗಳನ್ನು ಬಳಸಿ. ಇದು ಟ್ರೆಂಡಿಯಾಗಿಯೂ ಕಾಣುತ್ತದೆ ಜೊತೆಗೆ ಬಿಸಿಲಿನಿಂದ ರಕ್ಷಣೆಯೂ ಸಿಗುತ್ತದೆ. ಪಾಕೆಟ್ ಛತ್ರಿಗಳನ್ನು ಬಳಸಿದರೆ ಸುಲಭವಾಗಿ ಬ್ಯಾಗ್‌ನಲ್ಲಿ ಇರಿಸಿಕೊಳ್ಳಬಹುದು

7,360 ಅಂಕಪಟ್ಟಿಗಳ ಜಪ್ತಿ • ಬೆಂಗಳೂರು, ಹುಬ್ಬಳ್ಳಿಯಲ್ಲಿ ಸಿಸಿಬಿ ಕಾರ್ಯಾಚರಣೆ

ಅಂಕಪಟ್ಟಿ ಮಾರಾಟ: 'ಕೆಐಒಎಸ್' ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ತತ್ಸಮಾನ ವಿದ್ಯಾರ್ಹತೆಯ ನಕಲಿ ಅಂಕಪಟ್ಟಿಗಳನ್ನು ಮುದ್ರಿಸಿ ಮಾರುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಓಪನಿಂಗ್ ಸ್ಕೂಲಿಂಗ್ (ಕೆಐಒಎಸ್) ಸಂಸ್ಥೆ ಕಚೇರಿಗಳ ಮೇಲೆ ದಾಳಿ ಮಾಡಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಕೆಐಒಎಸ್ ವ್ಯವಸ್ಥಾಪಕ ನಿರ್ದೇಶಕ ಪ್ರಭುರಾಜ್ ಬಿ. ಹೊರಪೇಟಿ (36), ವೈ.ಇ.ಟಿ ಇನ್‌ಸ್ಟಿಟ್ಯೂಟ್ ಸ್ಥಾಪಕ ಎನ್. ಮೈಲಾರಿ ಅಲಿಯಾಸ್ ಪಾಟೀಲ ಹಾಗೂ ಇಗ್ನೈಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ ಸ್ಥಾಪಕ ಮೊಹಮ್ಮದ್ ತೈಹೀಬ್ ಅಹಮ್ಮದ್ (31) ಬಂಧಿತರು.

'ಬೆಂಗಳೂರು ಯಲಚೇನಹಳ್ಳಿಯ ಶಿವಶಕ್ತಿನಗರದಲ್ಲಿರುವ ವೈ.ಇ.ಟಿ ಇನ್‌ಸ್ಟಿಟ್ಯೂಟ್ ಕಚೇರಿ ಹಾಗೂ ಹುಬ್ಬಳ್ಳಿ ವಿದ್ಯಾನಗರದ ಪ್ರಶಾಂತ ಕಾಲೊನಿಯಲ್ಲಿರುವ ಕೆಐಒಎಸ್ ಕಚೇರಿ ಮೇಲೆ ದಾಳಿ ಮಾಡಲಾಗಿದೆ. 'ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ಕೆಐಒಎಸ್– ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ತತ್ಸಮಾನ ವಿದ್ಯಾರ್ಹತೆ' ಎಂಬುದಾಗಿ ನಮೂದಿಸಿರುವ 7,360 ನಕಲಿ ಅಂಕಪಟ್ಟಿಗಳು, ಬಿ.ಎ ಪದವಿಯ 3 ನಕಲಿ ಅಂಕಪಟ್ಟಿಗಳು, ಪರೀಕ್ಷೆ ಬರೆಯಲು ಉಪಯೋಗಿಸುವ 5,500 ಉತ್ತರ ಪತ್ರಿಕೆಗಳು, ವಿದ್ಯಾರ್ಥಿಗಳ ಪ್ರವೇಶಾತಿಯ 25 ಪುಸ್ತಕಗಳು, ಬಣ್ಣದ ಪ್ರಿಂಟರ್ ಹಾಗೂ 4 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಭುರಾಜ್ ಹೊರಪೇಟಿ

ಮೊಹಮ್ಮದ್ ತಹೀಬ್ ಅಹಮ್ಮದ್

ಮೈಲಾರಿ ಪಾಟೀಲ

'ಹುಬ್ಬಳ್ಳಿ ವಿದ್ಯಾನಗರ ಗುರುದತ್ತ ಕಾಲೊನಿಯ ನಿವಾಸಿ ಪ್ರಭುರಾಜ್, ಜನನಿ ಅಕಾಡೆಮಿ ಇಂಡಿಯಾ ಕಂಪನಿ ಸ್ಥಾಪಿಸಿದ್ದ. ಅದರಡಿ ಕೆಐಒಎಸ್ ಸಂಸ್ಥೆ ತೆರೆದಿದ್ದ. ದೂರಶಿಕ್ಷಣ ಮೂಲಕ ಎಸ್ಸೆಸ್ಸೆಲ್ಸಿ– ಪಿಯುಸಿ ತತ್ಸಮಾನ ವಿದ್ಯಾರ್ಹತೆ ಹಾಗೂ ಶಿಕ್ಷಕರ ತರಬೇತಿ ಕೋರ್ಸ್ ನಡೆಸುತ್ತಿರುವುದಾಗಿ ಹೇಳುತ್ತಿದ್ದ. ವಿದ್ಯಾರ್ಥಿಗಳಿಂದ ₹ 50 ಸಾವಿರದಿಂದ ₹ 1.50 ಲಕ್ಷ ಪಡೆದು, ನಕಲಿ ಅಂಕಪಟ್ಟಿ ನೀಡಿ ವಂಚಿಸುತ್ತಿದ್ದ ನೆಂಬ ಮಾಹಿತಿ ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ದೂರಶಿಕ್ಷಣ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದಾಗಿ ಆರೋಪಿ ಹೇಳುತ್ತಿದ್ದ. ಈತನ ಮಾತು ನಂಬಿದ್ದ ಹಲವು ಸಂಸ್ಥೆಗಳು, ಪ್ರಶಸ್ತಿ ಸಹ ನೀಡಿದ್ದವು. ಪ್ರತಿಷ್ಠಿತ ಕಾಲೇಜುಗಳಲ್ಲಿ ಆರೋಪಿ ಉಪನ್ಯಾಸ ನೀಡುತ್ತಿದ್ದ. ನಕಲಿ ಅಂಕಪಟ್ಟಿ ಮಾರಾಟದಿಂದ ಈತ ಆಸ್ತಿ ಸಂಪಾದನೆ ಮಾಡಿರುವ ಸಂಗತಿ ಪತ್ತೆಯಾಗಿದ್ದು, ಆ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿರುವ ಕೆಐಒಎಸ್ ಸಂಸ್ಥೆ ಕಚೇರಿ

ಪ್ರಮುಖ ಆರೋಪಿ ಪ್ರಭುರಾಜ್: 'ಆರೋಪಿ ಮೈಲಾರಿಯನ್ನು ವಶಕ್ಕೆ ಪಡೆದಾಗ, 'ಪ್ರಭುರಾಜ್ ಅವರು ನಕಲಿ ಅಂಕಪಟ್ಟಿ ಮುದ್ರಿಸಿ ಮಾರುತ್ತಿದ್ದಾರೆ. ಅವರಿಂದ ಪಡೆದ ಅಂಕಪಟ್ಟಿಯನ್ನೇ ಸಚಿನ್ ಅವರಿಗೆ ನೀಡಿದ್ದೆ' ಎಂದಿದ್ದ. ಅದರನ್ವಯ ಪ್ರಭುರಾಜ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ನಕಲಿ ಅಂಕಪಟ್ಟಿ ಜಾಲ ಪತ್ತೆಯಾಯಿತು' ಎಂದು ಅಧಿಕಾರಿ ಹೇಳಿದರು.

'ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಿದ್ದ ಹಾಗೂ ಉನ್ನತ ವ್ಯಾಸಂಗ ಮಾಡಬೇಕೆಂಬ ಆಸೆ ಇಟ್ಟುಕೊಂಡಿದ್ದ ವಿದ್ಯಾರ್ಥಿಗಳನ್ನು ಆರೋಪಿಗಳು ಸಂಪರ್ಕಿಸುತ್ತಿದ್ದರು. ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಹಾಗೂ ಹಲವು ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದು ದೂರಶಿಕ್ಷಣದ ಮೂಲಕ ಅಂಕಪಟ್ಟಿ ನೀಡುತ್ತಿರುವುದಾಗಿ ಆರೋಪಿಗಳು ಹೇಳುತ್ತಿದ್ದರು' ಎಂದು ತಿಳಿಸಿದರು.

'ಹುಬ್ಬಳ್ಳಿಯ ಕಚೇರಿಯಲ್ಲಿ ನಕಲಿ ಅಂಕಪಟ್ಟಿ ಮುದ್ರಣ ಮಾಡಲಾಗುತ್ತಿತ್ತು. 10 ಸಾವಿರಕ್ಕೂ ವಿದ್ಯಾರ್ಥಿಗಳಿಂದ ಹಣ ಪಡೆದಿರುವ ಆರೋಪಿಗಳು, ಅವರಿಗೆ ನಕಲಿ ಅಂಕಪಟ್ಟಿ ನೀಡಿರುವ ಮಾಹಿತಿ ಇದೆ. ವಿದ್ಯಾರ್ಥಿಗಳ ಮಾಹಿತಿ ಭರ್ತಿ ಮಾಡಿರುವ 70 ಅಂಕಪಟ್ಟಿಗಳು ಹಾಗೂ ಯಾವುದೇ ಮಾಹಿತಿ ದಾಖಲಿಸದೆ ಖಾಲಿ ಇರುವ 7,290 ನಕಲಿ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ನಕಲಿ ಅಂಕಪಟ್ಟಿ ಬಳಸಿಕೊಂಡು ಕೆಲವರು, ಕೆಲಸಕ್ಕೆ ಸೇರಿದ್ದಾರೆ. ಪ್ರಭುರಾಜ್ ಜೊತೆ ಕೃತ್ಯದಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

₹1.80 ಲಕ್ಷಕ್ಕೆ ಬಿ.ಎ ಅಂಕಪಟ್ಟಿ!

'ಸಿ. ಸಚಿನ್ ಎಂಬುವರು ದೂರ ಶಿಕ್ಷಣ ಮೂಲಕ ಬಿ.ಎ ಪದವಿ ಪಡೆಯಲು ಮುಂದಾಗಿದ್ದರು. ವೈ.ಇ.ಟಿ ಇನ್‌ಸ್ಟಿಟ್ಯೂಟ್‌ನ ಮೈಲಾರಿಯನ್ನು ಸಂಪರ್ಕಿಸಿ, ₹ 1.80 ಲಕ್ಷ ಪಾವತಿಸಿದ್ದರು. ಕೆಲ ತಿಂಗಳ ನಂತರ ಯಾವುದೇ ಪರೀಕ್ಷೆ ನಡೆಸದೇ, ಮಿರತ್‌ನ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾಲಯದ ಅಂಕಪಟ್ಟಿ ನೀಡಲಾಗಿತ್ತು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಅಂಕಪಟ್ಟಿ ಬಗ್ಗೆ ಅನುಮಾನಗೊಂಡ ಸಚಿನ್, ಪರಿಶೀಲನೆ ನಡೆಸಿದಾಗ ನಕಲಿ ಎಂಬುದು ಗೊತ್ತಾಗಿತ್ತು. ಕೃತ್ಯದ ಬಗ್ಗೆ ಅವರು ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದರು. ಅದರನ್ವಯ ದಾಖಲಾದ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು' ಎಂದರು.

ಸತ್ಯಪಾಲ್ ಮಲಿಕ್ ಅವರ ನಿವಾಸಕ್ಕೆ ಬಂದ ಸಿಬಿಐ ಅಧಿಕಾರಿಗಳು –ಪಿಟಿಐ ಚಿತ್ರ

5 ತಾಸು ಸತ್ಯಪಾಲ್ ವಿಚಾರಣೆ

ನವದೆಹಲಿ (ಪಿಟಿಐ): 'ವಿಮಾ ಹಗರಣ ಪ್ರಕರಣಕ್ಕೆ ಸಂಬಂಧಿಸಿ, ಜಮ್ಮು ಮತ್ತು ಕಾಶ್ಮೀರದ ಮಾಜಿ ಗವರ್ನರ್ ಸತ್ಯಪಾಲ್ ಮಲಿಕ್ ಅವರನ್ನು ಸಿಬಿಐ ಅಧಿಕಾರಿಗಳು ಶುಕ್ರವಾರ ಸುಮಾರು 5 ಗಂಟೆ ವಿಚಾರಣೆಗೆ ಒಳಪಡಿಸಿದರು' ಎಂದು ಅಧಿಕಾರಿಗಳು ತಿಳಿಸಿದರು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಸರ್ಕಾರಿ ನೌಕರರಿಗೆ ವೈದ್ಯಕೀಯ ವಿಮೆ ಒದಗಿಸುವ ಕಡತಗಳಿಗೆ ಅನುಮೋದನೆ ನೀಡಲು ನನಗೆ ಲಂಚದ ಆಮಿಷ ಒಡ್ಡಲಾಗಿತ್ತು' ಎಂದು ಸತ್ಯಪಾಲ್ ಅವರು ಹೇಳಿಕೆ ನೀಡಿದ್ದ ಬೆನ್ನಲ್ಲೇ ಸಿಬಿಐ ವಿಚಾರಣೆ ನಡೆಸುತ್ತಿದೆ.

'ನವದೆಹಲಿಯ ಸತ್ಯಪಾಲ್ ಅವರ ನಿವಾಸಕ್ಕೆ ಬೆಳಿಗ್ಗೆ 11.45ಕ್ಕೆ ಸಿಬಿಐ ತಂಡ ಆಗಮಿಸಿದ್ದು, ಅವರ ಹೇಳಿಕೆ ಕುರಿತು ಸ್ಪಷ್ಟನೆ ಪಡೆಯಿತು. ಐದು ಗಂಟೆ ವಿಚಾರಣೆ ನಡೆದಿದ್ದು, ಹಲವು ಪ್ರಶ್ನೆ ಕೇಳಲಾಯಿತು' ಎಂದು ಅಧಿಕಾರಿಗಳು ತಿಳಿಸಿದರು. ಏಳು ತಿಂಗಳ ಅವಧಿಯಲ್ಲಿ ಸಿಬಿಐ ಮಲ್ಲಿಕ್ ಅವರನ್ನು ವಿಚಾರಣೆಗೆ ಒಳಪಡಸುತ್ತಿರುವುದು ಇದು ಎರಡನೇ ಬಾರಿಯಾಗಿದೆ.

ಕೊಡಚಾದ್ರಿ, ಅಂಜನಾದ್ರಿಯಲ್ಲಿ ರೋಪ್‌ವೇ

ಒಂದನೇ ಪುಟದಿಂದ...

ಆಗಸ್ಟ್ 2ರಂದು ಸಚಿವಾಲಯಕ್ಕೆ ಮತ್ತೆ ಪತ್ರ ಬರೆದಿದ್ದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್), 'ಪ್ರವಾಸೋದ್ಯಮ ಇಲಾಖೆಯ ಮೂಲಕ ಈ ಯೋಜನೆ ಅನುಷ್ಠಾನ ಮಾಡಲಾಗುತ್ತದೆ. ಕೊಡಚಾದ್ರಿ ಹಾಗೂ ಅಂಜನಾದ್ರಿ ಬೆಟ್ಟದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಮುನ್ನ ಐಡೆಕ್ ಸಂಸ್ಥೆಯು ಕಾರ್ಯಸಾಧ್ಯತಾ ಅಧ್ಯಯನ ನಡೆಸಲಿದೆ. ಬಳಿಕ ಯೋಜನೆ ಅನುಷ್ಠಾನಕ್ಕೆ ನ್ಯಾಷನಲ್ ಹೈವೇ ಲಾಜಿಸ್ಟಿಕ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ (ಎನ್‌ಎಚ್‌ಎಲ್‌ಎಂಎಲ್) ಜತೆಗೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ' ಎಂದು ತಿಳಿಸಿದ್ದರು.

ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗೆ ಈ ವರ್ಷದ ಜನವರಿಯಲ್ಲಿ ಪತ್ರ ಬರೆದಿದ್ದ ಎನ್‌ಎಚ್‌ಎಲ್‌ಎಂಎಲ್‌ನ ಹಿರಿಯ ವ್ಯವಸ್ಥಾಪಕರು, 'ರೋಪ್‌ವೇಗಳ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸಂಸ್ಥೆಯ ಅಗತ್ಯ ನೆರವು ನೀಡಲಿದೆ. ಹೆಚ್ಚಿನ ಆದ್ಯತೆಯ ಎರಡು ಯೋಜನೆಗಳನ್ನು ಮೊದಲ ಹಂತದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಅವುಗಳ ಪಟ್ಟಿ ನೀಡಬೇಕು' ಎಂದು ವಿನಂತಿಸಿದ್ದರು. ಜತೆಗೆ, ಯೋಜನೆ ಅನುಷ್ಠಾನಕ್ಕೆ ಸಂಸ್ಥೆ ಹಾಗೂ ಪ್ರವಾಸೋದ್ಯಮ ಇಲಾಖೆ ಫೆಬ್ರುವರಿಯಲ್ಲಿ ಕರಡು ಒಪ್ಪಂದ ಮಾಡಿಕೊಂಡಿದ್ದವು. ಇದರ ಬೆನ್ನಲ್ಲೇ, ಪ್ರವಾಸೋದ್ಯಮ ಇಲಾಖೆಯು ಆದ್ಯತೆಯ ಯೋಜನೆಗಳ ಪಟ್ಟಿಯನ್ನು ಸಚಿವಾಲಯಕ್ಕೆ ಕಳುಹಿಸಿಕೊಟ್ಟಿದೆ.

ಎಲ್ಲಿ, ಯಾವಾಗ?

ಮೊದಲ ಹಂತ: ಕೊಡಚಾದ್ರಿ ಹಾಗೂ ಅಂಜನಾದ್ರಿ ಬೆಟ್ಟ.
ಎರಡನೇ ಹಂತ: ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ ಹಾಗೂ ಕೆಮ್ಮಣ್ಣುಗುಂಡಿ.
ಮೂರನೇ ಹಂತ: ತುಮಕೂರಿನ ದೇವರಾಯನದುರ್ಗ, ಉತ್ತರ ಕನ್ನಡದ ಯಾಣ, ಕೊಡಗಿನ ಕುಮಾರ ಪರ್ವತ, ತುಮಕೂರಿನ ಮಧುಗಿರಿ ಕೋಟೆ.
ಹಿಂದೇಟು ಎಲ್ಲಿ: ಸಾಗರ ಹಿನ್ನೀರು, ಬೆಳಗಾವಿಯ ರಾಜ್‌ಹೌಸ್‌ಗಡ, ಉತ್ತರ ಕನ್ನಡದ ಚಪೇಲಿ ಹಾಗೂ ಜೋಯ್ಡಾ. ಸಾಗರದ ಹಿನ್ನೀರಿನಲ್ಲಿ ಸೇತುವೆಯೊಂದು ಇದೆ. ಅಲ್ಲಿ ರೋಪ್‌ವೇ ಅಗತ್ಯ ಇದೆಯೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ಪ್ರವಾಸೋದ್ಯಮ ಇಲಾಖೆ ಹೇಳಿದೆ. ಚಪೇಲಿ ಹಾಗೂ ಜೋಯ್ಡಾ ಜಿಲ್ಲಾ ಕೇಂದ್ರದಿಂದ ತುಂಬಾ ದೂರದಲ್ಲಿವೆ ಎಂದೂ ಇಲಾಖೆ ತಿಳಿಸಿದೆ.

ಪ್ರತಿಭಟನೆ ಪಶ್ಚಿಮ ಬಂಗಾಳದ ಕಾಲಿಯಾಗಂಜ್‌ನಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಹತ್ಯೆ ಮಾಡಿರುವುದನ್ನು ಖಂಡಿಸಿ ಕೋಲ್ಕತ್ತದಲ್ಲಿ ಶುಕ್ರವಾರ ಬಿಜೆಪಿ ಯುವಮೋರ್ಚಾದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ನಿವೃತ್ತ ಆಹಾರ ನಿರೀಕ್ಷಕನಿಗೆ ₹60 ಲಕ್ಷ ದಂಡ

ಅಕ್ರಮ ಆಸ್ತಿ ಪ್ರಕರಣ: ಎರಡು ವರ್ಷ ಜೈಲು ಶಿಕ್ಷೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ನಿವೃತ್ತ ಆಹಾರ ನಿರೀಕ್ಷಕ ನಾಗಲಿಂಗಯ್ಯ ಅಪರಾಧಿ ಎಂದು ಸಾರಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ಎರಡು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ₹ 60 ಲಕ್ಷ ದಂಡ ವಿಧಿಸಿದೆ.

ನಾಗಲಿಂಗಯ್ಯ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, 2008ರಲ್ಲಿ ಅವರ ಮನೆ ಹಾಗೂ ಇತರ ಸ್ಥಳಗಳ ಮೇಲೆ ದಾಳಿ ಮಾಡಿ, ಶೋಧ ನಡೆಸಿದ್ದರು. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಹೊರಿಸಿ 2013ರಲ್ಲಿ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

2014ರಿಂದ ಒಂಬತ್ತು ವರ್ಷಗಳ ಕಾಲ ಪ್ರಕರಣದ ವಿಚಾರಣೆ ನಡೆದಿತ್ತು. ಶುಕ್ರವಾರ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್ ಅವರು, 'ನಾಗಲಿಂಗಯ್ಯ ದೋಷಿ' ಎಂಬ ತೀರ್ಮಾನ ಪ್ರಕಟಿಸಿದರು. ಅಪರಾಧಿಗೆ 2 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ₹ 60 ಲಕ್ಷ ದಂಡ ವಿಧಿಸಿ ಆದೇಶ ಹೊರಡಿಸಿದರು. ದಂಡ ಪಾವತಿಗೆ ತಪ್ಪಿದಲ್ಲಿ ಮೂರು ತಿಂಗಳ ಸಾಧಾರಣ ಜೈಲು ಶಿಕ್ಷೆಯನ್ನು ಹೆಚ್ಚುವರಿಯಾಗಿ ವಿಧಿಸುವಂತೆ ಆದೇಶಿಸಿದರು.

ನಾಗಲಿಂಗಯ್ಯ ಹಲವರ ಹೆಸರಿನಲ್ಲಿ ಬೇನಾಮಿಯಾಗಿ ಆಸ್ತಿ ಹೊಂದಿರುವುದನ್ನು ಪತ್ತೆ ಮಾಡಿದ್ದ ಲೋಕಾಯುಕ್ತ ಪೊಲೀಸರು, ಆರೋಪ ಪಟ್ಟಿಯಲ್ಲಿ ಸಾಕ್ಷ್ಯಗಳನ್ನು ಒದಗಿಸಿದ್ದರು. ನ್ಯಾಯಾಲಯದ ವಿಚಾರಣೆ ವೇಳೆ ಹಲವರು ಬೇನಾಮಿ ಆಸ್ತಿಗಳ ವಿವರಗಳನ್ನು ನ್ಯಾಯಾಲಯದಲ್ಲಿ ಒಪ್ಪಿಕೊಂಡಿದ್ದರು.

ಸಮೀಕ್ಷೆ: ಕಂಪನಿ ವಿರುದ್ಧ ಎನ್‌ಸಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರಿಗೆ ಕರೆ ಮಾಡಿ ಅಕ್ರಮವಾಗಿ ಚುನಾವಣೆ ಸಮೀಕ್ಷೆ ನಡೆಸುತ್ತಿದ್ದ ಆರೋಪದಡಿ 'ವೆಬ್‌ಸ್ಟಾಕ್ ಸೊಲ್ಯುಷನ್ಸ್' ಕಂಪನಿ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

'ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಕರೆ ಮಾಡಿ ಸಮೀಕ್ಷೆ ನಡೆಸುತ್ತಿದ್ದ ಬಗ್ಗೆ ಮಾಹಿತಿ ಚುನಾವಣಾಧಿಕಾರಿಗಳಿಗೆ ದೂರು ಬಂದಿತ್ತು. ಮಲ್ಲತ್ತಹಳ್ಳಿಯಲ್ಲಿರುವ ಕಂಪನಿ ಕಚೇರಿಗೆ ಶುಕ್ರವಾರ ಭೇಟಿ ನೀಡಿದ್ದ ಅಧಿಕಾರಿಗಳು, ಪರಿಶೀಲನೆ ನಡೆಸಿದ್ದರು. ಅವರು ನೀಡಿದ್ದ ದೂರು ಆಧರಿಸಿ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದ್ದು, ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದರು.

'40ಕ್ಕೂ ಹೆಚ್ಚು ಸಿಬ್ಬಂದಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಬಳಿ ಮೊಬೈಲ್ ಸಂಖ್ಯೆ ಸಮೇತ ಮತದಾರರ ಪಟ್ಟಿಗಳಿದ್ದವು. ಮತದಾರರಿಗೆ ಕರೆ ಮಾಡುತ್ತಿದ್ದ ಸಿಬ್ಬಂದಿ, ಯಾರಿಗೆ ಮತ ಹಾಕುತ್ತಿರಾ? ನೀವು ಬೆಂಬಲಿಸುವ ಪಕ್ಷ ಯಾವುದು? ಎಂಬಿತ್ಯಾದಿ ಮಾಹಿತಿ ಸಂಗ್ರಹಿಸುತ್ತಿದ್ದರು' ಎಂದು ಹೇಳಿದರು.

'ಸಮೀಕ್ಷೆ ನಡೆಸಲು ಅನುಮತಿ ಇರುವುದಾಗಿ ಕಂಪನಿ ಸಿಬ್ಬಂದಿ ವಾದಿಸಿದ್ದಾರೆ. ಆನ್‌ಲೈನ್ ಮೂಲಕ ಮತದಾರರ ಪಟ್ಟಿ ಡೌನ್‌ಲೋಡ್ ಮಾಡಿ ಕೊಂಡಿರುವುದಾಗಿ ತಿಳಿಸಿದ್ದಾರೆ. ಆದರೆ, ಮತದಾರರ ವೈಯಕ್ತಿಕ ಮೊಬೈಲ್ ನಂಬರ್ ಅವರಿಗೆ ಎಲ್ಲಿ ಲಭ್ಯವಾಯಿತು ಎಂಬ ಪ್ರಶ್ನೆಗೆ ಸಿಬ್ಬಂದಿ ಉತ್ತರಿಸಿಲ್ಲ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜಿಯಾ ಖಾನ್ ಆತ್ಮಹತ್ಯೆ ಪ್ರಕರಣ : ಸಾಕ್ಷ್ಯಾಧಾರಗಳ ಕೊರತೆ ಕಾರಣ ನೀಡಿದ ಸಿಬಿಐ ವಿಶೇಷ ನ್ಯಾಯಾಲಯ

ನಟ ಸೂರಜ್ ಪಂಚೋಲಿ ಖುಲಾಸೆ


ಸೂರಜ್ ಪಂಚೋಲಿ

ಜಿಯಾ ಖಾನ್

ಮುಂಬೈ (ಪಿಟಿಐ): ಬಾಲಿವುಡ್ ನಟಿ ಜಿಯಾ ಖಾನ್ ಆತ್ಮಹತ್ಯೆಯ ಹತ್ತು ವರ್ಷಗಳ ಬಳಿಕ, ಸಾಕ್ಷ್ಯಾಧಾರಗಳ ಕೊರತೆಯಿಂದ ಪ್ರಕರಣದ ಆರೋಪಿ, ನಟ ಸೂರಜ್ ಪಂಚೋಲಿ ಅವರನ್ನು ಸಿಬಿಐನ ವಿಶೇಷ ನ್ಯಾಯಾಲಯವು ಶುಕ್ರವಾರ ಖುಲಾಸೆಗೊಳಿಸಿದೆ.

2013ರ ಜೂನ್ 3ರಂದು ಮುಂಬೈನ ತಮ್ಮ ನಿವಾಸದಲ್ಲಿ ನೇಣು ಬಿಗಿದುಕೊಂಡು ಜಿಯಾಖಾನ್ ಆತ್ಮಹತ್ಯೆಗೆ ಶರಣಾಗಿದ್ದರು. ಸಾಯುವ ಮುನ್ನ ಜಿಯಾ ಬರೆದಿದ್ದಾರೆ ಎನ್ನಲಾದ 'ಡೆತ್ ನೋಟ್'ನಲ್ಲಿ ಸೂರಜ್ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಹಾಗಾಗಿ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಅದೇ ತಿಂಗಳು ಸೂರಜ್ ಅವರನ್ನು ಬಂಧಿಸಲಾಗಿತ್ತು. ಕೆಲ ವಾರಗಳ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಸೂರಜ್ ವಿರುದ್ಧ ಐಪಿಸಿ ಸೆಕ್ಷನ್ 306ರ ಅಡಿಯಲ್ಲಿ ಆರೋಪ ಹೊರಿಸಲಾಗಿತ್ತು.

ವಿಶೇಷ ಸಿಬಿಐ ನ್ಯಾಯಾಲಯದ ನ್ಯಾಯಾಧೀಶ ಎ.ಎಸ್. ಸಯ್ಯದ್ 'ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಸೂರಜ್ ಪಂಚೋಲಿಯನ್ನು ನ್ಯಾಯಾಲಯವು ನಿರ್ದೋಷಿ ಎಂದು ಪರಿಗಣಿಸಿದೆ'ಎಂದು ತೀರ್ಪು ನೀಡಿದರು.

ವಿಚಾರಣೆಯ ವೇಳೆ ಪ್ರಾಸಿಕ್ಯೂಷನ್‌ನ ನಿಲುವನ್ನು ವಿರೋಧಿಸಿದ ಜಿಯಾ ಅವರ ತಾಯಿ ರಬಿಯಾ ಖಾನ್, 'ಇದು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣವಲ್ಲ. ಇದು ಕೊಲೆಯ ಪ್ರಕರಣವಾಗಿದೆ' ಎಂದು ಪ್ರತಿಪಾದಿಸಿದ್ದರು.

ನ್ಯಾಯಾಲಯದ ತೀರ್ಪಿನ ನಂತರ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ತೀರ್ಪು ಆಶ್ಚರ್ಯಕರವಲ್ಲ. ಇದನ್ನು ನಾನು ನಿರೀಕ್ಷಿಸಿದ್ದೆ. ನನ್ನ ಮಗಳಿಗೆ ನ್ಯಾಯ ದೊರಕಿಸಿಕೊಡುವ ಸಲುವಾಗಿ ನನ್ನ ಹೋರಾಟವು ಮುಂದು ವರಿಯಲಿದೆ' ಎಂದೂ ಹೇಳಿದ್ದಾರೆ.

ನಟ ಆದಿತ್ಯ ಪಂಚೋಲಿ ಹಾಗೂ ಜರೀನಾ ವಾಹಬ್ ದಂಪತಿಯ ಪುತ್ರನಾಗಿರುವ ಸೂರಜ್ ಪಂಚೋಲಿ ತೀರ್ಪು ನೀಡುವ ವೇಳೆ ತಮ್ಮ ತಾಯಿಯೊಂದಿಗೆ ನ್ಯಾಯಾಲಯದಲ್ಲಿ ಹಾಜರಿದ್ದರು. ತೀರ್ಪು ಪ್ರಕಟಿಸುವ ಮುನ್ನ ನ್ಯಾಯಾಧೀಶ ಸಯ್ಯದ್ ಅವರು, ಆರೋಪಿ ಸೂರಜ್ ಅವರನ್ನು ಕಟಕಟೆಗೆ ಕರೆದು 'ನಿಮ್ಮ ಹೆಸರೇನು' ಎಂದು ಕೇಳಿದರು. 'ಸೂರಜ್' ಎಂದಷ್ಟೇ ಉತ್ತರಿಸಿದಾಗ, ಪೂರ್ಣ ಹೆಸರು ತಿಳಿಸಲು ಸೂಚಿಸಿದರು. ಆಗ ನಟ 'ಸೂರಜ್ ಆದಿತ್ಯ ಪಂಚೋಲಿ' ಎಂದು ಪೂರ್ಣ ಹೆಸರು ಹೇಳಿದರು.

ಬಳಿಕ ನ್ಯಾಯಾಧೀಶರು, 'ಸಾಕ್ಷ್ಯಾಧಾರಗಳ ಕೊರತೆಯಿಂದ, ಈ ನ್ಯಾಯಾಲಯವು ನಿಮ್ಮನ್ನು (ಸೂರಜ್) ನಿರ್ದೋಷಿ ಎಂದು ಪರಿಗಣಿಸಿ, ಖುಲಾಸೆಗೊಳಿಸಿದೆ' ಎಂದಾಗ, ಸೂರಜ್ ತಲೆ ತಗ್ಗಿಸಿಕೊಂಡೇ ಕಟಕಟೆಯಿಂದ ಹೊರಬಂದರು. ಬಳಿಕ ಜಿಯಾ ತಾಯಿ ರಬಿಯಾ ಖಾನ್ ಅವರಿಗೆ 'ಈ ಖುಲಾಸೆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಬಹುದು' ಎಂದು ಹೇಳಿದರು.

ಸೂರಜ್ ಪರ ವಕೀಲರಾದ ಪ್ರಶಾಂತ್ ಪಾಟೀಲ್ ತೀರ್ಪನ್ನು ಸ್ವಾಗತಿಸಿದ್ದು, ತೀರ್ಪು ನೀಡುವ ಮುನ್ನ ನ್ಯಾಯಾಲಯವು ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದೆ. ಸೂರಜ್ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ' ಎಂದು ಹೇಳಿದ್ದಾರೆ.

'ಪ್ರೀತಿಸಿದವಳನ್ನು ಕಳೆದುಕೊಂಡು, ಸುಳ್ಳು ಆರೋಪಕ್ಕೆ ಬಲಿಯಾಗಿರುವೆ'

ನವದೆಹಲಿ: 2023ರ ಏಪ್ರಿಲ್ 12ರಂದು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ತಮ್ಮ ಹೇಳಿಕೆಯಲ್ಲಿ ಸೂರಜ್ ಅವರು, 'ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದ್ದು, ನಾನು ಸುಳ್ಳು ಮೊಕದ್ದಮೆ ಮತ್ತು ಕಿರುಕುಳಕ್ಕೆ ಬಲಿಯಾಗಿದ್ದೇನೆ' ಎಂದು ಹೇಳಿದರು.

'ಜಿಯಾಳ ಸಾವಿನ ವಿಷಯ ತಿಳಿದಾಗ ನಾನು ಕುಸಿದುಬಿದ್ದಿದ್ದೆ. ನಾನು ನನ್ನ ಜೀವನದ ಪ್ರಮುಖ ವ್ಯಕ್ತಿ ಮತ್ತು ನಾನು ನಿಜವಾಗಿಯೂ ಪ್ರೀತಿಸಿದವಳನ್ನು ಕಳೆದುಕೊಂಡಿದ್ದೇನೆ' ಎಂದೂ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸೂರಜ್ ನ್ಯಾಯಾಲಯಕ್ಕೆ ನೀಡಿದ ಅಂತಿಮ ಹೇಳಿಕೆಯಲ್ಲಿ, '2012ರಿಂದಲೂ ಜಿಯಾ ಖಿನ್ನತೆಯಿಂದ ಬಳಲುತ್ತಿದ್ದರು. ಅದೇ ವರ್ಷ ನವೆಂಬರ್‌ನಲ್ಲಿ ಜಿಯಾ ತನ್ನ ತೋಳಿನ ಮೇಲೆ ತಾವೇ ಕೊಯ್ದುಕೊಂಡಿದ್ದರು. ಈ ಬಗ್ಗೆ ರಬಿಯಾ ಖಾನ್ ಅವರಿಗೆ ನಾನು ತಿಳಿಸಿದ್ದೆ' ಎಂದೂ ಮಾಹಿತಿ ನೀಡಿದ್ದಾರೆ.

'ಸೂರಜ್ ಮತ್ತು ಜಿಯಾ ನಡುವೆ ಆತ್ಮೀಯವಾದ ಸಂಬಂಧವಿತ್ತು. ಜಿಯಾ ತಮ್ಮ ಪತ್ರದಲ್ಲಿ ತಾವು ಸೂರಜ್‌ನಿಂದ ಅನುಭವಿಸಿದ್ದ ದೈಹಿಕ ಮತ್ತು ಮಾನಸಿಕ ಕಿರುಕುಳದ ಕುರಿತು ವಿವರಿಸಿದ್ದಾರೆ' ಎಂದು ಸಿಬಿಐ ತನ್ನ ವಾದದಲ್ಲಿ ತಿಳಿಸಿತ್ತು.

ಪುರಾವೆ ಸಂಗ್ರಹಿಸಿಲ್ಲ: 'ಸೂರಜ್, ಜಿಯಾಳನ್ನು ದೈಹಿಕ ಮತ್ತು ಮೌಖಿಕ ನಿಂದನೆಗೆ ಒಳಪಡಿಸುತ್ತಿದ್ದ. ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದನ್ನು ಸಾಬೀತುಪಡಿಸಲು ಪೊಲೀಸರು ಮಕತ್ತು ಸಿಬಿಐ ಯಾವುದೇ ಕಾನೂನು ಪುರಾವೆಗಳನ್ನು ಸಂಗ್ರಹಿಸಿಲ್ಲ' ಎಂದು ಜಿಯಾ ಅವರ ತಾಯಿ ರಬಿಯಾ ಖಾನ್ ನ್ಯಾಯಾಲಯಕ್ಕೆ ತಿಳಿಸಿದ್ದರು.

ಪ್ರಕರಣದ ಕುರಿತು ಹೊಸದಾಗಿ ತನಿಖೆ ನಡೆಸುವಂತೆ ಕೋರಿ ರಬಿಯಾ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಕಳೆದ ವರ್ಷ ವಜಾಗೊಳಿಸಿತ್ತು.

ಶಿಂದೆ ಗುಂಪಿಗೆ ಆಸ್ತಿ ವರ್ಗ: ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಉದ್ಧವ್ ಠಾಕ್ರೆ ಬಣ ಹೊಂದಿರುವ ಶಿವಸೇನಾ ಪಕ್ಷದ ಎಲ್ಲಾ ಆಸ್ತಿಗಳನ್ನು ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಗುಂಪಿಗೆ ವರ್ಗಾಯಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರ ಪೀಠವು ಅರ್ಜಿದಾರ ವಕೀಲ ಆಶಿಶ್ ಗಿರಿ ಅವರ ಮನವಿಯನ್ನು ವಜಾಗೊಳಿಸಿತು.

ಸಿಸೋಡಿಯಾಗೆ ಜಾಮೀನು ನಿರಾಕರಣೆ

ನವದೆಹಲಿ: ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಅವರಿಗೆ ಜಾಮೀನು ನೀಡಲು ಇಲ್ಲಿನ ನ್ಯಾಯಾಲಯವು ಶುಕ್ರವಾರ ನಿರಾಕರಿಸಿದೆ.

ಪ್ರಕರಣದಲ್ಲಿ ಸಿಸೋಡಿಯಾ ಅವರು ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಜಾಮೀನು ನಿರಾಕರಿಸಿರುವುದಾಗಿ ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಹೇಳಿದ್ದಾರೆ. ಗಂಭೀರ ಸ್ವರೂಪದ ಆರ್ಥಿಕ ಅಪರಾಧ ಎಸಗಿರುವ ಆರೋಪ ಸಿಸೋಡಿಯಾ ಅವರ ಮೇಲಿದೆ ಮತ್ತು ಸಂಗ್ರಹಿಸಿರುವ ಸಾಕ್ಷ್ಯಗಳು ಕೂಡ ಅವರ ವಿರುದ್ಧವಾಗಿವೆ ಎಂದೂ ನ್ಯಾಯಾಧೀಶರು ತಿಳಿಸಿದ್ದಾರೆ.

ಪತ್ನಿಯ ಅನಾರೋಗ್ಯ ಕಾರಣದಿಂದಲೂ ಸಿಸೋಡಿಯಾ ಅವರಿಗೆ ಈ ಪ್ರಕರಣದಲ್ಲಿ ಜಾಮೀನು ನೀಡಲು ಸಾಧ್ಯವಿಲ್ಲ. ಪ್ರಕರಣದ ಪ್ರಮುಖ ಸಾಕ್ಷಿಗಳ ಮೇಲೆ ಅವರು ಪ್ರಭಾವ ಬೀರುವ ಸಾಧ್ಯತೆಯನ್ನೂ ತಳ್ಳಿಹಾಕುಂತಿಲ್ಲ ಎಂದು ನ್ಯಾಯಾಲಯವು ಹೇಳಿದೆ.

ತನಿಖೆಯು ನಿರ್ಣಾಯಕ ಹಂತದಲ್ಲಿರುವುದರಿಂದ ಜಾಮೀನು ನೀಡಬಾರದು ಎಂದು ಜಾರಿ ನಿರ್ದೇಶನಾಲಯವು ನ್ಯಾಯಾಲಯವನ್ನು ಕೋರಿತ್ತು. ಸಿಬಿಐ ತನಿಖೆ ನಡೆಸುತ್ತಿರುವ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ಸಿಸೋಡಿಯಾ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮಾ. 31ರಂದು ನ್ಯಾಯಾಲಯವು ವಜಾಗೊಳಿಸಿತ್ತು.

ಪ್ರಕಾಶ್ ಸಿಂಗ್ ಬಾದಲ್ ವಿರುದ್ಧದ ಪ್ರಕರಣ ರದ್ದು

ನವದೆಹಲಿ (ಪಿಟಿಐ): ಎರಡು ದಿನಗಳ ಹಿಂದೆ ನಿಧನರಾದ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ನಾಯಕ ಪ್ರಕಾಶ್ ಸಿಂಗ್ ಬಾದಲ್ ಮತ್ತು ಅವರ ಪುತ್ರ ಸುಖ್ಬೀರ್ ಸಿಂಗ್ ಬಾದಲ್ ವಿರುದ್ಧದ ಫೋರ್ಜರಿ ಪ್ರಕರಣಕ್ಕೆ ಸಂಬಂಧಿಸಿದ ಕ್ರಿಮಿನಲ್ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಗೊಳಿಸಿದೆ.

ವಿಚಾರಣಾ ನ್ಯಾಯಾಲಯ ಹೊರಡಿಸಿದ ಸಮನ್ಸ್ 'ಕಾನೂನಿನ ಪ್ರಕ್ರಿಯೆಯ ದುರುಪಯೋಗವಲ್ಲದೆ ಬೇರೇನೂ ಅಲ್ಲ' ಎಂದು ಹೇಳಿದೆ.

ಪ್ರಕಾಶ್, ಸುಖ್ಬೀರ್ ಸಿಂಗ್ ಮತ್ತು ಹಿರಿಯ ಅಕಾಲಿ ನಾಯಕ ದಲ್ಜಿತ್ ಸಿಂಗ್ ಚೀಮಾ ಅವರು ಏ. 11 ರಂದು ಸಲ್ಲಿಸಿದ್ದ ಅರ್ಜಿಗಳ ಬಗ್ಗೆ ತೀರ್ಪು ಕಾಯ್ದಿರಿಸಿದ್ದ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ.ರವಿಕುಮಾರ್ ಪೀಠವು ಪಂಜಾಬ್‌ನ ಹೋಶಿಯಾರ್‌ಪುರ ವಿಚಾರಣಾ ನ್ಯಾಯಾಲಯ ಹೊರಡಿಸಿದ ಸಮನ್ಸ್ ಅನ್ನು ರದ್ದುಗೊಳಿಸಿತು.

'ಮೇಲ್ಮನವಿದಾರರ (ಬಾದಲ್ ಮತ್ತು ಚೀಮಾ) ವಿರುದ್ಧ ವಿಚಾರಣಾ ನ್ಯಾಯಾಲಯ ಹೊರಡಿಸಿದ ಸಮನ್ಸ್ ಆದೇಶವು ಕಾನೂನಿನ ಪ್ರಕ್ರಿಯೆಯ ದುರುಪಯೋಗವಲ್ಲದೆ ಬೇರೇನೂ ಅಲ್ಲ' ಎಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಶಾ ಹೇಳಿದರು.

ಅಕಾಲಿ ದಳದ ನಾಯಕ ಪ್ರಕಾಶ್ ಸಿಂಗ್ ಬಾದಲ್ ಮೊಹಾಲಿಯ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

'ಅತೀಕ್–ಅಶ್ರಫ್: ಮಾಧ್ಯಮದ ಮುಂದೆ ಪರೇಡ್ ಮಾಡಿದ್ದು ಏಕೆ?'

ನವದೆಹಲಿ: 'ಅತೀಕ್ ಮತ್ತು ಆತನ ತಮ್ಮ ಅಶ್ರಫ್‌ನನ್ನು ಪೊಲೀಸ್ ಕಾವಲಿನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಾಗ ಅವರನ್ನು ಮಾಧ್ಯಮಗಳ ಮುಂದೆ ಏಕೆ ಪರೇಡ್ ಮಾಡಲಾಯಿತು' ಎಂದು ಸುಪ್ರೀಂ ಕೋರ್ಟ್, ಉತ್ತರ ಪ್ರದೇಶ ಸರ್ಕಾರವನ್ನು ಶುಕ್ರವಾರ ಪ್ರಶ್ನಿಸಿದೆ.

ಉತ್ತರ ಪ್ರದೇಶದಲ್ಲಿ 2017ರಿಂದ ನಡೆದ 183 ಎನ್‌ಕೌಂಟರ್‌ಗಳ ಬಗ್ಗೆ ತನಿಖೆ ನಡೆಸುವಂತೆ ಕೋರಿ ವಕೀಲ ವಿಶಾಲ್ ತಿವಾರಿ ಅವರು ಸಲ್ಲಿಸಿದ ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ಪ್ರಯಾಗರಾಜ್‌ನಲ್ಲಿ ನಡೆದ ಅತೀಕ್ ಮತ್ತು ಅಶ್ರಫ್ ಅವರ ಹತ್ಯೆಯ ಬಳಿಕ ಕೈಗೊಂಡ ಕ್ರಮಗಳ ಸ್ಥಿತಿಗತಿಯ ವರದಿಯನ್ನು ಸಲ್ಲಿಸುವಂತೆಯೂ ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ದೀಪಂಕರ್ ದತ್ತ ಅವರ ನ್ಯಾಯಪೀಠವು, ಝಾನ್ಸಿಯಲ್ಲಿ ಅತೀಕ್‌ನ ಮಗ ಅಸದ್ ಮೇಲೆ ಪೊಲೀಸರು ನಡೆಸಿದ ಎನ್‌ಕೌಂಟರ್ ಬಗ್ಗೆಯೂ ಸರ್ಕಾರದಿಂದ ವರದಿ ಕೇಳಿದೆ.

'ಈ ಇಬ್ಬರನ್ನು (ಅತೀಕ್ ಮತ್ತು ಅಶ್ರಫ್) ಆಸ್ಪತ್ರೆಗೆ ಕರೆದೊಯ್ಯುತ್ತಿರುವ ಮಾಹಿತಿ ಹತ್ಯೆ ಆರೋಪಿಗಳಿಗೆ ಹೇಗೆ ತಿಳಿಯಿತು? ಅವರನ್ನು ಆಸ್ಪತ್ರೆಯ ಪ್ರವೇಶ ದ್ವಾರದಿಂದಲೇ ಆಂಬುಲೆನ್ಸ್‌ನಲ್ಲಿ ಏಕೆ ಕರೆದೊಯ್ಯಲಿಲ್ಲ. ಅವರನ್ನು ಮಾಧ್ಯಮಗಳ ಮುಂದೆ ಏಕೆ ಕರೆತರಲಾಯಿತು' ಎಂದು ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರನ್ನು ನ್ಯಾಯಪೀಠವು ಪ್ರಶ್ನಿಸಿತು.

ಇದಕ್ಕೆ ಉತ್ತರ ನೀಡಿದ ರೋಹಟಗಿ, 'ಹತ್ಯೆಯ ಕುರಿತು ರಾಜ್ಯ ಸರ್ಕಾರ ತನಿಖೆ ನಡೆಸುತ್ತಿದೆ ಮತ್ತು ಇದಕ್ಕಾಗಿ ತ್ರಿಸದಸ್ಯ ಆಯೋಗವನ್ನು ರಚಿಸಿದೆ. ಉತ್ತರ ಪ್ರದೇಶ ಪೊಲೀಸ್ ಇಲಾಖೆಯ ವಿಶೇಷ ತನಿಖಾ ತಂಡ ಕೂಡ ಈ ಬಗ್ಗೆ ತನಿಖೆ ನಡೆಸುತ್ತಿದೆ' ಎಂದರು.

183 ಎನ್‌ಕೌಂಟರ್‌ಗಳ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಬೇಕು ಹಾಗೂ ಅತೀಕ್, ಅಶ್ರಫ್ ಸಹೋದರರ ಪೊಲೀಸ್ ಕಸ್ಟಡಿ ಹತ್ಯೆಯ ಬಗ್ಗೆಯೂ ತನಿಖೆ ನಡೆಸಬೇಕು ಎಂದು ನ್ಯಾಯಪೀಠವು ಆದೇಶ ನೀಡಿತು.

ಸುದ್ದಿ 2 ನಿಮಿಷ

ಭದ್ರತಾ ವೆಚ್ಚ ₹8 ಲಕ್ಷ ಠೇವಣಿ ಪಾವತಿಸಲು ನವಲಖಾಗೆ ಸೂಚನೆ

ನವದೆಹಲಿ (ಪಿಟಿಐ): ಎಲ್ಗರ್ ಪರಿಷತ್ ಮತ್ತು ಮಾವೊವಾದಿ ಸಂಪರ್ಕದ ಪ್ರಕರಣದಲ್ಲಿ ಗೃಹ ಬಂಧನದಲ್ಲಿರುವ ಮಾನವ ಹಕ್ಕುಗಳ ಹೋರಾಟಗಾರ ಗೌತಮ್ ನವಲಖಾ ಅವರಿಗೆ ನೀಡಿರುವ ಪೊಲೀಸ್ ಭದ್ರತೆಯ ವೆಚ್ಚವಾಗಿ ₹8 ಲಕ್ಷ ಮೊತ್ತದ ಮತ್ತೊಂದು ಠೇವಣಿ ಇಡುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ವಿಭಾಗೀಯ ಪೀಠವು, ಬಾಕಿ ಇರುವ ಭದ್ರತಾ ಶುಲ್ಕ ₹66 ಲಕ್ಷ ಮೊತ್ತದ ಬಿಲ್ ಅನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಸಲ್ಲಿಸಿದ ಬಳಿಕ ಈ ಆದೇಶ ನೀಡಿದೆ.

ಮುಂಬೈನ ಸಾರ್ವಜನಿಕ ಗ್ರಂಥಾಲಯದಿಂದ ಸ್ಥಳಾಂತರಿಸುವಂತೆ ಕೋರಿ ನವಲಖಾ ಸಲ್ಲಿಸಿರುವ ಅರ್ಜಿಯ ಬಗ್ಗೆ ಎರಡು ವಾರಗಳೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆಯೂ ರಾಜು ಅವರಿಗೆ ಪೀಠವು ನಿರ್ದೇಶನ ನೀಡಿದೆ.

ಅಲ್ಲದೇ ಗೌತಮ್ ನವಲಖಾ ಅವರು 45 ನಿಮಿಷಗಳ ಕಾಲ ನಡೆದಾಡಲು ಅವಕಾಶ ನೀಡುವಂತೆ ಇಟ್ಟಿರುವ ಕೋರಿಕೆಯನ್ನು ವಿಭಾಗೀಯ ಪೀಠವು ಪರಿಗಣಿಸಿದೆ.

ಇದಕ್ಕೂ ಮೊದಲು ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರು, ನವಲಖಾ ಅವರಿಗೆ ವಾಕ್ ಮಾಡಲು ಅವಕಾಶ ನೀಡಿದರೆ ಅವರೊಂದಿಗೆ ಭದ್ರತಾ ಸಿಬ್ಬಂದಿಯೂ ವಾಕ್ ಮಾಡುವಂತೆ ಬಲವಂತಪಡಿಸಿದಂತಾಗುತ್ತದೆ ಎಂದು ಆಕ್ಷೇಪಿಸಿದರು.

ಆಗ ನ್ಯಾಯಮೂರ್ತಿಗಳು,'ಭದ್ರತೆಗೆ ಇರುವ ಪೊಲೀಸರೂ ವಾಕ್ ಮಾಡಲಿ ಬಿಡಿ, ಅರ್ಜಿದಾರರಿಂದ ಅವರಿಗೂ ಅನುಕೂಲವೇ, ಅವರೆಲ್ಲರೂ ಇನ್ನಷ್ಟು ಕಟ್ಟುಮಸ್ತಾಗಿ ಕಾಣಿಸುತ್ತಾರೆ' ಎಂದೂ ಹೇಳಿದ್ದಾರೆ.

ಕಳೆದ ವರ್ಷದ ನವೆಂಬರ್ 10ರಿಂದ ಗೌತಮ್ ಅವರನ್ನು ಗೃಹ ಬಂಧನದಲ್ಲಿರಿಸಲಾಗಿದೆ.

ಅರ್ಜಿದಾರ ನವಲಖಾ ಅವರಿಗೆ ಸರ್ಕಾರವು ಲಭ್ಯವಿರುವ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲು ತಗಲುವ ವೆಚ್ಚವಾಗಿ ₹2.4 ಲಕ್ಷ ಠೇವಣಿ ಇಡುವಂತೆ ಸುಪ್ರೀಂ ಕೋರ್ಟ್ ಆರಂಭದಲ್ಲಿ ನವಲಖಾ ಅವರಿಗೆ ನಿರ್ದೇಶನ ನೀಡಿತ್ತು.



ಕಲಾಪದ ನೇರ ಪ್ರಸಾರ ಕಾಯಂ ವ್ಯವಸ್ಥೆ: ಸಿಜೆಐ ಚಂದ್ರಚೂಡ್

ನವದೆಹಲಿ (ಪಿಟಿಐ): ನ್ಯಾಯಾಲಯದ ಕಲಾಪಗಳ ನೇರಪ್ರಸಾರವನ್ನು ನ್ಯಾಯಾಂಗ ವ್ಯವಸ್ಥೆಯ ಶಾಶ್ವತ ಭಾಗವನ್ನಾಗಿ ಮಾಡಲಾಗುವುದು ಎಂದು ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಶುಕ್ರವಾರ ಹೇಳಿದರು.

ದೆಹಲಿ ಹೈಕೋರ್ಟ್ ಆರಂಭಿಸಿರುವ ಮಾಹಿತಿ ತಂತ್ರಜ್ಞಾನ ಆಧಾರಿತ ಎರಡು ಯೋಜನೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. 'ನ್ಯಾಯಾಲಯ ಕಲಾಪಗಳು ಜನರಿಗೆ ತಲುಪಬೇಕು. ಈ ದಿಸೆಯಲ್ಲಿ ರೂಪಿಸಿರುವ ಯೋಜನೆಗಳಿಗೆ ಹಣಕಾಸು ಒದಗಿಸುವಲ್ಲಿ ಕೇಂದ್ರ ಸರ್ಕಾರ ತ್ವರಿತವಾಗಿ ಸ್ಪಂದಿಸುತ್ತಿದೆ. ಹಂಚಿಕೆಯಾಗಿರುವ ಅನುದಾನದಲ್ಲಿ ಮೊದಲ ಹಂತದ ₹ 2 ಸಾವಿರ ಕೋಟಿ ಜೂನ್‌ನಲ್ಲಿ ಬಿಡುಗಡೆ ಮಾಡುವ ನಿರೀಕ್ಷೆ ಇದೆ' ಎಂದರು.

ಕಳರಿಪಯಟ್ಟು

ಚೆನ್ನೈನ ಭಾರತೀಯ ಆಫೀಸರ್ಸ್ ಟ್ರೇನಿಂಗ್ ಅಕಾಡೆಮಿಯ ಪದವಿ ಪ್ರದಾನ ಸಮಾರಂಭಕ್ಕೂ ಮುನ್ನ ಪ್ರಶಿಕ್ಷಣಾರ್ಥಿಗಳು ಆತ್ಮರಕ್ಷಣಾ ಕಲೆ ಕಳರಿಪಯಟ್ಟಿನ ಪಟ್ಟುಗಳನ್ನು ಶುಕ್ರವಾರ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ಪ್ರಾಯೋಗಿಕ 'ತಾಪಮಾನ ಸೂಚ್ಯಂಕ'



ನವದೆಹಲಿ (ಪಿಟಿಐ): ದೇಶದ ವಿವಿಧ ಭಾಗಗಳಿಗೆ ಸಂಬಂಧಿಸಿದ 'ತಾಪಮಾನ ಸೂಚ್ಯಂಕ'ವನ್ನು ಪ್ರಾಯೋಗಿಕವಾಗಿ ನೀಡುವುದಕ್ಕೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಚಾಲನೆ ನೀಡಿದೆ.

ಆಯಾ ಪ್ರದೇಶದಲ್ಲಿರುವ ಗಾಳಿಯ ಉಷ್ಣಾಂಶ ಹಾಗೂ ತೇವಾಂಶದ ಆಧಾರದ ಮೇಲೆ ಈ 'ತಾಪಮಾನ ಸೂಚ್ಯಂಕ'ವನ್ನು ನಿರ್ಧರಿಸಲಾಗುತ್ತದೆ ಎಂದು ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದ್ದಾರೆ.

'ಸದ್ಯ, ದಿನದ ಕನಿಷ್ಠ ಮತ್ತು ಗರಿಷ್ಠ ತಾಪಮಾನಗಳನ್ನು ನೀಡಲಾಗುತ್ತಿದೆ. ಮುಖ್ಯವಾಗಿ ಬಯಲು ಪ್ರದೇಶಗಳಿಗೆ ಸಂಬಂಧಿಸಿ ತಾಪಮಾನ ಸೂಚ್ಯಂಕ ಒದಗಿಸಲಾಗುತ್ತದೆ' ಎಂದು ಹೇಳಿದ್ದಾರೆ.

'ಭಾರತದ ನಗರಗಳಿಗೆ ಸಂಬಂಧಿಸಿ ಸಿದ್ಧಪಡಿಸುವ ಈ ಸೂಚ್ಯಂಕದ ದೃಢೀಕರಣಕ್ಕಾಗಿ ಇಲಾಖೆಯು ಆರೋಗ್ಯ ಸಚಿವಾಲಯದೊಂದಿಗೆ ಸಮಾಲೋಚನೆ ನಡೆಸಬೇಕು' ಎಂದು ಭೂವಿಜ್ಞಾನಗಳ ಸಚಿವಾಲಯದ ಕಾರ್ಯದರ್ಶಿ ಎಂ.ರವಿಚಂದ್ರನ್ ಹೇಳಿದ್ದಾರೆ.

ತಮಿಳು ನಾಡಗೀತೆಯ ಗಾಯನಕ್ಕೆ ತಡೆ: ಪಕ್ಷಗಳ ತೀವ್ರ ಅಪಸ್ವರ

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕ ವಿಧಾನಸಭೆ ಚುನಾವಣೆಯ ಪ್ರಚಾರ ಕಾರ್ಯಕ್ರಮದಲ್ಲಿ ತಮಿಳುನಾಡಿನ ನಾಡಗೀತೆಯ ಗಾಯನವನ್ನು ಅರ್ಧಕ್ಕೇ ತಡೆದು, ಕರ್ನಾಟಕದ ನಾಡಗೀತೆ ಗಾಯನಕ್ಕೆ ಅನುವು ಮಾಡಿಕೊಟ್ಟ ಬಿಜೆಪಿ ಶಾಸಕ ಕೆ.ಎಸ್.ಈಶ್ವರಪ್ಪ ಅವರ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಶಿವಮೊಗ್ಗದಲ್ಲಿ ಕಳೆದ ಶನಿವಾರ ಈ ಘಟನೆ ನಡೆದಿತ್ತು. ಆ ವೇದಿಕೆಯಲ್ಲಿ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರೂ ಇದ್ದರು. ಈಶ್ವರಪ್ಪ ಕ್ರಮವನ್ನು ಪ್ರತಿಭಟಿಸದ ಅಣ್ಣಾಮಲೈ ಅವರು ಕ್ಷಮೆ ಕೋರಬೇಕು ಎಂದು ಇಲ್ಲಿನ ಪ್ರಮುಖ ರಾಜಕೀಯ ಪಕ್ಷಗಳು ಆಗ್ರಹಪಡಿಸಿವೆ.

'ನೆರೆಯ ರಾಜ್ಯದಲ್ಲಿ ತಮಿಳು ನಾಡಗೀತೆ ಗಾಯನಕ್ಕೆ ಅಪಮಾನ ಆಗುವುದನ್ನು ತಡೆಯಲು ಆಗದ ಅಣ್ಣಾಮಲೈ ಅವರು ತಮಿಳರ ಹಿತಾಸಕ್ತಿಯನ್ನು ರಕ್ಷಿಸುವರೇ' ಎಂದು ಆಡಳಿತಾರೂಢ ಡಿಎಂಕೆ ಸೇರಿದಂತೆ ಪ್ರಮುಖ ಪಕ್ಷಗಳು ತರಾಟೆಗೆ ತೆಗೆದುಕೊಂಡಿವೆ.

ಬಿಜೆಪಿ ಮೈತ್ರಿಪಕ್ಷವಾಗಿರುವ ಪಿಎಂಕೆ, 'ಈಶ್ವರಪ್ಪ ಅವರ ಕ್ರಮವು 'ಭಾಷಾ ಮತಾಂಧತೆ'ಯಾಗಿದೆ' ಎಂದು ವಾಗ್ದಾಳಿ ನಡೆಸಿದೆ. ಕಾರ್ಯಕ್ರಮದ ಆಯೋಜಕರು ಈಗ ಆಗಿರುವ ಲೋಪಕ್ಕಾಗಿ ಕ್ಷಮೆ ಕೋರಬೇಕು ಎಂದೂ ಒತ್ತಾಯಿಸಿದೆ.

ಈ ಕುರಿತಂತೆ ಟ್ವೀಟ್ ಮಾಡಿರುವ ಡಿಎಂಕೆ ಸಂಸದೆ ಕನಿಮೊಳಿ ಅವರು, 'ನಾಡಗೀತೆಗೆ ಅಪಮಾನ ಆಗುವುದನ್ನು ತಡೆಯಲಾಗದ ಅಣ್ಣಾಮಲೈ ಅವರು ತಮಿಳರ ಹಿತಾಸಕ್ತಿ ಕುರಿತು ಕಾಳಜಿ ವಹಿಸುವರೇ' ಎಂದು ಪ್ರಶ್ನಿಸಿದ್ದಾರೆ.

ಡಿಎಂಕೆ ವಕ್ತಾರರಾದ ರಾಜೀವ್ ಗಾಂಧಿ ಅವರು, 'ಅನ್ಯ ರಾಜ್ಯಗಳಲ್ಲಿ ತಮಿಳು ನಾಡಗೀತೆಯನ್ನು ಹಾಡುವ ಅಗತ್ಯವಿಲ್ಲ. ಆದರೆ, ಮತ ಗಳಿಕೆಗಾಗಿ ಅಣ್ಣಾಮಲೈ ಅವರು ಈ ವಿಷಯದಲ್ಲಿ ರಾಜಕಾರಣ ಮಾಡುತ್ತಿದ್ದಾರೆ' ಎಂದು ಟೀಕಿಸಿದ್ದಾರೆ. 'ತಮಿಳು ನಾಡಗೀತೆ ಹಾಡಿಸಲು ತೀರ್ಮಾನಿಸಿದ ಮೇಲೆ ಅದನ್ನು ಅರ್ಧದಲ್ಲಿ ನಿಲ್ಲಿಸದಂತೆ ಕ್ರಮವಹಿಸಬೇಕಿತ್ತು' ಎಂದು ಪ್ರತಿಕ್ರಿಯಿಸಿದ್ದಾರೆ. ಆದರೆ, ತಮ್ಮ ವಿರುದ್ಧ ಕೇಳಿಬಂದಿರುವ ಟೀಕೆಗಳಿಗೆ ಅಣ್ಣಾಮಲೈ ತಿರುಗೇಟು ನೀಡಿದ್ದಾರೆ.

'ಮತ್ತೊಬ್ಬರ ಮೇಲೆ ದಾಳಿ ನಡೆಸಲು ಅದು ಡಿಎಂಕೆ ವೇದಿಕೆ ಆಗಿರಲಿಲ್ಲ. ಮೊದಲು ಕರ್ನಾಟಕದ ನಾಡಗೀತೆ ಹಾಡಬೇಕು ಎಂದು ಈಶ್ವರಪ್ಪ ಹೇಳಿದ್ದರು. ಇಲ್ಲಿ ನಾಡಗೀತೆಯಿಂದ ಕನ್ನಡ, ಮಲಯಾಳಂ ಉಲ್ಲೇಖವನ್ನೇ ಕೈಬಿಟ್ಟಿರುವ ಇತಿಹಾಸ ನಿಮ್ಮ ಹಿಂದಿದೆ' ಎಂದು ಹರಿಹಾಯ್ದಿದ್ದಾರೆ.

ಜೈರಾಮ್ ವಿರುದ್ಧ ದೂರು: ಹಕ್ಕುಬಾಧ್ಯತಾ ಸಮಿತಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಸಂಸದ ಸುಧಾಂಶು ತ್ರಿವೇದಿ ಅವರು ಕಾಂಗ್ರೆಸ್‌ನ ಮುಖ್ಯ ಸಚೇತಕ ಜೈರಾಮ್ ರಮೇಶ್ ವಿರುದ್ಧ ನೀಡಿರುವ ಹಕ್ಕುಚ್ಯುತಿ ದೂರನ್ನು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿದ್ದಾರೆ.

'ಸಭಾಪತಿ ಪೀಠದ ಕುರಿತು ಜೈರಾಮ್ ರಮೇಶ್ ಅವರು ಉದ್ದೇಶಪೂರ್ವಕವಾಗಿ ಅಗೌರವದ ಮಾತುಗಳನ್ನಾಡಿದ್ದಾರೆ' ಎಂದು ತ್ರಿವೇದಿ ನೀಡಿರುವ ದೂರನ್ನು ರಾಜ್ಯಸಭೆಯ ಉಪಸಭಾಪತಿ ಹರಿವಂಶ ನೇತೃತ್ವದ ಸಮಿತಿಗೆ ಒಪ್ಪಿಸಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲಂಡನ್‌ಗೆ ಇತ್ತೀಚೆಗೆ ಭೇಟಿ ನೀಡಿದ್ದ ವೇಳೆ 'ಭಾರತದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ' ಎಂದು ಹೇಳಿದ್ದಾರೆ ಎಂದು ಬಿಜೆಪಿ ಆರೋಪಿಸುತ್ತಿದೆ. ಈ ಹೇಳಿಕೆಯನ್ನು ಖಂಡಿಸುವುದಾಗಿಯೂ ಬಿಜೆಪಿ ಹೇಳಿದೆ.

ಇದಕ್ಕೆ ಪ್ರತಿಕ್ರಿಯಿಸಿದ್ದ ಜೈರಾಮ್ ರಮೇಶ್, 'ರಾಜ್ಯಸಭಾ ಸಭಾಪತಿಯು ಆಡಳಿತ ಪಕ್ಷದ ಪರ ಜೈಕಾರ ಹಾಕುವವರಾಗಬಾರದು' ಎಂದು ಹೇಳಿದ್ದರು. ಇದನ್ನು ಪ್ರಶ್ನಿಸಿ, ಸಂಸದ ತ್ರಿವೇದಿ ಅವರು ದೂರು ದಾಖಲಿಸಿದ್ದಾರೆ.

ವಿಚಾರಣಾ ನ್ಯಾಯಮೂರ್ತಿ ಬದಲಿಗೆ ಸೂಚನೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಶಾಲಾ ನೇಮಕಾತಿ ಹಗರಣದ ವಿಚಾರಣೆಯನ್ನು ಮತ್ತೊಬ್ಬ ನ್ಯಾಯಮೂರ್ತಿಗೆ ವಹಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಕಲ್ಕತ್ತ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅವರಿಗೆ ಸೂಚಿಸಿತು.

ಈ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ವಿವಾದ ಕುರಿತಂತೆ ಟಿ.ವಿ.ವಾಹಿನಿಗಳಿಗೆ ಸಂದರ್ಶನ ನೀಡಿದ್ದು, ಈ ಬೆಳವಣಿಗೆ ಕುರಿತು ಸುಪ್ರಿಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತು. ಇ.ಡಿ., ಸಿಬಿಐ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ವ್ಯತಿರಿಕ್ತ ತೀರ್ಪು ಬಂದಾಗ ನ್ಯಾಯಮೂರ್ತಿಗಳನ್ನು ಬೆದರಿಸುವ ಪ್ರವೃತ್ತಿ ಹೆಚ್ಚುತ್ತಿದೆ' ಎಂದು ವ್ಯಕ್ತಪಡಿಸಿದ ಅಭಿಪ್ರಾಯವನ್ನು 'ಸುಪ್ರಿಂ' ಗಮನಕ್ಕೆ ತೆಗೆದುಕೊಂಡಿತು.

'ಟಿ.ವಿ.ವಾಹಿನಿಗೆ ಸಂದರ್ಶನ ನೀಡಿರುವ ನ್ಯಾಯಮೂರ್ತಿಗಳು ವಿಚಾರಣೆ ನಡೆಸಲು ಅಸಮರ್ಥರಿದ್ದಾರೆ' ಎಂದು ಆರೋಪಿಸಿ ಟಿ.ಎಂ.ಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ನಡೆಸಿತು.

ದ್ವೇಷ ಭಾಷಣ: ದೂರು ಇಲ್ಲದಿದ್ದರೂ ಪ್ರಕರಣ

ಒಂದನೇ ಪುಟದಿಂದ...

ದ್ವೇಷ ಭಾಷಣ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಉತ್ತರ ಪ್ರದೇಶ, ದೆಹಲಿ ಹಾಗೂ ಉತ್ತರಾಖಂಡ ರಾಜ್ಯಗಳಿಗೆ ಕಳೆದ ವರ್ಷ ಸುಪ್ರೀಂಕೋರ್ಟ್ ನಿರ್ದೇಶನ ನೀಡಿ ಆದೇಶಿಸಿತ್ತು. ಈಗ, ಆದೇಶವನ್ನು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ವಿಸ್ತರಿಸಿದೆ.

ಮನವಿ: ಅರ್ಜಿ ವಿಚಾರಣೆ ವೇಳೆ, ಅರ್ಜಿದಾರ ಶಾಹೀನ್ ಅಬ್ದುಲ್ಲಾ ಪರ ವಾದ ಮಂಡಿಸಿದ ವಕೀಲ ನಿಜಾಮ್ ಪಾಷಾ, 'ಕಳೆದ ವರ್ಷ ಸುಪ್ರೀಂಕೋರ್ಟ್ ನೀಡಿದ್ದ ಆದೇಶವನ್ನು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಅನುಷ್ಠಾನಕ್ಕೆ ತರಬೇಕು' ಎಂದು ಕೋರಿದರು.

'ದ್ವೇಷ ಭಾಷಣ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿ ಶಿಫಾರಸು ಮಾಡಲು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು' ಎಂದೂ ಅವರು ಮನವಿ ಮಾಡಿದರು.

ಸ್ವಯಂಸೇವಾ ಸಂಸ್ಥೆ ಪಿಯುಸಿಎಲ್‌ನ ಮಹಾರಾಷ್ಟ್ರ ಶಾಖೆ ಪರ ಹಾಜರಿದ್ದ ಹಿರಿಯ ವಕೀಲ ಸಂಜಯ್ ಪಾರೀಖ್, 'ಸಂಸದರು, ಶಾಸಕರು ಪಾಲ್ಗೊಂಡಿರುವ ಸಾರ್ವಜನಿಕ ಸಭೆಗಳಲ್ಲಿ ದ್ವೇಷ ಭಾಷಣ ಮಾಡುವವರ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟ್‌ನ ಸ್ಪಷ್ಟ ಆದೇಶವಿದ್ದರೂ ಇಂಥ ಘಟನೆಗಳು ವರದಿಯಾಗುತ್ತಲೇ ಇವೆ' ಎಂದು ಹೇಳಿದರು.

'ಪ್ರತಿಯೊಂದು ಘಟನೆ ಕುರಿತು ವಿಚಾರಣೆ ನಡೆಸುವುದು ಸಾಧ್ಯವಿಲ್ಲ. ಪ್ರತಿ ಘಟನೆ ಮೇಲೆ ನಾವು ಕಣ್ಗಾವಲಿರಿಸಲೂ ಆಗುವುದಿಲ್ಲ. ಈ ಕಾರಣಕ್ಕಾಗಿಯೇ ಆದೇಶ ನೀಡಿದ್ದೇವೆ. ಅದರಂತೆ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿ ಸಂಬಂಧಪಟ್ಟ ಅಧಿಕಾರಿಗಳದ್ದು' ಎಂದು ನ್ಯಾಯಮೂರ್ತಿ ನಾಗರತ್ನ ಪ್ರತಿಕ್ರಿಯಿಸಿದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಕೇಂದ್ರ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ಸೇರಿ ಯಾವುದೇ ಸರ್ಕಾರವಾಗಲಿ ದ್ವೇಷ ಭಾಷಣವನ್ನು ಸಮರ್ಥನೆ ಮಾಡುವುದಿಲ್ಲ. ಆದರೆ, ಈ ವಿಷಯವಾಗಿ ಅರ್ಜಿಗಳ ಮೇಲೆ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಅವಕಾಶ ನೀಡುವುದು ಹಾಗೂ ನ್ಯಾಯಾಧೀಶರಿಗಿರುವ ಅಧಿಕಾರವನ್ನು ಬದಲಿಸುವುದು ಆಗಬಾರದು. ಇಂಥ ವಿಷಯಗಳಿಗೆ ಸಂಬಂಧಿಸಿದ ದೂರುಗಳ ಕುರಿತು ಕ್ರಮ ಕೈಗೊಳ್ಳುವುದಕ್ಕಾಗಿ ಅಪರಾಧ ಪ್ರಕ್ರಿಯಾ ಸಂಹಿತೆಯಡಿ ಅವಕಾಶ ನೀಡಲಾಗಿದೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇತರ ಅಪರಾಧ ಕೃತ್ಯಗಳ ರೀತಿ ದ್ವೇಷ ಭಾಷಣವನ್ನು ನೋಡಬಾರದು ಎಂಬುದು ವಿವಾದಾತೀತ. ಆದರೆ, ಇವು ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತವೆ. ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುತ್ತವೆ' ಎಂದು ಅಭಿಪ್ರಾಯಪಟ್ಟಿತು.

'ರಾಜಕೀಯದಿಂದ ದೂರ': ಪಶ್ಚಿಮ ಬಂಗಾಳ ಹಾಗೂ ಬಿಹಾರದಲ್ಲಿ ಪದೇಪದೇ ದ್ವೇಷ ಭಾಷಣಗಳನ್ನು ಮಾಡಲಾಗುತ್ತಿದೆ ಎಂಬುದರ ಕುರಿತು ಎರಡು ರಾಜಕೀಯ ಪಕ್ಷಗಳ ಪರ ಹಾಜರಿದ್ದ ವಕೀಲರಿಬ್ಬರು ನ್ಯಾಯಪೀಠದ ಗಮನ ಸೆಳೆಯಲು ಪ್ರಯತ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕೋರ್ಟ್ ಕಲಾಪದ ನಡುವೆ ರಾಜಕೀಯ ತರಬೇಡಿ. ದ್ವೇಷ ಭಾಷಣ ಮಾಡುವವರು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ನಮ್ಮ ಆದೇಶದಲ್ಲಿ ಹೇಳಲಾಗಿದೆ' ಎಂದು ಹೇಳಿತು.

ಆದೇಶ ಅನುಷ್ಠಾನ ಕೋರಿ ಮತ್ತೆ ಅರ್ಜಿ

ದೆಹಲಿ, ಉತ್ತರ ಪ್ರದೇಶ ಹಾಗೂ ಉತ್ತರಾಖಂಡದಲ್ಲಿ ದ್ವೇಷ ಭಾಷಣಗಳನ್ನು ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಲು ನಿರ್ದೇಶನ ನೀಡುವಂತೆ ಕೋರಿ ಪತ್ರಕರ್ತ ಶಾಹೀನ್ ಅಬ್ದುಲ್ಲಾ ಕಳೆದ ವರ್ಷ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ದ್ವೇಷ ಭಾಷಣಗಳಿಗೆ ಕಡಿವಾಣ ಹಾಕುವಂತೆ ಮೂರು ರಾಜ್ಯಗಳಿಗೆ ಸೂಚಿಸಿ, 2022ರ ಅಕ್ಟೋಬರ್ 21ರಂದು ಆದೇಶಿಸಿತ್ತು. ಆದರೆ, ಆದೇಶ ಅನುಷ್ಠಾನಗೊಂಡಿರಲಿಲ್ಲ.

ಕಳೆದ ವರ್ಷ ನೀಡಿದ್ದ ಆದೇಶವನ್ನು ಅನುಷ್ಠಾನಗೊಳಿಸುವಂತೆ ಕೋರಿ ಅಬ್ದುಲ್ಲಾ ಮತ್ತೊಮ್ಮೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಯಪೀಠ ಶುಕ್ರವಾರ ಈ ಆದೇಶ ನೀಡಿದೆ.

ಆಧುನಿಕ ತಂತ್ರಜ್ಞಾನ ಪ್ರತಿಯೊಬ್ಬರಿಗೂ ಲಭ್ಯವಾಗಬೇಕು: ಪ್ರಧಾನಿ ಮೋದಿ

91 ಎಫ್.ಎಂ ಟ್ರಾನ್ಸ್‌ಮಿಟರ್‌ಗಳಿಗೆ ಚಾಲನೆ

ಮುಖ್ಯಾಂಶಗಳು

- ಬೀದಿ ಬದಿ ವ್ಯಾಪಾರಿಯಿಂದಲೂ ಯುಪಿಐ ಬಳಕೆ: ಮೋದಿ
- ಎಫ್.ಎಂ. ಟ್ರಾನ್ಸ್‌ಮಿಟರ್: ಹವಾಮಾನ, ಕೃಷಿ ಕ್ಷೇತ್ರದಲ್ಲಿ ಪ್ರಮುಖ ಪಾತ್ರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 91 ಎಫ್.ಎಂ ಟ್ರಾನ್ಸ್‌ಮಿಟರ್‌ಗಳಿಗೆ ವರ್ಚುವಲ್ ಆಗಿ ಶುಕ್ರವಾರ ಚಾಲನೆ ನೀಡಿದ್ದಾರೆ.

18 ರಾಜ್ಯಗಳು ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಸಮಾಜದ ಪ್ರತಿನಿಧಿಗಳು, ಪದ್ಮ ಪ್ರಶಸ್ತಿ ಪುರಸ್ಕೃತರು ಹಾಗೂ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ 84 ಜಿಲ್ಲೆಗಳಲ್ಲಿ ಎಫ್.ಎಂ ಟ್ರಾನ್ಸ್‌ಮಿಟರ್‌ಗಳನ್ನು ಸ್ಥಾಪಿಸಲಾಗಿದೆ. ಮೋದಿ ಅವರ ಮಾಸಿಕ ಬಾನುಲಿ ಸರಣಿ 'ಮನದ ಮಾತು' 100ನೇ ಕಂತು ಪ್ರಸಾರವಾಗುವ ಎರಡು ದಿನ ಮೊದಲು ಈ ಟ್ರಾನ್ಸ್‌ಮಿಟರ್‌ಗಳಿಗೆ ಚಾಲನೆ ನೀಡಿರುವುದು ಗಮನಾರ್ಹ.

ತಂತ್ರಜ್ಞಾನದ ಪ್ರಯೋಜನ ದೇಶದ ಎಲ್ಲ ಪ್ರಜೆಗಳಿಗೂ ಸಿಗುವಂತಾಗಬೇಕು ಎಂಬ ದಿಸೆಯಲ್ಲಿ ಕೇಂದ್ರ ಸರ್ಕಾರ ನಿರಂತರ ಪ್ರಯತ್ನ ಮಾಡುತ್ತಿದೆ ಎಂದು ಪ್ರಧಾನಿ ಹೇಳಿದರು.

ಆಧುನಿಕ ತಂತ್ರಜ್ಞಾನವು ಪ್ರತಿಯೊಬ್ಬರಿಗೂ ಲಭ್ಯವಾಗಬೇಕು ಹಾಗೂ ಅದು ಕೈಗೆಟುಕುಂತಿರಬೇಕು ಎಂಬ ತತ್ವವೇ ಈ ಕಾರ್ಯಕ್ಕೆ ಪ್ರೇರಕ ಶಕ್ತಿಯಾಗಿದೆ ಎಂದೂ ಹೇಳಿದರು.

'ಮನದ ಮಾತು' ಬಾನುಲಿ ಸರಣಿಯ ಕುರಿತು ಪ್ರಸ್ತಾಪಿಸಿದ ಅವರು, ಜನರೊಂದಿಗೆ ಭಾವನಾತ್ಮಕವಾಗಿ ಸಂಪರ್ಕ ಸಾಧಿಸಲು ನೆರವಾದ ಬಗೆಯನ್ನು ವಿವರಿಸಿದರು. 'ಈ ಕಾರ್ಯಕ್ರಮದ ಮೂಲಕ ನಾನು ಆಕಾಶವಾಣಿ ತಂಡದ ಭಾಗವಾಗಿದ್ದೇನೆ' ಎಂದರು. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಲಡಾಖ್‌ನಿಂದ ವರ್ಚುವಲ್ ಆಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ರೇಡಿಯೊ ಕೇಳುಗರ ಸಂಖ್ಯೆ ಹೆಚ್ಚಳ: ಪ್ರಸಾರಭಾರತಿ ಸಿಇಒ'

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕಿ ಬಾತ್' ಮಾಸಿಕ ರೇಡಿಯೊ ಕಾರ್ಯಕ್ರಮದಿಂದಾಗಿ ರೇಡಿಯೊ ಆಲಿಸುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಈ ಮಾಧ್ಯಮದಲ್ಲಿ ಅವರ ಆಸಕ್ತಿಯು ಮರಳಿದೆ ಎಂದು ಪ್ರಸಾರ ಭಾರತಿಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಗೌರವ್ ದ್ವಿವೇದಿ ಶುಕ್ರವಾರ ಹೇಳಿದ್ದಾರೆ.

ಈ ಕಾರ್ಯಕ್ರಮವು ಸಮುದಾಯದ ಬಾಂಧವ್ಯವನ್ನು ಸಜ್ಜುಗೊಳಿಸಲು ಸಹಾಯ ಮಾಡಿದೆ ಎಂದು ದ್ವಿವೇದಿ ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

2014ರ ಅ. 3ರಂದು 'ಮನ್ ಕಿ ಬಾತ್' ಕಾರ್ಯಕ್ರಮದ ಮೊದಲ ಸಂಚಿಕೆ ಆರಂಭವಾಯಿತು. ಪ್ರತಿ ತಿಂಗಳ ಕೊನೆಯ ಭಾನುವಾರದಂದು ಬೆಳಿಗ್ಗೆ 11ಕ್ಕೆ ಆಲ್ ಇಂಡಿಯಾ ರೇಡಿಯೊ (ಎಐಆರ್) ಮತ್ತು ದೂರದರ್ಶನದಲ್ಲಿ (ಡಿಡಿ) ಈ ಕಾರ್ಯಕ್ರಮವು ಪ್ರಸಾರವಾಗುತ್ತದೆ. ಏಪ್ರಿಲ್ 30ರಂದು ಕಾರ್ಯಕ್ರಮದ 100ನೇ ಸಂಚಿಕೆಯ ಪ್ರಸಾರವಾಗಲಿದೆ.

ಅನುವಾದ: 'ಮನ್ ಕಿ ಬಾತ್' ಸಂಚಿಕೆಗಳನ್ನು ದೇಶದ 22 ಭಾಷೆಗಳು, 29 ಉಪಭಾಷೆಗಳು ಹಾಗೂ 11 ವಿದೇಶಿ ಭಾಷೆಗಳಿಗೆ ಆಕಾಶವಾಣಿ ಅನುವಾದಿಸಿದೆ.

ಇಂಗ್ಲಿಷ್ ಜೊತೆಗೆ, ಫ್ರೆಂಚ್, ಚೀನಿ, ಇಂಡೊನೇಷ್ಯಾ, ಟಿಬೆಟನ್, ಬರ್ಮೀಸ್, ಬಲೂಚಿ, ಅರೇಬಿಕ್, ಪಶ್ತು, ಪರ್ಷಿಯನ್, ದರಿ ಹಾಗೂ ಸ್ವಾಹಿಲಿ ಭಾಷೆಗಳಿಗೆ ಅನುವಾದಿಸಲಾಗಿದೆ.

ಆಕಾಶವಾಣಿಯ 500ಕ್ಕೂ ಹೆಚ್ಚು ಕೇಂದ್ರಗಳ ಮೂಲಕ 'ಮನ್ ಕಿ ಬಾತ್' ಕಾರ್ಯಕ್ರಮವನ್ನು ಸದ್ಯ ಬಿತ್ತರಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ವಿರುದ್ಧ ಯುವಿಸಿಇ ವಿದ್ಯಾರ್ಥಿಗಳ ಆಕ್ರೋಶ

‘ವಿದ್ಯಾರ್ಥಿನಿಲಯ ಖಾಲಿ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದಿರುವ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ವಿದ್ಯಾರ್ಥಿಗಳನ್ನು ಮೇ 1ರಿಂದ ಹೊರ ಹಾಕುವಂತೆ ಸುತ್ತೋಲೆ ಹೊರಡಿಸಲಾಗಿದೆ.

ವಿಶ್ವವಿದ್ಯಾಲಯದ ಈ ಸೂಚನೆಗೆ ವಿದ್ಯಾರ್ಥಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯುವಿಸಿಇ ಎಂಜಿನಿಯರಿಂಗ್ ಕಾಲೇಜನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿರುವುದರಿಂದ ಇನ್ನು ಬೆಂಗಳೂರು ವಿಶ್ವವಿದ್ಯಾಯದ ವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ, ಯುವಿಸಿಇ ವಿದ್ಯಾರ್ಥಿಗಳಿಗಾಗಿ ಅನುದಾನ ಸಹ ಮಂಜೂರಾಗಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಮೂರು ದಿನಗಳ ಒಳಗೆ ತಾವು ಇದ್ದ ವಸತಿ ನಿಲಯಗಳನ್ನು ಖಾಲಿ ಮಾಡಬೇಕೆಂದು ವಿಶ್ವವಿದ್ಯಾಲಯವು ಆದೇಶ ಹೊರಡಿಸಿದೆ.

ವಿಶ್ವವಿದ್ಯಾಲಯದ ಆದೇಶವನ್ನು ಎಐಡಿಎಸ್ಒ ಖಂಡಿಸಿದೆ. ವಿದ್ಯಾರ್ಥಿಗಳನ್ನು ಬೀದಿಗೆ ತಳ್ಳುತ್ತಿರುವುದು ವಿದ್ಯಾರ್ಥಿ ವಿರೋಧಿ ಧೋರಣೆಯಾಗಿದೆ ಎಂದು ತಿಳಿಸಿದೆ.

ಇದರಿಂದ, ವಿದ್ಯಾರ್ಥಿಗಳಿಗೆ ದ್ರೋಹ ಬಗೆದಂತಾಗಿದೆ. ಈ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದೆ.

ಈ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿ ಶುಕ್ರವಾರ ಪದಾಧಿಕಾರಿಗಳು ಕುಲಪತಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ನಗರದಲ್ಲಿ ಶುಕ್ರವಾರ ಎಐಡಿಎಸ್ಒ ಪದಾಧಿಕಾರಿಗಳು ಕುಲಪತಿ ಡಾ. ಎಸ್.ಎಂ. ಜಯಕರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ, ಜಿಲ್ಲಾ ಅಧ್ಯಕ್ಷ ಅಭಯ್, ಉಪಾಧ್ಯಕ್ಷೆ ಅಪೂರ್ವ ಇದ್ದರು.

ಮರು ನಿರ್ಮಾಣವಾಗಲಿರುವ ನಂದಿ ರೈಲು ನಿಲುಗಡೆ ತಾಣ

ನಂದಿ ರೈಲು ನಿಲ್ದಾಣ ಮರು ನಿರ್ಮಾಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿ ರೈಲು ನಿಲುಗಡೆ ತಾಣವನ್ನು ಪಾರಂಪರಿಕ ನಿಲ್ದಾಣವಾಗಿ ಮರು ನಿರ್ಮಾಣ ಮಾಡುವ ಮಹತ್ವಾಕಾಂಕ್ಷೆ ಕಾರ್ಯಕ್ಕೆ ಶುಕ್ರವಾರ ಚಾಲನೆ ದೊರೆತಿದೆ.

108 ವರ್ಷಗಳಷ್ಟು ಹಳೆಯದಾದ ನಿಲ್ದಾಣವನ್ನು ಇನ್‌ಟ್ಯಾಕ್ (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಆ್ಯಂಡ್ ಕಲ್ಚರಲ್ ಹೆರಿಟೇಜ್) ಸಹಯೋಗದಲ್ಲಿ ಮರು ನಿರ್ಮಾಣ ಮಾಡಲಾಗುತ್ತಿದೆ.

ಈ ನಿಲ್ದಾಣದ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಪಾರಂಪರಿಕ ಮೌಲ್ಯ ಹೆಚ್ಚಿಸಲು ನೈರುತ್ಯ ರೈಲ್ವೆ ಉದ್ದೇಶಿಸಿದೆ. ಒಂದು ವರ್ಷದ ಅವಧಿಯಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಲಹಂಕ- ಚಿಕ್ಕಬಳ್ಳಾಪುರ- ಕೋಲಾರ ಮಾರ್ಗದಲ್ಲಿ ನಂದಿ ಹಾಲ್ಟ್ ಸ್ಟೇಷನ್ ಸೇರಿದಂತೆ ದೇವನಹಳ್ಳಿ, ದೊಡ್ಡಜಾಲ, ಆವತಿಹಳ್ಳಿ ರೈಲ್ವೆ ನಿಲ್ದಾಣಗಳ ನವೀಕರಣವನ್ನೂ ನೈರುತ್ಯ ರೈಲ್ವೆ ಕೈಗೆತ್ತಿಕೊಂಡಿದೆ ಎಂದು ವಿವರಿಸಿದರು.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್, ಇನ್‌ಟ್ಯಾಕ್ ಸಂಚಾಲಕಿ ಮೀರಾ ಅಯ್ಯರ್, ಸಹ ಸಂಚಾಲಕ ಸಿ. ಅರವಿಂದ್ ಇದ್ದರು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಕಾಕ್ಸ್ ಟೌನ್, ಬೆಂಗಳೂರು	2500 ಚ.ಅಡಿಗಳು
ಶೇಷಾದ್ರಿಪುರಂ, ಬೆಂಗಳೂರು	3500 ಚ.ಅಡಿಗಳು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **22–05–2023 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು
ದಿನಾಂಕ : 29–04–2023

ಸಹಿ/–
ಸಹಾಯಕ ಮಹಾ ಪ್ರಬಂಧಕರು



ಜಯನಗರ ವಿಧಾನಸಭಾ ಕ್ಷೇತ್ರ ಅಭ್ಯರ್ಥಿಗಳು ಏನಂತಾರೆ..?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಆರ್. ಮಂಜುನಾಥ್** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಸಿ.ಕೆ. ರಾಮಮೂರ್ತಿ (ಬಿಜೆಪಿ)

ಬ್ರ್ಯಾಂಡ್ ಜಯನಗರ ಮರುಸೃಷ್ಟಿಗೆ ಒತ್ತು

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಜಯನಗರ ವಿಧಾನಸಭೆ ಕ್ಷೇತ್ರದ ಜನತೆ ಯಾವಾಗಲೂ ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ. ಕಳೆದ ಬಾರಿ ಕಾಂಗ್ರೆಸ್–ಜೆಡಿಎಸ್ ಒಂದಾಗಿದ್ದರಿಂದ ನಮಗೆ ಅಲ್ಪ ಹಿನ್ನಡೆಯಾಯಿತು. ಇದರಿಂದ ಕ್ಷೇತ್ರದ ಅಭಿವೃದ್ಧಿ 10 ವರ್ಷ ಹಿಂದಕ್ಕೆ ಹೋಗಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಏಳೆಂಟು ಕೊಳೆಗೇರಿಗಳಲ್ಲಿ ಹಕ್ಕುಪತ್ರಗಳನ್ನೇ ವಿತರಿಸಿಲ್ಲ. ನಾಲ್ಕು ಸಾವಿರ ಹಕ್ಕುಪತ್ರ ವಿತರಿಸುವ ಗುರಿ ಹೊಂದಲಾಗಿದೆ. ಶಾಲೆಗಳಲ್ಲಿ ಮೂಲಸೌಕರ್ಯ ಕೊರತೆ ಇದ್ದೇ ಇದೆ. ಕ್ಷೇತ್ರಕ್ಕೆ ಹೈಟೆಕ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗುವುದು. ಈಗಿರುವ ಶಾಸಕರು ಜನರಿಗೆ ಸಿಗುತ್ತಿಲ್ಲ. ನಾನು ಜನರೊಂದಿಗಿದ್ದೇನೆ, ಅದನ್ನೇ ಮುಂದುವರಿಸಲಿದ್ದೇನೆ. ಮಹಿಳೆಯರಿಗೆ ಸುರಕ್ಷತೆಯ ಖಾತರಿಗೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಮೆರುಗನ್ನು ಮತ್ತೆ ತಂದುಕೊಡಲಿದ್ದೇನೆ.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?



ಶಾಸಕರಾಗಿದ್ದ ವಿಜಯಕುಮಾರ್ ಅವರ ಕನಸನ್ನು ನನಸು ಮಾಡುವ ಗುರಿ ಇದೆ. ಜಯನಗರ ಕ್ಷೇತ್ರದಲ್ಲಿ ಬಹುತೇಕ ಬಿಜೆಪಿಯ ಕಾರ್ಪೊರೇಟರ್‌ಗಳಿದ್ದರು. ಅವರೆಲ್ಲ ನನಗೆ ಬೆಂಬಲ ಸೂಚಿಸಿ ಕೆಲಸ ಮಾಡುತ್ತಿದ್ದಾರೆ. ನಾನು ಮತ್ತು ನನ್ನ ಪತ್ನಿ ಸೇರಿದಂತೆ ಮೂರು ಬಾರಿ ಇಲ್ಲಿ ಕಾರ್ಪೊರೇಟರ್ ಆಗಿ ಸ್ಥಳೀಯ ಜನರಿಗೆ ಸ್ಪಂದಿಸಿದ್ದೇವೆ, ಸ್ಪಂದಿಸುತ್ತಿದ್ದೇವೆ. ‘ನಮ್ಮ ಜಯನಗರ’ವನ್ನು ‘ಬ್ರ್ಯಾಂಡ್ ಜಯನಗರ’ವನ್ನಾಗಿ ಮಾಡುವ ಸಂಕಲ್ಪ ತೊಟ್ಟಿದ್ದು, ಕ್ಷೇತ್ರಕ್ಕಾಗಿ ಪ್ರಣಾಳಿಕೆ ಮಾಡಲಾಗಿದೆ. ಬಿಜೆಪಿಗೆ ಮತದಾರರು ಸಮಗ್ರವಾಗಿ ಬೆಂಬಲ ನೀಡಲಿದ್ದಾರೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಕ್ಷೇತ್ರದಲ್ಲಿ ಕಾಂಗ್ರೆಸ್ ಮಾತ್ರ ನಮ್ಮ ಎದುರಾಳಿ.

ಸೌಮ್ಯಾರೆಡ್ಡಿ (ಕಾಂಗ್ರೆಸ್)

ಭ್ರಷ್ಟಾಚಾರರಹಿತ ಅಭಿವೃದ್ಧಿಗೆ ಜನರ ಬೆಂಬಲ

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಐದು ವರ್ಷದಲ್ಲಿ ತುಂಬಾ ಅಭಿವೃದ್ಧಿ ಕೆಲಸಗಳು ಆಗಿವೆ. ರಸ್ತೆ, ಒಳಚರಂಡಿ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡಿದ್ದೇವೆ. ನಮ್ಮ ಸರ್ಕಾರ ಇದ್ದಾಗ, ಸಾಕಷ್ಟು ಹಣವನ್ನು ಬಿಡುಗಡೆ ಮಾಡಿಸಿಕೊಂಡು ಕೆಲಸ ಮಾಡಿದ್ದೇವೆ. ಹಸಿರನ್ನು ಉಳಿಸಿ ಬೆಳೆಸಲು ಉದ್ಯಾನಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಕೋವಿಡ್ ಸಮಯದಲ್ಲಿ ಜನರಿರುವಲ್ಲಿ ಎಲ್ಲ ಸಾಮಗ್ರಿಗಳನ್ನು ಒದಗಿಸಿದ್ದೇವೆ. ಸರ್ಕಾರದಿಂದ ಯಾವುದೇ ನೆರವು ಸಿಗದಿದ್ದರೂ, ಜನರಿಗೆ ತೊಂದರೆಯಾಗದಂತೆ ನೋಡಿಕೊಂಡಿದ್ದೇವೆ. 13 ಶಾಲೆಗಳನ್ನು ಉನ್ನತೀಕರಿಸುವ ಕೆಲಸವನ್ನು ಸರ್ಕಾರದ ನೆರವಿಲ್ಲದೆ, ಸಿಎಸ್‌ಆರ್ ನಿಧಿಯಿಂದ ಮಾಡಿಸಿದ್ದೇವೆ. ಅಲ್ಲದೆ, ಆರೋಗ್ಯ ಕ್ಷೇತ್ರದಲ್ಲಿ ಆಸ್ಪತ್ರೆಗಳಿಗೆ ಉಪಕರಣಗಳನ್ನು ಖಾಸಗಿ ಸಹಕಾರ ಹಾಗೂ ಶಾಸಕರ ನಿಧಿಯಿಂದ ಒದಗಿಸಲಾಗಿದೆ.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?

ಬಿಜೆಪಿ ಸರ್ಕಾರದಿಂದ ನೆರವು ಹೆಚ್ಚಾಗಿ ಸಿಗದಿದ್ದರೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ನಮ್ಮ ಸರ್ಕಾರ ಇದ್ದಾಗ ಮಾಡಿದ್ದ ಉದ್ಯೋಗ ಮೇಳ ಬಿಟ್ಟರೆ ನಂತರ ಕೆಲಸವಾಗಿಲ್ಲ. ಆದರೂ ವೈಯಕ್ತಿಕವಾಗಿ ಅನುಕೂಲ ಮಾಡಿಕೊಡಲಾಗುತ್ತದೆ. ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡದಂತೆ ಕೆಲಸಗಳು ನಡೆಯುತ್ತಿವೆ. ಮಹಿಳೆಯರ ಸುರಕ್ಷತೆಗೆ ಕ್ರಮಕೈಗೊಳ್ಳಲಾಗಿದೆ. ಜಯನಗರ ಕಾಂಪ್ಲೆಕ್ಸ್ ಮರು-ಅಭಿವೃದ್ಧಿಯಾಗುತ್ತಿದೆ. ಜನರೊಂದಿಗೆ ಬೆರತು ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ. ಬ್ರ್ಯಾಂಡ್ ಬೆಂಗಳೂರು ಎಂದರೆ ಎಲ್ಲ ಪ್ರದೇಶಗಳೂ ಅಭಿವೃದ್ಧಿಯಾಗಬೇಕು. ಅದಕ್ಕೆ ಜನರ ಬೆಂಬಲ ಸಿಗಲಿದೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಬಿಜೆಪಿ ಹಾಗೂ ಜೆಡಿಎಸ್ ಸೇರಿದಂತೆ ಜಯನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಎದುರಾಳಿಗಳು ಇಲ್ಲ.

ಕಾಳೇಗೌಡ (ಜೆಡಿಎಸ್)

ಹೊಂದಾಣಿಕೆ ಇಲ್ಲದ ಹೋರಾಟ

● ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಜಯನಗರ ವಿಧಾನಸಭೆ ಕ್ಷೇತ್ರವನ್ನು ಪ್ರತಿಷ್ಠಿತ ಬಡಾವಣೆಗಳನ್ನು ಒಳಗೊಂಡಿದೆ. ಆದರೆ ಇಲ್ಲಿ ಕೊಳೆಗೇರಿಗಳಲ್ಲಿ ಕೆಲಸವೇ ಆಗಿಲ್ಲ. ಜೆ.ಪಿ. ನಗರ, 3ನೇ ಬ್ಲಾಕ್, ಬಂಡೆ, ತಿಲಕನಗರದಲ್ಲಿರುವ ಕೊಳೆಗೇರಿಗಳಲ್ಲಿ ಮನೆಗಳಿಗೆ ಮೂಲಸೌಕರ್ಯವಿಲ್ಲ. ಒಳಚರಂಡಿ ನೀರು ರಸ್ತೆಯಲ್ಲೇ ಹರಿಯುತ್ತಿರುತ್ತದೆ. ವಿದ್ಯುತ್, ಕುಡಿಯುವ ನೀರಿನ ಸಮಸ್ಯೆಗಳು ಇಲ್ಲಿವೆ. ಕೊಳೆಗೇರಿಗಳಲ್ಲಿ ಶಾಲೆಯನ್ನು ಸ್ಥಾಪಿಸುವ ಗುರಿ ಇದೆ. ಜಯನಗರದಲ್ಲಿ ಆಸ್ಪತ್ರೆಗಳಿದ್ದರೂ ಅಲ್ಲಿ ಸಾಲು ಸಾಲು ಜನರಿರುತ್ತಾರೆ. ಹೀಗಾಗಿ, ಸ್ಥಳೀಯರಿಗಾಗಿ ಮತ್ತಷ್ಟು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸಬೇಕಿದೆ. ಈಗಿನ, ಆಗಿನ ಶಾಸಕರು ಮಾಡಲಿಲ್ಲ ಎಂಬುದಕ್ಕಿಂತ ನಾನು ಮಾಡುತ್ತೇನೆ ಎಂದು ಜನರಿಗೆ ಭರವಸೆ ನೀಡುತ್ತಿದ್ದೇನೆ.

● ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?

ಕಳೆದ ಬಾರಿಯೇ ಕ್ಷೇತ್ರದ ಜನರಿಗೆ ನನ್ನ ಮೇಲೆ ಒಲವಿತ್ತು. ಆದರೆ ರಾಜ್ಯಮಟ್ಟದಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಇದ್ದುದ್ದರಿಂದ ನಾನು ಸ್ಪರ್ಧೆಯಿಂದ ಹಿಂದೆ ಸರಿದೆ. ಕ್ಷೇತ್ರದಾದ್ಯಂತ ಸಂಚರಿಸಿ ಜನರ ಸಮಸ್ಯೆಗಳನ್ನು ಅರಿತುಕೊಂಡಿದ್ದೇನೆ. ಪ್ರತಿಷ್ಠಿತ ಬಡಾವಣೆಗಳ ಜೊತೆಗೆ ಸಾಮಾನ್ಯ ಜನತೆಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಿಕೊಡುವ ಭರವಸೆ ನೀಡಿದ್ದೇನೆ. ಈ ಸೌಕರ್ಯಗಳನ್ನು ಒದಗಿಸಬೇಕೆಂಬ ನನ್ನ ಉದ್ದೇಶಕ್ಕೆ ಜನರ ಸಹಕಾರ ದೊರೆಯುತ್ತಿದೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಜಯನಗರದಲ್ಲಿ ಜೆಡಿಎಸ್‌ಗೆ ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಎದುರಾಳಿಗಳು. ಆದರೆ, ಅವರಿಬ್ಬರನ್ನೂ ದೂರವಿರಿಸಿ ಜೆಡಿಎಸ್‌ಗೆ ಈ ಬಾರಿ ಜನರು ಅವಕಾಶ ಮಾಡಿಕೊಡಲಿದ್ದಾರೆ.

1. ಬಸವೇಶ್ವರನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಅವರ ಪರವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರೋಡ್ ಶೋ ನಡೆಸಿದರು 2. ಯಶವಂತಪುರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಜವರಾಯಿಗೌಡ ಅವರ ಪರವಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ.ಕುಮಾರಸ್ವಾಮಿ ಪ್ರಚಾರ ಮಾಡಿದರು 3. ಹೆಬ್ಬಾಳ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬೈರತಿ ಸುರೇಶ್ ಪರವಾಗಿ ಅವರ ಪತ್ನಿ ಪದ್ಮಾವತಿ ಅವರು ಹನುಮಯ್ಯ ಲೇಔಟ್‌ನಲ್ಲಿ ಮತ ಯಾಚಿಸಿದರು – ಪ್ರಜಾವಾಣಿ ಚಿತ್ರಗಳು

‘ಕಾಸಿಗಾಗಿ ಸುದ್ದಿ’ ಪ್ರಕಟಿಸುವುದಿಲ್ಲ

ಆರಂಭದಿಂದಲೂ ಓದುಗರಿಗೆ ತನ್ನ ಬದ್ಧತೆಯನ್ನು ಹೊಂದಿರುವ ‘ಪ್ರಜಾವಾಣಿ’, ಕರ್ನಾಟಕ ವಿಧಾನಸಭೆ ಚುನಾವಣೆಯ ಈ ಸಂದರ್ಭದಲ್ಲಿಯೂ ‘ಕಾಸಿಗಾಗಿ ಸುದ್ದಿ’ಯನ್ನು ಪ್ರಕಟಿಸುವುದಿಲ್ಲ. ಸುದ್ದಿಯನ್ನೇ ಹೋಲುವಂತೆ ವಿನ್ಯಾಸಗೊಳಿಸಿದ ಜಾಹೀರಾತು ಪ್ರಕಟಿಸುವಾಗ ಅದರ ಜೊತೆಗೆ ‘ಜಾಹೀರಾತು/ಪಿವಿ ಬ್ರ್ಯಾಂಡ್ ಪ್ರಸ್ತುತಿ’ ಎಂಬ ಮಾಹಿತಿಯೂ ಇರುತ್ತದೆ.

‘ಪ್ರಜಾವಾಣಿ’ಯಲ್ಲಿ ಸುದ್ದಿ ಅಥವಾ ಛಾಯಾಚಿತ್ರ ಪ್ರಕಟಣೆಗೆ ಯಾರಾದರೂ ನಿಮ್ಮಲ್ಲಿ ಹಣ ಕೇಳಿದರೆ ಅಥವಾ ಹೀಗೆ ಕೇಳುವುದು ನಿಮ್ಮ ಗಮನಕ್ಕೆ ಬಂದರೆ ತಕ್ಷಣ ಇಲ್ಲಿ ನೀಡಿರುವ ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸ ಅಥವಾ ಅಂಚೆ ವಿಳಾಸಕ್ಕೆ ಮಾಹಿತಿ ನೀಡಿ.

ಇ–ಮೇಲ್: **electionwatch@prajavani.co.in**

ವಿಳಾಸ: ಕಾರ್ಯನಿರ್ವಾಹಕ ಸಂಪಾದಕ, ‘ಪ್ರಜಾವಾಣಿ’, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001

ಮೊಬೈಲ್ ಸಂಖ್ಯೆ

ಸುದೇಶ ದೊಡ್ಡಪಾಳ್ಯ, ಸುದ್ದಿ ಸಂಪಾದಕ
ದೂರವಾಣಿ ಸಂಖ್ಯೆ: **96069 87944**

ವೈ.ಗ.ಜಗದೀಶ್, ವರದಿಗಾರರ ವಿಭಾಗದ ಮುಖ್ಯಸ್ಥ
ದೂರವಾಣಿ ಸಂಖ್ಯೆ: **99866 80231**

ಯಲಹಂಕ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮುನೇಗೌಡ ಪರವಾಗಿ ಜೆಡಿಎಸ್ ವರಿಷ್ಠ ಎಚ್‌ಡಿ.ದೇವೇಗೌಡ ಪ್ರಚಾರ ನಡೆಸಿದರು

ಬಸವನಗುಡಿಯಲ್ಲಿ ರೋಡ್ ಶೋ ನಡೆಸಲು ಬರುತ್ತಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮೌಂಟ್ ಜಾಯ್ ರಸ್ತೆಯಲ್ಲಿ ಸ್ವಾಗತಿಸಲು ಕಾಂಗ್ರೆಸ್ ಅಭ್ಯರ್ಥಿ ಯು.ಬಿ.ವೆಂಕಟೇಶ್ ಮತ್ತು ಬೆಂಬಲಿಗರು ಕಾಯುತ್ತಿದ್ದರು. ಇದೇ ರಸ್ತೆಯಲ್ಲಿ ಪ್ರಚಾರ ನಡೆಸಲು ಬಿಜೆಪಿ ಅಭ್ಯರ್ಥಿ ರವಿ ಸುಬ್ರಹ್ಮಣ್ಯ ಬಂದರು. ಆಕಸ್ಮಿಕ ಭೇಟಿಯಿಂದ ಇಬ್ಬರೂ ಪುಳಕಿತರಾದ ಸಂದರ್ಭ

ಬಸವನಗುಡಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್ ಅವರು ಪ್ರಚಾರದ ಸಂದರ್ಭದಲ್ಲಿ ಮಗುವಿಗೆ ಚಾಕೊಲೇಟ್ ನೀಡಿದರು

ಪ್ರಚಾರ: ರೋಡ್ ಶೋ ರಂಗು

ಮತದಾರರ ಒಲವು ಗಳಿಸಲು ಅಭ್ಯರ್ಥಿಗಳ ಕಸರತ್ತು: ಮನೆ, ಮನೆಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನದ ದಿನಾಂಕ ಸಮೀಪಿಸುತ್ತಿರುವುದರಿಂದ ಪ್ರಚಾರ ದಿನದಿಂದ ದಿನಕ್ಕೆ ರಂಗು ಪಡೆದುಕೊಳ್ಳುತ್ತಿದೆ.

ಅಭ್ಯರ್ಥಿಗಳ ಪರವಾಗಿ ಮೂರು ಪಕ್ಷಗಳ ನಾಯಕರು ಶುಕ್ರವಾರ ರೋಡ್‌ಶೋ ನಡೆಸಿದರು. ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಯಲಹಂಕ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮುನೇಗೌಡ ಅವರ ಪರವಾಗಿ ಪ್ರಚಾರ ನಡೆಸಿದರು. ಯಶವಂತಪುರ ಕ್ಷೇತ್ರದಲ್ಲಿ ಜವರಾಯಿಗೌಡ ಅವರ ಪರವಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ರೋಡ್ ಶೋ ನಡೆಸಿದರು.

ರಾಜಾಜಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಪರವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರೋಡ್ ಶೋ ಮಾಡಿದರು. ಬಸವೇಶ್ವರನಗರ ವಾರ್ಡ್‌ನಲ್ಲಿ ಬೆಂಬಲಿಗರೊಂದಿಗೆ ತೆರೆದ ಜೀಪ್‌ನಲ್ಲಿ ತೆರಳಿದರು. ಈ ಸಂದರ್ಭದಲ್ಲಿ ಅಭಿಮಾನಿಗಳು ಹೂಮಳೆ ಸುರಿಸಿದರು.

ಗಾಂಧಿನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ಅವರ ಪರವಾಗಿ ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ರೋಡ್ ಶೋ ನಡೆಸಿದರು. ಓಕಳಿಪುರದಲ್ಲಿ ತೆರೆದ ಜೀಪ್‌ನಲ್ಲಿ ತೆರಳಿದ ಅಣ್ಣಾಮಲೈಗೆ ಬೆಂಬಲಿಗರು ಹೂಮಳೆ ಸುರಿಸಿದರು.

ಇನ್ನೊಂದೆಡೆ ಹೆಬ್ಬಾಳ ಕ್ಷೇತ್ರದಲ್ಲಿ ಬೈರತಿ ಸುರೇಶ್ ಅವರು ಚಾಮುಂಡಿನಗರ, ಸೆಂಟ್ರಲ್ ಎಕ್ಸೈಸ್ ಲೇಔಟ್, ಭೂಪಸಂದ್ರ ಮುಖ್ಯ ರಸ್ತೆಯಲ್ಲಿ ಬೆಂಬಲಿಗರೊಂದಿಗೆ ಪ್ರಚಾರ ನಡೆಸುತ್ತಿದ್ದರೆ, ಅವರ ಪತ್ನಿ ಪದ್ಮಾವತಿ ಅವರು ಪ್ರತ್ಯೇಕವಾಗಿ ಮಠದಹಳ್ಳಿ, ಆದಿಕಬೀರ್ ಆಶ್ರಮ, ಟಿವಿ ಟವರ್ ಹಿಂಭಾಗದ ರಸ್ತೆಯಲ್ಲಿ ಮತಯಾಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೈರತಿ ಸುರೇಶ್, ‘ಈ ಬಾರಿ ಮತ್ತೆ ಶಾಸಕನಾಗಿ ಆಯ್ಕೆಯಾದರೆ ಕ್ಷೇತ್ರದಲ್ಲಿ 200 ಹಾಸಿಗೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗುವುದು. 15 ವರ್ಷಗಳಿಂದ ಕೊಳಗೇರಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸುತ್ತೇನೆ’ ಎಂದು ಭರವಸೆ ನೀಡಿದರು.

ಸುರೇಶ್ ಅವರ ಪುತ್ರ ಸಂಜಯ್ ಸುರೇಶ್ ಅವರು ಚಾಮುಂಡಿ ನಗರ ಹಾಗೂ ಸೆಂಟ್ರಲ್ ಎಕ್ಸೈಸ್ ಲೇಔಟ್, ಭೂಪಸಂದ್ರ ಮುಖ್ಯ ರಸ್ತೆಗಳಲ್ಲಿ ತಂದೆಯ ಪರ ಪ್ರಚಾರ ಮಾಡಿದರು.

ಗಾಂಧಿನಗರದ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ಅವರ ಪರವಾಗಿ ಅಣ್ಣಾಮಲೈ ಅವರು ಓಕಳಿಪುರದಲ್ಲಿ ರೋಡ್‌ಶೋ ನಡೆಸಿದರು. ಈ ಸಂದರ್ಭದಲ್ಲಿ ಅವರ ಕೈ ಕುಲುಕಲು ಅಭಿಮಾನಿಗಳು ಮುಗಿಬಿದ್ದರು. ಸಂಸದ ಪಿ.ಸಿ. ಮೋಹನ್ ಇದ್ದರು

> **ಗಾಂಧಿನಗರದಲ್ಲಿ ಈ ಬಾರಿ ಬದಲಾವಣೆಯ ಗಾಳಿ ಬೀಸುತ್ತಿದ್ದು, ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ಅವರ ಗೆಲುವು ಸೂರ್ಯ ಚಂದ್ರರಷ್ಟೇ ಖಚಿತ.**
> **ಅಣ್ಣಾಮಲೈ**
> ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ

ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದ ಅಂಗವಾಗಿ ಬಿಎಂಟಿಸಿಯಿಂದ ಶುಕ್ರವಾರ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಿಬಿಎಂಪಿ ದಕ್ಷಿಣ ವಲಯ ಉಪ ಆಯುಕ್ತರಾದ ಲಕ್ಷ್ಮಿ, ಬಿಎಂಟಿಸಿ ನಿರ್ದೇಶಕ(ಮಾಹಿತಿ ತಂತ್ರಜ್ಞಾನ) ಎ.ವಿ.ಸೂರ್ಯಸೇನ್, ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ, ಬಿಬಿಎಂಪಿ ವಿಶೇಷ ಆಯುಕ್ತ(ಹಣಕಾಸು) ಜಯರಾಂ ರಾಯಪುರ ಪಾಲ್ಗೊಂಡಿದ್ದರು

ಬಸವನಗುಡಿ: ಸಾರ್ವಜನಿಕ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಪ್ರಶ್ನೆ

ತಿಂದವರನ್ನು ಇ.ಡಿ, ಸಿಬಿಐ ಹಿಡಿಯಲ್ಲ ಏಕೆ?

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ‘ತಿನ್ನೊಲ್ಲ, ಬೇರೆಯವರಿಗೂ ತಿನ್ನೋಕೆ ಬಿಡೊಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆದರೆ, ಇಲ್ಲಿ ಅವರ ಪಕ್ಕದಲ್ಲಿ ಕುಳಿತುಕೊಂಡವರೇ ತಿನ್ನುತ್ತಿದ್ದಾರೆ. ಶಾಸಕರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ, ಅವರ ಮಗ ಹಣ ಲೂಟಿ ಮಾಡಿದ್ದಾರೆ. ಯಾಕೆ ಅವರನ್ನು ಹಿಡಿಯುತ್ತಿಲ್ಲ. ಎಲ್ಲಿ ಹೋಗಿದೆ ಇ.ಡಿ, ಸಿಬಿಐ? ಇದಕ್ಕೆಲ್ಲ ಉತ್ತರ ನೀಡಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

‘ಸಣ್ಣಪುಟ್ಟವರನ್ನು ಹಿಡಿಯಲು ಇ.ಡಿ ಬಳಸುತ್ತಾರೆ. ಬಿಜೆಪಿ ಶಾಸಕ ವಿರೂಪಾಕ್ಷಪ್ಪ ಪುತ್ರ ₹8 ಕೋಟಿ ಲಂಚ ಪಡೆದು ಸಿಕ್ಕಿಬಿದ್ದಿದ್ದಾರೆ. ಇವರನ್ನು ಯಾಕೆ ಇ.ಡಿ ಅವರು ಜೈಲಿಗೆ ಹಾಕಿಲ್ಲ ಯಾಕೆ’ ಎಂದು ಪ್ರಶ್ನಿಸಿದರು.

ಬಸವನಗುಡಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ರ‍್ಯಾಲಿ ನಡೆಸಿದ ನಂತರ ಶ್ರೀನಗರ ಬಸ್ ನಿಲ್ದಾಣದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶುಕ್ರವಾರ ಅವರು ಮಾತನಾಡಿದರು.

‘ಎಲ್ಲೇ ಹೋದರೂ ನಮ್ಮನ್ನು ಕೇಳುವ ಮಾತೆಂದರೆ, ‘ಶೇ 40ರಷ್ಟು ಕಮಿಷನ್ ತೆಗೆದುಕೊಳ್ಳುವ ಸರ್ಕಾರ ನಿಮ್ಮಲ್ಲಿದೆಯೇ?’ ಎಂದು ಕೇಳುತ್ತಾರೆ. ಯಾವುದೇ ಕೆಲಸವಾಗಬೇಕಾದರೂ ಇಲ್ಲಿ ಹಣ ನೀಡಬೇಕಾಗಿದೆ. ಹಣ ಇಲ್ಲದೆ ಇವರು, ಶಾಸಕರು, ಸರ್ಕಾರ ಕೆಲಸ ಮಾಡುವುದಿಲ್ಲ. ಕಮಿಷನ್ ಪಡೆಯುತ್ತಿರುವ ಬಗ್ಗೆ ಗುತ್ತಿಗೆದಾರರು ಬರವಣಿಗೆಯಲ್ಲಿ ದೂರು ಕೊಟ್ಟಿದ್ದಾರೆ. ರಾಷ್ಟ್ರಪತಿ, ಪ್ರಧಾನಿ, ಗೃಹ ಸಚಿವ, ರಾಜ್ಯಪಾಲರು ಹಾಗೂ ಲೋಕಾಯುಕ್ತರಿಗೆ ಮನವಿ ನೀಡಿದರೂ ಕ್ರಮವಾಗಿಲ್ಲ’ ಎಂದರು.

‘ಗುಜರಾತ್‌ನ ಸಂಸದ ನಾರಾಯಣ ಭಾಯ್ ಕಚಾಡಿಯಾ ಅವರು ದಲಿತ ವೈದ್ಯನಿಗೆ ಕಪಾಳಮೋಕ್ಷ ಮಾಡಿದ ಪ್ರಕರಣದಲ್ಲಿ ಅವರಿಗೆ 3 ವರ್ಷ 10 ತಿಂಗಳು ಶಿಕ್ಷೆಯಾಯಿತು. ಅವರನ್ನು ಅನರ್ಹಗೊಳಿಸಲಿಲ್ಲ. ಮತ್ತೆ 2019ರಲ್ಲಿ ಚುನಾವಣೆಗೆ ನಿಂತು ಗೆದ್ದಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರಿಗೆ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಶಿಕ್ಷೆ ಆದಾಗ, ಅವರನ್ನು ಒಂದೇ ದಿನದಲ್ಲಿ ಅನರ್ಹ ಮಾಡಿದರು. ಮನೆ ಖಾಲಿ ಮಾಡಿಸಿದರು. ಅವರಿಗೆ ಸ್ವಂತ ಮನೆಯೂ ಇಲ್ಲ’ ಎಂದರು.

‘ನಿರುದ್ಯೋಗ ಸಮಸ್ಯೆ ಗರಿಷ್ಠ ಮಟ್ಟಕ್ಕೆ ಏರಿದೆ. ಪ್ರತಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗುತ್ತಿದೆ. ಎಲ್ಲಾ ವಸ್ತುಗಳ ಮೇಲೆ ಜಿಎಸ್‌ಟಿ ಹಾಕಿದ್ದಾರೆ. ಗಾಳಿ ಒಂದು ಬಿಟ್ಟು ಉಳಿದ ಎಲ್ಲದಕ್ಕೂ ಜಿಎಸ್‌ಟಿ ವಿಧಿಸಿದ್ದಾರೆ. ಮುಂದೆ ಗಾಳಿಗೂ ಜಿಎಸ್‌ಟಿ ವಿಧಿಸಬಹುದು’ ಎಂದು ವ್ಯಂಗ್ಯ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಯು.ಬಿ. ವೆಂಕಟೇಶ್, ಮಾಜಿ ಮೇಯರ್‌ಗಳಾದ ಕೆ. ಚಂದ್ರಶೇಖರ್, ವೆಂಕಟೇಶ ಮೂರ್ತಿ, ಕೆ.ಎಂ. ನಾಗರಾಜು ಇದ್ದರು.

ಚುನಾವಣಾ ಆಯೋಗ ನಿಷ್ಕ್ರಿಯ: ವಾಟಾಳ್

ಪ್ರಜಾವಾಣಿ ವಾರ್ತೆ



ವಾಟಾಳ್ ನಾಗರಾಜ್

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರಿಗೆ ಗರಿಷ್ಠ ವೆಚ್ಚದ ಮಿತಿ ₹ 40 ಲಕ್ಷ ನಿಗದಿಪಡಿಸಲಾಗಿದೆ. ಆದರೆ, ನಾಮಪತ್ರ ಸಲ್ಲಿಸುವ ಅವಧಿಯಲ್ಲಿಯೇ ಅಭ್ಯರ್ಥಿಗಳು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಮೆರವಣಿಗೆ ನಡೆಸಿದ್ದಾರೆ. ಇದನ್ನು ಕಂಡು ಕಾಣದಂತೆ ವರ್ತಿಸುತ್ತಿರುವ ಚುನಾವಣಾ ಆಯೋಗ ಸತ್ತು ಹೋಗಿದೆ’ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಈ ಬಾರಿ ಚುನಾವಣೆಯಲ್ಲಿ ಚಾಮರಾಜನಗರ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿರುವ ಅವರು, ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ‘ಈಗ ಚುನಾವಣೆ ವ್ಯಾಪಾರವಾಗಿದೆ. ಮೂರೂ ಪ್ರಮುಖ ರಾಜಕೀಯ ಪಕ್ಷಗಳು ಹಣದ ಆಧಾರದಲ್ಲಿ ರಾಜಕೀಯ ಮಾಡುತ್ತಿವೆ. ಅಭ್ಯರ್ಥಿಗಳು ತಮ್ಮ ಬಲ ಪ್ರದರ್ಶಿಸಲು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇದು ಸಂವಿಧಾನಬದ್ಧವಾಗಿ ನಡೆಯುತ್ತಿರುವ ಚುನಾವಣೆಯಲ್ಲ. ಚುನಾವಣಾ ಆಯೋಗ ಸ್ವತಂತ್ರವಾಗಿದ್ದರೆ ಕೂಡಲೇ ಈ ಚುನಾವಣೆಯನ್ನು ರದ್ದು ಮಾಡಬೇಕು’ ಎಂದು ಆಗ್ರಹಿಸಿದರು.

‘ಬೆಂಗಳೂರಿಗೆ ದಿನಕ್ಕೆ 35 ಹೆಲಿಕಾಪ್ಟರ್‌ಗಳು ವಿವಿಧೆಡೆಯಿಂದ ಬರುತ್ತಿವೆ. ಇವುಗಳ ಬಾಡಿಗೆ ಹಣವನ್ನೂ ಅಭ್ಯರ್ಥಿಗಳ ಲೆಕ್ಕದಲ್ಲಿ ತೋರಿಸಿ, ಅನರ್ಹ ಮಾಡಬೇಕು. ಚುನಾವಣೆಯನ್ನು ಶುದ್ಧಗೊಳಿಸುವ ಕೆಲಸ ತುರ್ತಾಗಿ ನಡೆಯಬೇಕು. ಅಭ್ಯರ್ಥಿಗಳು ಜೆಸಿಬಿಯ ಮೂಲಕ ಹಾರ ಹಾಕಿಸಿಕೊಳ್ಳುತ್ತಿದ್ದಾರೆ. ಇದು ನಮ್ಮ ಸಂಸ್ಕೃತಿಯೇ? ಹೆಣಗಳಿಗೂ ಆ ರೀತಿ ಹಾರವನ್ನು ಹಾಕುವುದಿಲ್ಲ. ಆಯೋಗಕ್ಕೆ ಚುನಾವಣೆ ವ್ಯವಸ್ಥೆ ಸುಧಾರಿಸಲು ಸಾಧ್ಯವಾಗದಿದ್ದರೆ ಕ್ಷೇತ್ರಗಳನ್ನು ಟೆಂಡರ್ ಕರೆದು, ಅಭ್ಯರ್ಥಿಗಳಿಗೆ ಹಂಚಲಿ. ಈ ರೀತಿಯ ವ್ಯವಸ್ಥೆಯಲ್ಲಿ ಸಾಮಾನ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಚಾಮರಾಜನಗರದ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಕಾವೇರಿ ನೀರನ್ನು ಒದಗಿಸುವಲ್ಲಿ ಶ್ರಮಿಸಿದ್ದೇನೆ. ಜೋಡಿ ರಸ್ತೆ, ಬಸವ ಭವನಕ್ಕೆ ಜಾಗ, ಹಳ್ಳಿಗಳಿಗೆ ಕುಡಿಯುವ ನೀರು ಸೇರಿ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿ ದ್ದೇನೆ. ಆದ್ದರಿಂದ ಜನರು ನನ್ನ ಕೈಹಿಡಿಯುತ್ತಾರೆ ಎಂಬ ವಿಶ್ವಾಸವಿದೆ’ ಎಂದರು.

ಇಂದು ನರೇಂದ್ರ ಮೋದಿಯಿಂದ ಪ್ರಚಾರ

ಪ್ರಧಾನಿ ಭೇಟಿ: ವಾಹನಗಳಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ನರೇಂದ್ರ ಮೋದಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಹಾಗೂ ಹಲವು ಗಣ್ಯರು ಶನಿವಾರ ನಗರದಲ್ಲಿ ಸಂಚರಿಸಲಿದ್ದು, ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟವನ್ನು ನಿರ್ಬಂಧಿಸಲಾಗಿದೆ. ಈ ಮಾರ್ಗದ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಗುವ ಸಾಧ್ಯತೆ ಇದ್ದು, ಜನರು ಪರ್ಯಾಯ ಮಾರ್ಗ ಬಳಸಬೇಕೆಂದು ಪೊಲೀಸರು ಕೋರಿದ್ದಾರೆ.

‘ಪ್ರಧಾನಿ ಹಾಗೂ ಗಣ್ಯರ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕಿದೆ. ಶನಿವಾರ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 7.30 ಗಂಟೆಯವರೆಗೆ ಹಲವು ರಸ್ತೆಗಳಲ್ಲಿ ಜನರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಜೊತೆಗೆ, ನಗರದ ಹೊರವಲಯ ರಸ್ತೆಗಳಲ್ಲಿ ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಮಾರ್ಗ ಬದಲಾವಣೆ ಮಾಡಲಾಗಿದೆ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿರ್ಬಂಧಿತ ರಸ್ತೆಗಳು: ಹಳೇ ವಿಮಾನ ನಿಲ್ದಾಣ ರಸ್ತೆ, ಕಬ್ಬನ್ ರಸ್ತೆ, ವಿಧಾನಸೌಧ ಎದುರು, ನೃಪತುಂಗ ರಸ್ತೆ, ದೇವಾಂಗ ರಸ್ತೆ, ಕೇಂಬ್ರಿಡ್ಜ್ ಬಡಾವಣೆ ರಸ್ತೆ, ಡಿಕೆನ್ಸನ್ ರಸ್ತೆ, ಲಾಲ್‌ಬಾಗ್ ಪಶ್ಚಿಮ ಗೇಟ್ ರಸ್ತೆ, ಕೆ.ಆರ್. ವೃತ್ತ, ಆರ್.ವಿ. ಕಾಲೇಜು ರಸ್ತೆ, ಲಾಲ್‌ಬಾಗ್ ಮುಖ್ಯರಸ್ತೆ, ಬಸವನಗುಡಿ 50 ಅಡಿ ರಸ್ತೆ.

ಸರಕು ಸಾಗಣೆ ವಾಹನಗಳ ಮಾರ್ಗ ಬದಲಾವಣೆ: ‘ಮಾಗಡಿ ಕಡೆಯಿಂದ ನಗರಕ್ಕೆ ಬರುವ ವಾಹನಗಳು, ತಾವರೆಕರೆ ಜಂಕ್ಷನ್–ಹೆಮ್ಮಿಗೆಪುರ–ಕೊಮ್ಮಘಟ್ಟ ಮೂಲಕ ಸಂಚರಿಸಬಹುದು. ತುಮಕೂರು ಕಡೆಯಿಂದ ಬರುವ ವಾಹನಗಳು, ಸೊಂಡೆಕೊಪ್ಪ–ತಾವರೆಕೆರೆ ಮೂಲಕ ಮುಂದಕ್ಕೆ ಸಾಗಬಹುದು. ನಾಯಂಡಹಳ್ಳಿ ಕಡೆಯಿಂದ ತುಮಕೂರು ರಸ್ತೆಗೆ ಹೋಗುವವವರು, ಕೆಂಗೇರಿ–ಆರ್.ಆರ್. ಕಾಲೇಜು–ರಾಮೋಹಳ್ಳಿ–ಚಂದ್ರಪ್ಪ ವೃತ್ತ–ತಾವರೆಕೆರೆ ಮೂಲಕ ಸಂಚರಿಸಬಹುದು. ಉಲ್ಲಾಳ್ ಜಂಕ್ಷನ್ ಮೂಲಕ ಉಲ್ಲಾಳ್ ವಿಲೇಜ್, ರಾಮಸಂದ್ರ, ಸೇತುವೆ, ಹೆಮ್ಮಿಗೆಪುರ, ತಾವರೆಕೆರೆ ಮಾರ್ಗವಾಗಿ ತುಮಕೂರು ರಸ್ತೆಗೆ ಸೇರಬಹುದು’ ಎಂದು ಪೊಲೀಸರು ಹೇಳಿದ್ದಾರೆ.

ಮನೆ, ಅಂಗಡಿ ಮಾಲೀಕರಿಗೆ ಸೂಚನೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ‘ರೋಡ್ ಶೋ’ ನಡೆಸಲಿರುವ ಪ್ರಮುಖ ರಸ್ತೆಗಳ ಅಕ್ಕ–ಪಕ್ಕದ ಮನೆ ಹಾಗೂ ಅಂಗಡಿಗಳ ಮಾಲೀಕರಿಗೆ ಪೊಲೀಸರು ಶುಕ್ರವಾರ ಕೆಲ ಸೂಚನೆ ನೀಡಿದ್ದಾರೆ.

ಮಾಗಡಿ ರಸ್ತೆಗೆ ಹೊಂದಿಕೊಂಡಿರುವ ನೈಸ್ ರಸ್ತೆಯಿಂದ ಸುಮನಹಳ್ಳಿ ಜಂಕ್ಷನ್‌ವರೆಗೆ ರೋಡ್ ಶೋ ನಡೆಯಲಿದೆ. ಪಶ್ಚಿಮ ವಿಭಾಗದ ಬ್ಯಾಡರಹಳ್ಳಿ ಹಾಗೂ ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆಯುವ ರೋಡ್ ಶೋಗೆ ಬಿಗಿ ಭದ್ರತೆ ಒದಗಿಸಲು ಪೊಲೀಸರು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವಂತೆ ಸ್ಥಳೀಯ ನಿವಾಸಿಗಳಿಗೆ ಸೂಚಿಸಿದ್ದಾರೆ.

‘ಮನೆಯ ಚಾವಣಿ ಹಾಗೂ ಬಾಲ್ಕನಿಗಳಲ್ಲಿ ಅಪರಿಚಿತರನ್ನು ಸೇರಿಸಿಕೊಳ್ಳಬಾರದು. ಮನೆ, ಕಚೇರಿ ಹಾಗೂ ಸುತ್ತಮುತ್ತ ಯಾರಾದರೂ ಅಪರಿಚಿತರು ಕಂಡುಬಂದರೆ ತಕ್ಷಣ ಠಾಣೆಗೆ ತಿಳಿಸಬೇಕು. ಯಾವುದಾದರೂ ಅನುಮಾನಾಸ್ಪದ ವಸ್ತುಗಳು ಕಂಡುಬಂದರೆ ಮಾಹಿತಿ ನೀಡಬೇಕು. ಕಂಪನಿ, ಕೈಗಾರಿಕೆ ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಹೆಸರು ಹಾಗೂ ವಿಳಾಸ ತಿಳಿಸಬೇಕು. ಸುರಕ್ಷತೆಗೆ ಧಕ್ಕೆ ಬರುವ ಸಂಗತಿ ಏನಾದರೂ ನಡೆದರೆ ಅಥವಾ ಇನ್ನಿತರ ಯಾವುದೇ ಮಾಹಿತಿ ಇದ್ದರೆ ಸಂಬಂಧಪಟ್ಟ ಠಾಣೆಗಳ ಅಧಿಕಾರಿಗಳ ಗಮನಕ್ಕೆ ತರಬೇಕು. ಎಲ್ಲ ಸೂಚನೆಗಳನ್ನು ಪಾಲಿಸಬೇಕು’ ಎಂದು ಪೊಲೀಸರು ತಿಳಿಸಿದ್ದಾರೆ.

ನಾಳೆ ಸಂಚಾರ ಮಾರ್ಗ ಬದಲಾವಣೆ

ರಾಮನಗರ: ಇದೇ 30ರಂದು ಚನ್ನಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಬಳಿ ಬಿಜೆಪಿ ಸಮಾವೇಶ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಅಂದು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಡಳಿತವು ಆದೇಶಿಸಿದೆ.

30ರಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಚನ್ನಪಟ್ಟಣದಿಂದ ಮದ್ದೂರುವರೆಗೆ ಹೆದ್ದಾರಿ ಬಂದ್ ಆಗಲಿದೆ. ಈ ಅವಧಿಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೊರಡುವ ವಾಹನಗಳು ಬಿಡದಿ-ಹಾರೋಹಳ್ಳಿ- ಕನಕಪುರ-ಮಳವಳ್ಳಿ ಮಾರ್ಗವಾಗಿ ಮೈಸೂರಿಗೆ ಪ್ರಯಾಣ ಮಾಡಬಹುದು.

ಮೈಸೂರಿನಿಂದ ಬೆಂಗಳೂರಿಗೆ ಹೋಗುವ ವಾಹನಗಳು ಮದ್ದೂರು- ಕುಣಿಗಲ್-ನೆಲಮಂಗಲ ಮಾರ್ಗವಾಗಿ ಬೆಂಗಳೂರಿಗೆ ತಲುಪಬಹುದು. ಮೈಸೂರು– ಬೆಂಗಳೂರು ನಡುವೆ ಪ್ರಯಾಣಿಸುವವರು ಮಳವಳ್ಳಿ, ಕನಕಪುರ, ಹಾರೋಹಳ್ಳಿ ಮಾರ್ಗವಾಗಿಯೂ ಓಡಾಡಬಹುದು.

ಶಾಂಘೈ ಸಹಕಾರ ಸಂಘಟನೆ ರಕ್ಷಣಾ ಸಚಿವರ ಸಮಾವೇಶದಲ್ಲಿ ರಾಜನಾಥ್ ಸಿಂಗ್ ಒತ್ತಾಯ

‘ಉಗ್ರರ ಬೆಂಬಲಿಸುವವರಿಗೆ ಹೊಣೆ ಹೊರಿಸಿ’

ನವದೆಹಲಿ (ಪಿಟಿಐ): ‘ಎಲ್ಲ ಬಗೆಯ ಭಯೋತ್ಪಾದನೆ ನಿರ್ಮೂಲನೆಗೆ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳು ಒಟ್ಟಾಗಿ ಹೋರಾಡಬೇಕು. ಜೊತೆಗೆ, ಭಯೋತ್ಪಾದನೆಯನ್ನು ಬೆಂಬಲಿಸುವವರ ಮೇಲೆಯೇ ಅದರ ಹೊಣೆಯನ್ನು ಹೊರಿಸುವುದು ಅಗತ್ಯ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಹೇಳಿದರು.

ಎಸ್‌ಸಿಒ ರಕ್ಷಣಾ ಸಚಿವರ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರೋಕ್ಷವಾಗಿ ಪಾಕಿಸ್ತಾನವನ್ನು ಉಲ್ಲೇಖಿಸಿ ವಾಗ್ದಾಳಿ ನಡೆಸಿದರು.

‘ಯಾವುದೇ ಸ್ವರೂಪದ ಭಯೋತ್ಪಾದನಾ ಕೃತ್ಯ ಅಥವಾ ಅದಕ್ಕೆ ಬೆಂಬಲ ನೀಡುವುದು ಮಾನವೀಯತೆ, ಶಾಂತಿಗೆ ವಿರುದ್ಧವಾದುದು. ಅಲ್ಲದೇ, ಭಯೋತ್ಪಾದನೆ ಮತ್ತು ಅಭಿವೃದ್ಧಿ ಒಟ್ಟಿಗೆ ಸಾಗಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು.

‘ಒಂದು ದೇಶ ಭಯೋತ್ಪಾದಕರಿಗೆ ಆಶ್ರಯ ನೀಡಿದರೆ, ಅದು ಬೇರೆ ದೇಶಗಳಿಗೆ ಮಾತ್ರ ಬೆದರಿಕೆಯಾಗಿ ಪರಿಣಮಿಸುವುದಿಲ್ಲ, ತನಗೂ ಅಪಾಯ ತಂದುಕೊಳ್ಳುತ್ತದೆ. ಯುವಕರನ್ನು ಉಗ್ರವಾದದ ಕಡೆಗೆ ವಾಲುವಂತೆ ಮಾಡುವುದು ಭದ್ರತೆ ದೃಷ್ಟಿಯಿಂದ ಆತಂಕದ ವಿಷಯ. ಈ ವಿದ್ಯಮಾನ, ಸಾಮಾಜಿಕ–ಆರ್ಥಿಕ ಪ್ರಗತಿಗೆ ಪ್ರಮುಖ ಅಡ್ಡಿಯಾಗುತ್ತದೆ’ ಎಂದು ರಾಜನಾಥ್ ಹೇಳಿದರು.

‘ಎಸ್‌ಸಿಒ ಜಾಗತಿಕ ಮಟ್ಟದಲ್ಲಿ ಪ್ರಬಲ ಹಾಗೂ ವಿಶ್ವಾಸಾರ್ಹ ಸಂಘಟನೆಯಾಗಿ ಬೆಳೆಯಬೇಕು ಎಂದರೆ, ಭಯೋತ್ಪಾದನೆ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸುವುದು ನಮ್ಮ ಆದ್ಯತೆಯಾಗಬೇಕು’ ಎಂದು ಪ್ರತಿಪಾದಿಸಿದರು.

ಚೀನಾ ರಕ್ಷಣಾ ಸಚಿವ ಲಿ ಶಾಂಗ್‌ಫು ಸೇರಿದಂತೆ ಸದಸ್ಯ ರಾಷ್ಟ್ರಗಳ ಸಚಿವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಪಾಕಿಸ್ತಾನ ರಕ್ಷಣಾ ಸಚಿವರು ವರ್ಚುವಲ್ ಆಗಿ ಭಾಗವಹಿಸಿದ್ದರು.

ರಾಜನಾಥ್ ಸಿಂಗ್ ಅವರು ರಕ್ಷಣಾ ಸಚಿವರ ಸಮಾವೇಶವನ್ನು ಉದ್ದೇಶಿಸಿ ಶುಕ್ರವಾರ ಮಾತನಾಡಿದರು–ಪಿಟಿಐ ಚಿತ್ರ

> ಭಾರತವು ಸದಸ್ಯ ರಾಷ್ಟ್ರಗಳ ಜೊತೆ ಸಹಕಾರ ಮತ್ತು ನಂಬಿಕೆ ವೃದ್ಧಿಗೆ ಶ್ರಮಿಸುತ್ತದೆ. ವಿಶ್ವಸಂಸ್ಥೆಯ ತತ್ವಗಳ ಆಧಾರದಲ್ಲಿ ಶಾಂತಿ ಮತ್ತು ಭದ್ರತೆ ಖಾತರಿಪಡಿಸುವಲ್ಲಿ ನಂಬಿಕೆ ಹೊಂದಿದೆ
>
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

> ಪ್ರಾದೇಶಿಕ ಭದ್ರತೆಗೆ ಸಂಬಂಧಿಸಿ ಶಾಂಘೈ ಸಹಕಾರ ಸಂಘಟನೆ ಸದಸ್ಯ ರಾಷ್ಟ್ರಗಳ ನಡುವೆ ಪರಿಣಾಮಕಾರಿ ಸಮನ್ವಯ ಹಾಗೂ ಬಹು ಹಂತದಲ್ಲಿ ನಿರಂತರ ಸಮಾಲೋಚನೆ ಅಗತ್ಯ.
>
> **ಸೆರ್ಗಿ ಶೊಯಿಗು,** ರಷ್ಯಾ ರಕ್ಷಣಾ ಸಚಿವ

ಮುಖ್ಯಾಂಶಗಳು

- ಎಸ್‌ಸಿಒ ಅಧ್ಯಕ್ಷ ಸ್ಥಾನದಲ್ಲಿರುವ ಭಾರತದಿಂದ ಸಮಾವೇಶದ ಆತಿಥ್ಯ
- 2001ರಲ್ಲಿ ಸಂಘಟನೆ ಸ್ಥಾಪನೆ

‘ಎಸ್‌ಸಿಒ ಸದಸ್ಯರು ಸಾರ್ವಭೌಮತ್ವ ಗೌರವಿಸಬೇಕು’

ಎಸ್‌ಸಿಒ ಸದಸ್ಯರು, ದೇಶಗಳ ಸಾರ್ವಭೌಮತ್ವ ಹಾಗೂ ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ಇಲ್ಲಿ ಆಯೋಜಿಸಲಾಗಿದ್ದ ಎಸ್‌ಸಿಒ ಸಾರಿಗೆ ಸಚಿವರ 10ನೇ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಎಸ್‌ಸಿಒ ಸದಸ್ಯ ರಾಷ್ಟ್ರಗಳ ಜೊತೆಗೆ ಸಂಪರ್ಕ ಸಾಧಿಸುವುದು ಭಾರತದ ಆದ್ಯತೆಯಾಗಿದೆ. ನಾವು ಬೇಡಿಕೆ ಆಧಾರಿತ, ಸುಸ್ಥಿರ ಅಭಿವೃದ್ಧಿ ಹಾಗೂ ಸಹಕಾರವನ್ನು ಖಾತರಿಪಡಿಸಿಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ಸಾರಿಗೆ ವಲಯವನ್ನು ಮತ್ತಷ್ಟು ದಕ್ಷ ಹಾಗೂ ವಿಶ್ವಸನೀಯವಾಗಿಸಲು ಅಗತ್ಯವಿರುವಂತಹ ಕ್ರಮ ಕೈಗೊಳ್ಳುವುದಕ್ಕೆ ಭಾರತವು ಬದ್ಧವಾಗಿದೆ. ಪ್ರಾದೇಶಿಕವಾರು ಭದ್ರತೆಯನ್ನು ಬಲಪಡಿಸುವ ಹಾಗೂ ವಿಜ್ಞಾನ ತಂತ್ರಜ್ಞಾನ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸುವ ಗುರಿಯೊಂದಿಗೆ ಎಸ್‌ಸಿಒ ಸದಸ್ಯ ರಾಷ್ಟ್ರಗಳು ಕೈಗೊಂಡಿರುವ ಉಪಕ್ರಮವನ್ನು ಭಾರತವು ಶ್ಲಾಘಿಸುತ್ತದೆ’ ಎಂದಿದ್ದಾರೆ.

‘ರಸ್ತೆ ಸಾರಿಗೆ ಕ್ಷೇತ್ರವು ಎದುರಿಸುತ್ತಿರುವ ಸಮಕಾಲೀನ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಅಗತ್ಯವಿರುವ ಸಂಶೋಧನೆ ಕೈಗೊಳ್ಳುವುದಕ್ಕೆ ಎಸ್‌ಸಿಒ ಸದಸ್ಯ ರಾಷ್ಟ್ರಗಳು ಕೈಜೋಡಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಸಾರಿಗೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್‌ಸಿಒ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ಮೂಡಿಸುವ ಸಲುವಾಗಿಯೇ ವಿಶೇಷ ಕಾರ್ಯ ತಂಡವನ್ನು ರಚಿಸಲಾಗಿದೆ. ಇಂಗಾಲದ ಹೊರಸೂಸುವಿಕೆಯನ್ನು ತಗ್ಗಿಸಲು ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಲು ಹಾಗೂ ಈ ವಿಚಾರಕ್ಕೆ ಸಂಬಂಧಿಸಿದ ಮಾಹಿತಿ ವಿನಿಮಯಕ್ಕಾಗಿ ಈ ತಂಡವು ಸಭೆಗಳನ್ನು ಆಯೋಜಿಸಲಿದೆ’ ಎಂದು ಹೇಳಿದ್ದಾರೆ.

‘ಗಡಿ ಸಮಸ್ಯೆ: ಒಪ್ಪಂದದ ಪ್ರಕಾರವೇ ಬಗೆಹರಿಸಿಕೊಳ್ಳಬೇಕು’

ಬೀಜಿಂಗ್ (ಪಿಟಿಐ): ‘ಗಡಿಗೆ ಸಂಬಂಧಿಸಿದ ಒಪ್ಪಂದಗಳನ್ನು ಚೀನಾ ಉಲ್ಲಂಘಿಸಿದ್ದರಿಂದ ಉಭಯ ದೇಶಗಳ ನಡುವಣ ಸಂಬಂಧದ ಅಡಿಪಾಯವೇ ಕುಸಿದಂತಾಗಿದೆ. ಗಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಈ ಒಪ್ಪಂದಗಳ ಪ್ರಕಾರವೇ ಬಗೆಹರಿಸಿಕೊಳ್ಳಬೇಕು’ ಎಂದು ರಾಜನಾಥ್ ಅವರು ಜನರಲ್ ಲಿ ಶಾಂಗ್‌ಫು ಅವರಿಗೆ ಹೇಳಿದರು.

ಎಸ್‌ಸಿಒ ರಕ್ಷಣಾ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಿರುವ ಸಚಿವ ಶಾಂಗ್‌ಫು ಅವರು ರಾಜನಾಥ್ ಜೊತೆ ಪ್ರತ್ಯೇಕ ಸಭೆ ನಡೆಸಿದರು. ಈ ಕುರಿತು ರಕ್ಷಣಾ ಸಚಿವಾಲಯ ಇಲ್ಲಿ ಪ್ರಕಟಣೆ ಬಿಡುಗಡೆ ಮಾಡಿದೆ.

‘ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಶಾಂಗ್‌ಫು, ಭಾರತ ಮತ್ತು ಚೀನಾ ಗಡಿಯಲ್ಲಿನ ಪರಿಸ್ಥಿತಿ ಸ್ಥಿರವಾಗಿದೆ. ಸೇನಾ ಮತ್ತು ರಾಜತಾಂತ್ರಿಕ ಮಟ್ಟದ ಮಾತುಕತೆಗಳ ಮೂಲಕ ಎರಡೂ ದೇಶಗಳ ನಡುವೆ ಸಂವಹನ ಮುಂದುವರಿದಿದೆ ಎಂಬುದಾಗಿ ಹೇಳಿದರು’ ಎಂದು ಪ್ರಕಟಣೆ ತಿಳಿಸಿದೆ.

‘ಪೂರ್ವ ಲಡಾಖ್ ಗಡಿಯಲ್ಲಿ ಸಂಘರ್ಷ ಕಂಡುಬಂದಿದ್ದ ಸ್ಥಳಗಳಿಂದ ಯೋಧರನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಪೂರ್ಣಗೊಂಡ ಬೆನ್ನಲ್ಲೇ, ಉದ್ವಿಗ್ನತೆಯನ್ನು ಶಮನ ಮಾಡುವ ದಿಸೆಯಲ್ಲಿ ಪ್ರಯತ್ನಗಳು ನಡೆಯಬೇಕು ಎಂಬುದಾಗಿ ರಾಜನಾಥ್ ಸಿಂಗ್ ತಿಳಿಸಿದರು’ ಎಂದು ಹೇಳಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯ,
ಮೌಲಾನ ಅಬುಲ್ ಕಲಾಂ ಆಜಾದ್ ಭವನ,
ನಂ. 16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560 001. ಸಹಾಯವಾಣಿ:8277799990
ವೆಬ್‌ಸೈಟ್: https://dom.karnataka.gov.in
ಇ–ಮೇಲ್: directorgokdom@gmail.com

ಸಂಖ್ಯೆ: ಡಿಒಎಂ/ಸಿಆರ್–20/2023–24   ದಿನಾಂಕ: 28.04.2023

ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ 2023–24ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿಗೆ ಪ್ರವೇಶ ಪ್ರಕಟಣೆ

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ (ಎಂಡಿಆರ್‌ಎಸ್/ಜಿಎಂಆರ್‌ಎಸ್/ಡಾ.ಎಪಿಜೆ ಎಕೆಆರ್‌ಎಸ್) 6ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ರವರ ನಿಯಂತ್ರಣದ ಅಡಿಯಲ್ಲಿ ಕರ್ನಾಟಕದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಅಂದರೆ 80 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 4 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಮತ್ತು 29 ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ (ಸಿಬಿಎಸ್‌ಇ) ಶೈಕ್ಷಣಿಕ ವರ್ಷ 2023–24ರ ಸಾಲಿಗೆ 6ನೇ ತರಗತಿಗೆ ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಸಮುದಾಯಗಳು, ಪಜಾ/ಪಪಂ, ಮತ್ತು ಒಬಿಸಿ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹವಿರುವ ಎಲ್ಲಾ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸುವುದು.

1.	ಅರ್ಜಿ ಸಲ್ಲಿಕೆ ಪ್ರಾರಂಭದ ದಿನಾಂಕ	27.04.2023
2.	ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ	13.05.2023
3.	ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ	ಸಹಾಯವಾಣಿ: 8277799990, 080–22535916

ಸೇವಾಸಿಂಧು ಪೋರ್ಟಲ್ ಲಿಂಕ್:https://sevasindhuservices.karnataka.gov.in ಮೂಲಕ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಉಚಿತ ಸೇವೆ ಬಳಸಿಕೊಳ್ಳಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರು ಸಮೀಪದ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಅಥವಾ ಎಂಡಿಆರ್‌ಎಸ್/ಜಿಎಂಆರ್‌ಎಸ್/ಡಾ.ಎಪಿಜೆಎಕೆಆರ್ (ಸಿಬಿಎಸ್‌ಇ) ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು. ಮುಂದುವರಿದು ಸಂಕ್ಷಿಪ್ತ ಅಧಿಸೂಚನೆ ಮತ್ತು ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್: https://dom.karnataka.gov.in ಇಲ್ಲಿಗೆ ಭೇಟಿ ನೀಡಬಹುದು.

ಸಹಿ/–ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ರಾಜ್ಯದ ಮಂದಿ

114 ಕನ್ನಡಿಗರು ತಾಯ್ನಾಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಸ್ವದೇಶಕ್ಕೆ ಕರೆತರಲು ಕೇಂದ್ರ ಸರ್ಕಾರ ಆರಂಭಿಸಿರುವ ‘ಆಪರೇಷನ್ ಕಾವೇರಿ’ ಕಾರ್ಯಾಚರಣೆಯಡಿ 114 ಕನ್ನಡಿಗರು ಶುಕ್ರವಾರ ಸಂಜೆ ಸುರಕ್ಷಿತವಾಗಿ ನಾಡಿಗೆ ಮರಳಿದ್ದಾರೆ.

‘ಶಿವಮೊಗ್ಗದ 50, ಮೈಸೂರಿನ 45, ಬೆಂಗಳೂರಿನ ಒಂಬತ್ತು, ಕಲಬುರಗಿಯ ನಾಲ್ಕು, ರಾಮನಗರ ಮತ್ತು ಉಡುಪಿಯ ತಲಾ ಇಬ್ಬರು, ದಾವಣಗೆರೆ ಮತ್ತು ಹಾಸನದ ತಲಾ ಒಬ್ಬರನ್ನು ಕರೆತರಲಾಗಿದೆ’ ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ತಿಳಿಸಿದ್ದಾರೆ.

‘ಸುಡಾನ್‌ನಿಂದ ಒಟ್ಟು 362 ಜನರನ್ನು ಶುಕ್ರವಾರ ವಿಮಾನದಲ್ಲಿ ಕರೆತರಲಾಗಿದ್ದು, ಎಲ್ಲರೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದಾರೆ. ಇವರಲ್ಲಿ 114 ಕನ್ನಡಿಗರು ಇದ್ದಾರೆ. ಮೊದಲ ಬ್ಯಾಚ್‌ನಲ್ಲಿ ಐವರು ಕನ್ನಡಿಗರನ್ನು ಕರೆತರಲಾಗಿತ್ತು’ ಎಂದು ವಿವರಿಸಿದ್ದಾರೆ.

ಹೀಗೆ, ನಾಡಿಗೆ ವಾಪಸ್ ಮರಳಿದವರನ್ನು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಅವರ ಊರಿಗೆ ಕಳುಹಿಸಲಾಯಿತು.

ಸುಡಾನ್‌ನಿಂದ ಬಂದ ಕನ್ನಡಿಗರು ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದರು. ಈ ವೇಳೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ (ಬಲಬದಿ ಕೊನೆಯಲ್ಲಿರುವವರು) ಅವರನ್ನು ಸ್ವಾಗತಿಸಿದರು

ಹೆದ್ದಾರಿಯಲ್ಲಿ ಬಿಜೆಪಿ ಮುಖಂಡನ ಹತ್ಯೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಬಿಜೆಪಿ ಮುಖಂಡ ಪಿ.ಪಿ. ಜಿ.ಶಂಕರ್ ಅವರನ್ನು ದುಷ್ಕರ್ಮಿಗಳು ಇಲ್ಲಿನ ಪೂನಮಲ್ಲೆ ಬಳಿಯ ಚೆನ್ನೈ–ಬೆಂಗಳೂರು ಹೆದ್ದಾರಿಯಲ್ಲಿ ಗುರುವಾರ ರಾತ್ರಿ ಹತ್ಯೆ ಮಾಡಿದ್ದಾರೆ.

ಬಿಜೆಪಿ ತಮಿಳುನಾಡು ಘಟಕದ ಎಸ್ಸಿ–ಎಸ್ಟಿ ವಿಭಾಗದ ಖಜಾಂಚಿಯಾಗಿದ್ದ ಶಂಕರ್ ಅವರು ನಜರತ್‌ಪೇಟೆ ಬಳಿ ಕಾರಿನಲ್ಲಿ ತೆರಳುತ್ತಿದ್ದರು. ಈ ವೇಳೆ ದುಷ್ಕರ್ಮಿಗಳ ಗುಂಪೊಂದು ನಾಡ ಬಾಂಬ್‌ಗಳಿಂದ ಕಾರಿನ ಮೇಲೆ ದಾಳಿ ನಡೆಸಿತ್ತು. ಕಾರಿನಿಂದ ಇಳಿದಿದ್ದ ಶಂಕರ್ ಓಡಲು ಆರಂಭಿಸಿದಾಗ ಅವರನ್ನು ಬೆನ್ನಟ್ಟಿದ ದುಷ್ಕರ್ಮಿಗಳು ನಡುರಸ್ತೆಯಲ್ಲೇ ಹತ್ಯೆಗೈದಿದ್ದಾರೆ.

ದೆಹಲಿ–ಬೆಂಗಳೂರಿಗೆ ವಿಮಾನ ಸಂಚಾರ

ನವದೆಹಲಿ (ಪಿಟಿಐ): ಸೇನಾ ಸಂಘರ್ಷಪೀಡಿತ ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೈಗೊಂಡಿರುವ ‘ಆಪರೇಷನ್ ಕಾವೇರಿ’ ಕಾರ್ಯಾಚರಣೆಯಡಿ ಜಿದ್ದಾದಿಂದ ನವದೆಹಲಿ ಮತ್ತು ಬೆಂಗಳೂರಿಗೆ ಇಂಡಿಗೊ ಚಾರ್ಟರ್ಡ್ ವಿಮಾನಗಳು ಕಾರ್ಯಾಚರಿಸಲಿವೆ ಎಂದು ಇಂಡಿಗೊ ವಿಮಾನಯಾನ ಸಂಸ್ಥೆ ಶುಕ್ರವಾರ ಹೇಳಿದೆ.

ವಾರಾಂತ್ಯದಲ್ಲಿ 450ಕ್ಕೂ ಹೆಚ್ಚು ಭಾರತೀಯ ನಾಗರಿಕರನ್ನು ಸ್ವದೇಶಕ್ಕೆ ಕರೆತರಲು ಎರಡು ವಿಮಾನಗಳು ಹಾರಾಟ ನಡೆಸಲಿವೆ ಎಂದು ಇಂಡಿಗೊ ತಿಳಿಸಿದೆ. ಎ321 ವಿಮಾನವು ಏ.30ರಂದು ಹಾರಾಟ ನಡೆಸಲಿದೆ. ಭಾರತೀಯರ ಸುರಕ್ಷಿತ ಸ್ಥಳಾಂತರಕ್ಕೆ ಇಂಡಿಗೊ ಸಂಸ್ಥೆ ಸರ್ಕಾರದೊಂದಿಗೆ ನಿಕಟ ಸಂಪರ್ಕದಲ್ಲಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸುಡಾನ್: ಅರೆಸೇನಾ ಪಡೆ ದಾಳಿ: ಟರ್ಕಿ ವಿಮಾನಕ್ಕೆ ಹಾನಿ

ಮತ್ತೆ ಕದನ ವಿರಾಮ ವಿಸ್ತರಣೆ

ಖಾರ್ಟೂಮ್ (ಎಎಫ್‌ಪಿ/ಎಪಿ/ರಾಯಟರ್ಸ್): ಸುಡಾನ್‌ನ ಸೇನೆ ಮತ್ತು ಅರೆಸೇನಾ ಪಡೆಯ ಮುಖ್ಯಸ್ಥರು ಮತ್ತೆ 72 ಗಂಟೆಗಳ ಕಾಲ ಕದನ ವಿರಾಮ ವಿಸ್ತರಣೆಗೆ ಅಂಕಿತ ಹಾಕಿರುವ ನಡುವೆಯೇ ಶುಕ್ರವಾರ ಅವಳಿ ನಗರಗಳಾದ ಖಾರ್ಟೂಮ್, ಒಂಡರ್ಮನ್ ಸೇರಿದಂತೆ ಡಾರ್ಫರ್ ಪ್ರದೇಶದಲ್ಲಿ ಗುಂಡಿನ ದಾಳಿ ಮುಂದುವರಿದಿದೆ.

ವಿವಿಧ ದೇಶಗಳು ಸಂಘರ್ಷ ಪೀಡಿತ ನೆಲದಿಂದ ತಮ್ಮ ಪ್ರಜೆಗಳ ಸ್ಥಳಾಂತರಕ್ಕೆ ಸಮರೋಪಾದಿಯ ಸಿದ್ಧತೆಯಲ್ಲಿ ಮುಳುಗಿವೆ. ಈ ನಡುವೆಯೇ ಟರ್ಕಿ ಪ್ರಜೆಗಳ ಸ್ಥಳಾಂತರಕ್ಕೆ ಖಾರ್ಟೂಮ್ ಹೊರವಲಯದ ವಿಮಾನ ನಿಲ್ದಾಣದಲ್ಲಿ ನಿಲುಗಡೆಯಾಗಿದ್ದ ವಿಮಾನವೊಂದು ಅರೆಸೇನಾ ಪಡೆಯ ದಾಳಿಗೆ ತುತ್ತಾಗಿದೆ.

ವಿಮಾನದ ಸಿಬ್ಬಂದಿಯೊಬ್ಬರು ಗಾಯಗೊಂಡಿದ್ದು, ಇಂಧನ ಟ್ಯಾಂಕ್‌ಗೆ ಹಾನಿಯಾಗಿದೆ ಎಂದು ಸೇನಾ ಪಡೆ ತಿಳಿಸಿದೆ. ಇದನ್ನು ಟರ್ಕಿ ದೇಶದ ರಕ್ಷಣಾ ಸಚಿವಾಲಯವೂ ಖಚಿತಪಡಿಸಿದೆ.

ಸಂಘರ್ಷ ಇಡೀ ಸುಡಾನ್‌ಗೆ ವ್ಯಾಪಿಸಿದೆ. ಅಲ್ಲಿನ ಪಶ್ಚಿಮ ಭಾಗದ ಡಾರ್ಫರ್ ನಗರದಲ್ಲಿ ಬಂದೂಕುಧಾರಿಗಳು ದಾಳಿ ಮುಂದುವರಿಸಿದ್ದು, ಲೂಟಿಗೆ ಇಳಿದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

‘ಕ್ಷಿಪಣಿ ದಾಳಿಗೆ ಮನೆಗಳು ಹಾನಿಗೀಡಾಗಿವೆ. ಆರೋಗ್ಯ ಶಿಬಿರಗಳು ಮತ್ತು ಯುನಿವರ್ಸಿಟಿ ಆಸ್ಪತ್ರೆಗೆ ನುಗ್ಗಿ ಲೂಟಿ ಎಸಗಿದ್ದಾರೆ. ಮಾರುಕಟ್ಟೆ, ಸಾರ್ವಜನಿಕ ಕಟ್ಟಡಗಳು, ಆಹಾರ ಗೋದಾಮುಗಳು ಮತ್ತು ಬ್ಯಾಂಕ್ ಕಟ್ಟಡಗಳಿಗೆ ಬೆಂಕಿ ಹಚ್ಚಿದ್ದಾರೆ’ ಎಂದು ಡಾರ್ಫರ್ ಬಾರ್ ಅಸೋಸಿಯೇಷನ್ ತಿಳಿಸಿದೆ.

ಸದ್ಯ ಸುಡಾನ್‌ನಲ್ಲಿ ಬರದ ಕ್ಷೋಭೆಗೆ ಸಿಲುಕಿ ಸುಮಾರು 1.5 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಸಂಘರ್ಷದ ಪರಿಣಾಮ ಈ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ ಎಂದು ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ಸ್ವಾಗತಾರ್ಹ: ಕದನ ವಿರಾಮ ವಿಸ್ತರಣೆಗೆ ಸೇನಾ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಹಾಗೂ ಅರೆಸೇನಾ ಪಡೆ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಒಪ್ಪಿಗೆ ಸೂಚಿಸಿರುವುದನ್ನು ಅಮೆರಿಕ, ಸೌದಿ ಅರೇಬಿಯಾ, ಆಫ್ರಿಕನ್ ಒಕ್ಕೂಟ ಹಾಗೂ ವಿಶ್ವಸಂಸ್ಥೆ ಸ್ವಾಗತಿಸಿವೆ.

‘ಮಾನವೀಯ ನೆಲೆಯಲ್ಲಿ ಇಬ್ಬರು ನಾಯಕರು ಕದನ ವಿರಾಮ ಒಪ್ಪಂದಕ್ಕೆ ಸಮ್ಮತಿಸಿರುವುದು ಸ್ವಾಗತಾರ್ಹ. ಈ ಒಪ್ಪಂದಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕು’ ಎಂದು ಸಲಹೆ ನೀಡಿವೆ.

ಆಪರೇಷನ್ ಕಾವೇರಿ: ಒಟ್ಟು 1,360 ಭಾರತೀಯರು ವಾಪಸು

ನವದೆಹಲಿ (ಪಿಟಿಐ): ‘ಆಪರೇಷನ್ ಕಾವೇರಿ’ ಅಡಿಯಲ್ಲಿ ಶುಕ್ರವಾರ ಎರಡು ತಂಡಗಳಲ್ಲಿ ಒಟ್ಟು 754 ಭಾರತೀಯರನ್ನು ಸೌದಿ ಅರೇಬಿಯಾದ ಜಿದ್ದಾದಿಂದ ಸುರಕ್ಷಿತವಾಗಿ ಭಾರತಕ್ಕೆ ಶುಕ್ರವಾರ ಕರೆತರಲಾಯಿತು.

392 ಭಾರತೀಯರನ್ನು ಒಳಗೊಂಡ ಒಂದು ತಂಡವು ನವದೆಹಲಿಗೆ ಬಂದಿಳಿಯಿತು. 362 ಮಂದಿಯ ಇನ್ನೊಂದು ತಂಡವು ಬೆಂಗಳೂರಿಗೆ ಬಂದಿಳಿದಿದೆ.

ಸುಡಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ಕಾರಣದಿಂದಾಗಿ ಅಲ್ಲಿರುವ ಭಾರತೀಯರನ್ನು ರಕ್ಷಿಸಿ ಸೌದಿ ಅರೇಬಿಯಾದ ಜಿದ್ದಾದಲ್ಲಿ ತಾತ್ಕಾಲಿಕ ಶಿಬಿರದಲ್ಲಿ ಇರಿಸಲಾಗಿತ್ತು. ಶುಕ್ರವಾರ ಇಲ್ಲಿಂದ ಭಾರತೀಯರನ್ನು ದೇಶಕ್ಕೆ ಕರೆತರಲಾಗಿದೆ. ಈ ಬಗ್ಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಟ್ವೀಟ್ ಮಾಡಿದ್ದಾರೆ.

ಮೊದಲ ತಂಡದಲ್ಲಿ 360, ಎರಡನೇ ತಂಡದಲ್ಲಿ 246, ಮೂರನೇ ತಂಡದಲ್ಲಿ 392 ಹಾಗೂ ನಾಲ್ಕನೇ ತಂಡದಲ್ಲಿ 362 ಮಂದಿ ಸೇರಿ ಇಲ್ಲಿಯವರೆಗೆ ಒಟ್ಟು 1,360 ಭಾರತೀಯರನ್ನು ರಕ್ಷಿಸಿ ಸ್ವದೇಶಕ್ಕೆ ಕರೆತರಲಾಗಿದೆ.

SAINIK SCHOOL BIJAPUR - 586 108
(KARNATAKA)
(Joint venture of Ministry of Defence and Govt of Karnataka)

RECRUITMENT OF STAFF

1. Applications are invited for the post mentioned below on contractual basis: -

Sl.	Name of Post	No of Post & Cat	Age	Qualifications	Pay
(a)	**LDC (On Contractual)**	UR-01 (One)	Should be between 18 and 50 years as on 01 Jun 2023	(i) Class XII / Pre-degree. (ii) Typing speed of at least 40 words per minute. (iii)Ability to correspond in English and computer operation. **Desirable.** Experience in dealing with various projects independently, maint of stores, ledgers, keeping records and well versed in drafting of letters.	Consolidated Salary will be paid based on the qualification and experience.
(b)	**Music Teacher (On Contractual)**	UR-01 (One)	Should be between 18 and 50 years as on 01 Jun 2023	**MUSIC TEACHER - ONE** Higher Secondary with a degree or diploma in music from any of the recognized institutions. **Desirable.** Past experience to teach secon ary level in CBSE affiliated Residential schools(s) will be given preference.	Consolidated Salary will be paid based on the qualification and experience.
(c)	**PEM/PTI-Cum-Matron (Female only) (On Contractual)**	UR-01 (One)	Should be between 18 and 50 years as on 01 Jun 2023	Minimum 10th pass with proficiency in Games / Sports from a recognized board. **Desirable.** (i) Having experience in this profession in reputed Public School. (ii) Bachelor Degree in Physical Education (B.P.ED) or equivalent with 50% Marks. (iii) Communication in English. (v) Knowledge of computers & typing and experience in housekeeping duties.	Consolidated Salary will be paid based on the qualification and experience.
(d)	**Counselor (On Contractual)**	UR-01 (One)	Should be between 21 and 35 years as on 01 Jun 2023	Graduate / Post Graduate in Psychology or Post Graduate in Child Development or Graduate with diploma in Career Guidance and Counseling. **Experience.** (i) Experience in providing career/educational counseling to students in a reputed school. (ii) Registration with Rehabilitation counselor of India as vocational counselor. (iii) Interested in other extra curricular activities and aptitude for residential school life style. (iv) The candidate should be physically fit.	Consolidated Salary will be paid based on the qualification and experience.
(e)	**Ward Boys**	UR-04 (Four)	Should be between 18 and 50 years as on 01 Jun 2023	Minimum 10th pass from recognized board. **Desirable.** Communication in English, Higher qualification, experience in handling the students in a residential School / Institution, knowledge of computers & typing and experience in housekeeping duties and experience of working as Hostel Warden / Ward Boy in any Residential Public School. The candidate should be physically fit. **Preference will be given to Ex-servicemen.**	Consolidated Salary will be paid based on the qualification and experience.

2. How to Apply. (i) Apply on application form downloaded from School website **www.sssbj.in** (notification-vacancy link). (ii) Duly filled applications alongwith attested copies of documents and oneself addressed envelope with postage stamp of Rs 40/- (for communicating through Speed Post) affixed must reach **Principal Sainik School Bijapur - 586108 (Karnataka).** (iii) **Last date for receipt of Applications in Sainik School Bijapur will be 21 days from the date of first publication of the advertisement.** (iv) Applications should be accompanied by one A/C payee Demand Draft of **Rs. 500/-** (non- refundable) in favour of **Principal, Sainik School Bijapur** payable on State Bank of India Sainik School Campus Bijapur Branch (Code 3163). (v) Applications received after the due date or without the supporting documents or prescribed application fee or not in the prescribed format will be rejected without any intimation.
3. The school will not be responsible for any postal delay or missing of envelope and no claim will be entertained in this regard. **Only short listed Candidates will be called for Written Test / Practical Test/ Interview.** No TA/DA for attending the selection test/interview or for joining the post is admissible as per rules of the school.
4. Candidates are to enclose the following documents alongwith the application: -
   (a) Demand Draft for Rs 500/-.
   (b) Affix Passport size photograph at the space provided in the application form.
   (c) Self addressed envelope with stamps worth Rs 40/-.
   (d) Copies of educational and experience certificates.
   (e) In case, the Applicant is SC/ST/OBC category, the Applicant is to attach a copy of Caste / Category Certificate issued by the concerned authority.
5. The school administration reserves the right to cancel the vacancy due to administrative/policy reasons.

Sd/- PRINCIPAL
SAINIK SCHOOL BIJAPUR

ಚುನಾವಣಾ ಪ್ರಚಾರ ಸಭೆಗಳು

29 ಏಪ್ರಿಲ್ 2023 | ಶನಿವಾರ

ಶ್ರೀ ಜಗತ್ ಪ್ರಕಾಶ್ ನಡ್ಡಾ
ಮಾನ್ಯ ರಾಷ್ಟ್ರಾಧ್ಯಕ್ಷರು, ಬಿಜೆಪಿ
ಬೆ. 10:30 ಕಲಘಟಗಿ-ರೋಡ್ ಶೋ
ಮ. 1:30 ಡಂಬಳ (ರೋಣ)
ಮ. 3:30 ಮಾಯಕೊಂಡ-ರೋಡ್ ಶೋ




ಶ್ರೀ ರಾಜನಾಥ ಸಿಂಗ್
ಮಾನ್ಯ ಕೇಂದ್ರ ರಕ್ಷಣಾ ಸಚಿವರು
ಶ್ರೀ ಆರ್. ಅಶೋಕ್
ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಬೆ. 11:00 ಕೃಷ್ಣರಾಜ
ಮ. 2:00 ಕೊತ್ತತ್ತಿ (ಶ್ರೀರಂಗಪಟ್ಟಣ)
ಸಂ. 5:00 ಬಸವನಗುಡಿ-ರೋಡ್ ಶೋ



ಶ್ರೀ ಅಮಿತ್ ಶಾ
ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು
ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 10:30 ಮಡಿಕೇರಿ-ರೋಡ್ ಶೋ
ಮ. 2:00 ಕಟಪಾಡಿ-ಉಡುಪಿ
ಮ. 3:30 ಬೈಂದೂರು-ರೋಡ್ ಶೋ
ಸಂ. 5:00 ಮಂಗಳೂರು-ರೋಡ್ ಶೋ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಶ್ರೀಮತಿ ಶೃತಿ, ಖ್ಯಾತ ಚಲನಚಿತ್ರ ನಟಿ
ಬೆ. 10:30 ಹುಣಸಗಿ (ಶೋರಾಪುರ)-ರೋಡ್ ಶೋ
ಮ. 12:00 ಲಿಂಗಸಗೂರು
ಮ. 2:30 ಸಿರಿವಾರ (ಮಾನ್ವಿ)



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ
ಬೆ. 10:30 ಹುಮ್ನಾಬಾದ್
ಮ. 2:00 ಸಿರುಗುಪ್ಪ-ರೋಡ್ ಶೋ
ಮ. 3:30 ಬಳ್ಳಾರಿ ಸಿಟಿ-ರೋಡ್ ಶೋ
ಸಂ. 4:00 ಹಡಗಲಿ-ರೋಡ್ ಶೋ

ಶ್ರೀಮತಿ ಸ್ಮೃತಿ ಇರಾನಿ
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವರು
ಬೆ. 10:00 ಬೆಂಗಳೂರು (ಸಂವಾದ ಸಭೆ)
ಮ. 2:00 ಕೊಪ್ಪಳ
ಸಂ. 4:00 ಹಿರಿಯೂರು

ಶ್ರೀ ಕೆ. ಅಣ್ಣಾಮಲೈ
ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಬೆ. 10:30 ಪುತ್ತೂರು-ರೋಡ್ ಶೋ
ಸಂ. 5:30 ವಿಟ್ಲ-ರೋಡ್ ಶೋ

ಶ್ರೀ ಶಿವರಾಜ್ ಸಿಂಗ್ ಚೌಹಾಣ್
ಮಾನ್ಯ ಮುಖ್ಯಮಂತ್ರಿಗಳು, ಮಧ್ಯಪ್ರದೇಶ
ಬೆ. 11:00 ಮಧುಗಿರಿ-ರೋಡ್ ಶೋ
ಮ. 3:30 ಬಳ್ಳಾರಿ-ರೋಡ್ ಶೋ

ಕು. ಶೋಭಾ ಕರಂದ್ಲಾಜೆ
ಮಾನ್ಯ ಕೇಂದ್ರ ಸಹಾಯಕ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವರು
ಬೆ. 9:00 ಉಡುಪಿ
ಬೆ. 11:30 ಕುಂದಾಪುರ
ಮ. 2:30 ಕಾಪು

ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಕೇಂದ್ರ ಸಹಾಯಕ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವರು
ಬೆ. 10:00 ಕೊಪ್ಪಳ
ಮ. 1:30 ಗಂಗಾವತಿ
ಮ. 3:30 ಕನಕಗಿರಿ

ಶ್ರೀ ಬಿ. ಶ್ರೀರಾಮುಲು
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಬೆ. 10:00 ಗಂಗಾವತಿ-ರೋಡ್ ಶೋ
ಮ. 12:30 ಕನಕಗಿರಿ-ರೋಡ್ ಶೋ
ಸಂ. 4:30 ಯಲಬುರ್ಗ-ರೋಡ್ ಶೋ
ಸಂ. 6:30 ಕೊಪ್ಪಳ-ರೋಡ್ ಶೋ



ಶ್ರೀ ಬಂಡಿ ಸಂಜಯ್ ಕುಮಾರ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ ತೆಲಂಗಾಣ
ಬೆ. 9:30 ಚಿಂತಾಮಣಿ-ರೋಡ್ ಶೋ
ಮ. 3:30 ಬಳ್ಳಾರಿ-ರೋಡ್ ಶೋ



ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 10:30 ಚಾಮರಾಜಪೇಟೆ

ಶ್ರೀ ಜಗ್ಗೇಶ್
ಮಾನ್ಯ ರಾಜ್ಯಸಭಾ ಸದಸ್ಯರು ಹಾಗೂ ಚಲನಚಿತ್ರ ನಟರು
ಬೆ. 10:00 ವರುಣ-ರೋಡ್ ಶೋ
ಬೆ. 11:30 ಟಿ. ನರಸೀಪುರ-ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ

ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ

ಪ್ರಕಟಣೆ : ಬಿಜೆಪಿ ಕರ್ನಾಟಕ

ಷೇರುಪೇಟೆ ವಹಿವಾಟು 463



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,915
ಇಂದಿನ ಅಂತ್ಯ	18,065
▲	150
ದಿನದ ಗರಿಷ್ಠ	18,089

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1625 (1630)
ಸೋಯಾ (ರಿಫೈನ್ಡ್)	₹965 (970)
ಸೂರ್ಯಕಾಂತಿ (ರಿಫೈನ್ಡ್)	₹1020 (1030)
ಪಾಮೋಲಿನ್	₹927 (935)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹800-1100
ಮಧ್ಯಮ	₹600-800
ಸಣ್ಣ	₹300-500

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹132.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8800-9220
ಬೆಂಗಳೂರು	₹11500-16000
ಕೆ.ಆರ್. ಪೇಟೆ	₹8250-8250
ತುಮಕೂರು	₹8400-9400
ತುರುವೇಕೆರೆ	₹9000-9200

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹283-499
ದ್ವಿತಳಿ (ಬಿ.ವಿ)	₹301-612

ಸಿದ್ಧಾರ್ಥ ಮೊಹಂತಿ ಎಲ್‌ಐಸಿ ಅಧ್ಯಕ್ಷ

ನವದೆಹಲಿ (ರಾಯಿಟರ್ಸ್): ಎಲ್‌ಐಸಿ ಅಧ್ಯಕ್ಷರಾಗಿ ಸಿದ್ಧಾರ್ಥ ಮೊಹಂತಿ ಅವರನ್ನು ಕೇಂದ್ರ ಸರ್ಕಾರ ಶುಕ್ರವಾರ ನೇಮಕ ಮಾಡಿದೆ.

ಮೊಹಂತಿ ಅವರನ್ನು ಅಧ್ಯಕ್ಷ-ರನ್ನಾಗಿ ನೇಮಿಸಲು ಫೈನಾನ್ಶಿಯಲ್ ಸರ್ವಿಸಸ್ ಇನ್‌ಸ್ಟಿಟ್ಯೂಷನ್ಸ್ ಬ್ಯೂರೊ ಕಳೆದ ತಿಂಗಳು ಶಿಫಾರಸು ಮಾಡಿತ್ತು. ಎಲ್‌ಐಸಿ ಅಧ್ಯಕ್ಷರಾಗಿ ಎಂ.ಆರ್. ಕುಮಾರ್ ಅಧಿಕಾರಾವಧಿ ಮಾರ್ಚ್ 13ಕ್ಕೆ ಅಂತ್ಯವಾದ ನಂತರ, ಮೊಹಂತಿ ಹಂಗಾಮಿ ಅಧ್ಯಕ್ಷರಾಗಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000 - 1050
ಹೆರಕಿದ್ದು	1,300-1,400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಅಡಿಕೆ	
ಕುಮಟಾ	
ಚಿಪ್ಪು	27809-31999
ಕೋಕ	20169-30999
ಫ್ಯಾಕ್ಟರಿ	12019-21299
ಹಳೆಚಾಲಿ	36509-39529
ಹೊಸಚಾಲಿ	34899-36409
ಶಿವಮೊಗ್ಗ	
ಬೆಟ್ಟೆ	48629-52199
ಗೊರಬಲು	18009-34299
ರಾಶಿ	38019-47559
ಸರಕು	58669-79896
ಶಿರಸಿ	
ಬೆಟ್ಟೆ	35899-43899
ಬಿಳೆಗೋಟು	23899-33969
ಚಾಲಿ	33809-37208
ಕೆಂಪುಗೋಟು	22189-32600
ರಾಶಿ	43018-45799
ಯಲ್ಲಾಪುರ	
ಬಿಳಿಗೋಟು	24899-33819
ಚಾಲಿ	33850-39346
ಕೋಕ	16501-30899
ಕೆಂಪುಗೋಟು	24899-34899
ರಾಶಿ	40199-49869
ತಟ್ಟಿಬೆಟ್ಟೆ	36399-45699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15400	15350	188.20 ಸೆಂಟ್ಸ್
ಎಸಿ	7980	7600	7800	
ಆರ್‌ಪಿ	10500	10650	10400	ಲಂಡನ್
ಆರ್‌ಸಿ	5830	228 on OT	5600	2405 ಡಾಲರ್ಸ್

ಉತ್ತಮ ಖರೀದಿ ವಹಿವಾಟು ನಡೆಸಿದ ಹೂಡಿಕೆದಾರರು

ಷೇರುಪೇಟೆ: ವಾರವಿಡೀ ಗಳಿಕೆ

ಮುಖ್ಯಾಂಶಗಳು

- ವಿದೇಶಿ ಬಂಡವಾಳ ಒಳಹರಿವು ಹೆಚ್ಚಳ
- ಮುಂದುವರಿದ ಸಕಾರಾತ್ಮಕ ವಹಿವಾಟು
- ವಿಪ್ರೊ ಮಾರುಕಟ್ಟೆ ಮೌಲ್ಯ ವೃದ್ಧಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯಗೊಂಡಿದೆ. ಸತತ ಐದೂ ದಿನಗಳ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಕಾರ್ಪೊರೇಟ್ ವಲಯದ ತ್ರೈಮಾಸಿಕ ಫಲಿತಾಂಶವು ತಕ್ಕ ಮಟ್ಟಿಗೆ ಉತ್ತಮವಾಗಿ ಇರುವುದರ ಜೊತೆಗೆ ವಿದೇಶಿ ಬಂಡವಾಳದ ಒಳಹರಿವು ಕೂಡ ದೇಶದ ಷೇರುಪೇಟೆಗಳಲ್ಲಿ ಗೂಳಿ ಓಟ ಮುಂದುವರಿಯಲು ನೆರವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 1,457 ಅಂಶ ಏರಿಕೆ ಕಂಡು 61,112 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ, ವಾರದ ವಹಿವಾಟಿನಲ್ಲಿ 441 ಅಂಶ ಹೆಚ್ಚಾಗಿ 18,065ರಲ್ಲಿ ವಹಿವಾಟು ಅಂತ್ಯಗೊಳಿಸಿದೆ.

ಒಟ್ಟಾರೆಯಾಗಿ ಮಾರುಕಟ್ಟೆಯ ವಹಿವಾಟು ಸಕಾರಾತ್ಮಕವಾಗಿ ಇತ್ತು. ಬಿಎಸ್‌ಇ ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್ ಮತ್ತು ಬಹುತೇಕ ವಲಯವಾರು ಸೂಚ್ಯಂಕಗಳು ಗಳಿಕೆಯೊಂದಿಗೆ ವಾರದ ವಹಿವಾಟು ಅಂತ್ಯಗೊಳಿಸಿದವು. ಬಿಎಸ್‌ಇ ರಿಯಾಲ್ಟಿ ಸೂಚ್ಯಂಕ ಈ ವಾರ ಉತ್ತಮ ಗಳಿಕೆ ಕಂಡುಕೊಂಡಿದೆ. ಕಳೆದ ವಾರ ಮಾರಾಟದ ಒತ್ತಡಕ್ಕೆ ಒಳಗಾಗಿದ್ದ ಬಿಎಸ್‌ಇ ಐ.ಟಿ. ಸೂಚ್ಯಂಕ ಮತ್ತೆ ಗಳಿಕೆ ಹಾದಿಗೆ ಮರಳಿದೆ ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 463 ಅಂಶ ಹೆಚ್ಚಾದರೆ, ನಿಫ್ಟಿ 150 ಅಂಶ ಏರಿಕೆ ಕಂಡಿತು.

ಸೆನ್ಸೆಕ್ಸ್‌ನಲ್ಲಿ ವಿಪ್ರೊ ಷೇರು ಮೌಲ್ಯ ಶೇ 2.89ರಷ್ಟು ಗಳಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹ 5,933 ಕೋಟಿ ಹೆಚ್ಚಾಗಿ ₹ 2.11 ಲಕ್ಷ ಕೋಟಿಗೆ ತಲುಪಿತು. ವಿಪ್ರೊ ಕಂಪನಿಯು ₹ 12 ಸಾವಿರ ಕೋಟಿ ಮೌಲ್ಯದ ಷೇರು ಮರುಖರೀದಿ ಯೋಜನೆಯನ್ನು ಗುರುವಾರ ಪ್ರಕಟಿಸಿದೆ.

ನೆಸ್ಲೆ, ಎಸ್‌ಬಿಐ, ಲಾರ್ಸನ್ ಆ್ಯಂಡ್ ಟೂಬ್ರೊ, ಐಟಿಸಿ, ಟೆಕ್ ಮಹೀಂದ್ರ, ರಿಲಯನ್ಸ್, ಕೋಟಕ್ ಮಹೀಂದ್ರ ಮತ್ತು ಬಜಾಜ್ ಫೈನಾನ್ಸ್ ಕಂಪನಿ ಷೇರುಗಳ ಮೌಲ್ಯವೂ ಹೆಚ್ಚಾಗಿದೆ. ದಿನದ ವಹಿವಾಟಿನಲ್ಲಿ ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.32ರಷ್ಟು ಮತ್ತು ಸ್ಮಾಲ್ ಕ್ಯಾಪ್ ಶೇ 0.91ರಷ್ಟು ಏರಿಕೆ ಕಂಡಿವೆ.

ಶುಕ್ರವಾರ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 3 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹81.82ರಂತೆ ವಿನಿಮಯಗೊಂಡಿತು.

ಎಫ್‌ಐಐ ಒಳಹರಿವು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ವಾರದ ವಹಿವಾಟಿನಲ್ಲಿ ಸೋಮವಾರ ₹ 412 ಕೋಟಿ ಮತ್ತು ಮಂಗಳವಾರ ₹ 407 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಬುಧವಾರ ಮತ್ತು ಗುರುವಾರ ಕ್ರಮವಾಗಿ ₹ 1,257 ಕೋಟಿ ಮತ್ತು ₹ 1,653 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಚಿನ್ನದ ದರ ₹420 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂಗೆ ₹ 420ರಷ್ಟು ಇಳಿಕೆ ಕಂಡು ₹ 59,980ರಂತೆ, ಬೆಳ್ಳಿ ಧಾರಣೆ ಕೆ.ಜಿ.ಗೆ ₹ 570 ಇಳಿಕೆಯಾಗಿ ₹ 74,600ರಂತೆ ಮಾರಾಟ ಆಯಿತು.

ಮುಂಬೈ ಧಾರಣೆ

ಶೇಂಗಾ 28-4-2023

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635(1640)
ಒಂದು ವಾರದ ಡೆಲಿವರಿ	1630(1635)
ಸೋಯಾ ಕಚ್ಚಾ	860(870)
ಪಾಮ್ ವಾರದ ಡೆಲಿವರಿ	925(933)
ಸೂರ್ಯಕಾಂತಿ ಎಣ್ಣೆ ಕಚ್ಚಾ	900(900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,100 (60,175)
ಬೆಳ್ಳಿ ಕೆ.ಜಿ	73,900 (74,325)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುದ್ದಿ 2 ನಿಮಿಷ

ಮೂಲಸೌಕರ್ಯ ವಲಯದ ಉತ್ಪಾದನೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಪ್ರಮಾಣವು ಮಾರ್ಚ್ ತಿಂಗಳಲ್ಲಿ ಶೇಕಡ 3.6ಕ್ಕೆ ಇಳಿಕೆ ಆಗಿದೆ. ಫೆಬ್ರುವರಿಯಲ್ಲಿ ಈ ವಲಯಗಳಲ್ಲಿ ಶೇ 7.2ರಷ್ಟು ಬೆಳವಣಿಗೆ ದಾಖಲಾಗಿತ್ತು.

ಮಾರ್ಚ್‌ನಲ್ಲಿ ಕಂಡು ಬಂದಿರುವ ಬೆಳವಣಿಗೆ ಪ್ರಮಾಣ 5 ತಿಂಗಳ ಕನಿಷ್ಠ ಮಟ್ಟ. ಮಾರ್ಚ್‌ನಲ್ಲಿ ಕಚ್ಚಾ ತೈಲ ಉತ್ಪಾದನೆಯು ಶೇ 2.8ರಷ್ಟು, ಇಂಧನ ಉತ್ಪಾದನೆಯು ಶೇ 1.8ರಷ್ಟು ಮತ್ತು ಸಿಮೆಂಟ್ ಉತ್ಪಾದನೆಯು ಶೇ 0.8ರಷ್ಟು ಕಡಿಮೆ ಆಗಿದೆ.

ಕಲ್ಲಿದ್ದಲು ಉತ್ಪಾದನೆ ಶೇ 12.2ರಷ್ಟು, ರಸಗೊಬ್ಬರ ಉತ್ಪಾದನೆ ಶೇ 9.7ರಷ್ಟು, ಉಕ್ಕು ಉತ್ಪಾದನೆ ಶೇ 8.8ರಷ್ಟು, ನೈಸರ್ಗಿಕ ಅನಿಲ ಉತ್ಪಾದನೆ ಶೇ 2.8ರಷ್ಟು ಮತ್ತು ರಿಫೈನರಿ ಉತ್ಪನ್ನಗಳ ಉತ್ಪಾದನೆ ಶೇ 1.5ರಷ್ಟು ಹೆಚ್ಚಾಗಿವೆ.

ಎಂಟು ಮೂಲಸೌಕರ್ಯ ವಲಯಗಳಲ್ಲಿನ – ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ರಸಗೊಬ್ಬರಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ – ಉತ್ಪಾದನೆಯು 2022–23ನೆಯ ಹಣಕಾಸು ವರ್ಷದಲ್ಲಿ ಒಟ್ಟು ಶೇ 7.6ರಷ್ಟಾಗಿದೆ. ಇದು ಹಿಂದಿನ ಆರ್ಥಿಕ ವರ್ಷದಲ್ಲಿ (2021–22) ಶೇ 10.4ರಷ್ಟು ಆಗಿತ್ತು.

ಹೊಸ ವೇತನಕ್ಕೆ ಬಹುತೇಕರ ಒಪ್ಪಿಗೆ: ಏರ್ ಇಂಡಿಯಾ ಸಿಇಒ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಳೆದ ವಾರ ಘೋಷಿಸಿರುವ ಹೊಸ ವೇತನ ಕೊಡುಗೆಯನ್ನು ಬಹುತೇಕ ಪೈಲಟ್‌ಗಳು ಒಪ್ಪಿಕೊಂಡಿದ್ದಾರೆ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ.

ಕ್ಯಾಬಿನ್ ಸಿಬ್ಬಂದಿ ಪೈಕಿ ಶೇಕಡ 90ರಷ್ಟು ಮಂದಿ ಮತ್ತು ಗರಿಷ್ಠ ಸಂಖ್ಯೆಯ ಪೈಲಟ್‌ಗಳು ಹೊಸ ವೇತನ ಕೊಡುಗೆಗೆ ಒಪ್ಪಿಗೆ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ನಷ್ಟದಲ್ಲಿರುವ ಕಂಪನಿಯನ್ನು ಟಾಟಾ ಸಮೂಹವು 2022ರ ಜನವರಿಯಲ್ಲಿ ಸ್ವಾಧೀನಪಡಿಸಿಕೊಂಡಿದ್ದು, ಏಪ್ರಿಲ್ 17ರಂದು ಪೈಲಟ್ ಮತ್ತು ಕ್ಯಾಬಿನ್ ಸಿಬ್ಬಂದಿಗೆ ಹೊಸ ವೇತನ ಕೊಡುಗೆ ಘೋಷಿಸಿದೆ. ಇದಕ್ಕೆ ಇಂಡಿಯನ್ ಕಮರ್ಷಿಯಲ್ ಪೈಲಟ್ಸ್ ಅಸೋಸಿಯೇಷನ್ (ಐಸಿಪಿಎ) ಮತ್ತು ಇಂಡಿಯನ್ ಪೈಲಟ್ಸ್ ಗಿಲ್ಡ್ (ಐಪಿಜಿ) ವಿರೋಧ ವ್ಯಕ್ತಪಡಿಸಿವೆ.

ಕಂಪನಿಯು ಕಾರ್ಮಿಕ ಕಾನೂನನ್ನು ಉಲ್ಲಂಘಿಸಿದೆ ಎನ್ನುವ ಆರೋಪವನ್ನು ಒಕ್ಕೂಟಗಳು ಮಾಡಿವೆ.

ಹೆಚ್ಚಿನ ಪಿಂಚಣಿ: ಗಡುವು ವಿಸ್ತರಣೆ ಸೂಚನೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ನೌಕರರ ಪಿಂಚಣಿ ಯೋಜನೆಯ (ಇಪಿಎಸ್) ಅಡಿಯಲ್ಲಿ ಹೆಚ್ಚಿನ ಪಿಂಚಣಿ ಆಯ್ಕೆ ಬಯಸಿ ಅರ್ಜಿ ಸಲ್ಲಿಸಲು ಮೇ 3 ಕಡೆಯ ದಿನ.

ಈ ಗಡುವನ್ನು ವಿಸ್ತರಿಸುವ ವಿಚಾರವಾಗಿ ಇಪಿಎಫ್‌ಒ ಕಡೆಯಿಂದ ಯಾವುದೇ ಸೂಚನೆ ಇದುವರೆಗೆ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

ಇಪಿಎಸ್ ಯೋಜನೆಗಳಿಗೆ ಉದ್ಯೋಗದಾತರು ಮಾತ್ರವಲ್ಲದೆ ಕೇಂದ್ರ ಸರ್ಕಾರ ಕೂಡ ನೌಕರರ ವೇತನದ ಶೇಕಡ 1.16ರಷ್ಟನ್ನು ಕೊಡುಗೆಯಾಗಿ ನೀಡುತ್ತದೆ. ಆದರೆ ಹೆಚ್ಚಿನ ಪಿಂಚಣಿಗೆ ಆಯ್ಕೆ ಮಾಡಿಕೊಂಡವರಿಗೂ ಕೇಂದ್ರದಿಂದ ಇದೇ ಪ್ರಮಾಣದ ಕೊಡುಗೆ ಸಿಗುತ್ತದೆಯೇ ಎಂಬುದು ಖಚಿತವಾಗಿಲ್ಲ ಎಂದು ಮೂಲಗಳು ಹೇಳಿವೆ.

ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಇಪಿಎಫ್‌ಒ ಗಡುವು ವಿಸ್ತರಿಸಿ ಫೆಬ್ರುವರಿ 27ರಂದು ಆದೇಶ ಹೊರಡಿಸಿತ್ತು. '2014ರ ಸೆಪ್ಟೆಂಬರ್ 1ಕ್ಕಿಂತ ಮೊದಲು ಸೇವೆಯಲ್ಲಿ ಇದ್ದವರು, ಆ ದಿನಾಂಕದ ನಂತರವೂ ಸೇವೆಯಲ್ಲಿ ಮುಂದುವರಿದವರು, ಆದರೆ ಹೆಚ್ಚಿನ ಪಿಂಚಣಿಗೆ ಜಂಟಿ ಅರ್ಜಿ ಸಲ್ಲಿಸಲು ಆಗದಿದ್ದವರು ಅದನ್ನು ಮೇ 3ರೊಳಗೆ ಸಲ್ಲಿಸಬಹುದು' ಎಂದು ಇಪಿಎಫ್‌ಒ ಹೇಳಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡದಂತೆ ರಾಷ್ಟ್ರಪತಿಗೆ ಮನವಿ

ನವದೆಹಲಿ: ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸುವುದು ಅತ್ಯಂತ ಆಕ್ಷೇಪಾರ್ಹ ಸಂಗತಿ. ಹಾಗಾಗಿ ಇಂಥ ವಿವಾಹವನ್ನು ಕಾನೂನು ಬದ್ಧ-ಗೊಳಿಸಬಾರದು ಎಂದು ಕೋರಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ-ಗಳು, ಮಾಜಿ ಅಧಿಕಾರಿಗಳು ಸೇರಿದಂತೆ ಒಟ್ಟು 120 ಗಣ್ಯ ನಾಗರಿಕರು ಪತ್ರ ಬರೆದಿದ್ದಾರೆ.

ಏಪ್ರಿಲ್ 27ರಂದು ರಾಷ್ಟ್ರಪ-ತಿಗಳಿಗೆ ಈ ಪತ್ರ ಬರೆಯಲಾಗಿದ್ದು, ಪತ್ರದಲ್ಲಿ 120 ಗಣ್ಯರ ನಾಗರಿಕರ ಸಹಿ ಇದೆ. ನಿವೃತ್ತ ಕಂಟ್ರೋಲರ್, ಆಡಿಟರ್ ಜನರಲ್ (ಸಿಎಜಿ) ರಾಜೀವ್ ಮಹರ್ಷಿ, ಮಾಜಿ ಗೃಹ ಕಾರ್ಯದರ್ಶಿ ಎಲ್. ಸಿ. ಗೋಯೆಲ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಶಶಾಂಕ್, 'ರಾ'ದ ಮಾಜಿ ಮುಖ್ಯಸ್ಥ ಸಂಜೀವ್ ತ್ರಿಪಾಠಿ, ನಿವೃತ್ತ ನ್ಯಾಯಮೂರ್ತಿಗಳಾದ ಎಸ್. ಎನ್. ಧಿಂಗ್ರಾ ಮತ್ತು ಲೋಕ್‌ಪಾಲ್ ಸಿಂಗ್ ಸೇರಿದಂತೆ ಅನೇಕರು ಪತ್ರಕ್ಕೆ ಸಹಿ ಹಾಕಿದ್ದಾರೆ.

'ಭಾರತೀಯ ಸಮಾಜ ಹಾಗೂ ಸಂಸ್ಕೃತಿಯು ಸಲಿಂಗ ವಿವಾಹ ವ್ಯವಸ್ಥೆ-ಯನ್ನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅದು ಅಸ್ವಾಭಾವಿಕವಾಗಿದೆ' ಎಂದೂ ನಾಗರಿಕರು ಪತ್ರದಲ್ಲಿ ಹೇಳಿದ್ದಾರೆ.

'ದೇಶದ ಮೂಲ ಸಂಪ್ರದಾಯಗಳು ಮತ್ತು ಧಾರ್ಮಿಕ ಸಿದ್ಧಾಂತಗಳ ವಿರುದ್ಧ ನಿರಂತರ ಆಕ್ರಮಣ ಹಾಗೂ ನಿರ್ದಿಷ್ಟವಾಗಿ ಸಲಿಂಗ ಒಕ್ಕೂಟವನ್ನು ಕಾನೂನುಬದ್ಧಗೊಳಿಸುವ ಆಕ್ಷೇಪಾರ್ಹ ಪ್ರಯತ್ನಗಳ ಕುರಿತು ಆಘಾತ-ಗೊಂಡಿದ್ದೇವೆ' ಎಂದು ಪತ್ರಕ್ಕೆ ಸಹಿ ಮಾಡಿದವರು ತಿಳಿಸಿದ್ದಾರೆ.

ಬೋರಿಸ್‌ಗೆ ಸಾಲ ಕೊಡಿಸಲು ನೆರವು: ಆರೋಪ

ಬಿಬಿಸಿ ಅಧ್ಯಕ್ಷ ರಿಚರ್ಡ್ ರಾಜೀನಾಮೆ

ರಿಚರ್ಡ್ ಶಾರ್ಪ್

ಲಂಡನ್ (ಎಎಫ್‌ಪಿ): ಬ್ರಿಟನ್ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್‌ಗೆ ಸಾಲ ಕೊಡಿಸಲು ಅನುಕೂಲ ಮಾಡಿಕೊಟ್ಟ ವಿಚಾರವನ್ನು ಮುಚ್ಚಿಟ್ಟಿದ್ದ ಆರೋಪದ ಮೇಲೆ ಮಾಧ್ಯಮ ಸಂಸ್ಥೆಯಾದ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಅಧ್ಯಕ್ಷ ಸ್ಥಾನಕ್ಕೆ ರಿಚರ್ಡ್ ಶಾರ್ಪ್ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ಬೋರಿಸ್ ಜಾನ್ಸನ್‌ಗೆ ಸಾಲ ಕೊಡಿಸುವ ವಿಷಯವನ್ನು ಬಿಬಿಸಿ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳುವ ವೇಳೆ ರಿಚರ್ಡ್ ಶಾರ್ಪ್ ಬಹಿರಂಗಪಡಿಸಿರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ಸಾರ್ವಜನಿಕ ನೇಮಕಾತಿಗಳ ಆಯುಕ್ತ ಆ್ಯಡಲ್ ಹೆಪ್ಪಿನ್‌ಸ್ಟಾಲ್ ನೇತೃತ್ವದಡಿ ತನಿಖೆ ನಡೆಸಲಾಗಿತ್ತು.

ಸ್ವತಂತ್ರ ತನಿಖಾ ತಂಡದ ಮುಂದೆ ತಮ್ಮ ಮೇಲೆ ಕೇಳಿಬಂದ ಆರೋಪಗಳನ್ನು ಸಮರ್ಥಿಸಿಕೊಳ್ಳಲು ಶಾರ್ಪ್ ವಿಫಲರಾಗಿದ್ದರು. ಇದು ಅವರ ಹುದ್ದೆಗೆ ಕುತ್ತು ತಂದಿದೆ.

2020ರಲ್ಲಿ ಶಾರ್ಪ್ ಈ ಹುದ್ದೆಗೆ ನೇಮಕಗೊಳ್ಳುವ ಮೊದಲು ಅವರ ದೂರದ ಸಂಬಂಧಿಯೊಬ್ಬರಿಗೆ ಜಾನ್ಸನ್ ಅವರನ್ನು ಪರಿಚಯಿಸಿದ್ದರು. ಮಾಜಿ ಪ್ರಧಾನಿಗೆ ಶಾರ್ಪ್ ಅವರ ಇ ಸಂಬಂಧಿಯು ₹ 8.17 ಕೋಟಿ ಸಾಲ ನೀಡಿದ್ದರು.

ಕನ್ಸರ್ವೇಟಿವ್ ಪಕ್ಷಕ್ಕೆ ದೇಣಿಗೆ ನೀಡಿದ್ದ ಶಾರ್ಪ್ ಅವರನ್ನು ಜಾನ್ಸನ್ ಅವಧಿಯಲ್ಲಿ ಬಿಬಿಸಿ ಅಧ್ಯಕ್ಷ ಹುದ್ದೆಗೆ ನೇಮಿಸಿದ್ದಕ್ಕೆ ವಿರೋಧ ಪಕ್ಷಗಳಿಂದ ಭಾರೀ ಟೀಕೆ ವ್ಯಕ್ತವಾಗಿತ್ತು. ಈ ಹಿಂದೆ ಶಾರ್ಪ್ ಅವರು ಹೂಡಿಕೆಗೆ ಹೆಸರಾಗಿರುವ ಗೋಲ್ಡ್‌ಮನ್ ಸ್ಯಾಚ್ಸ್ ಬ್ಯಾಂಕ್‌ನಲ್ಲಿ ಹಾಲಿ ಪ್ರಧಾನಿ ರಿಷಿ ಸುನಕ್ ಅವರ 'ಬಾಸ್' ಕೂಡ ಆಗಿದ್ದರು.

'ಬಿಬಿಸಿಯ ಒಳ್ಳೆಯ ಕಾರ್ಯಕ್ಕೆ ಅಡ್ಡಿಯಾಗಬಾರದೆಂದು ಈ ನಿರ್ಧಾರ ಕೈಗೊಂಡಿದ್ದೇನೆ. ಸಂಸ್ಥೆಯಲ್ಲಿ ಉತ್ತಮ ಕೆಲಸ ಮಾಡಿದ ತೃಪ್ತಿ ಇದೆ' ಎಂದು ಶಾರ್ಪ್ ಪ್ರತಿಕ್ರಿಯಿಸಿದ್ದಾರೆ.

ಸರ್ಕಾರ ಜೂನ್ ವೇಳೆಗೆ ಹೊಸ ಅಧ್ಯಕ್ಷರನ್ನು ನೇಮಿಸುವ ಸಾಧ್ಯತೆ ಇದೆ. ಅಲ್ಲಿಯವರೆಗೂ ಅವರೇ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

'2 ತಿಂಗಳ ಹಿಂದೆಯೇ ಬಾಂಬ್ ಹುದುಗಿಸಿ ಇಡಲಾಗಿತ್ತು'

ರಾಯಪುರ(ಪಿಟಿಐ): ದಾಂತೇವಾಡ ಜಿಲ್ಲೆಯ ಅರನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ದಿನಗಳ ಹಿಂದೆ ಜಿಲ್ಲಾ ಮೀಸಲು ಪಡೆಯ 10 ಪೊಲೀಸರು ಹಾಗೂ ಅವರನ್ನು ಕರೆ-ದೊಯ್ಯುತ್ತಿದ್ದ ವಾಹನದ ಚಾಲಕನನ್ನು ಬಲಿತೆಗೆದುಕೊಂಡ ಪ್ರಬಲ ಕಚ್ಚಾಬಾಂಬ್ ಅನ್ನು ಕನಿಷ್ಠ ಎರಡು ತಿಂಗಳ ಹಿಂದೆಯೇ ನಕ್ಸಲರು ಹುದುಗಿಸಿಟ್ಟ ಅಂಶ ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದೆ ಎಂದು ಛತ್ತೀಸಗಢ ಪೊಲೀಸರು ಶುಕ್ರವಾರ ಹೇಳಿದ್ದಾರೆ.

'ಶಕ್ತಿಶಾಲಿ ಕಚ್ಚಾ ಬಾಂಬ್ ಅನ್ನು ಕನಿಷ್ಠ ಎರಡು ತಿಂಗಳ ಹಿಂದೆ ಅಥವಾ ಅದಕ್ಕೂ ಮೊದಲೇ ಮೇಲ್ಮೈನಿಂದ 3ರಿಂದ 4 ಅಡಿಗಳಷ್ಟು ಕೆಳಗೆ ಹುದುಗಿಸಿ ಮಣ್ಣು ಮುಚ್ಚಲಾಗಿತ್ತು. ಮಣ್ಣಿನ ಮೇಲೆ ಹುಲ್ಲು ಬೆಳೆದಿತ್ತು. ತಂತಿಯನ್ನು ಸ್ಫೋಟಕಕ್ಕೆ ಜೋಡಿಸಲಾಗಿದೆ. ಕೃತ್ಯಕ್ಕೆ ಸುಮಾರು 40-50 ಕೆ.ಜಿ. ಸ್ಫೋಟಕ ಬಳಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ಐಜಿಪಿ (ಬಸ್ತರ್ ವಲಯ) ಸುಂದರರಾಜ್ ಪಿ. ತಿಳಿಸಿದ್ದಾರೆ.

ಬಾಂಬ್ ಸ್ಫೋಟಕ್ಕೂ ಒಂದು ದಿನ ಮೊದಲು ಅದೇ ರಸ್ತೆಯಲ್ಲಿ ಸ್ಫೋಟಕಗಳ ಪತ್ತೆ ಕಾರ್ಯಾಚರಣೆ ನಡೆಸಲಾಗಿತ್ತು. ಆದರೂ ಕಚ್ಚಾ ಬಾಂಬ್ ಅಥವಾ ಯಾವುದೇ ಸಂಶಯಾಸ್ಪದ ವಸ್ತು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ. ಬಾಂಬ್ ಆಗ ಪತ್ತೆಯಾಗದಿರುವ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ರಷ್ಯಾದ ಕ್ಷಿಪಣಿ, ಡ್ರೋನ್ ದಾಳಿ: 22 ಉಕ್ರೇನಿಗರ ಸಾವು

ಉಕ್ರೇನ್ ರಾಜಧಾನಿ ಕೀವ್‌ನ ದಕ್ಷಿಣ ಉಮಾನ್ ನಗರದ ಒಂಬತ್ತು ಅಂತಸ್ತಿನ ವಸತಿ ಸಮುಚ್ಚಯವನ್ನು ಗುರಿಯಾಗಿಸಿ ರಷ್ಯಾ ಸೇನೆ ಶುಕ್ರವಾರ ನಸುಕಿನಲ್ಲಿ ಕ್ಷಿಪಣಿ ದಾಳಿ ನಡೆಸಿದೆ. ತುರ್ತು ಸೇವಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿದರು – ಎಎಫ್‌ಪಿ ಚಿತ್ರ

ಉಮಾನ್, ಉಕ್ರೇನ್(ಎಪಿ): ಉಕ್ರೇನ್ ಮೇಲೆ ಶುಕ್ರವಾರ ನಸುಕಿನಲ್ಲಿ ರಷ್ಯಾ ಸೇನೆಯು 20ಕ್ಕೂ ಹೆಚ್ಚು ಕ್ರೂಸ್ ಕ್ಷಿಪಣಿಗಳು ಮತ್ತು ಎರಡು ಡ್ರೋನ್‌ಗಳ ದಾಳಿ ನಡೆಸಿದ್ದು, ಮೂವರು ಮಕ್ಕಳು ಸೇರಿ 22 ನಾಗರಿಕರು ಮೃತಪಟ್ಟಿದ್ದಾರೆ.

ರಷ್ಯಾ ಉಡಾಯಿಸಿರುವ ಕ್ಷಿಪಣಿಗಳ ಪೈಕಿ ಎರಡು ಕ್ಷಿಪಣಿಗಳು ಉಕ್ರೇನ್ ಕೇಂದ್ರ ಭಾಗದಲ್ಲಿರುವ ರಾಜಧಾನಿ ಕೀವ್‌ನ ದಕ್ಷಿಣ ಉಮಾನ್ ನಗರದ ಒಂಬತ್ತು ಮಹಡಿಗಳ ವಸತಿ ಸಮುಚ್ಚಯದ ಮೇಲೆ ಅಪ್ಪಳಿಸಿದ್ದು, ಸಾವು–ನೋವು, ಆಸ್ತಿ ಹಾನಿ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ 17 ನಾಗರಿಕರು ಗಾಯಗೊಂಡಿದ್ದಾರೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದ ಮೂವರು ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಉಕ್ರೇನ್ ಗೃಹ ಸಚಿವ ಐಹೊರ್ ಕ್ಲಿಮೆಂಕೊ ತಿಳಿಸಿದ್ದಾರೆ.

'ದಾಳಿಗೆ ಗೊತ್ತುಪಡಿಸಲಾಗಿದ್ದ ಸ್ಥಳದ ಎಲ್ಲ ಪ್ರಮುಖ ಸೌಲಭ್ಯಗಳನ್ನು ಧ್ವಂಸಗೊಳಿಸಲಾಗಿದೆ' ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಲೆಫ್ಟಿನೆಂಟ್ ಜನರಲ್ ಇಗೊರ್ ಕೊನಾಶೆಂಕೊವ್ ಹೇಳಿದ್ದಾರೆ.

ಇದೇ ವೇಳೆ ರಷ್ಯಾ ನಿಯಂತ್ರಿತ ಡೊನೆಟ್ಸ್ಕ್ ನಗರದ ಮೇಯರ್ ಅಲೆಕ್ಸಿ ಕುಲೆಮ್ಜಿನ್, ಉಕ್ರೇನಿನ ಕ್ಷಿಪಣಿ ದಾಳಿಗೆ ನಗರದಲ್ಲಿ ಏಳು ನಾಗರಿಕರು ಶುಕ್ರವಾರ ಸಾವನ್ನಪ್ಪಿದ್ದಾರೆ. ಉಕ್ರೇನ್ ಸೇನೆ ಚಲಿಸುತ್ತಿದ್ದ ಮಿನಿ ಬಸ್ ಗುರಿಯಾಗಿಸಿಕೊಂಡು ದಾಳಿ ನಡೆದಿದೆ ಎಂದು ಹೇಳಿದ್ದಾರೆ.

ಎರಡು ತಿಂಗಳ ನಂತರ ಕೀವ್ ಮೇಲೂ ಕ್ಷಿಪಣಿ ದಾಳಿ ನಡೆದಿದೆ. ಆದರೆ, ಯಾವುದೇ ಸಾವು- ನೋವಿನ ಬಗ್ಗೆ ವರದಿಯಾಗಿಲ್ಲ. ಕೀವ್ ಗುರಿಯಾಗಿಸಿ ಬಂದ 11 ಕ್ರೂಸ್ ಕ್ಷಿಪಣಿಗಳು ಸೇರಿ 21 ಕ್ಷಿಪಣಿಗಳು ಮತ್ತು ಎರಡು ಡ್ರೋನ್‌ಗಳನ್ನು ಉಕ್ರೇನ್ ವಾಯುಪಡೆಯು ಹೊಡೆದುರುಳಿಸಿದೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ.

ತೈವಾನ್‌ಗೆ ಚೀನಾದ 38 ವಿಮಾನ, 6 ಯುದ್ಧ ನೌಕೆ

ತೈಪೆ (ಎಪಿ): 'ಚೀನಾ 38 ಯುದ್ಧ ವಿಮಾನ ಮತ್ತು ಆರು ಯುದ್ಧ ನೌಕೆಗಳನ್ನು ತೈವಾನ್‌ಗೆ ಕಳುಹಿಸಿದೆ' ಎಂದು ತೈವಾನ್‌ನ ರಕ್ಷಣಾ ಸಚಿವಾಲಯ ಶುಕ್ರವಾರ ಹೇಳಿದೆ.

ಇತ್ತೀಚಿನ ದಿನಗಳಲ್ಲಿ ಇಲ್ಲಿ ಚೀನಾದ ಅತಿ ದೊಡ್ಡ ಸೇನಾ ಶಕ್ತಿ ಪ್ರದರ್ಶನ ಇದಾಗಿದೆ. ಐದು ಎಸ್‌ಯು-30, ಎರಡು ಜೆ-16 ಯುದ್ಧವಿಮಾನ, ಒಂದು ಡ್ರೋನ್, ಟಿಬಿ-001 ಯುದ್ಧ ನೌಕೆ ತೈವಾನ್ ತಲುಪಿವೆ ಎಂದು ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

